ಭಾನುವಾರ, ಜನವರಿ 4, 2026 | ಬೆಂಗಳೂರು | ₹ 7.00 | ಸಂಪುಟ 79 | ಸಂಚಿಕೆ 4 | ಪುಟ 18
www.prajavani.net | prajavani.net | prajavani
ಕ್ಷಣ ಕ್ಷಣದ ಅಪ್‌ಡೇಟ್‌ಗಳಿಗಾಗಿ ಸ್ಕ್ಯಾನ್ ಮಾಡಿ

ಪ್ರಜಾವಾಣಿ
ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನ ಪತ್ರಿಕೆ



ಶ್ರೇಯಸ್ ವಾಪಸ್
ಶ್ರೇಯಸ್ ಅಯ್ಯರ್ ಅವರು ಫಿಟ್‌ನೆಸ್ ಷರತ್ತಿಗೊಳಪಟ್ಟು ಭಾರತ ಏಕದಿನ ಕ್ರಿಕೆಟ್ ತಂಡಕ್ಕೆ ಮರಳಿದ್ದಾರೆ. ನ್ಯೂಜಿಲೆಂಡ್ ಎದುರಿನ ಸರಣಿಗೆ ಆಯ್ಕೆಯಾಗಿದ್ದಾರೆ

ವನ್ಯಜೀವಿ: ಸಂಘರ್ಷ ತಡೆಗೆ ತಂತ್ರಜ್ಞಾನ 6
ಎರಡು ಕ್ಷೇತ್ರ: ಉಪಚುನಾವಣೆಗೆ ಸಿದ್ಧತೆ 5

ಎಐ ಕಲಿತರಷ್ಟೇ ಕೆಲಸ...

ಸೃಜನಶೀಲತೆ – ಕೃತಕ ಬುದ್ಧಿಮತ್ತೆ 'ಸಹಜೀವನ' ಅಗತ್ಯ
• ಕ್ರಿಯಾತ್ಮಕ ಆಲೋಚನೆ ವೃದ್ಧಿ, ಬಹುತ್ವಕ್ಕೆ ಇನ್ನಷ್ಟು ಬಲ

ಒಳನೋಟ

• ಇ.ಎಸ್.ಸುಧೀಂದ್ರ ಪ್ರಸಾದ್

ಪ್ರಶಾಂತ್, ಒಬ್ಬ ಅನುಭವಿ ಹಾಗೂ ನುರಿತ ಸಾಫ್ಟ್‌ವೇರ್ ತಂತ್ರಜ್ಞ. ಪ್ರತಿಷ್ಠಿತ ಐಟಿ ಕಂಪನಿಯಲ್ಲಿ ನೌಕರಿ. ಕೋಡಿಂಗ್‌ನಲ್ಲಿ ಇವರ ಕೈಗಳು ಕರಗತ. ಆದರೆ, ಹೊಸ ತಂತ್ರಜ್ಞಾನದತ್ತ ಮುಖ ಮಾಡಿದ ಕಂಪನಿ, ಕೃತಕ ಬುದ್ಧಿಮತ್ತೆ ಅಳವಡಿಕೆಗೆ ಮುಂದಾಯಿತು. ಕೌಶಲಭರಿತ ನೌಕರರು ಮಾಡುವ ಕೆಲಸವನ್ನು ದಣಿವಿಲ್ಲದೆ, ವೇತನವನ್ನೂ ಕೇಳದೆ ಕೆಲವೇ ಕ್ಷಣಗಳಲ್ಲಿ ಪೂರ್ಣಗೊಳಿಸುವ ತಂತ್ರಜ್ಞಾನ ವದು. ಇದು, ಕಚೇರಿ ದಿನಚರಿಗೆ ಹೊಂದಿಕೊಂಡಿದ್ದ ಪ್ರಶಾಂತ್ ಸೇರಿದಂತೆ ಅವರ ಸಹೋದ್ಯೋಗಿಗಳ ನಿದ್ದೆಗೆಡಿಸಿತು. ಆದರೆ ಧೈರ್ಯಗೆಡದ ಅವರನ್ನು ಎಐ ಸುನಾಮಿಯಿಂದ ರಕ್ಷಿಸಿದ್ದೂ ಅದೇ... ಸೃಜನಶೀಲತೆ.

'20 ವರ್ಷದಲ್ಲಿ ಕೆಲಸ ಎಂಬುದು ಆಯ್ಕೆಯಾಗುತ್ತದೆಯೇ ಹೊರತು, ಅನಿವಾರ್ಯವಲ್ಲ. ಕೃತಕ ಬುದ್ಧಿಮತ್ತೆ ಹಾಗೂ ರೊಬೊಗಳು, ಮನುಷ್ಯರು ನಿರ್ವಹಿಸುತ್ತಿದ್ದ ಕಾರ್ಯಭಾರವನ್ನು ವಹಿಸಿಕೊಳ್ಳಲಿವೆ. ಹೀಗಾಗಿ ಮನುಷ್ಯರು ಕೌಶಲ ಹಾಗೂ ಮೌಲ್ಯಗಳನ್ನು ಬೆನ್ನುಹತ್ತಬೇಕು' ಎಂದು ಸ್ಪೇಸ್ ಎಕ್ಸ್, ಟೆಸ್ಲಾ ಕಂಪನಿಗಳ ಸ್ಥಾಪಕ ಇಲಾನ್ ಮಸ್ಕ್ ಅವರ ಮಾತುಗಳು ಇಡೀ ಜಗತ್ತನ್ನೇ ಬೇರೆ ದಿಕ್ಕಿನೆಡೆ ನೋಡುವಂತೆ ಮಾಡಿದೆ.


ಕೃತಕ ಬುದ್ಧಿಮತ್ತೆ ಎಂಬುದು ಸವಾಲಲ್ಲ, ಅದೊಂದು ಅವಕಾಶ ಎಂದು ಭರವಸೆ ನೀಡುವವರು ಹಲವರು. ಆದರೆ ಮತ್ತೊಂದೆಡೆ ಸದ್ದಿಲ್ಲದೆ ಆವರಿಸಿಕೊಳ್ಳುತ್ತಿರುವ ಈ ತಂತ್ರಜ್ಞಾನದಿಂದ ಉದ್ಯೋಗ ಕಳೆದುಕೊಳ್ಳುತ್ತಿರುವವರು ಒಬ್ಬರೇ, ಇಬ್ಬರೇ...

ಇ-ಕಾಮರ್ಸ್, ಸೇವಾ ವಲಯ, ಡಯಾಗ್ನಾಸ್ಟಿಕ್ಸ್, ಮನರಂಜನೆ ಹಾಗೂ ಮಾಧ್ಯಮದಲ್ಲಿನ ಏಕತಾನತೆಯ ಕೆಲಸಗಳನ್ನು ಕೃತಕ ಬುದ್ಧಿಮತ್ತೆ ಸದ್ದಿಲ್ಲದೆ ಆವರಿಸಿದೆ.

ಈ ಕ್ಷೇತ್ರದ ಕಂಪನಿಗಳು ತಮ್ಮ ನೌಕರರ ಸಂಖ್ಯೆಗಳನ್ನು ಗಣನೀಯವಾಗಿ ತಗ್ಗಿಸುವ, ನೌಕರರ ಜಾಗದಲ್ಲಿ ಯಂತ್ರವನ್ನು ತರುವ ಆಲೋಚನೆ ನಡೆಸಿವೆ. ಇದಕ್ಕೊಂದು ಸ್ಪಷ್ಟ ಉದಾಹರಣೆ ಅಮೆಜಾನ್ ಕಂಪನಿಯು 2026ರಲ್ಲಿ 30 ಸಾವಿರ ನೌಕರರನ್ನು ವಜಾಗೊಳಿಸಲು ನಿರ್ಧರಿಸಿರುವ ಸುದ್ದಿ. ಮತ್ತೊಂದೆಡೆ ಕೃತಕ ಬುದ್ಧಿಮತ್ತೆ ವಿರುದ್ಧವೇ ಅಮೆಜಾನ್ ನೌಕರರು ಸಿಡಿದೆದ್ದು ಪ್ರತಿಭಟನೆ ನಡೆಸಿದ್ದು ಈ ಕಾಲದ ವಾಸ್ತವ.

ಅಮೆಜಾನ್ ಮಾತ್ರವಲ್ಲ, ಇಂಥ ನಿರ್ಧಾರ ಕೈಗೊಂಡ ಹಲವು ಸಾಫ್ಟ್‌ವೇರ್ ಕಂಪನಿಗಳೂ ಇವೆ. ಇತ್ತೀಚೆಗೆ ಕೆಲಸಕ್ಕೆ ತೆರಳಿದ ನೌಕರರಿಗೆ ಬೆಂಗಳೂರು ಮೂಲದ ಕಂಪನಿಯು, ಮನೆವರೆಗೂ ಹೋಗಲು ತಲಾ ₹1 ಸಾವಿರ ನೀಡಿ, ನಾಳೆಯಿಂದ ಕಂಪನಿಗೆ ಬರಬೇಡಿ ಎಂದು ಕಳುಹಿಸಿದ್ದು ದೊಡ್ಡ ಸುದ್ದಿಯಾಗಿತ್ತು.

▸ 4



ಎಐ ಚಿತ್ರ

ಯಾವೆಲ್ಲಾ ಕ್ಷೇತ್ರಗಳನ್ನು ಬಾಧಿಸಲಿದೆ?

ಕೈಗಾರಿಕಾ ಕ್ರಾಂತಿಯ ನಂತರ ವ್ಯಾಪಕ ಬಳಕೆಯಲ್ಲಿದ್ದ ಟೈಪ್‌ರೈಟರ್ ಅನ್ನು ತಾನು ಕಾಲಿಟ್ಟ ಕೆಲವೇ ದಶಕಗಳಲ್ಲಿ ಕಂಪ್ಯೂಟರ್ ಮೂಲೆಗುಂಪಾಗಿಸಿತು. ಆಗಲೂ ಉದ್ಯೋಗ ಕಸಿಯುವ ಚರ್ಚೆಯೇ ಮುನ್ನೆಲೆಗೆ ಬಂದಿತ್ತು. ಆದರೆ ಕಂಪ್ಯೂಟರ್ ಎಂಬುದು ಹಲವು ಹೊಸ ಉದ್ಯೋಗಗಳನ್ನು ಸೃಷ್ಟಿಸಿತು. ಈಗಲೂ ಕೃತಕ ಬುದ್ಧಿಮತ್ತೆ ಕಾಲಿಟ್ಟದ್ದು, ಹೊಸ ಕೈಗಾರಿಕಾ ಕ್ರಾಂತಿ ಎಂದೇ ನಂಬಲಾಗಿದೆ.

ಹಾಗಿದ್ದರೆ ಕೃತಕ ಬುದ್ಧಿಮತ್ತೆ ಯಾವೆಲ್ಲಾ ಕ್ಷೇತ್ರಗಳನ್ನು ಮೊದಲು ಆವರಿಸಲಿದೆ ಎಂದು ತಜ್ಞರು ಅಂದಾಜಿಸಿದ್ದಾರೆ.

ಮಾಹಿತಿ ತಂತ್ರಜ್ಞಾನದ ಸೇವಾ ವಲಯಗಳಾದ ಕಾಲ್ ಸೆಂಟರ್, ಬಿಪಿಒ, ಗ್ರಾಹಕರ ನೆರವು ಕ್ಷೇತ್ರಗಳನ್ನು ಆರಂಭದಲ್ಲಿ ಎಐ ಆವರಿಸಲಿದೆ.

ಮನರಂಜನೆ ಹಾಗೂ ಮಾಧ್ಯಮಗಳೂ ಎಐ ಸುನಾಮಿಗೆ ಸಿಲುಕಿವೆ ಹಾಗೂ ಇನ್ನಷ್ಟು ವಿಸ್ತರಿಸಿಕೊಳ್ಳಲಿದೆ. ಕಲೆ, ಛಾಯಾಗ್ರಹಣ, ಸಿನಿಮಾ, ದೃಶ್ಯ ಮಾಧ್ಯಮ, ಪತ್ರಿಕಾ ಮಾಧ್ಯಮ, ಡಿಜಿಟಲ್ ಮಾಧ್ಯಮಗಳನ್ನೂ ಒಳಗೊಂಡು ಈ ಕ್ಷೇತ್ರಗಳಲ್ಲಿ ಕೃತಕ ಬುದ್ಧಿಮತ್ತೆ ವ್ಯಾಪಕವಾಗಿ ಬಳಕೆಯಾಗಲಿದೆ.

ವೈದ್ಯಕೀಯ ಕ್ಷೇತ್ರದಲ್ಲಿ ರೋಗಪತ್ತೆ ಕ್ಷೇತ್ರವಾದ ಡಯಾಗ್ನಾಸ್ಟಿಕ್‌ಗಳಲ್ಲಿ ರೇಡಿಯಾಲಜಿ ಹುದ್ದೆಗಳನ್ನು ಕೃತಕ ಬುದ್ಧಿಮತ್ತೆ ಆವರಿಸಲಿದೆ ಎಂದು ಅಂದಾಜಿಸಲಾಗಿದೆ.

ಕೃತಕ ಬುದ್ಧಿಮತ್ತೆಯನ್ನು ಕರಗತ ಮಾಡಿಕೊಂಡರೆ, ಈ ಕ್ಷೇತ್ರಗಳು ಮತ್ತೊಂದು ಹಂತಕ್ಕೆ ತಲುಪಿ ಹೊಸ ಹುದ್ದೆಗಳನ್ನು ಸೃಜಿಸಲಿವೆ ಎಂಬ ಆಶಾಭಾವವೂ ತಜ್ಞರದ್ದು.

ಛತ್ತೀಸಗಢದಲ್ಲಿ 14 ನಕ್ಸಲರ ಹತ್ಯೆ

ಸುಕ್ಮಾ/ಬಿಜಾಪುರ (ಪಿಟಿಐ): ಛತ್ತೀಸಗಢದಲ್ಲಿ 2026ರ ಮೊದಲ ನಕ್ಸಲ್ ನಿಗ್ರಹ ಕಾರ್ಯಾಚರಣೆ ನಡೆಸಿದ ಭದ್ರತಾ ಪಡೆಗಳು 14 ನಕ್ಸಲರನ್ನು ಹತ್ಯೆ ಮಾಡಿವೆ. ಸುಕ್ಮಾ ಮತ್ತು ಬಿಜಾಪುರ ಜಿಲ್ಲೆಗಳಲ್ಲಿ ಶುಕ್ರವಾರ ರಾತ್ರಿಯಿಂದ ಎರಡು ಪ್ರತ್ಯೇಕ ಕಾರ್ಯಾಚರಣೆ ನಡೆದಿವೆ.

ಹತರಾದವರಲ್ಲಿ ಪೊಲೀಸರಿಗೆ ಬಹುದಿನಗಳಿಂದ ಬೇಕಿದ್ದ ನಕ್ಸಲ್ ನಾಯಕರಾದ ವೆಟ್ಟಿ ಮಾಂಗ್ಡು (ವಿಭಾಗೀಯ ಸಮಿತಿ ಸದಸ್ಯ) ಮತ್ತು ಮಾದ್ವಿ ಹುಂಗಾ ಮಡ್ಕಾಮ್ ಸೇರಿದ್ದಾರೆ.

ಸುಕ್ಮಾದ ದಕ್ಷಿಣ ಭಾಗದಲ್ಲಿ ನಕ್ಸಲ್ ನಿಗ್ರಹ ಪಡೆ ಕಾರ್ಯಾಚರಣೆ ವೇಳೆ ನಡೆದ ಗುಂಡಿನ ಚಕಮಕಿಯಲ್ಲಿ ಮಾಂಗ್ಡು ಸೇರಿ 12 ನಕ್ಸಲರು ಹತ್ಯೆಗೀಡಾದರು. ಬಿಜಾಪುರ ಜಿಲ್ಲೆಯ ಬಾಸಗುಡ ಸಮೀಪದ ಗಗನಪಲ್ಲಿ ಅರಣ್ಯದಲ್ಲಿ ನಡೆದ ಕಾರ್ಯಾಚರಣೆಯಲ್ಲಿ ಇನ್ನಿಬ್ಬರು ಮೃತಪಟ್ಟರು.

ರಥೋತ್ಸವ

ಪ್ರಜಾವಾಣಿ ಚಿತ್ರ: ಇಂದ್ರಕುಮಾರ ದಸ್ತೇನವರ



ಬಾಗಲಕೋಟೆ ಜಿಲ್ಲೆ ಬಾದಾಮಿ ಬಳಿಯ ಬನಶಂಕರಿದೇವಿ ರಥೋತ್ಸವವು ಭಾರಿ ಸಂಖ್ಯೆ ಭಕ್ತರ ಸಮ್ಮುಖದಲ್ಲಿ ಶನಿವಾರ ಸಂಭ್ರಮದಿಂದ ನಡೆಯಿತು

ನರೇಗಾ ಮರು ಜಾರಿಗೆ 'ಕೈ' ಸಂಗ್ರಾಮ

ಪ್ರಜಾವಾಣಿ ವಾರ್ತೆ


ನವದೆಹಲಿ: ಪ್ರಧಾನಿ ನರೇಂದ್ರ ಮೋದಿ ನೇತೃತ್ವದ ಎನ್‌ಡಿಎ ಸರ್ಕಾರವು ದೇಶವನ್ನು ವಿಕಸಿತ ಭಾರತದ ಬದಲಾಗಿ ವಿನಾಶ ಭಾರತ ಮಾಡುತ್ತಿದೆ ಎಂದು ಆರೋಪಿಸಿರುವ ಕಾಂಗ್ರೆಸ್ ಪಕ್ಷವು, ಯುಪಿಎ ಅವಧಿಯ ಗ್ರಾಮೀಣ ಉದ್ಯೋಗ ಖಾತರಿ ಕಾನೂನನ್ನು ಮರು ಸ್ಥಾಪಿಸಲು ಒತ್ತಾಯಿಸಿ ಜನವರಿ 10ರಿಂದ 45 ದಿನಗಳ 'ನರೇಗಾ ಬಚಾವೋ ಸಂಗ್ರಾಮ' ನಡೆಸುವುದಾಗಿ ಶನಿವಾರ ಪ್ರಕಟಿಸಿದೆ.

ಬಿಜೆಪಿಯೇತರ ಪಕ್ಷಗಳ ನೇತೃತ್ವದ ಸರ್ಕಾರಗಳಿರುವ ರಾಜ್ಯಗಳಲ್ಲಿ 'ವಿಬಿ-ಜಿ ರಾಮ್ ಜಿ' ಕಾಯ್ದೆಯನ್ನು ಜಾರಿಗೊಳಿಸದಿರುವುದು ಸೇರಿದಂತೆ ಎಲ್ಲ ಆಯ್ಕೆಗಳನ್ನು ಅನ್ವೇಷಿಸುವುದಾಗಿ ಪಕ್ಷ ತಿಳಿಸಿದೆ. ನರೇಗಾ ರದ್ದುಗೊಳಿಸಿರುವ ಕೇಂದ್ರದ ವಿರುದ್ಧದ ಹೋರಾಟದಲ್ಲಿ ಭಾಗಿಯಾಗಲು ಉಳಿದ ಎಲ್ಲ ವಿಪಕ್ಷಗಳನ್ನು ಸಂಪರ್ಕಿಸುವುದಾಗಿ ಪಕ್ಷ ಹೇಳಿದೆ.

ಶನಿವಾರ ಇಲ್ಲಿ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಎಐಸಿಸಿ ಪ್ರಧಾನ ಕಾರ್ಯದರ್ಶಿ (ಸಂಘಟನೆ) ಕೆ.ಸಿ.ವೇಣುಗೋಪಾಲ್, 'ನರೇಗಾ ಅತ್ಯಂತ ವಿಕೇಂದ್ರೀಕೃತ ಯೋಜನೆ. ಆದರೆ, ಹೊಸ ಕಾಯ್ದೆಯ ಮೂಲಕ ಪಂಚಾಯಿತಿಗಳನ್ನು ಗುಮಾಸ್ತರ ಸ್ಥಾನಕ್ಕೆ ಇಳಿಸಲಾಗಿದೆ. ಕೇಂದ್ರ ಸರ್ಕಾರವೇ ಈಗ ಎಲ್ಲವನ್ನೂ ನಿರ್ಧರಿಸುತ್ತದೆ' ಎಂದರು.

ಕಾಂಗ್ರೆಸ್ ಆಡಳಿತವಿರುವ ರಾಜ್ಯಗಳಲ್ಲಿ ಹೊಸ ಕಾಯ್ದೆಯನ್ನು ಜಾರಿಗೆ ತರುವುದಿಲ್ಲವೇ ಎಂಬ ಪತ್ರಕರ್ತರ ಪ್ರಶ್ನೆಗೆ ಉತ್ತರಿಸಿದ ಅವರು, 'ಪ್ರಸ್ತುತ ಕಾನೂನನ್ನು ಜಾರಿಗೆ ತರುವುದು ಅಸಾಧ್ಯ ಮತ್ತು ಜನ ವಿರೋಧಿ ಕಾನೂನನ್ನು ತಡೆಯಲು ಎಲ್ಲ ಸಾಧ್ಯತೆಗಳನ್ನು ಹುಡುಕುತ್ತೇವೆ' ಎಂದರು.

▸ 8



ಮರುಸ್ಥಾಪನೆವರೆಗೂ ಹೋರಾಟ: ಸಿ.ಎಂ

ಬೆಂಗಳೂರು: 'ಕೇಂದ್ರ ಸರ್ಕಾರ ಹೊಸತಾಗಿ ಜಾರಿಗೆ ತಂದಿರುವ 'ವಿಕಸಿತ ಭಾರತ – ಉದ್ಯೋಗ ಖಾತರಿ ಮತ್ತು ಜೀವನೋಪಾಯ ಮಿಷನ್ ಗ್ರಾಮೀಣ' (ವಿಬಿ–ಜಿ ರಾಮ್ ಜಿ) ಕಾಯ್ದೆ ಹಿಂಪಡೆದು, 'ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತ್ರಿ ಯೋಜನೆ' (ನರೇಗಾ) ಕಾಯ್ದೆ ಮರುಸ್ಥಾಪಿಸುವವರೆಗೂ ಹೋರಾಟ ನಡೆಸಲಾಗುವುದು' ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಹೇಳಿದರು.

ಸುದ್ದಿಗೋಷ್ಠಿಯಲ್ಲಿ ಶನಿವಾರ ಮತನಾಡಿದ ಅವರು, 'ನರೇಗಾ ಮತ್ತೆ ಜಾರಿಗೆ ತರುವ ಮೂಲಕ ಬಡವರ, ದಲಿತರ, ಮಹಿಳೆಯರ ಹಾಗೂ ಸಣ್ಣ ರೈತರ ಉದ್ಯೋಗದ ಹಕ್ಕು ಪುನರ್ ಸ್ಥಾಪಿಸಬೇಕು. ಅಷ್ಟೇ ಅಲ್ಲ, ಪಂಚಾಯಿತಿಗಳ ಸ್ವಯಂ ಆಡಳಿತ ಹಕ್ಕು ಮರುಸ್ಥಾಪಿಸಬೇಕು' ಎಂದು ಒತ್ತಾಯಿಸಿದರು.

'ಹಳೆ ಕಾಯ್ದೆಯನ್ನು ವಾಪಸ್ ಪಡೆದಿರುವುದು ಮಹಿಳೆಯರಿಗೆ, ಸಣ್ಣ ರೈತರಿಗೆ ಮಾಡಿದ ದ್ರೋಹ' ಎಂದು ವಾಗ್ದಾಳಿ ನಡೆಸಿದ ಅವರು, 'ಹೊಸ ಕಾಯ್ದೆಯನ್ನು ಅಮಾನತಿನಲ್ಲಿ ಇಟ್ಟು, ರಾಜ್ಯ ಸರ್ಕಾರಗಳ ಜೊತೆ ಸಮಾಲೋಚನೆ ನಡೆಸುವಂತೆ ಪ್ರಧಾನಿಗೆ ನಾನು ಈಗಾಗಲೇ ಪತ್ರ ಬರೆದಿದ್ದೇನೆ' ಎಂದರು.

'ನರೇಗಾ ಕಾಯ್ದೆಯು ಕೇವಲ ಉದ್ಯೋಗ ನೀಡಲು ಮಾತ್ರ ಸೀಮಿತ ಆಗಿರಲಿಲ್ಲ. ಅದೊಂದು ಐತಿಹಾಸಿಕ ನಿರ್ಣಯವಾಗಿತ್ತು. ಗಾಂಧೀಜಿಯವರ ಗ್ರಾಮ ಸ್ವರಾಜ್ ಕನಸು ನನಸು ಮಾಡುವ ಯೋಜನೆಯಾಗಿತ್ತು' ಎಂದು ಬಣ್ಣಿಸಿದರು.

▸ 8

45 ಜನರ ವಿಚಾರಣೆ ಯಾರ ಬಂಧನವಿಲ್ಲ

ಪ್ರಜಾವಾಣಿ ವಾರ್ತೆ

ಬಳ್ಳಾರಿ: ನಗರದಲ್ಲಿ ನಡೆದ ಘರ್ಷಣೆಗೆ ಸಂಬಂಧಿಸಿದಂತೆ ನಗರದ ಬ್ರೂಸ್‌ಪೇಟೆ ಪೊಲೀಸ್ ಠಾಣೆಯಲ್ಲಿ ಒಟ್ಟು 6 ಪ್ರಕರಣಗಳು ದಾಖಲಾಗಿದ್ದರೂ, ಈವರೆಗೆ ಯಾರನ್ನೂ ಪೊಲೀಸರು ಬಂಧಿಸಿಲ್ಲ.

ಶಾಸಕ ನಾರಾ ಭರತ್ ರೆಡ್ಡಿ ಕಡೆಯವರು ನೀಡಿದ ದೂರು ಆಧರಿಸಿ ಮೂರು, ಬಿಜೆಪಿ ಕಡೆಯವರು ನೀಡಿದ ದೂರು ಆಧರಿಸಿ ಎರಡು ಮತ್ತು ಪೊಲೀಸರೇ ಸ್ವಯಂ ಪ್ರೇರಿತರಾಗಿ ಒಂದು ಪ್ರಕರಣ ದಾಖಲಿಸಿಕೊಂಡಿದ್ದಾರೆ.

ಗಲಭೆ ಸ್ಥಳದ ವಿಡಿಯೊ ಪರಿಶೀಲಿಸಿ, ಅದರಲ್ಲಿ ಇರುವವರನ್ನು ವಿಚಾರಣೆ ಮಾಡಲಾಗುತ್ತಿದೆ. ಕಾಂಗ್ರೆಸ್ ಮತ್ತು ಬಿಜೆಪಿ ಕಡೆಯ 45 ಜನರನ್ನು ಪೊಲೀಸರು ಪ್ರಶ್ನಿಸಿದ್ದಾರೆ. ಆದರೆ, ಯಾರನ್ನೂ ಬಂಧಿಸಿಲ್ಲ' ಎಂದು ಪೊಲೀಸ್ ಮೂಲಗಳು ತಿಳಿಸಿವೆ.

ಭರತ್ ರೆಡ್ಡಿ ಕಡೆಯ ಅಂಗರಕ್ಷಕನೊಬ್ಬನನ್ನು ಠಾಣೆಗೆ ಕರೆತರಲಾಗಿದೆ. ಕೆಲವರು ಪರಾರಿಯಾಗಿದ್ದಾರೆ.

'ಪಾದಯಾತ್ರೆ ಮಾಡುತ್ತೇವೆ'



'ಹತ್ಯೆ ಮಾಡಿದ ಅರೋಪಿಗಳನ್ನು ಬಂಧಿಸಬೇಕು. ಭರತ್ ರೆಡ್ಡಿ ಜತೆಗೆ ಕೈಜೋಡಿಸಿರುವ ಬಳ್ಳಾರಿ ನಗರ ಡಿವೈಎಸ್‌ಪಿ ಅವರನ್ನು ಅಮಾನತು ಮಾಡಬೇಕು. ಇಲ್ಲದಿದ್ದರೆ ಬಳ್ಳಾರಿಯಿಂದ ಬೆಂಗಳೂರಿಗೆ ಪಾದಯಾತ್ರೆ ನಡೆಸುತ್ತೇವೆ' ಎಂದು ಮಾಜಿ ಸಚಿವ ಶ್ರೀರಾಮುಲು ಹೇಳಿದರು.

▸ 6

ಹಿಂದೂ ವ್ಯಾಪಾರಿ ಸಾವು

ಬಾಂಗ್ಲಾ

ಢಾಕಾ/ನವದೆಹಲಿ (ಪಿಟಿಐ): ಬಾಂಗ್ಲಾದೇಶದಲ್ಲಿ ಮೂರು ದಿನಗಳ ಹಿಂದೆ ದುಷ್ಕರ್ಮಿಗಳಿಂದ ಹಲ್ಲೆಗೊಳಗಾಗಿದ್ದ ಹಿಂದೂ ವ್ಯಾಪಾರಿ ಚಿಕಿತ್ಸೆಗೆ ಸ್ಪಂದಿಸದೆ ಶನಿವಾರ ಮೃತಪಟ್ಟಿದ್ದಾರೆ.

'ಔಷಧಿ ಅಂಗಡಿ ನಡೆಸುತ್ತಿದ್ದ ಖೋಕನ್ ಚಂದ್ರದಾಸ್ (50) ಅವರ ಮೇಲೆ ತೀವ್ರ ಹಲ್ಲೆ ನಡೆಸಿ ಬೆಂಕಿ ಹಚ್ಚಲಾಗಿತ್ತು. ಸಾವು ಬದುಕಿನ ಮಧ್ಯೆ ಹೋರಾಟ ನಡೆಸಿದ ಅವರು ಮೃತಪಟ್ಟರು' ಎಂದು ಬಾಂಗ್ಲಾದೇಶ ಹಿಂದೂ ಬುದ್ಧಿಸ್ಟ್ ಕ್ರಿಶ್ಚಿಯನ್ ಐಕ್ಯತಾ ಕೌನ್ಸಿಲ್ ಹೇಳಿದೆ.

'ಕಳೆದ ಒಂದು ತಿಂಗಳಲ್ಲಿ ಹಿಂದೂಗಳ ಮೇಲಿನ ದಾಳಿಯ ಒಟ್ಟು ಏಳು ಘಟನೆಗಳು ನಡೆದಿದ್ದು, ಐವರು ಮೃತಪಟ್ಟಿದ್ದಾರೆ. ಧಾರ್ಮಿಕ ಅಲ್ಪಸಂಖ್ಯಾತರನ್ನು ಬೆದರಿಸಲು ದುಷ್ಕರ್ಮಿಗಳು ಹಲ್ಲೆ ನಡೆಸುತ್ತಿದ್ದಾರೆ' ಎಂದು ಕೌನ್ಸಿಲ್‌ನ ವಕ್ತಾರ ಕಾಜೊಲ್ ದೇವನಾಥ್ ಹೇಳಿದರು.

ಏನಾಗಿತ್ತು?: ಬುಧವಾರ ಸಂಜೆ ಅಂಗಡಿ ಮುಚ್ಚಿದ ಬಳಿಕ ಮನೆಗೆ ಮರಳುತ್ತಿದ್ದ ದಾಸ್ ಅವರ ಮೇಲೆ ದುಷ್ಕರ್ಮಿಗಳ ಗುಂಪು ಹಲ್ಲೆ ನಡೆಸಿತ್ತು. ಅವರು ಪ್ರಯಾಣಿಸುತ್ತಿದ್ದ ಆಟೊವನ್ನು ತಡೆದು, ಮಾರಕಾಸ್ತ್ರಗಳಿಂದ ಮನಬಂದಂತೆ ದಾಳಿ ನಡೆಸಲಾಗಿತ್ತು.

▸ 8

ಮುಸ್ತಫಿಝುರ್ ಕೈಬಿಟ್ಟ ಕೆಕೆಆರ್

ಗುವಾಹಟಿ (ಪಿಟಿಐ): ಭಾರತ ಕ್ರಿಕೆಟ್ ನಿಯಂತ್ರಣ ಮಂಡಳಿ ಸೂಚನೆ ನೀಡಿದ ಬೆನ್ನಲ್ಲೇ ಕೋಲ್ಕತ್ತ ನೈಟ್ ರೈಡರ್ಸ್ ತಂಡವು ಬಾಂಗ್ಲಾದೇಶದ ಎಡಗೈ ವೇಗದ ಬೌಲರ್ ಮುಸ್ತಫಿಝುರ್ ರೆಹಮಾನ್ ಅವರನ್ನು ಐಪಿಎಲ್ ತಂಡದಿಂದ ಶನಿವಾರ ಕೈಬಿಟ್ಟಿದೆ.

ಡಿಸೆಂಬರ್ ತಿಂಗಳಲ್ಲಿ ನಡೆದ ಮಿನಿ ಹರಾಜಿನಲ್ಲಿ ಕೆಕೆಆರ್ ತಂಡವು ಪೈಪೋಟಿಯ ನಡುವೆ ₹9.20 ಕೋಟಿ ಮೊತ್ತಕ್ಕೆ (ಮೂಲಬೆಲೆ ₹2 ಕೋಟಿ) ಮುಸ್ತಫಿಝುರ್ ಅವರನ್ನು ತನ್ನ ಪಾಲು ಮಾಡಿಕೊಂಡಿತ್ತು. ಬಿಸಿಸಿಐ ಸೂಚನೆಯನ್ನು ಪಾಲಿಸಿರುವುದಾಗಿ ಫ್ರಾಂಚೈಸಿ ಹೇಳಿಕೊಂಡಿದೆ.

'ಶಾಸಕ ಸವದಿ, ಬೆಂಬಲಿಗರಿಂದ ಹಲ್ಲೆ'

ಅಥಣಿ (ಬೆಳಗಾವಿ ಜಿಲ್ಲೆ): ಬೆಳಗಾವಿ ಜಿಲ್ಲಾ ಕೇಂದ್ರ ಸಹಕಾರಿ ಬ್ಯಾಂಕ್ (ಬಿಡಿಸಿಸಿ) ನೌಕರರ ಸಂಘದ ಅಧ್ಯಕ್ಷ ನಿಂಗಪ್ಪ ಕರೆಣ್ಣವರ ಅವರ ಮೇಲೆ ಶಾಸಕ ಲಕ್ಷ್ಮಣ ಸವದಿ ಅವರ ಮನೆ ಆವರಣದಲ್ಲಿ ಹಲ್ಲೆ ನಡೆದಿದ್ದು, ಆಸ್ಪತ್ರೆಗೆ ದಾಖಲಾಗಿದ್ದಾರೆ.

'ಬ್ಯಾಂಕ್‌ನ ನೌಕರರ ಸಮಸ್ಯೆಗಳ ಬಗ್ಗೆ ಚರ್ಚಿಸಲು ನಾನು ಮತ್ತು ಸಹೋದ್ಯೋಗಿ ಬಸವರಾಜ ಕಮತಗಿ ಸೇರಿ ಕೆಲವರು ಲಕ್ಷ್ಮಣ ಸವದಿ ಅವರ ಮನೆಗೆ ಹೋಗಿದ್ದೆವು. ಆಗ ಲಕ್ಷ್ಮಣ ಸವದಿ ಅವರ ಪುತ್ರ ಚಿದಾನಂದ ಅವರು ಬಸವರಾಜ ಅವರನ್ನು ಅವಾಚ್ಯವಾಗಿ ನಿಂದಿಸಿ, ಹಲ್ಲೆ ನಡೆಸಿದರು' ಎಂದು ನಿಂಗಪ್ಪ ಕರೆಣ್ಣವರ ಆರೋಪಿಸಿದರು.

ತಮಿಳುನಾಡು: ಹೊಸ ಪಿಂಚಣಿ

ಚೆನ್ನೈ (ಪಿಟಿಐ): ತಮಿಳುನಾಡು ಸರ್ಕಾರಿ ನೌಕರರು ಮತ್ತು ಶಿಕ್ಷಕರಿಗೆ ಹೊಸ ಪಿಂಚಣಿ ಯೋಜನೆಯನ್ನು ಮುಖ್ಯಮಂತ್ರಿ ಎಂ.ಕೆ. ಸ್ಟಾಲಿನ್ ಶನಿವಾರ ಘೋಷಿಸಿದ್ದಾರೆ. ಈ ಯೋಜನೆಯನ್ನು ಘೋಷಿಸುವ ಮೂಲಕ ಎರಡು ದಶಕಗಳಷ್ಟು ಹಳೆಯ ಬೇಡಿಕೆಯನ್ನು ಅವರು ಈಡೇರಿಸಿದ್ದಾರೆ.

ವಿವರ ▸ 9

ಚಿನಕುರುಳಿ — ಪ್ರಕಾಶ್ ಶೆಟ್ಟಿ



ಡೊನಾಲ್ಡ್ ಟ್ರಂಪ್ ಸರ್ವಾಧಿಕಾರಿ ಕ್ರಮಕ್ಕೆ ಅಂತರರಾಷ್ಟ್ರೀಯ ಸಮುದಾಯ ಖಂಡನೆ

ಅಮೆರಿಕ 'ಸೆರೆ'ಯಲ್ಲಿ ವೆನಿಜುವೆಲಾ ಅಧ್ಯಕ್ಷ

ಕರಾಕಸ್/ ವೆನಿಜುವೆಲಾ (ಎಪಿ): ಅಮೆರಿಕ ಸೇನೆ ಶುಕ್ರವಾರ ತಡರಾತ್ರಿ ವೆನಿಜುವೆಲಾದ ರಾಜಧಾನಿ ಕರಾಕಸ್ ಮೇಲೆ ಭಾರಿ ಪ್ರಮಾಣದಲ್ಲಿ ವಾಯುದಾಳಿ ನಡೆಸಿದ್ದು, ಅಧ್ಯಕ್ಷ ನಿಕೊಲಸ್ ಮಡೂರೊ ಮತ್ತು ಅವರ ಪತ್ನಿ ಸಿಲಿಯಾ ಫ್ಲೋರ್ಸ್ ಅವರನ್ನು ಸೆರೆ ಹಿಡಿದಿದೆ.

'ವೆನಿಜುವೆಲಾದ ಅಧ್ಯಕ್ಷ ಮತ್ತು ಅವರ ಪತ್ನಿಯನ್ನು ವಶಕ್ಕೆ ಪಡೆದು, ದೇಶದಿಂದ ಹೊರಗೆ ಹಾಕಿದ್ದೇವೆ. ಸರಿಯಾದ ಅಧಿಕಾರ ವರ್ಗಾವಣೆ ಯಾಗುವವರೆಗೆ ವೆನಿಜುವೆಲಾವನ್ನು ನಾವೇ ಮುನ್ನಡೆಸಲಿದ್ದೇವೆ' ಎಂದು ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಘೋಷಿಸಿದ್ದಾರೆ.

'ಮಡೂರೊ ಅವರನ್ನು ವೆನಿಜುವೆಲಾದ 'ಭದ್ರಕೋಟೆ'ಯಿಂದ ಸೆರೆ ಹಿಡಿಯಲಾಗಿದೆ. ಅಲ್ಲಿಂದ ಅವರನ್ನು ಹೆಲಿಕಾಪ್ಟರ್ ಮೂಲಕ ಅಮೆರಿಕದ ಸೇನೆಯ ಹಡಗಿಗೆ ಕರೆದುಕೊಂಡು ಬರಲಾಗಿದೆ. ಅಲ್ಲಿಂದ ವಿಚಾರಣೆಗಾಗಿ ನ್ಯೂಯಾರ್ಕ್‌ಗೆ ಕರೆದೊಯ್ಯಲಾಗುವುದು. ಈ ಕಾರ್ಯಾಚರಣೆಯಲ್ಲಿ ಅಮೆರಿಕದ ಸೈನಿಕರಿಗೆ ಯಾವುದೇ ಜೀವಹಾನಿ ಆಗಿಲ್ಲ. ಕೆಲವರಿಗೆ ಸಣ್ಣಪುಟ್ಟ ಗಾಯಗಳಾಗಿವೆಯಷ್ಟೆ. ಒಟ್ಟಾರೆ ಕಾರ್ಯಾಚರಣೆ ಅದ್ಭುತವಾಗಿ ನಡೆಯಿತು' ಎಂದು ಟ್ರಂಪ್ 'ಫಾಕ್ಸ್ ನ್ಯೂಸ್'ಗೆ ನೀಡಿರುವ ಸಂದರ್ಶನದಲ್ಲಿ ತಿಳಿಸಿದ್ದಾರೆ.

'ನಿಕೊಲಸ್ ಮಡೂರೊ ಅಂತರರಾಷ್ಟ್ರೀಯ ಮಾದಕ ವಸ್ತು ಕಳ್ಳಸಾಗಣೆ ಜಾಲದ ಪ್ರಮುಖ ಸೂತ್ರಧಾರ' ಎಂದು ಆರೋಪಿಸಿ ಅಮೆರಿಕ ಈ ದಾಳಿ ನಡೆಸಿದೆ. ಆದರೆ, ವೆನಿಜುವೆಲಾ ಈ ಆರೋಪವನ್ನು ತಳ್ಳಿಹಾಕಿದ್ದು, 'ಅಮೆರಿಕವು ದೇಶದ ಭಾರಿ ತೈಲ ನಿಕ್ಷೇಪದ ಮೇಲೆ ಕಣ್ಣಿಟ್ಟಿದೆ. ಮಡೂರೊ ಅವರನ್ನು ಅಧಿಕಾರದಿಂದ ಕೆಳಗಿಳಿಸಿ, ದೇಶದಲ್ಲಿ ರಾಜಕೀಯ ಅಸ್ಥಿರತೆ ಸೃಷ್ಟಿಸಲು ಯತ್ನಿಸುತ್ತಿದೆ' ಎಂದು ಆರೋಪಿಸಿದೆ.

ತಡರಾತ್ರಿ ದಾಳಿ: ಕರಾಕಸ್ ಮೇಲೆ ಶುಕ್ರವಾರ ಮಧ್ಯರಾತ್ರಿ ಅಮೆರಿಕದ ಸೇನಾ ವಿಮಾನಗಳು ಕಡಿಮೆ ಎತ್ತರದಲ್ಲಿ ಹಾರಾಟ ನಡೆಸಿವೆ. ಇದರ ಬೆನ್ನಲ್ಲೇ ಕನಿಷ್ಠ 7 ಸ್ಫೋಟಗಳು ಸಂಭವಿಸಿವೆ.

▸ 8



ನಿಕೊಲಸ್ ಮಡೂರೊ

ವೆನಿಜುವೆಲಾದ ಅತಿ ದೊಡ್ಡ ಮಿಲಿಟರಿ ಸಂಕೀರ್ಣವಾದ ಫ್ಯುರ್ಟೆ ಟಿಯೂನ ಮೇಲೆ ಅಮೆರಿಕದ ಸೇನೆ ಶುಕ್ರವಾರ ತಡರಾತ್ರಿ ವಾಯುದಾಳಿ ನಡೆಸಿದಾಗ ಭಾರಿ ಪ್ರಮಾಣದಲ್ಲಿ ಹೊಗೆ, ಬೆಂಕಿ ಎದ್ದಿರುವುದು

– ಎಎಫ್‌ಪಿ ಚಿತ್ರ

'ಅಮೆರಿಕದ ದಾಳಿಗೆ ಮೂರು ಕಾರಣ'

ವೆನಿಜುವೆಲಾ ಮೇಲೆ ಅಮೆರಿಕ ದಾಳಿ ನಡೆಸಲು 'ವಲಸೆ', 'ಮಾದಕವಸ್ತು' ಮತ್ತು 'ಮಾದಕ ವಸ್ತು ಭಯೋತ್ಪಾದನೆ' ಸೇರಿ ಮೂರು ಕಾರಣಗಳನ್ನು ಪ್ರಮುಖವಾಗಿ ಗುರುತಿಸಲಾಗಿದೆ.

▸ 8



ಅಮೆರಿಕ ಸೇನೆಯ ವಿಶೇಷ ಪಡೆ ವೆನಿಜುವೆಲಾ ಅಧ್ಯಕ್ಷ ಅವರನ್ನು ವಶಕ್ಕೆ ಪಡೆಯುವುದನ್ನು ನೇರವಾಗಿ ವೀಕ್ಷಿಸಿದೆ. ಇದು ಅದ್ಭುತವಾಗಿತ್ತು. ಅಕ್ಷರಶಃ ಟಿವಿ ಶೋ ರೀತಿ ಇತ್ತು

ಡೊನಾಲ್ಡ್ ಟ್ರಂಪ್, ಅಮೆರಿಕದ ಅಧ್ಯಕ್ಷ

ಹವಾಮಾನ ಮುನ್ಸೂಚನೆ: ನಗರದಲ್ಲಿ ಮಂಜು ಮುಸುಕಿದ ವಾತಾವರಣ ಇರಲಿದೆ.

ಸಂಗೀತಯುಕ್ತ ಇಷ್ಟಲಿಂಗ ಮಹಾಪೂಜೆ

ಪ್ರಜಾವಾಣಿ ವಾರ್ತೆ

ಪೀಣ್ಯ ದಾಸರಹಳ್ಳಿ: 'ನಾವು ಜೀವನದಲ್ಲಿ ಇಷ್ಟಲಿಂಗ ಪೂಜೆ, ಮನೆದೇವರ ಪೂಜೆ, ಗ್ರಾಮ ದೇವತೆ ಪೂಜೆ ಮಾಡುವುದರ ಮೂಲಕ ದೋಷ ನಿವಾರಣೆ ಮಾಡಿಕೊಳ್ಳಬೇಕು' ಎಂದು 1008 ಜಗದ್ಗುರು ಕಾಶಿ ಜ್ಞಾನ ಮಲ್ಲಿಕಾರ್ಜುನ ವಿಶ್ವಾರಾಧ್ಯ ಶಿವಾಚಾರ್ಯ ತಿಳಿಸಿದರು.

ದಾಸರಹಳ್ಳಿಯ ವೀರಶೈವ ಲಿಂಗಾಯತ ಕ್ಷೇಮಾಭಿವೃದ್ಧಿ ವೇದಿಕೆ, ಅಖಿಲ ಭಾರತ ವೀರಶೈವ ಲಿಂಗಾಯತ ಮಹಾಸಭಾ ದಾಸರಹಳ್ಳಿ ಘಟಕ, ಅಖಿಲ ಭಾರತ ಶರಣ ಸಾಹಿತ್ಯ ಪರಿಷತ್ತು. ದಾಸರಹಳ್ಳಿ ಘಟಕ, ಅಕ್ಕಮಹಾದೇವಿ ಮಹಿಳಾ ಸಮಾಜ ದಾಸರಹಳ್ಳಿ ಮತ್ತು ಕಾಯಕಯೋಗಿ ಸಹಕಾರ ಸಂಘದ ವತಿಯಿಂದ 'ಸಂಗೀತಯುಕ್ತ ಇಷ್ಟಲಿಂಗ ಮಹಾಪೂಜೆ ಮತ್ತು ಧರ್ಮ ಜನಜಾಗೃತಿ' ಸಮಾರಂಭದಲ್ಲಿ ಅವರು ಮಾತನಾಡಿದರು.

ಭಕ್ತಿಭಾವದಿಂದ ಬನಶಂಕರಿ ದೇವಿಯ ರಥೋತ್ಸವ

ರಥ ಎಳೆದು, ಬಾಳೆಹಣ್ಣು, ಉತ್ತತ್ತಿ ಎಸೆದು ಹರಕೆ ತೀರಿಸಿದ ಸಾವಿರಾರು ಭಕ್ತರು

ಪ್ರಜಾವಾಣಿ ವಾರ್ತೆ

ಮುಖ್ಯಾಂಶಗಳು

- ವೀರಗಾಸೆ, ಗೊಂಬೆ ಕುಣಿತ, ಚೆಂಡೆ ವಾದನಗಳು ಸಾಥ್
- ಸುತ್ತಮುತ್ತಲಿನ ಎಲ್ಲ ದೇವಸ್ಥಾನಗಳಲ್ಲಿ ಪ್ರಸಾದ ವಿತರಣೆ

ಬೆಂಗಳೂರು: ನಗರದ ಕನಕಪುರ ರಸ್ತೆಯಲ್ಲಿ ಶನಿವಾರ ಬನಶಂಕರಿ ದೇವಿಯ ರಥೋತ್ಸವ ಭಕ್ತ ಸಮೂಹದ ನಡುವೆ ವಿಜೃಂಭಣೆಯಿಂದ ನೆರವೇರಿತು. ಭಕ್ತರು ಉತ್ತತ್ತಿ, ಬಾಳೆ ಹಣ್ಣು ಎಸೆದು ಹರಕೆ ತೀರಿಸಿದರು.

ಬೆಳಿಗ್ಗಿನಿಂದ ಮೃತ್ಯುಂಜಯ ಪುರಸ್ಸರ ನವಗ್ರಹ ಶಾಂತಿ, ದೇವಿ ಮೂಲಮಂತ್ರ ಹೋಮ, ರಥಾಂಗಹೋಮಗಳು ಜರುಗಿದವು. ಮಧ್ಯಾಹ್ನ ಬನಶಂಕರಿ ಅಮ್ಮನವರ ಮೂರ್ತಿಯನ್ನು ಬ್ರಹ್ಮರಥದಲ್ಲಿ ಪ್ರತಿಷ್ಠಾಪಿಸಿ ರಥೋತ್ಸವ ನಡೆಸಲಾಯಿತು. ಜನರು ರಥ ಎಳೆದು ಭಕ್ತಿ ಭಾವ ಪ್ರದರ್ಶಿಸಿದರು.

ವೀರಗಾಸೆ, ಗೊಂಬೆ ಕುಣಿತ, ದೇವರ ಪಟ ಕುಣಿತ, ಚೆಂಡೆ ವಾದನಗಳು ಸಾಥ್ ನೀಡಿದವು. ಬನಶಂಕರಿ ದೇವಸ್ಥಾನದಲ್ಲಿ ಮಾತ್ರವಲ್ಲದೇ ಸುತ್ತಮುತ್ತಲಿನ ಎಲ್ಲ ದೇವಸ್ಥಾನಗಳಲ್ಲಿ ಪ್ರಸಾದ ವಿತರಣೆ ನಡೆಯಿತು. ಪೊಲೀಸರು ಬಿಗಿ ಬಂದೋಬಸ್ತು ಒದಗಿಸಿದ್ದರು.

ಸಂಜೆ ಶಾಕಾಂಬರಿ ದೇವಿಗೆ ದೂಲೋತ್ಸವ, ಬನಶಂಕರಿ, ಚೌಡೇಶ್ವರಿ ದೇವಿ, ಪುಟ್ಟೇನಹಳ್ಳಿ ಆಂಜನೇಯ ಸ್ವಾಮಿ, ಪಾರ್ವತಿ ಪರಮೇಶ್ವರ ದೇವರು, ಸೀತಾಲಕ್ಷ್ಮಣ ಹನುಮಂತ ಸಮೇತ ರಾಮಚಂದ್ರ ಸ್ವಾಮಿಗೆ ಮಹಾಗಣಪತಿ, ವರಪ್ರಸಾದ್ ಆಂಜನೇಯ ಸ್ವಾಮಿ, ಸುಬ್ರಹ್ಮಣ್ಯೇಶ್ವರ ಸ್ವಾಮಿಗೆ ಮುತ್ತಿನ ಪಲಕ್ಕಿ ಉತ್ಸವ ನೆರವೇರಿತು.

'ಹಿಂದೂ ಧಾರ್ಮಿಕ ಸಂಸ್ಥೆ ಮತ್ತು ಧರ್ಮಾದಾಯ ದತ್ತಿ ಇಲಾಖೆ ವತಿಯಿಂದ ಬ್ರಹ್ಮರಥೋತ್ಸವ ಶಾಂತಿಯುತವಾಗಿ ನೆರವೇರಿತು' ಎಂದು ಮುಜರಾಯಿ ಸಚಿವ ರಾಮಲಿಂಗಾರೆಡ್ಡಿ ತಿಳಿಸಿದ್ದಾರೆ.



ಬನಶಂಕರಿ ದೇವಿಯ ಬ್ರಹ್ಮರಥೋತ್ಸವದಲ್ಲಿ ಭಾರಿ ಸಂಖ್ಯೆಯಲ್ಲಿ ಭಕ್ತರು ಪಾಲ್ಗೊಂಡಿದ್ದರು —ಚಿತ್ರ: ಎಂ.ಎಸ್.ಮಂಜುನಾಥ್


ಸುಳ್ಳನ್ನು ಸತ್ಯವೆಂದು ಬಿಂಬಿಸುವ ಪಕ್ಷಗಳು: ಕೆ. ಶಿವಕುಮಾರ್

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಒಂದು ತತ್ವ ಸಿದ್ಧಾಂತವನ್ನು ಪ್ರತಿಪಾದಿಸುವ ಮೂಲಕ ಸುಳ್ಳನ್ನು ಸತ್ಯವೆಂದು ಬಿಂಬಿಸುವ ಪಕ್ಷಗಳು ಅಧಿಕಾರಕ್ಕೆ ಬಂದಿವೆ. ಕೆಲ ಪಕ್ಷಗಳು ಸಮಾಜದ ಸಾಮರಸ್ಯವನ್ನು ಹಾಳು ಮಾಡುತ್ತಿವೆ' ಎಂದು ವಿಧಾನ ಪರಿಷತ್ ಸದಸ್ಯ ಕೆ. ಶಿವಕುಮಾರ್ ತಿಳಿಸಿದರು.

ಕರ್ನಾಟಕ ಮಾಧ್ಯಮ ಅಕಾಡೆಮಿ ಶನಿವಾರ ಆಯೋಜಿಸಿದ್ದ ಪರಿಶಿಷ್ಟ ಜಾತಿ ಹಾಗೂ ಪರಿಶಿಷ್ಟ ಪಂಗಡದ ಪತ್ರಿಕಾ ಸಂಪಾದಕರಿಗೆ 'ಪತ್ರಿಕೆಗಳಲ್ಲಿ ಎಐ ಬಳಕೆ ಮತ್ತು ಡಿಜಿಟಲ್ ಸವಾಲುಗಳ ನಿರ್ವಹಣೆ' ಕುರಿತು ತರಬೇತಿ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

'ಇಂತಹ ಪರಿಸ್ಥಿತಿಯಲ್ಲಿ ದಲಿತ ಸಂಪಾದಕರು ಹಾಗೂ ಪತ್ರಕರ್ತರು ನೈಜ ವರದಿಗಳನ್ನು ಎಲ್ಲರಿಗೂ ತಲುಪಿಸುವ ಕೆಲಸ ಮಾಡಬೇಕು. ಪ್ರಸ್ತುತ ರಾಜಕೀಯ, ಸಾಮಾಜಿಕ ಸ್ಥಿತಿಗತಿಗಳ ಕುರಿತು ಸಂಪಾದಕೀಯವನ್ನು ಕಡ್ಡಾಯವಾಗಿ ಬರೆಯಬೇಕು' ಎಂದು ಸಲಹೆ ನೀಡಿದರು.



ಕೆ. ಶಿವಕುಮಾರ್

'ಪತ್ರಿಕೆಗಳಲ್ಲಿ ಸಂವಿಧಾನದ ಕುರಿತು ಲೇಖನಗಳನ್ನು ಪ್ರಕಟಿಸಿ, ಅವುಗಳನ್ನು ಶಾಲಾ ಕಾಲೇಜಿನ ಮಕ್ಕಳಿಗೆ ತಲುಪಿಸುವ ಕೆಲಸ ಮಾಡಬೇಕು. ಜ. 26ರಿಂದ 2027ರ ಜ. 26ರವರೆಗೆ ಎರಡು ವರ್ಷಗಳ ಕಾಲ ಸಂವಿಧಾನ ಪೀಠಿಕೆಯಿಂದ ಹಿಡಿದು ಪ್ರಮುಖ ಅಂಶಗಳನ್ನು ಪ್ರಕಟಿಸಿ, ಮಾಧ್ಯಮ ಅಕಾಡೆಮಿಗೆ ತಂದು ಕೊಡಬೇಕು' ಎಂದರು.

ಅಕಾಡೆಮಿ ಅಧ್ಯಕ್ಷೆ ಆಯಿಷಾ ಖಾನುಂ, ಪತ್ರಕರ್ತ ಶಿವಾಜಿ ಗಣೇಶನ್, ಕರ್ನಾಟಕ ಪರಿಶಿಷ್ಟ ಜಾತಿ ಹಾಗೂ ಪರಿಶಿಷ್ಟ ಪಂಗಡದ ಪತ್ರಿಕಾ ಸಂಪಾದಕರ ಸಂಘದ ಅಧ್ಯಕ್ಷ ಚೆಲುವರಾಜು, ಕಾರ್ಯದರ್ಶಿ ಸಹನಾ ಎಂ. ಉಪಸ್ಥಿತರಿದ್ದರು.

6ರಂದು ವಿಚಾರ ಸಂಕಿರಣ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಷ್ಟ್ರಕವಿ ಡಾ. ಜಿ.ಎಸ್. ಶಿವರುದ್ರಪ್ಪ ಪ್ರತಿಷ್ಠಾನದ ವತಿಯಿಂದ ಜನವರಿ 6ರಂದು 'ವಿಮರ್ಶೆ: ಸಮಕಾಲೀನ ಸಂದರ್ಭ' ಎಂಬ ಒಂದು ದಿನದ ರಾಷ್ಟ್ರೀಯ ವಿಚಾರ ಸಂಕಿರಣ - ಸಂವಾದ ಕಾರ್ಯಕ್ರಮವನ್ನು ಆಯೋಜಿಸಲಾಗಿದೆ.

ಕನ್ನಡ ಭವನದ ನಯನ ಸಭಾಂಗಣದಲ್ಲಿ ನಡೆಯಲಿರುವ ವಿಚಾರ ಸಂಕಿರಣಕ್ಕೆ ಕವಿ ಎಚ್. ಎಸ್. ಶಿವಪ್ರಕಾಶ್ ಅವರು ಚಾಲನೆ ನೀಡಲಿದ್ದಾರೆ. ಪ್ರತಿಷ್ಠಾನದ ಅಧ್ಯಕ್ಷ ಮೋಹನಕುಮಾರ್ ಕೊಂಡಜ್ಜಿ ಅಧ್ಯಕ್ಷತೆ ವಹಿಸಲಿದ್ದಾರೆ.

'ವಿಮರ್ಶೆ: ಭಾರತೀಯ ಸಂದರ್ಭ' ಕುರಿತು ಭೋಪಾಲ್‌ನ ಲೇಖಕ ಉದಯನ್ ವಾಜಪೇಯಿ ಅವರು, 'ವಿಮರ್ಶೆ: ಕನ್ನಡದ ಸಂದರ್ಭ' ಕುರಿತು ವಿಮರ್ಶಕ ರಾಜೇಂದ್ರ ಚೆನ್ನಿ ಮತ್ತು 'ವಿಮರ್ಶೆ: ದಲಿತ ಮತ್ತು ಮಹಿಳಾ ಸಂದರ್ಭ' ಕುರಿತು ವಿಮರ್ಶಕಿ ತಾರಿಣಿ ಶುಭದಾಯಿನಿ ಅವರು ಮಾತನಾಡಲಿದ್ದಾರೆ ಪ್ರತಿಷ್ಠಾನದ ಪ್ರಕಟಣೆ ತಿಳಿಸಿದೆ.

ಹೆನ್ನಾಗರ ಯಲ್ಲಮ್ಮ ರಥೋತ್ಸವ ವೈಭವ

ಪ್ರಜಾವಾಣಿ ವಾರ್ತೆ

ಆನೇಕಲ್: ತಾಲ್ಲೂಕಿನ ಹೆನ್ನಾಗರ ಯಲ್ಲಮ್ಮ ದೇವಿ ದೇವಾಲಯದಲ್ಲಿ ದೇವಿ ರಥೋತ್ಸವ ಶನಿವಾರ ವೈಭವದಿಂದ ನಡೆಯಿತು. ನೂರಾರು ಮಂದಿ ಭಕ್ತರು ರಥೋತ್ಸವದಲ್ಲಿ ಪಾಲ್ಗೊಂಡು ದೇವಿಯ ದರ್ಶನ ಪಡೆದರು.

ರಥೋತ್ಸವದ ಪ್ರಯುಕ್ತ ಶನಿವಾರ ದೇವಾಲಯದಲ್ಲಿ ದೇವಿಗೆ ಅಭಿಷೇಕ, ವಿಶೇಷ ಅಲಂಕಾರ ಮಾಡಲಾಗಿತ್ತು. ಜ್ಯೋತಿಲಿಂಗ ಸ್ವಾಮಿ ಗದ್ದಿಗೆಗೆ ಅಭಿಷೇಕ, ಹೋಮ ನೆರವೇರಿಸಲಾಯಿತು. ಮಧ್ಯಾಹ್ನ ಅಲಂಕೃತ ರಥದಲ್ಲಿ ದೇವಿಯ ಉತ್ಸವ ಮೂರ್ತಿಯನ್ನು ಪ್ರತಿಷ್ಠಾಪಿಸಿ ಅರ್ಚಕರು ಧಾರ್ಮಿಕ ಪೂಜೆ ನೆರವೇರಿಸಿದರು. ನಂತರ ಗುಮ್ಮಳಾಪುರ ಸಂಸ್ಥಾನ ಮಠದ ಡಾ.ಶಿವಾನಂದ ಶಿವಾಚಾರ್ಯ ಸ್ವಾಮೀಜಿ ರಥೋತ್ಸವಕ್ಕೆ ಚಾಲನೆ ನೀಡಿದರು.

ನೆರೆದಿದ್ದ ಭಕ್ತರು ದೇವಿಯ ಜಯಘೋಷ ಮಾಡುತ್ತಾ ದವನ ಚುಚ್ಚಿದ ಬಾಳೆಹಣ್ಣನ್ನು ರಥಕ್ಕೆ ಎಸೆದು ತಮ್ಮ ಇಷ್ಟಾರ್ಥ ಸಿದ್ಧಿಗೆ ಪ್ರಾರ್ಥಿಸಿದರು. ಉಧೋ ಉಧೋ ಯಲ್ಲಮ್ಮ ಘೋಷಣೆ ಕೂಗಿ ತಮ್ಮ ಭಕ್ತಿಯನ್ನು ಸಮರ್ಪಿಸಿದರು.

ವೀರಗಾಸೆ, ತಮಟೆ, ಚೆಂಡೆ ಸೇರಿದಂತೆ ವಿವಿಧ ಜಾನಪದ ಕಲಾ ತಂಡಗಳು ವೈಭವದ ಜಾತ್ರೆಗೆ ಮೆರುಗು ನೀಡಿದವು. ಮಹಿಳೆಯರು ಆಕರ್ಷಕ ಕೋಲಾಟ ಪ್ರದರ್ಶನ ನೀಡಿದರು.

ಹೆನ್ನಾಗರ ಗ್ರಾಮ ಪಂಚಾಯಿತಿ ಸೇರಿದಂತೆ ಜಿಗಣಿ ಹೋಬಳಿಯ ಸಾವಿರಾರು ಮಂದಿ ಭಕ್ತರು ವೈಭವದ ಜಾತ್ರೆಯಲ್ಲಿ ಪಾಲ್ಗೊಂಡಿದ್ದರು. ಮಹಿಳೆಯರು ದೇವಿಗೆ ಮಡಿಲಕ್ಕಿ ಅರ್ಪಿಸಿ, ತಮ್ಮ ಭಕ್ತಿ, ಭಾವ ಮೆರೆದರು.

ಜಾತ್ರೆಯ ಅಂಗವಾಗಿ ಬೆಳಗಿನಿಂದ ಸಂಜೆಯವರೆಗೂ ಅನ್ನದಾಸೋಹ ಏರ್ಪಡಿಸಲಾಗಿತ್ತು. ದೇವಾಲಯದ ಆವರಣದಲ್ಲಿ ಅರವಂಟಿಕೆಗಳನ್ನು ಸ್ಥಾಪಿಸಿ ನೀರು ಮಜ್ಜಿಗೆ ಪಾನಕ, ಕೋಸಂಬರಿ ವಿತರಣೆ ಮಾಡಲಾಯಿತು.



ಆನೇಕಲ್ ತಾಲ್ಲೂಕಿನ ಹೆನ್ನಾಗರ ಯಲ್ಲಮ್ಮ ದೇವಿ ದೇವಾಲಯದಲ್ಲಿ ದೇವಿಯ ಬ್ರಹ್ಮರಥೋತ್ಸವ ವೈಭವದಿಂದ ನಡೆಯಿತು

ಈ ದೇವಾಲಯವು ಎರಡನೇ ಸವದತ್ತಿ ಎಂದೇ ಪ್ರಸಿದ್ಧ. ಹೆಚ್ಚಿನ ಸಂಖ್ಯೆಯಲ್ಲಿ ಭಕ್ತರು ಆಗಮಿಸುತ್ತಿದ್ದು, ಧಾರ್ಮಿಕ ಕಾರ್ಯಗಳಿಂದ ಗ್ರಾಮದಲ್ಲಿ ಶಾಂತಿ ನೆಮ್ಮದಿ ದೊರೆಯುತ್ತದೆ

ಡಾ.ಶಿವಾನಂದ ಶಿವಾಚಾರ್ಯ ಸ್ವಾಮೀಜಿ, ಗುಮ್ಮಳಾಪುರ ಸಂಸ್ಥಾನ ಮಠ

ಸಹಸ್ರಾರ್ಜುನ ಮಹಾರಾಜರ ಜಯಂತಿ ಇಂದು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಶ್ರೀ ರಾಜರಾಜೇಶ್ವರ ಸಹಸ್ರಾರ್ಜುನ ಮಹಾರಾಜ ಜಯಂತಿ ಸಮಿತಿಯಿಂದ ಜ. 4ರಂದು ವಿಜಯನಗರದ ಬಂಟ್ಸ್ ಸಂಘದಲ್ಲಿ ಶ್ರೀ ಸಹಸ್ರಾರ್ಜುನ ಮಹಾರಾಜರ ಜಯಂತಿ ಹಮ್ಮಿಕೊಳ್ಳಲಾಗಿದೆ.

ಬೆಳಿಗ್ಗೆ 10ಕ್ಕೆ ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಕಾರ್ಯಕ್ರಮಕ್ಕೆ ಚಾಲನೆ ನೀಡಲಿದ್ದಾರೆ. ಎಬಿಎಸ್‌ಎಸ್‌ಕೆ ಸಮಾಜದ ಅಧ್ಯಕ್ಷ ಸ್ವಾಮಿಸಾ ಎಲ್. ಖೋಡೆ ಅಧ್ಯಕ್ಷತೆ ವಹಿಸಲಿದ್ದು, ಶಾಸಕ ಎಂ. ಕೃಷ್ಣಪ್ಪ ಧ್ವಜಾರೋಹಣ ನೆರವೇರಿಸಲಿದ್ದಾರೆ.

ಆರೋಗ್ಯ ಸಚಿವ ದಿನೇಶ್ ಆರ್. ಗುಂಡೂರಾವ್, ಶಾಸಕ ಪ್ರಿಯಕೃಷ್ಣ, ಸಂಸದ ಪಿ.ಸಿ. ಮೋಹನ್, ಎಬಿಎಸ್‌ಎಸ್‌ಕೆ ಸಮಾಜದ ಅಧ್ಯಕ್ಷ ಶ್ರೀನಿವಾಸ್ ಶ್ರೀಹರಿ ಖೋಡೆ, ಉಪಾಧ್ಯಕ್ಷ ಡಮಾಮ್ ವಿ. ಸತ್ಯನಾರಾಯಣ, ಎಸ್‌ಎಸ್‌ಕೆ ಸಂಘದ ಅಧ್ಯಕ್ಷ ಎಸ್. ಅನಂತ್, ಕರ್ನಾಟಕ ರಾಜ್ಯ ಎಸ್‌ಎಸ್‌ಕೆ ಸಮಾಜದ ಅಧ್ಯಕ್ಷ ಶಶಿಕುಮಾರ್ ವಿ. ಮೆಹರ್‌ವಾಡೆ, ಎಸ್‌ಎಸ್‌ಕೆ ಕೋ–ಆಪರೇಟಿವ್ ಸೊಸೈಟಿಯ ಅಧ್ಯಕ್ಷೆ ಕೆ. ಹೇಮಾವತಿ, ಸಮಾಜ ಸೇವಕರಾದ ಸಹಜಾನಂದಸಾ ಕಬಾಡಿ, ಎಸ್. ಎನ್. ಶ್ರೀನಿವಾಸಮೂರ್ತಿ, ಡಿ.ಎಚ್. ನಾರಾಯಣಸಾ, ಎಸ್. ಡಿ.ಎಂ. ಸ್ವಾಮಿ ಅತಿಥಿಗಳಾಗಿ ಪಾಲ್ಗೊಳ್ಳಲಿದ್ದಾರೆ ಎಂದು ಪ್ರಕಟಣೆ ತಿಳಿಸಿದೆ.

ಬಂಡೆಮಠ ಆರಿದ್ರೋತ್ಸವ ಸಂಪನ್ನ



ಬಂಡೆಮಠ ಆರಿದ್ರೋತ್ಸವದಲ್ಲಿ ಭಾರಿ ಸಂಖ್ಯೆಯಲ್ಲಿ ಭಕ್ತರು ಪಾಲ್ಗೊಂಡಿದ್ದರು

ಪ್ರಜಾವಾಣಿ ವಾರ್ತೆ

ಕೆಂಗೇರಿ: 'ಇಡ್ಲಿ ಹಬ್ಬ'ವೆಂದೇ ಪ್ರಸಿದ್ಧವಾಗಿರುವ ಬಂಡೆಮಠ ಆರಿದ್ರೋತ್ಸವ ಶನಿವಾರ ವಿಜೃಂಭಣೆಯಿಂದ ನಡೆಯಿತು.

ದೇವಾಲಯವನ್ನು ವಿವಿಧ ಹೂಗಳಿಂದ ಸಿಂಗರಿಸಲಾಗಿತ್ತು. ಬೆಳಿಗ್ಗೆ ಮೂಲ ದೇವರು ಬಂಡೇಶ್ವರ ಸ್ವಾಮಿಯನ್ನು ಅಲಂಕಾರಗೊಳಿಸಿ ಅಭಿಷೇಕ, ರುದ್ರಾಭಿಷೇಕ, ಅಷ್ಟೋತ್ತರ, ಮಹಾ ಮಂಗಳಾರತಿ ನೆರವೇರಿಸಲಾಯಿತು. ಭಕ್ತರಿಗೆ ಪ್ರಸಾದವಾಗಿ ಇಡ್ಲಿ, ಚಟ್ನಿ ನೀಡಲಾಯಿತು.

ಪೂಜೆಯ ನಂತರ ಕೆಂಗೇರಿಯ ಕೋಟೆ ಸೋಮೇಶ್ವರ ದೇವಾಲಯಕ್ಕೆ ಬಂದ ಬಂಡೇಶ್ವರ ಉತ್ಸವ ಮೂರ್ತಿಗೆ ವಿಶೇಷ ಪೂಜೆ ನೆರವೇರಿಸಲಾಯಿತು. ದೇವಾಲಯದಿಂದ ಹೊರಟ ಉತ್ಸವ ಮೂರ್ತಿ, ರಾತ್ರಿಯವರೆಗೆ ಕೆಂಗೇರಿಯ ವಿವಿಧ ಕೇರಿಗಳಲ್ಲಿ ಸಂಚರಿಸಿತು. ರಾತ್ರಿ ಗ್ರಾಮದ ಯಜಮಾನರ ಮನೆಯಲ್ಲಿ ಉತ್ಸವ ಮೂರ್ತಿ ನೆಲೆಗೊಂಡು ಭಾನುವಾರ ಮುಂಜಾನೆ ಸ್ವಸ್ಥಾನ ಬಂಡೆಮಠ ದೇವಾಲಯಕ್ಕೆ ಮರಳಲಿದೆ ಎಂದು ಬಂಡೆಮಠದ ಸಚ್ಚಿದಾನಂದ ಸ್ವಾಮೀಜಿ ತಿಳಿಸಿದರು.

ಕೇಂದ್ರ ಸಚಿವೆ ಶೋಭಾ ಕರಂದ್ಲಾಜೆ, ವಿಧಾನ ಪರಿಷತ್ ಸದಸ್ಯ ಟಿ.ಎನ್. ಜವರಾಯಿಗೌಡ, ಮುಖಂಡರಾದ ಎಂ. ರುದ್ರೇಶ್, ಮಾರೇಗೌಡ, ಶಶಿಕುಮಾರ್, ಕೇಶವ ಮೂರ್ತಿ, ಸುಧೀರ್ ದೇವಾಲಯಕ್ಕೆ ಭೇಟಿ ನೀಡಿ ಪೂಜೆ ಸಲ್ಲಿಸಿದರು.




ಭಾನುವಾರ ನಡೆಯುವ ಚಿತ್ರಸಂತೆಯ ಉದ್ಘಾಟನಾ ಸಮಾರಂಭಕ್ಕೆ ಸಜ್ಜುಗೊಂಡಿರುವ ವೇದಿಕೆ (ಎಡಚಿತ್ರ). ಚಿತ್ರಕಲಾ ಪರಿಷತ್ತಿನ ಪ್ರವೇಶ ದ್ವಾರಕ್ಕೆ ಕಲಾವಿದರು ಶನಿವಾರ ಅಂತಿಮ ಸ್ಪರ್ಶ ನೀಡಿದರು –ಪ್ರಜಾವಾಣಿ ಚಿತ್ರ

ಕುಮಾರಕೃಪಾ: ಚಿತ್ರಸಂತೆ ಇಂದು

ಚಿತ್ರಕಲಾ ಪರಿಷತ್ತಿನಿಂದ ಆಯೋಜನೆ
• 1,500ಕ್ಕೂ ಹೆಚ್ಚು ಕಲಾವಿದರು ಭಾಗಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕರ್ನಾಟಕ ಚಿತ್ರಕಲಾ ಪರಿಷತ್ತು ಇದೇ ಭಾನುವಾರ (ಜ.4) ಕುಮಾರಕೃಪಾ ರಸ್ತೆಯಲ್ಲಿ 23ನೇ ‘ಚಿತ್ರಸಂತೆ’ಯನ್ನು ಹಮ್ಮಿಕೊಂಡಿದ್ದು, ಈ ಸಂತೆಯು ಸಾವಿರಾರು ಕಲಾವಿದರ ಪ್ರತಿಭೆ ಅನಾವರಣಕ್ಕೆ ಹಾಗೂ ಅವರು ರಚಿಸಿದ ಕಲಾಕೃತಿಗಳ ಮಾರಾಟಕ್ಕೆ ವೇದಿಕೆ ಕಲ್ಪಿಸಲಿದೆ.

ಈ ಬಾರಿಯ ಚಿತ್ರಸಂತೆಯನ್ನು ‘ಪರಿಸರ’ಕ್ಕೆ ಸಮರ್ಪಣೆ ಮಾಡಲಾಗಿದೆ. ಬೆಳಿಗ್ಗೆ 8ರಿಂದ ರಾತ್ರಿ 8ರವರೆಗೆ ಕಲಾಕೃತಿಗಳ ಪ್ರದರ್ಶನ ಮತ್ತು ಮಾರಾಟ ನಡೆಯಲಿದೆ. ಸಂತೆಗೆ ಪರಿಷತ್ತು ಅಗತ್ಯ ಸಿದ್ಧತೆ ಮಾಡಿಕೊಂಡಿದ್ದು, ಉದ್ಘಾಟನಾ ಕಾರ್ಯಕ್ರಮದ ವೇದಿಕೆ ಹಾಗೂ ವಿವಿಧ ಕಲಾಕೃತಿಗಳಿಗೆ ಕಲಾವಿದರು ಶನಿವಾರ ಅಂತಿಮ ಸ್ಪರ್ಶ ನೀಡಿದರು.

ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಭಾನುವಾರ ಬೆಳಿಗ್ಗೆ 10.30ಕ್ಕೆ ಪರಿಷತ್ತಿನ ಆವರಣದಲ್ಲಿ ಚಿತ್ರಸಂತೆ ಉದ್ಘಾಟಿಸುತ್ತಾರೆ. ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರು ‘ಕಲಾ ಪ್ರದರ್ಶನ’ಕ್ಕೆ ಚಾಲನೆ ನೀಡುತ್ತಾರೆ.

ದೇಶದ ವಿವಿಧ ಭಾಗಗಳಿಂದ 1,500 ಕಲಾವಿದರು ಚಿತ್ರಸಂತೆಯಲ್ಲಿ ಭಾಗವಹಿಸಿ, ಕಲಾಕೃತಿಗಳನ್ನು ಪ್ರದರ್ಶಿಸಲಿದ್ದಾರೆ. ಕರ್ನಾಟಕದ ಜತೆಗೆ ಕೇರಳ, ತಮಿಳುನಾಡು, ಆಂಧ್ರಪ್ರದೇಶ, ಗೋವಾ, ಮಹಾರಾಷ್ಟ್ರ, ಪಂಜಾಬ್, ಪಶ್ಚಿಮ ಬಂಗಾಳ, ಒಡಿಶಾ ಸೇರಿದಂತೆ ವಿವಿಧ ರಾಜ್ಯಗಳ ಕಲಾವಿದರು ಪಾಲ್ಗೊಳ್ಳುತ್ತಿದ್ದಾರೆ. ಪರಿಷತ್ತಿನ ಗ್ಯಾಲರಿಗಳಲ್ಲಿ ಹಿರಿಯ ಹಾಗೂ ಹೆಸರಾಂತ ಕಲಾವಿದರು ರಚಿಸಿದ ಕಲಾಕೃತಿಗಳ ಪ್ರದರ್ಶನ ನಡೆಯಲಿವೆ.

ಚಿತ್ರಸಂತೆಯಲ್ಲಿ ವ್ಯಂಗ್ಯಚಿತ್ರ ಪ್ರದರ್ಶನಕ್ಕೆ ಅವಕಾಶ ನೀಡಲಾಗಿದ್ದು, ಕುಂಚ ಅಥವಾ ಪೆನ್ಸಿಲ್‌ಗಳಿಂದ ಕಲಾರಸಿಕರ ಭಾವಚಿತ್ರಗಳನ್ನು ಸ್ಥಳದಲ್ಲಿಯೇ ರಚಿಸಿಕೊಡುವ ಕಲಾವಿದರು ಇರುತ್ತಾರೆ.

‘ಹಿರಿಯ ಕಲಾವಿದರು ಹಾಗೂ ಅಂಗವಿಕಲರಿಗೆ ಆಯ್ದ ಸ್ಥಳದಲ್ಲಿ ಅಗತ್ಯ ಸೌಲಭ್ಯ ಒದಗಿಸಿಕೊಡಲಾಗುತ್ತಿದೆ. ಪರಿಷತ್ತಿನ ಆವರಣದ ಹೊರಗೆ ಸಂಚಾರಿ ಎಟಿಎಂ ಇರಲಿವೆ. ಈ ಚಿತ್ರಸಂತೆಯಲ್ಲಿ ₹100 ರಿಂದ ಲಕ್ಷಾಂತರ ರೂಪಾಯಿ ಮೌಲ್ಯದ ಕಲಾಕೃತಿಗಳು ಲಭ್ಯ. ಈ ಬಾರಿಯ ಚಿತ್ರಸಂತೆಗೆ ಐದು ಲಕ್ಷ ಮಂದಿ ಭೇಟಿ ನೀಡುವ ನಿರೀಕ್ಷೆಯಿದೆ’ ಎಂದು ಪರಿಷತ್ತಿನ ಅಧ್ಯಕ್ಷ ಬಿ.ಎಲ್. ಶಂಕರ್ ತಿಳಿಸಿದರು.



ಮನೆಗೊಂದು ಕಲಾಕೃತಿ ಚಿತ್ರಸಂತೆಯ ಧ್ಯೇಯವಾಗಿದ್ದು, ಕಲೆಯನ್ನು ಜನಸಾಮಾನ್ಯರಿಗೆ ತಲುಪಿಸುವ ಉದ್ದೇಶ ಹೊಂದಿದೆ

ಬಿ.ಎಲ್.ಶಂಕರ್
ಕರ್ನಾಟಕ ಚಿತ್ರಕಲಾ ಪರಿಷತ್ತಿನ ಅಧ್ಯಕ್ಷ

ಬಸ್ ವ್ಯವಸ್ಥೆ

ಮೆಜೆಸ್ಟಿಕ್, ಮಂತ್ರಿಮಾಲ್, ವಿಧಾನಸೌಧ ಮೆಟ್ರೊ ನಿಲ್ದಾಣದಿಂದ ಶಿವಾನಂದ ವೃತ್ತದವರೆಗೆ ಫೀಡರ್ ಬಸ್ ಸಂಚಾರ ಪ್ರತಿ 10 ನಿಮಿಷಕ್ಕೆ ಒಮ್ಮೆ ಇರಲಿದೆ ಎಂದು ಬಿಎಂಟಿಸಿ ತಿಳಿಸಿದೆ.

ವಾಹನ ಸಂಚಾರ ಮಾರ್ಗ ಮಾರ್ಪಾಡು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಚಿತ್ರಸಂತೆ ಪ್ರಯುಕ್ತ ಭಾನುವಾರ ಬೆಳಿಗ್ಗೆ 5ರಿಂದ ರಾತ್ರಿ 10ರ ವರೆಗೆ ಕುಮಾರಕೃಪಾ ರಸ್ತೆಯಲ್ಲಿ (ವಿಂಡ್ಸರ್ ಮ್ಯಾನರ್ ವೃತ್ತದಿಂದ ಶಿವಾನಂದ ವೃತ್ತದ ವರೆಗೆ) ಎರಡು ಕಡೆಯಿಂದಲೂ ಎಲ್ಲಾ ಮಾದರಿಯ ವಾಹನಗಳ ಸಂಚಾರ ನಿಷೇಧಿಸಲಾಗಿದೆ.

ಈ ರಸ್ತೆಯಲ್ಲಿ ಸಂಚರಿಸುವ ವಾಹನಗಳಿಗೆ ಪರ್ಯಾಯ ಮಾರ್ಗ, ವಾಹನ ನಿಲುಗಡೆಗೆ ವ್ಯವಸ್ಥೆ ಕಲ್ಪಿಸಲಾಗಿದೆ ಎಂದು ಹೈಗ್ರೌಂಡ್ಸ್ ಸಂಚಾರ ಠಾಣೆಯ ಪೊಲೀಸರು ತಿಳಿಸಿದರು.

ನಿರ್ಬಂಧಿತ ರಸ್ತೆಗಳಿಗೆ ಪರ್ಯಾಯ ವ್ಯವಸ್ಥೆ:

- ಮೌರ್ಯ ವೃತ್ತ ಮತ್ತು ಆನಂದರಾವ್ ವೃತ್ತದ ಕಡೆಯಿಂದ ರೇಸ್ ವ್ಯೂ ಜಂಕ್ಷನ್ ಮೂಲಕ ಕುಮಾರಕೃಪಾ ರಸ್ತೆಯ ಪ್ರವೇಶ ಪಡೆಯುವ ವಾಹನಗಳಿಗೆ ಶಿವಾನಂದ ಜಂಕ್ಷನ್‌ನಲ್ಲಿಯೇ ನಿಷೇಧ ಮಾಡಲಾಗಿದೆ. ಈ ವಾಹನಗಳು ರೇಸ್ ವ್ಯೂ ಜಂಕ್ಷನ್‌ನಲ್ಲಿ ಬಸವೇಶ್ವರ ವೃತ್ತಕ್ಕೆ ನೇರವಾಗಿ ಸಾಗಿ ಬಸವೇಶ್ವರ ವೃತ್ತದಲ್ಲಿ ಎಡಕ್ಕೆ ತಿರುವು ಪಡೆದು ಹಳೆ ಹೈಗ್ರೌಂಡ್ಸ್ ಜಂಕ್ಷನ್‌ನಲ್ಲಿ ಎಡಕ್ಕೆ ತಿರುವು ಪಡೆದು ವಿಂಡ್ಸರ್ ಮ್ಯಾನರ್ ಜಂಕ್ಷನ್ ಮೂಲಕ ಮುಂದೆ ಸಾಗಬಹುದು.
- ಟಿ.ಚೌಡಯ್ಯ ರಸ್ತೆಯಿಂದ ಬರುವ ವಾಹನಗಳು ವಿಂಡ್ಸರ್ ಮ್ಯಾನರ್ ವೃತ್ತದ ಮೂಲಕ ಹಳೆ ಹೈಗ್ರೌಂಡ್ಸ್ ಜಂಕ್ಷನ್‌ಗೆ ನೇರವಾಗಿ ಸಾಗಿ ಎಲ್.ಆರ್.ಡಿ.ಈ ಬಳಿ ಬಲಕ್ಕೆ ತಿರುವು ಪಡೆದು ಬಸವೇಶ್ವರ ವೃತ್ತ, ರೇಸ್ ಕೋರ್ಸ್ ರಸ್ತೆ ಮೂಲಕ ಮುಂದೆ ಸಾಗಬಹುದು.
- ಟಿ.ಚೌಡಯ್ಯ ರಸ್ತೆಯಲ್ಲಿ ಹೈಗ್ರೌಂಡ್ಸ್ ಜಂಕ್ಷನ್‌ನಿಂದ ವಿಂಡ್ಸರ್ ಮ್ಯಾನರ್ ವೃತ್ತದ ಮೂಲಕ ಕುಮಾರಕೃಪಾ ರಸ್ತೆಗೆ ಪ್ರವೇಶಿಸುವ ವಾಹನಗಳು ನೇರವಾಗಿ ಸಾಗಿ ಆರ್.ಪಿ ರಸ್ತೆ ಮೂಲಕ ಮುಂದೆ ಸಾಗಲು ವ್ಯವಸ್ಥೆ ಕಲ್ಪಿಸಲಾಗಿದೆ.
- ನೆಹರೂ ವೃತ್ತದಿಂದ ಉಕ್ಕಿನ ಸೇತುವೆ (ಸ್ಟೀಲ್ ಬ್ರಿಡ್ಜ್) ಕೆಳಭಾಗದಲ್ಲಿ ಶಿವಾನಂದ ವೃತ್ತದ ಮೂಲಕ ಟ್ರಿಲೈಟ್ ಜಂಕ್ಷನ್ ಮತ್ತು ರೇಸ್‌ಕೋರ್ಸ್ ಕಡೆಗೆ ಸಾಗುವ ವಾಹನಗಳು ನೆಹರೂ ವೃತ್ತದಿಂದ ಉಕ್ಕಿನ ಮೇಲ್ಸೇತುವೆಯಲ್ಲಿ ಸಾಗಿ ಟ್ರಿಲೈಟ್ ಜಂಕ್ಷನ್ ಹಾಗೂ ರೇಸ್‌ಕೋರ್ಸ್ ರಸ್ತೆ ಕಡೆಗೆ ತೆರಳಬಹುದು.
- ಮೌರ್ಯ ವೃತ್ತ, ಆನಂದರಾವ್ ವೃತ್ತದ ಕಡೆಯಿಂದ ಬರುವ ವಾಹನಗಳು ಟ್ರಿಲೈಟ್ ಜಂಕ್ಷನ್, ಬಸವೇಶ್ವರ ವೃತ್ತ, ಹಳೆ ಹೈಗ್ರೌಂಡ್ಸ್ ಜಂಕ್ಷನ್, ವಿಂಡ್ಸರ್ ಮ್ಯಾನರ್ ವೃತ್ತದ ಮೂಲಕ ಮುಂದೆ ಸಾಗಬಹುದು.
- ಟಿ.ಚೌಡಯ್ಯ ರಸ್ತೆಯಿಂದ ಬಂದು ವಿಂಡ್ಸರ್ ಮ್ಯಾನರ್ ವೃತ್ತದ ಮೂಲಕ ಕೆ.ಕೆ.ರಸ್ತೆ ಪ್ರವೇಶಿಸುವ ವಾಹನಗಳು, ಟಿ.ಚೌಡಯ್ಯ ರಸ್ತೆ, ಹಳೆ ಹೈಗ್ರೌಂಡ್ಸ್ ಜಂಕ್ಷನ್, ಎಲ್.ಆರ್.ಡಿ.ಈ , ಬಸವೇಶ್ವರ ವೃತ್ತ, ರೇಸ್ ಕೋರ್ಸ್ ರಸ್ತೆ ಮೂಲಕ ಮುಂದೆ ಸಾಗಬಹುದು.

ಚಿತ್ರಸಂತೆ

ವಾಹನ ನಿಲುಗಡೆಗೆ ವ್ಯವಸ್ಥೆ

- **ರೈಲ್ವೆ ಪ್ಯಾರಲಲ್ ರಸ್ತೆ:** ನಾಲ್ಕು ಚಕ್ರಗಳ ವಾಹನಗಳು
- **ಕ್ರೆಸೆಂಟ್ ರಸ್ತೆ:** ಗುರುರಾಜ ಕಲ್ಯಾಣ ಮಂಟಪದಿಂದ ಹೋಟೆಲ್ ಜನಾರ್ದನದ ವರೆಗೆ ರಸ್ತೆಯ ಪಶ್ಚಿಮಕ್ಕೆ ನಾಲ್ಕು ಚಕ್ರ ವಾಹನಗಳು
- **ರೇಸ್ ಕೋರ್ಸ್ ರಸ್ತೆ:** ಟ್ರಿಲೈಟ್ ಜಂಕ್ಷನ್‌ನಿಂದ ಮೌರ್ಯ ಜಂಕ್ಷನ್‌ವರೆಗೆ ರಸ್ತೆಯ ಪೂರ್ವ ಭಾಗಕ್ಕೆ ನಾಲ್ಕು ಚಕ್ರ ವಾಹನಗಳು

ಸಾರ್ವಜನಿಕ ಸಾರಿಗೆ ಬಳಸಲು ಮನವಿ

ವಾಹನಗಳ ನಿಲುಗಡೆಗೆ ಕೆ.ಕೆ.ರಸ್ತೆಯ ಸುತ್ತಮುತ್ತ ಸ್ಥಳಾವಕಾಶ ಕೊರತೆ ಇರುವುದರಿಂದ ಚಿತ್ರಸಂತೆಗೆ ಬರುವವರು ಬಿಎಂಟಿಸಿ, ಮೆಟ್ರೊ, ಓಲಾ–ಊಬರ್ ಹಾಗೂ ಇತರೆ ಸಾರ್ವಜನಿಕ ಸಾರಿಗೆ ಸಂಪರ್ಕ ಬಳಸುವಂತೆ ಸಂಚಾರ ಪೊಲೀಸರು ಮನವಿ ಮಾಡಿದ್ದಾರೆ.

ನೌಕರರು ಕನ್ನಡದಲ್ಲೇ ವ್ಯವಹರಿಸಿ: ಶರತ್‌ಚಂದ್ರ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಹೊರ ರಾಜ್ಯದಿಂದ ಬಂದವರೂ ಸೇರಿದಂತೆ ಎಲ್ಲ ಸರ್ಕಾರಿ ಅಧಿಕಾರಿಗಳು, ಸಿಬ್ಬಂದಿ ಕನ್ನಡವನ್ನು ಸ್ಪಷ್ಟವಾಗಿ ಕಲಿತು, ಕನ್ನಡದಲ್ಲೇ ವ್ಯವಹರಿಸುವ ಮೂಲಕ ಜನ ಮೆಚ್ಚುಗೆ ಪಡೆಯಬೇಕು ಎಂದು ಗೃಹ ಇಲಾಖೆ ಪ್ರಧಾನ ಕಾರ್ಯದರ್ಶಿ ಕೆ.ವಿ.ಶರತ್ ಚಂದ್ರ ಹೇಳಿದರು.

ಸರ್ಕಾರಿ ನೌಕರರ ಸಂಘ ಶನಿವಾರ ಹಮ್ಮಿಕೊಂಡಿದ್ದ ಕನ್ನಡ ರಾಜ್ಯೋತ್ಸವ, ನೂತನ ವರ್ಷದ ಸಂಭ್ರಮ ಹಾಗೂ ಜಾನಪದ–ಕನ್ನಡ ಗೀತೆಗಳ ಗುಂಪು ನೃತ್ಯ ಸ್ಪರ್ಧೆಯ ಸಮಾರಂಭವನ್ನು ಉದ್ಘಾಟಿಸಿ ಅವರು ಮಾತನಾಡಿದರು.

ಹಲವು ಅಧಿಕಾರಿಗಳು ಮತ್ತು ಸಿಬ್ಬಂದಿ ಕನ್ನಡ ಸಾಹಿತ್ಯ, ಕಲೆ, ಸಂಗೀತದಲ್ಲಿ ಹೆಸರು ಮಾಡಿದ್ದಾರೆ. ಮೂಲತಃ ಪೊಲೀಸ್ ಇಲಾಖೆಯ ಅಧಿಕಾರಿಯಾದ ತಾವು ಅಪರಾಧ, ಕಾನೂನುಗಳ ಕುರಿತು ಮಾತನಾಡುತ್ತೇವೆ. ಈಗ ಕನ್ನಡ, ನಾಡು, ನುಡಿ, ರಾಜ್ಯೋತ್ಸವದ ಬಗ್ಗೆ ಮಾತನಾಡಲು ಹರ್ಷವೆನಿಸುತ್ತಿದೆ. ರಾಜ್ಯ ಸರ್ಕಾರಿ ನೌಕರರ ಸಂಘ ಆಡಳಿತದಲ್ಲಿ ಕನ್ನಡ ಅನುಷ್ಠಾನಕ್ಕೆ, ಕನ್ನಡ ನಾಡುನುಡಿ ರಕ್ಷಣೆಗೆ ಕೆಲಸ ಮಾಡುತ್ತಿದೆ. ಸಂಘದ ಸಾಮಾಜಿಕ ಕಾಳಜಿ ಅನನ್ಯ ಎಂದರು.

ರಾಜ್ಯ ಸರ್ಕಾರಿ ನೌಕರರ ಸಂಘದ ಅಧ್ಯಕ್ಷ ಸಿ.ಎಸ್.ಷಡಾಕ್ಷರಿ, ಪತ್ರಕರ್ತ ಸುದರ್ಶನ ಚೆನ್ನಂಗಿಹಳ್ಳಿ, ಸಂಘದ ಪದಾಧಿಕಾರಿಗಳಾದ ಎಚ್.ಗಿರಿಗೌಡ, ಶಿವರುದ್ರಯ್ಯ, ಎಸ್.ಬಸವರಾಜ್, ಮಲ್ಲಿಕಾರ್ಜುನ ಬಳ್ಳಾರಿ, ಶಂಭುಗೌಡ, ಗೋವಿಂದ ರಾಜು, ಸತೀಶ್, ಮಲ್ಲಿಕಾರ್ಜುನ್ ಗೌಡ, ಅರುಣ್ ಕುಮಾರ್, ಹನುಮಂತರಾಯಪ್ಪ ಉಪಸ್ಥಿತರಿದ್ದರು.



ರಾಜ್ಯ ಸರ್ಕಾರಿ ನೌಕರರ ಸಂಘ ಶನಿವಾರ ಹಮ್ಮಿಕೊಂಡಿದ್ದ ಕಾರ್ಯಕ್ರಮದಲ್ಲಿ ಸಂಘದ ಅಧ್ಯಕ್ಷ ಸಿ.ಎಸ್.ಷಡಾಕ್ಷರಿ ಅವರು ಭುವನೇಶ್ವರಿ ಭಾವಚಿತ್ರಕ್ಕೆ ಪುಷ್ಪನಮನ ಸಲ್ಲಿಸಿದರು

ಎನ್‌ಜಿಇಎಫ್: ₹37.5 ಕೋಟಿ ವೆಚ್ಚದಲ್ಲಿ ಉದ್ಯಾನ ಅಭಿವೃದ್ಧಿ: ಸಚಿವ

65 ಎಕರೆ ಜಾಗದಲ್ಲಿ ವೃಕ್ಷೋದ್ಯಾನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬೈಯಪ್ಪನಹಳ್ಳಿಯಲ್ಲಿ ಸರ್ಕಾರಿ ಸ್ವಾಮ್ಯದ ಎನ್‌ಜಿಇಎಫ್ ಕಾರ್ಖಾನೆಗೆ ಸೇರಿದ 105 ಎಕರೆ ಜಾಗದ ಪೈಕಿ 65 ಎಕರೆ ಜಾಗದಲ್ಲಿ ವೃಕ್ಷೋದ್ಯಾನ ಅಭಿವೃದ್ಧಿಪಡಿಸಿ, ಮಾರ್ಚ್‌ನಲ್ಲಿ ಮೊದಲ ಹಂತವನ್ನು ಸಾರ್ವಜನಿಕ ಬಳಕೆಗೆ ಮುಕ್ತಗೊಳಿಸಲಾಗುವುದು ಎಂದು ಬೃಹತ್ ಮತ್ತು ಮಧ್ಯಮ ಕೈಗಾರಿಕಾ ಸಚಿವ ಎಂ.ಬಿ.ಪಾಟೀಲ ತಿಳಿಸಿದರು.

ಎನ್‌ಜಿಇಎಫ್ ಆವರಣಕ್ಕೆ ಶನಿವಾರ ವಿವಿಧ ಇಲಾಖೆಗಳ ಅಧಿಕಾರಿಗಳ ಜತೆ ಭೇಟಿ ನೀಡಿ, ವೃಕ್ಷೋದ್ಯಾನ ಕಾಮಗಾರಿಗಳನ್ನು ಪರಿಶೀಲಿಸಿ ಅವರು ಮಾತನಾಡಿದರು.

ವೃಕ್ಷೋದ್ಯಾನವನ್ನು ಹಂತ 1, 1ಎ, 1ಬಿ ಮತ್ತು 2 ಹೀಗೆ ನಾಲ್ಕು ಹಂತಗಳಲ್ಲಿ, ₹37.75 ಕೋಟಿ ವೆಚ್ಚದಲ್ಲಿ ಅಭಿವೃದ್ಧಿಪಡಿಸಲಾಗುತ್ತಿದೆ. 1ಎ ಹಂತದ ಕಾಮಗಾರಿ ಆರು ತಿಂಗಳಲ್ಲಿ ಮುಗಿಯಲಿದೆ. ಈ ಜಾಗದಲ್ಲಿ 8,500 ಬಗೆಬಗೆಯ ಮರಗಳಿವೆ. ಇವುಗಳ ವೈಜ್ಞಾನಿಕ ಹೆಸರನ್ನು ಈಗ ಪ್ರದರ್ಶಿಸಲಾಗಿದೆ. ಒಂದೇ ಒಂದು ಮರವನ್ನೂ ಕಡಿಯುವುದಿಲ್ಲ. ಆದರೆ, ಇಲ್ಲಿರುವ ನೀಲಗಿರಿ ಜಾತಿಯ ಮರಗಳನ್ನು ಏನು ಮಾಡಬೇಕೆಂದು ವೈಜ್ಞಾನಿಕವಾಗಿ ಪರಿಶೀಲಿಸಿ, ತೀರ್ಮಾನಿಸಲಾಗುವುದು.

ಹಂತ-1ರ ಕಾಮಗಾರಿಗಳಿಗೆ ಅಗತ್ಯವಿದ್ದ ₹11.50 ಕೋಟಿ ಬಿಡುಗಡೆ ಮಾಡಲಾಗಿದೆ ಎಂದು ಹೇಳಿದರು.

ಎನ್‌ಜಿಇಎಫ್ ಆಡಳಿತ ಕಚೇರಿ ಕಟ್ಟಡಗಳು, ಕೈಗಾರಿಕಾ ಕಟ್ಟಡಗಳಿಗೆ ಹೊಸ ರೂಪ ಕೊಡಲಾಗುತ್ತದೆ. ಸುಮಾರು ಏಳು ಸಾವಿರ ವಾಹನಗಳ ನಿಲುಗಡೆಗೆ ಬಹುಮಹಡಿ ಪಾರ್ಕಿಂಗ್ ಲಾಟ್ ನಿರ್ಮಿಸಲಾಗುವುದು. ಐಟಿ-ಬಿಟಿ ಇಲಾಖೆಯು ಇಲ್ಲಿ ₹100 ಕೋಟಿ ವೆಚ್ಚದಲ್ಲಿ `ಟೆಕ್ನಾಲಜಿ ಇನ್ನೋವೇಶನ್ ಮ್ಯೂಸಿಯಂ’ ಅಭಿವೃದ್ಧಿಪಡಿಸಲಿದೆ ಎಂದು ತಿಳಿಸಿದರು.

ಕೈಗಾರಿಕಾ ಇಲಾಖೆಯ ಪ್ರಧಾನ ಕಾರ್ಯದರ್ಶಿ ಸೆಲ್ವಕುಮಾರ್, ಆಯುಕ್ತೆ ಗುಂಜನ್ ಕೃಷ್ಣ, ಬೆಂಗಳೂರು ಮೆಟ್ರೊ ರೈಲು ಕಾರ್ಪೊರೇಷನ್ ನಿಯಮಿತ (ಬಿಎಂಆರ್‌ಸಿಎಲ್) ವ್ಯವಸ್ಥಾಪಕ ನಿರ್ದೇಶಕ ಜೆ. ರವಿಶಂಕರ್, ಎಂಎಸ್‌ಐಎಲ್ ವ್ಯವಸ್ಥಾಪಕ ನಿರ್ದೇಶಕ ಮನೋಜ್ ಕುಮಾರ್, ಮೂಲಸೌಕರ್ಯ ಇಲಾಖೆ ಕಾರ್ಯದರ್ಶಿ ವಿಶಾಲ್, ಐ.ಟಿ, ಬಿ.ಟಿ ಇಲಾಖೆ ಕಾರ್ಯದರ್ಶಿ ಡಾ.ಎನ್.ಮಂಜುಳಾ, ಸಚಿವರ ತಾಂತ್ರಿಕ ಸಲಹೆಗಾರ ಅರವಿಂದ ಗಲಗಲಿ ಉಪಸ್ಥಿತರಿದ್ದರು.



ಬೈಯಪ್ಪನಹಳ್ಳಿಯಲ್ಲಿ ಸರ್ಕಾರಿ ಸ್ವಾಮ್ಯದ ಎನ್‌ಜಿಇಎಫ್ ಕಾರ್ಖಾನೆ ಆವರಣದಲ್ಲಿ ಎಂ.ಬಿ. ಪಾಟೀಲ ಪರಿಶೀಲನೆ ನಡೆಸಿದರು

ವೃಕ್ಷೋದ್ಯಾನದ ವಿಶೇಷ

ಪ್ರವೇಶ ದ್ವಾರದ ಪ್ಲಾಜಾ, ಎಲಿವೇಟೆಡ್ ವಾಕ್-ವೇ, ಸೈಕ್ಲಿಂಗ್ ಪಥ, ನೀರಿನ ಝರಿ/ ಚಿಲುಮೆ/ಕಾರಂಜಿ, ಫುಡ್ ಕೋರ್ಟ್, ಮಕ್ಕಳು ಆಟವಾಡುವ ಜಾಗ, ಸಾಕು ಪ್ರಾಣಿಗಳನ್ನು ಕರೆದುಕೊಂಡು ಬರುವ ಜಾಗ, ಶೌಚಾಲಯ ಮತ್ತು ಇತರೆ ಮೂಲ ಸೌಕರ್ಯಗಳನ್ನು ವೃಕ್ಷೋದ್ಯಾನ ಒಳಗೊಳ್ಳಲಿದೆ ಎಂದು ಸಚಿವ ಎಂ.ಬಿ. ಪಾಟೀಲ ಹೇಳಿದರು.

ಎಲಿವೇಟೆಡ್-ವಾಕ್ ವೇಸ್, ವೀಕ್ಷಣಾ ಗೋಪುರ, ಆಡಳಿತ ವಿಭಾಗದ ನವೀಕರಣ, ಓಪನ್ ಆ್ಯಂಫಿ-ಥಿಯೇಟರ್ ಅಭಿವೃದ್ಧಿಪಡಿಸಲಾಗುವುದು. ಫೇಸ್-2ರಲ್ಲಿ ಸ್ಪೋರ್ಟ್ ಹಬ್, ಕಲೆ ಮತ್ತು ಸಂಸ್ಕೃತಿಗಳ ಕೇಂದ್ರ, ಸಮುದಾಯ ಭವನವನ್ನು ಸರ್ಕಾರಿ ಮತ್ತು ಖಾಸಗಿ ಸಹಭಾಗಿತ್ವದಲ್ಲಿ ಅಭಿವೃದ್ಧಿಪಡಿಸಲಾಗುವುದು ಎಂದರು.



ವಿಜ್ಞಾನ ವಸ್ತು ಪ್ರದರ್ಶನವನ್ನು ಎ.ಎಸ್.ಕಿರಣ್ ಕುಮಾರ್ ಮತ್ತು ರಾಜಣ್ಣ ವೀಕ್ಷಿಸಿದರು

‘ಅಧ್ಯಾತ್ಮ, ಸಂಸ್ಕೃತಿಯೊಂದಿಗೆ ವಿಜ್ಞಾನದ ಮಿಳಿತ’

ಪ್ರಜಾವಾಣಿ ವಾರ್ತೆ

ನೆಲಮಂಗಲ: ‘ನಮ್ಮ ಧರ್ಮ ಸಂಸ್ಕೃತಿ ಹಬ್ಬಗಳಲ್ಲಿ ವಿಜ್ಞಾನ ಹಾಸುಹೊಕ್ಕಾಗಿದೆ. ಅಧ್ಯಾತ್ಮದೊಂದಿಗೆ ವಿಜ್ಞಾನ ಬೆರೆತಿದೆ’ ಎಂದು ಇಸ್ರೊದ ಮಾಜಿ ಅಧ್ಯಕ್ಷ ಎ.ಎಸ್. ಕಿರಣ್ ಕುಮಾರ್ ತಿಳಿಸಿದರು.

ದಾಸನಪುರದ ಹಾರ್ವರ್ಡ್ ಇಂಟರ್‌ನ್ಯಾಷನಲ್ ಶಾಲೆಯಲ್ಲಿ ಹಮ್ಮಿಕೊಂಡಿದ್ದ ವಿಜ್ಞಾನ ವಸ್ತುಪ್ರದರ್ಶನ ಉದ್ಘಾಟಿಸಿ ಅವರು ಮಾತನಾಡಿದರು.

ಪರಿಸರ, ವಿಜ್ಞಾನ, ಖಗೋಳಶಾಸ್ತ್ರ, ಭೂಗೋಳಶಾಸ್ತ್ರ, ಅರಣ್ಯ, ತಂತ್ರಜ್ಞಾನ ಮುಂತಾದ ವಿಭಿನ್ನ ಪ್ರಯತ್ನದ ಮಾದರಿಗಳನ್ನು ವಿದ್ಯಾರ್ಥಿಗಳು ಪ್ರದರ್ಶಿಸಿದರು.

ಶಾಲೆ ಸಂಸ್ಥಾಪಕ ರಾಜಣ್ಣ ಮಾತನಾಡಿ, ‘ಮುಂದಿನ ಪೀಳಿಗೆಗೆ ಧಾರ್ಮಿಕ ಆಚರಣೆಗಳ ಅರಿವು ಮೂಡಿಸುವುದು ಇಂದಿನ ಅನಿವಾರ್ಯ ಮತ್ತು ನಮ್ಮ ಕರ್ತವ್ಯ’ ಎಂದರು.

ಮಕ್ಕಳಿಂದ ಹೆತ್ತ ತಾಯಿಗೆ ಪಾದಪೂಜೆ, ಶಾಲೆಯ ಸಂಸ್ಥಾಪಕ ರಾಜಣ್ಣ ಕುಟುಂಬದಿಂದ ಮಕ್ಕಳ ಪಾದಪೂಜೆ ಮತ್ತು ಗೋಮಾತೆ ಪೂಜೆ ನೆರವೇರಿತು. ಲೋಕ ಕಲ್ಯಾಣಕ್ಕಾಗಿ ಶಿವಪಾರ್ವತಿ ದೇವಿಯ ಆರಾಧನೆ, ಉತ್ಸವ ರೀತಿಯಲ್ಲಿ ಪೂಜಾ ವಿಧಿವಿಧಾನ ನಡೆಯಿತು.

‘ಕುವೆಂಪು ಚಿಂತನೆ ಮೈಗೂಡಿಸಿಕೊಳ್ಳಿ’

ರಾಜರಾಜೇಶ್ವರಿನಗರ: ಕುವೆಂಪು ಸೇರಿದಂತೆ ಹಲವು ದಾರ್ಶನಿಕರು, ಕವಿಗಳು ನಾಡಿನ ಸಂಸ್ಕೃತಿ, ಸಾಹಿತ್ಯ, ಇತಿಹಾಸವನ್ನು ಉಳಿಸಿದ್ದಾರೆ. ಅವರ ಆದರ್ಶ, ಚಿಂತನೆಗಳನ್ನು ಯುವಜನಾಂಗ ಮೈಗೂಡಿಸಿಕೊಳ್ಳಬೇಕು ಎಂದು ಸಾಹಿತಿ ಎಚ್. ತುಕಾರಾಂ ಹೇಳಿದರು.

ರಾಜರಾಜೇಶ್ವರಿನಗರ ಕ್ಷೇತ್ರದ ಕನ್ನಡ ಸಾಹಿತ್ಯ ಪರಿಷತ್ತು, ವಾಸುದೇವ ಚಾರಿಟೆಬಲ್ ಟ್ರಸ್ಟ್ ವತಿಯಿಂದ ಮಲ್ಲತ್ತಹಳ್ಳಿಯ ಕನ್ಯಾಕುಮಾರಿ ವಿದ್ಯಾಸಂಸ್ಥೆ ಆವರಣದಲ್ಲಿ ಹಮ್ಮಿಕೊಂಡಿದ್ದ ಕುವೆಂಪು ಅವರ 121ನೇ ಜಯಂತ್ಯುತ್ಸವ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

‘ಕುವೆಂಪು ಅವರ ಪುಸ್ತಕ ಪ್ರತಿಯೊಬ್ಬರು ಓದಬೇಕು. ಜಾತಿ ವ್ಯವಸ್ಥೆ ವಿರುದ್ಧ ಕೃತಿಗಳ ಮೂಲಕ ಜಾಗೃತಿ ಮೂಡಿಸಿ, ಸಮಸಮಾಜ ಕಟ್ಟುವ ಕೆಲಸದಲ್ಲಿ ತೊಡಗಿಸಿಕೊಂಡಿದ್ದ ವಿಶ್ವಮಾನವ’ ಎಂದರು. ಲೇಖಕ ವಾದಿರಾಜ ಮಾತನಾಡಿ, ‘ಕುವೆಂಪು ಅವರ ಭಾವಚಿತ್ರ, ಪುಸ್ತಕ ಪ್ರತಿಮನೆಯಲ್ಲಿರಬೇಕು. ಆ ಕೃತಿಗಳನ್ನು ಓದಿ ಮುಂದಿನ ಪೀಳಿಗೆಗೆ ವಿಚಾರಗಳನ್ನು ತಿಳಿಸಬೇಕು. ನಾವೆಲ್ಲರೂ ಕನ್ನಡವನ್ನು ಉಳಿಸಬೇಕು’ ಎಂದರು.

ಕುವೆಂಪು ಭಾಷಾಭಾರತಿ ಸದಸ್ಯ ಪ್ರೊ.ನಾರಾಯಣಘಟ್ಟ, ಕನ್ನಡ ಸಂಘರ್ಷ ಸಮಿತಿಯ ಪ್ರಧಾನ ಕಾರ್ಯದರ್ಶಿ ಸಿ.ತಿಮ್ಮಯ್ಯ, ಲೇಖಕ ಬ್ಯಾಡರಹಳ್ಳಿ ಶಿವರಾಜ್, ಗಾಯಕ ಚೌಡಯ್ಯ ಸೇರಿದಂತೆ ಅನೇಕರು ಉಪಸ್ಥಿತರಿದ್ದರು.

ಪ್ರಜಾವಾಣಿ

ಕ್ಲಾಸಿಫೈಡ್ಸ್

ಪ್ರತಿಯೊಬ್ಬರಿಗೂ ಉಪಯುಕ್ತ

email: classifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

MATRIMONIAL

Brides Wanted

Hindu

BRIDE WANTED
CNB Seeking Rich or Well Stld Employed IT / DR/ Engr/ Bride for BDS (Surgeon) MBA (London) Hospital Management & Health Care Working As CEO BLR Hospital With Assetts. Aug- 1981 Divorcee No Issues
Contact V.J. Naidu
98867 82390

BRIDE WANTED
For handsome & humble 30 years 168 cm fair in complexion Telugu boy only child from affluent family . Educated in Switzerland & India boys parents inter caste marriage . Seeking well educated Telugu speaking well educated girl from any OC/ BC caste only from well settled business families
9059380447

Tamil

BRIDE WANTED
Vadakalai Iyengar - Bharadwaja - Swathi - Thula; Sep' 1995 – Normal Complexion - 172 cm; PG in AI&ML from BITS & BE (ECE) – Working as Lead Data Analyst in MNC, Bangalore; Seeking a Bride who is working in Bangalore or willing to relocate.
+91-94814-06236
+91-97316-33361
krishrang1962@gmail.com

Grooms Wanted

Hindu

WANTED GROOM
Wanted well-settled, handsome bridegroom from a good family, preferably settled abroad, for a Bangalore-based beautiful, good-looking, well-qualified girl, born in 1992, settled in Dubai (UAE). Hindu family, (Caste No Bar).
Contact
9008201151

JOB OPPORTUNITIES

Teachers/ Professors

ST.PHILOMENA'S English School, Doddabommasandra, Bengaluru-97. State & ICSE Board Hiring Teachers for all the classes for all the subjects including Art-craft PE-Female. Qualification: BA,B.Sc,MA, M.Sc B.Ed. Walk-in OR send Resume WhatsApp 9741275231, Email:administrator @st-philomena.org Contact: 40903810

POORNAPRAJNA EDUCATION CENTRE, INDIRANAGAR
(Promoted & Managed by Udupi Shree Adamaru Matha Education Council)
C.A Site No. 48, New Thippasandra, HAL 3rd Stage, Bangalore -75
CBSE affiliated school invites applications for the following posts:
PHYSICS & MATHS TEACHER
B.Sc / M.Sc with B.Ed/ M.Ed- Min 3 years of experience
ENGLISH TEACHER
BA/ MA in English with B.Ed/ M.Ed- Min 3 years of experience
HINDI TEACHER
BA/ MA in Hindi with B.Ed/M.Ed- Min 3 years of experience
KANNADA TEACHER
BA/MA in Kannada with B.Ed/ M.Ed- Min 3 years of experience
MATHS TEACHER
B.Sc/ M.Sc with B.Ed/ M.Ed- Min 3 years of experience
PRE PRIMARY MAIN TEACHER
Any Degree with NTT
PRE PRIMARY ASSISTANT TEACHER
PUC with D.Ed/ NTT (preference to Graduates)
SCHOOL COUNSELOR
Graduate or Post Graduate in Psychology or Post Graduate in Child Development or Diploma in Carrier guidance and counseling +1 yr experience
Apply immediately to Hon. Secretary.
Email: contact.indiranagar@ppec.edu.in
by 12th January 2026, Monday.

ST.FRANCIS COLLEGE | BENGALURU
Accredited 'B++' Grade by NAAC
Permanently Affiliated to Dr. Manmohan Singh Bengaluru City University
P.B.No. 3417, 3rd Block, 8th Main, Koramangala, Bengaluru-560034.
Tel: 080-25531037/38, Cell Ph: 9481857854 / 9449260409
Website: www.stfranciscollege.edu.in
FACULTY RECRUITMENT
Applications are invited for the post of **Associate / Assistant Professors** in the following Departments.
COMMERCE AND MANAGEMENT

Qualification	PG with NET/SLET/Ph.D with minimum 55% marks at PG level.
Specialization	Accounting, Finance, Marketing, Analytics
Experience	Above 3 years
Job Location	Koramangala, Bengaluru

Interested and eligible candidates may send their CV, along with a recent passport-size photograph and copies of qualification and experience certificates to below given
Email-ID:
admin@stfranciscollege.edu.in / director@stfranciscollege.edu.in
by mentioning the post and department applying for in the subject line within 10 days.

Accounts and Finance

URGENTLY REQUIRED FOR IBC GROUP BANGALORE AND MEDICAL COLLEGE IN VIJAYAPUR
1.Accounts Manager – M.Com/ B.Com (Minimum Experience 5 to 7 years).
2.Accountant and Accounts Executives – B.Com (Minimum Experience 3 to 5 years).
3.Computer Professionals – Engineering in Software and Hardware/ Graduates in Computer Applications – (Minimum Experience 3 to 5 years).
Applications invited from Male Candidates
Attractive Salary offered
Please send us your C.V's to ibc.accounts@gmail.com
Contact: Whataspp No. 9620363600

Marketing & Sales

WANTED MANAGER for a branded Footwear showroom experience with marketing skills in Jayanagar 8th block Bangalore. Cnt. 9444356220 / durable_in@yahoo.co.in

FUTURE FOCUS

Astrology

WHAT'S YOUR House energy say? Continuous health issues, No prosperity, Feeling stuck & sad. Consult today- 6361712857 *Sanjeevani Vaastu Consultancy*.

REAL ESTATE SELLING

Sites

Banashankari

BANASHANKARI 6TH Stage,1st Block 40x60,BDA 40feet Road Near Sri Convention Centre Rs 15500/- Negotioble: 9845600007

"BANASHANKARI 6TH_STAGE 4th Block 50x80 North West corner and 50x80 North facing 7th-Block and 30x40 West facing 2nd-Block and 40x60 3rd-Block East facing near BDA Complex. Call: 9845146725/ 9741466369"

BANASHANKARI 6TH Stage 10th Block 40X60 West Facing Price. 2.40 CR. Stlightly Negotiable: 9148914809/ 9993959099

Hebbal

HEBBAL 30X35 House Sale Ground 1 BHK Two Carparking 1st 2 BHK 2nd 2 BHK 9845623970/ 9739400838

Airport Road

"SALE SITE 40x60 BIAAPA approved before International Airport close to Defence & Aero park Rs.5900/- P.Sft. 9845286505"

Jakkur

JAKKUR MCECHS 1ST PHASE 40x60 west A Katha 15,500/-, ARKAVATI 20x30, 30x40, MANYATHA 30x40 9535658860

J P Nagar

"J.P.NAGAR, SRINIDHI_LAYOUT 30x51 Residential Site, East Facing, BBMP A Katha, Full White. Direct Owner: 9845249799/ 9845088449"

Kempegowda Layout

NADAPRABHU KEMPEGOWDA LAYOUT BDA SITES SELLING/ BUYING 20x30, 30x40, 40x60, 50x80. Genuine Buyers Call: 9632146784, 9731162167.

KEMPEGOWDA LAYOUT, Commercial/ Residential BDA Site for Sale 20x30, 30x40, 40x60, 50x80. Contact Kumar 9945119449

BDA SITE South facing, measuring 50x80, 1st K Sector, 60 ft Double Road (Commercial), Connects Business Corridor, Kempegowda Layout, Site Sale. 13000/- psqft. +919353534340.

Nagarabhavi

"AVAILABLE MPM_LAYOUT 40x60 Corner Site 40 feet Road, Vishveshwaraiah 50x80, 30x40 Genuine Buyers. 9448733456/ 7259675150"

"PRIME COMMERCIAL 40x60 East faceing Site for sale near Mallathalli RTO, Ready to build. Call: 9880031654"

NAGARBHAVI MALAGALA 30x50' South, Sumanahalli 64x85' West (Industrial), Kengeri Sun City 30x50' North West Corner, Rajarajeshwari Nagar 15500 Sqft. Vishveshwaraiah Layout 30x40' East: 9886112385

R T Nagar

R.T.NAGAR 2ND BLOCK East Facing 40X60 Site Near BDA COMPLEX For Sale Contact: 9341260828

R.T.NAGAR HMT Layout East Facing 30X50 With Duplex old House For Sale Contact: 9341260828

Uttarahalli

SALE: KUMARASWAMY layout, ISRO housing society, 3rd B Main road 3630 sq ft, 17.5 K/ sq ft,Serious buyers only Call +17028216450 Whatspp or email animalhouzvet@gmail.com

Vijayanagar

SITE FOR SALE 60x90 RPC LAYOUT VIJAYANAGAR
SALE: 60X90 West Facing
Only Genuine Buyers Contact:
6363250343
9845038343

VIJAYNAGAR 40X60 S/W Corner MC Layout, 40x60 (2) Sites Bapujinagar, 30x40 Duplex Chandra Layout. 9481455837.

Vishweshwariah Layout

BDA SITE SALE VISHWESHWARAIAH LAYOUT 2ND BLOCK 40X60 NORTH FACE, NEAR 100FT ROAD, GOOD LOCATION CONTACT: 8892901567

DIRECT OWNER 30x40 BDASite Sale VISHWESHWARAIAH LAYOUT 40ft Road, Full Developed Area, ₹11000/-. 9742681666

"VISVESHWARAIAH LAYOUT 1st Block 40x60 East facing Site for sale Call: "Krishna"- 9886294610 (Brokers Excuse)"

'DIRECT OWNER' 20x30 N/F Vishveswaraiah Layout 2nd Block, Near Kommagatta, Full Developed Area:8496030007/ 8310885235

Mysore

4 ACRES Land for SALE, at Doddakereyur Village, Hampapura Hobli, H.D. Kote Taluk, with full fencing, small house, two borewells, independent Transform, red soil, with clear titles. CALL: 9731051965

Bidadi

BIDADI EEGALTON GOLF RESORT* EAST FACING 50x55 SITE FOR SALE. Contact:9945079777

Basaweshwaranagar

BASAVESHWARANAGAR 30X40 East facing, old independent house 66x40 clear titles, Immediate Settlement. Contact. 9060406731

House

Banashankari

BANASHANKARI 6TH Stage 10th Block 20x30, 4 BHK House Rs. 1.17 Crore. Contact: 9148914809/ 9993959099

Jayanagar

SALE 40X60 Corner Jayanagar 3rd Block LIC Colony With old Building Excellent Location Contact: 9844134068

J P Nagar

SALE 30X40 JPNagar 1st Phase With old Building East Facing 40 Feet Road Contact: 9844134068

Nagarabhavi

30X40 G+3 House For Sale. Nagarabhavi D-group. Rental Income 80k. 2.80cr Negotiable. 9342874483, 9844333109

Vishweshwariah Layout

"30X40 BDA ONE AND TWO BHK FOUR HOUSES IMMEDIATE SALE 5TH_BLOCK VISHVESHWARAIAH LAYOUT. 9845143579"

Flat

Malleshwaram

17TH CROSS Near Cloudnine Hospital Sale 2BHK 1100sft Flat, Price 1.30Cr fixed. Owner: 7013351639/ 9945617455

Mysore Road

NEAR KENGERI Metro Provident Equinox 3, New Ready to move, 2 BHK with car parking, All amenities, OC, CC, RERA, Loanable, Rs 62 Lakhs, Call Vijay: 98443-37944

Nagarabhavi

FLATS FOR-SALE @ Nagarabhavi Chandra Layout 2 & 3BHK Ready to Move In Good Location Call:9538472420 9845066608

Whitefield

ONE BHK first floor Athashri Whitefield elders living facility with all amenities available for immediate sale. Contact sampath.pillai@gmail.com

Commercial Building

Nagarabhavi

***NAGARABAVI* BDA** COMPLEX opposite COMMERCIAL 50x80 4-FLOOR BUILDING SALE with SELLAR,suitable for HOSPITAL,SHOWROOM, others.Contact: 9845059407

Commerical

Out-Station

SALE / RENT
2,200 Sq.ft. Commercial Shop in HUBBALLI'S No.1 Market Area @ Dajiban Peth Ground Floor is for SALE/RENT
Call for Details
93434 30001
94488 38508

Vijayanagar

450-SQFT COMMERCIAL Office Space Floor Wise For Sale Opposite to Vijayanagar Metro Station Contact: 7676900174 9945569909

Residential/ Commercial

Anjanapura

ANJANAPURA SITE for Sale 3rdA Block 3600 Sqft, Commercial BDA NE CORNER @13K, & 40X60 ADJOINING 80' ROAD @18K Per Sqft CALL OWNER RAJESH 9845167755

Outer Ring Road

ORR(SUMANAHALLI-LAGGARE BRIDGE) Corner Commercial Site 2,800 Sft. "A"&"E" Khatha facing ORR at Chowdeshwarinagar Call:998055558

REAL ESTATE BUYING

Sites

Anjanapura

BDA-SITES WANTED @ Banashankari 6th Stage, Visveshwaraiah Layout, Anjanapura 30x40,40x60, 50x80 Immediate Settlement Rajesh: 9945610779

Banashankari

"WANTED 40X60 Site/ old demolition House North or East only Padmanabhnagar, Banashankari 3rd Stage, Girinagar "Sri.Ganesh Estates" 9845286505"

Nagarabhavi

WANTED HOUSE, Site, Flat VISHVESHWARAIAH, KEMPEGOWDA LAYOUT,NAGARBHAVI, MALLATHAHALLLI 20x30, 30x40,40x60. ABHILASHA CONSULTANT. 9480565758

JOB
To Place your Classified Ads Contact:
9886213331

Vishweshwariah Layout

BUYING/ SELLING 20x30,30x40,40x60 50x80 BDA sites at VISHVESHWARAIAH LAYOUT, BSK 6th-stage. Contact: 9844533371/ 9341733480

BUILDERS ESSENTIAL

Roofing Materials

WE FIX LEAKING ROOF,TANK, SUMP,BATHROOM, SKYLIGHT,HOUSE PAINTING, TILING,CARPENTRY, EPOXY,CIVIL WORKS. Call: 9448572697

Water Proofing

LEAKAGE... LEAKAGE... Old/New Building, Sump, Bathroom, Wallcrack, Skylight, Terrace Waterproofing done by New Technology-9880916988

RENTAL PROPERTIES

Accommodation Available

Commercial

FOR RENT: PRIME COMMERCIAL BUILDING, Mariappa Rd, off CMR Main Rd, Kalyan Nagar. Ideal for Clinic, Diagnostic, Tuition, Corporate Office, Banks. GF-300 sqft, FF- 1250 sqft, SF-1250 sqft, TF-500 sqft. Ample parking (4 cars & 25 two-wheelers). 24/7 power & water. Ph: 9845123866, 9880016254. Location: Google Maps -13.021880, 77.638321

1,25,000 SFT Prime Commercial Land Suitable for Office Space, Outlet Mall & Warehouse Available For Rent in Bidadi. Contact 9972181837

AVAILABLE II Floor and Basement COMMERCIAL SPACE each 2000 Sqft for Rent for office, showroom in HSR 6th Sector MAIN ROAD. Call 9880022644

General

INJESUS REASONABLE rent for 10x10 Sqft business accommodation at Sampige Layout, Amarjyothinagar Vijaynagar, Bangalore 9742966068.

BUSINESS

Business Offers

General

BUSINESS PROPOSAL–DIGI Monte Pvt Ltd invites investors and partners for a scalable, future-ready, high-profit business model. Call 7207915007

IF YOU are running well-established business, Schools, Colleges, hospitals and the next generation is not interested in your business. Call Arun 9945699789. WE HAVE BUYERS.

PUBLIC NOTICE

PUBLIC TENDER NOTICE

Reflections Interior Products Pvt. Ltd.
B-56, 5th Cross, ITI Industrial Estate, Mahadevapura Post, Whitefield, Bangalore- 560048, India. +91 99006 64477
(Implementing Agency approved under Technology Upgradation Assistance to Exporters / Entrepreneurs Scheme, Ministry of Textiles, Government of India)

Sealed tenders are invited from reputed manufacturers / authorised suppliers having minimum three (3) years experience for procurement of the following approved machinery:

1.	CNC 3D Rod Bending Machine	1 No.
2.	CNC Milling / Turning Machine	1 No.
3.	Custom-Made Spot Welding Machine	1 No.
4.	Standard Spot Welding Machines	2 Nos.
5.	CNC Laser Cutting Machine (Metal)	1 No.
6.	CNC Laser Cutting Machine (Non-Metal)	1 No.
7.	Thermo Forming Machine	1 No.
8.	Industrial Sewing Machines	2 Nos.
9.	Custom Industrial Sewing Machine	1 No.
10.	Finishing Equipment	25 Nos.
11.	Punch Press Machine	1 No.
12.	Assembly Tables	30 Nos.
13.	Pneumatic Compressor	1 No.
14.	Diesel Generator	1 No.
15.	Installation & Commissioning Services	

Tender Type: Two-Bid System (Technical & Financial Bids)
EMD: 2% of quoted value.
Tender documents may be downloaded free from www.rippllighting.com/tenders Or collected from the above Head Office by paying ₹2,000/- as tender document charges.
Last date for submission: 26/01/2026
Opening of Technical Bids: Same day at 2.00 PM
The company reserves the right to accept or reject any or all tenders without assigning any reason.
For Reflections Interior Products Pvt. Ltd.
Authorised Signatory

PUBLIC NOTICE

The General public are hereby notified that, on behalf of our clients we are scrutinizing/ investigating the marketable title of **(1)Sri.K.VASUDEV** S/o Sri.D.R.Kodandarama Reddy; his son **(2)Sri.V.MANJUNATH;** and **(3)Sri.K.SHIVARAM** S/o Sri.D.R.Kodandarama Reddy, both are residing at: No.103/2, First Floor, 9th Cross, Patel Lane, Domlur, Bangalore-560071, with respect to the Schedule Property.

Apart from the said Owners, if any other person/s have any manner of right, title, interest, or share or claim over the Schedule property or any part thereof by way of inheritance, succession as co-owner or legal heirs or joint family member, or by way of sale, lease, sub-lease, mortgage, gift, lien, charge, trust, maintenance, easement, pre-emption or otherwise howsoever, they are hereby called upon to file their objection/s or claims with the undersigned (along with the photocopies of the documents based on which they rely for asserting their rights), **within 10 days** from the date of publication of this notice. Objection/s received thereafter will not be binding on our clients.

SCHEDULE

Item No.1 property of Sri. K.Vasudev & Sri.V.Manjunath:
All that piece and parcel of the immovable property bearing Municipal No.35/2, PID No.27-1-35/2 (portion of property No.35), measuring on East 30 ft, on West 30 ft, on North 44 ft and on South 46 ft, totally measuring 1350 Sq.ft., situated at Kalidasa Marga, Gandhinagar, Bangalore-560009 and bounded on:
East by : Property bearing No.35 of Sri.K.Shivaram
West by : Kalidasa Marga
North by : R.Srinivasa Reddy's property
South by : 10 ft wide Common Passage

Item No.2 property of Sri.K.Shivaram:
All that piece and parcel of the immovable property bearing Municipal No.35, PID No.27-1-35, measuring on East 30 ft, on West 30 ft, on North 47 ft and on South 47 ft, totally measuring 1410 Sq.ft, situated at Kalidasa Marga, Gandhinagar, Bangalore-560009 and bounded on:
East by : D.R.Neellappa Reddy's property
West by : Property bearing No.35/2 of Sri.K.Vasudev & Sri.V.Manjunath
North by : R.Srinivasa Reddy's property
South by : 10 ft wide Common Passage leading to Kalidasa Marga.

Sd/- **S.F. GOUTAM CHAND**, Advocate,
GOUTAM ASSOCIATES,
No.60, 2nd Floor,
Old Kanakapura Road,
Basavanagudi,
Bengaluru - 560004

PERSONAL

Change of Name

CHANGE OF NAME
I, **MONISHA M, MONISHA MOHAN DAS, MONISHA MOHAN KUMAR and MONISHA MOHAN,** residing at # 144, Sri Bhagavathi Nilaya, Raghuram Layout, Ramachandrapura, Jalahalli Post, Bengaluru-560013, declare that all the above names belong to me only and the same person. Henceforth I shall be called & known as **MONISHA MOHAN** Vide affidavit dated: 02.01.2026 before notary Chandrakala, Bengaluru.

I, SMT. Renuka.S W/o R. Somashekar, aged 53 years,residing at #4/2, 4thCross, 4thMain, Sri. Ranga Nilaya, Pipeline,Malleshwaram, Bengaluru-560003, have changed my name from RENUKA.S to RENUKA SOMASHEKAR vide affidavit dated03-01-2026 sworn before Notary Puttaramaiah, Bengaluru.

CHANGE OF NAME
I, **RAVICHANDRA (Old Name)** R/o. No. 2/4/48, Near Mahadev Mandir, Hatten Galli, Aland Gulbarga-585302, Have changed my name as **RAVICHANDRA PATIL (New Name)** Vide Affidavit Dtd. :01-01-2026 Sworn Before Advocate & Notary Public **B. R. SHASHIKALA** at Bengaluru

CHANGE OF NAME
I, SUNITA (Old Name) R/o. Plot No. 08, E/1/2432, Ganesh Nagar, Opp. Hotel Sun International, New Jewargi Road, Gulbarga-585101, Have changed my name as **SUNITA JEWARGI (New Name)** Vide Affidavit Dtd. :01-01-2026 Sworn Before Advocate & Notary Public **B. R. SHASHIKALA** at Bengaluru

I, SHASHI Bala Srivastava w/o Anoop Srivastava R/o 07 Prestige Dorchester, Jakkur Bengaluru 560064, have changed my name as Shashi Srivastava

PROPERTY CORNER

BUNGALOW FOR SALE
5989 Sq ft, Furnished 4 BHK Bungalow for sale in Baglur. It's 20 minutes drive to Airport. Price 5cr. Call owner :
9113209192

CAUTION NOTICE
Readers are advised to make appropriate thorough enquiries before acting upon any advertisement. This newspaper does not vouch or subscribe to the claims and representations made by advertisers.
Advertisement Manager
The Printers (Mysore) Pvt. Ltd. Bengaluru

‘ಜ್ಞಾನ–ಅನುಭವ ದಾರಿದೀಪವಾಗಲಿ’

ಸುಪ್ರೀಂ ಕೋರ್ಟ್ ನಿವೃತ್ತ ನ್ಯಾಯಮೂರ್ತಿ ಶಿವರಾಜ ಪಾಟೀಲ ಕಿವಿಮಾತು

ಪ್ರಜಾವಾಣಿ ವಾರ್ತೆ

ಪ್ರಮುಖ ಅಂಶ
● ‘ಚಕ್ಕಡಿಯಿಂದ ತಕ್ಕಡಿಯವರೆಗೆ’ ಪುಸ್ತಕ ಜನಾರ್ಪಣೆ


ಶಿವರಾಜ ಪಾಟೀಲ

ಬೆಂಗಳೂರು: ‘ಜೀವನದಲ್ಲಿ ಗಳಿಸಿದ ಜ್ಞಾನ ಹಾಗೂ ಪಡೆದ ಅನುಭವವನ್ನು ನಮ್ಮಲ್ಲಿಯೇ ಉಳಿಸಿಕೊಳ್ಳದೆ, ಅವನ್ನು ಹಂಚಿಕೊಂಡರೆ ಒಂದಷ್ಟು ಮಂದಿಗೆ ದಾರಿದೀಪವಾಗುತ್ತದೆ’ ಎಂದು ಸುಪ್ರೀಂ ಕೋರ್ಟ್ ನಿವೃತ್ತ ನ್ಯಾಯಮೂರ್ತಿ ಶಿವರಾಜ ಪಾಟೀಲ ಅಭಿಪ್ರಾಯಪಟ್ಟರು.

ಶೇಷಾದ್ರಿಪುರಂ ಕಾಲೇಜಿನ ಕನ್ನಡ ಸಂಘ ನಗರದಲ್ಲಿ ಶನಿವಾರ ಹಮ್ಮಿಕೊಂಡಿದ್ದ ಸಮಾರಂಭದಲ್ಲಿ ಅವರ ಆತ್ಮಕಥನ ‘ಚಕ್ಕಡಿಯಿಂದ ತಕ್ಕಡಿಯ ವರೆಗೆ’ ಪುಸ್ತಕ ಜನಾರ್ಪಣೆಯಾಯಿತು.

ಈ ವೇಳೆ ಮಾತನಾಡಿದ ಶಿವರಾಜ ಪಾಟೀಲ ಅವರು, ‘ಜ್ಞಾನ ಮತ್ತು ಅನುಭವವನ್ನು ಹಂಚದಿದ್ದರೆ ನಮ್ಮ ತಲೆ ದಾಸ್ತಾನು ಕೇಂದ್ರವಾಗಲಿದೆ. ನಮ್ಮ ಜೀವನದಲ್ಲಿ ನಡೆದ ಘಟನೆ, ಪಡೆದ ಅನುಭವ ಹಾಗೂ ಮಾಡಿದ ಕೆಲಸ ಇನ್ನೊಬ್ಬರಿಗೆ ಸ್ಫೂರ್ತಿ ಮತ್ತು ಪ್ರಯೋಜನ ಆಗಬೇಕು. ಬದುಕಿರುವಾಗಲೇ ಜ್ಞಾನದೋಸಹ ಮಾಡಿದರೆ ಈ ಕಾರ್ಯದಿಂದ ಸತ್ತ ಮೇಲೆಯೂ ಬದುಕುತ್ತೇವೆ. ಜ್ಞಾನ–ಅನುಭವವನ್ನು ಅವಕಾಶ ಸಿಕ್ಕಾಗಲೆಲ್ಲ ಹಂಚಿಕೊಳ್ಳಬೇಕು’ ಎಂದು ಹೇಳಿದರು.

ಉಪ ಲೋಕಾಯುಕ್ತ ಕೆ.ಎನ್. ಫಣೀಂದ್ರ, ‘ಸಾಮಾನ್ಯ ಬಡ ಕುಟುಂಬದಲ್ಲಿ ಜನಿಸಿದ ಶಿವರಾಜ ಪಾಟೀಲ ಅವರು, ತಮ್ಮ ಪರಿಶ್ರಮ ಹಾಗೂ ಪ್ರತಿಭೆಯಿಂದ ಸುಪ್ರೀಂ ಕೋರ್ಟ್ ನ್ಯಾಯಮೂರ್ತಿಯಾದರು. ವಿನಯ, ಕರ್ತವ್ಯಪ್ರಜ್ಞೆ, ಪ್ರಾಮಾಣಿಕತೆ ಮತ್ತು ದೃಢ ಮನಸ್ಸು ಒಟ್ಟಿಗೆ ಸೇರಿದರೆ ಏನಾಗಬಹುದು ಎಂಬುವುದಕ್ಕೆ ಜೀವಂತಸಾಕ್ಷಿ ಶಿವರಾಜ ಪಾಟೀಲರು. ಈ ಕೃತಿಯು ಪಾಟೀಲರ ಬದುಕಿನ ಹಾದಿ, ಕೈಗೊಂಡ ಕಾರ್ಯವನ್ನು ಸಂಕೇತಿಸುತ್ತದೆ. ಸಾಮಾನ್ಯನೊಬ್ಬ ಅಸಾಮಾನ್ಯನಾಗಿ ತನ್ನ ಬದುಕನ್ನು ರೂಪಿಸಿಕೊಂಡ ಬಗೆಯನ್ನು ಸರಳವಾಗಿ ವಿವರಿಸಲಾಗಿದೆ’ ಎಂದರು.

ಕೃತಿಯ ಲೇಖಕ ಕೆ.ಎಲ್. ವಿಶ್ವನಾಥ್ ಶರ್ಮ, ‘ನನ್ನಂತೆ ಇತರರಿಗೂ ಅವರ ಆತ್ಮಕಥನ ಪ್ರೇರಣೆಯಾಗಬೇಕು. ವಿಶೇಷವಾಗಿ ಯುವಕರಿಗೆ ಮತ್ತು ವಿದ್ಯಾರ್ಥಿಗಳಿಗೆ ಪ್ರೋತ್ಸಾಹ ಮತ್ತು ಮಾರ್ಗಸೂಚಿ ನೀಡುವಂತಾಗಬೇಕು’ ಎಂದು ಹೇಳಿದರು.

ಶೇಷಾದ್ರಿಪುರಂ ಶಿಕ್ಷಣ ದತ್ತಿಯ ಗೌರವ ಪ್ರಧಾನ ಕಾರ್ಯದರ್ಶಿ ವೂಡೇ ಪಿ. ಕೃಷ್ಣ, ಪ್ರಾಂಶುಪಾಲ ಮೇಜರ್ ಆನಂದಪ್ಪ ಉಪಸ್ಥಿತರಿದ್ದರು.

ಡಬ್ಲ್ಯುಟಿಟಿ: ಕರ್ನಾಟಕದ ಮೂವರಿಗೆ ಕಂಚು

ಬೆಂಗಳೂರು: ಕರ್ನಾಟಕದ ಸಿದ್ಧಾಂತ್ ಎಂ, ಸಾತ್ವಿಕ್ ಎಂ. ಮತ್ತು ಯುಕ್ತಾ ಹರ್ಷ ಅವರು ವಡೋದರದಲ್ಲಿ ನಡೆಯುತ್ತಿರುವ ವಿಶ್ವ ಟೇಬಲ್ ಟೆನಿಸ್(ಡಬ್ಲ್ಯುಟಿಟಿ)ಯೂತ್ ಕಂಟೆಂಡರ್‌ನ 13 ವರ್ಷದೊಳಗಿನ ವಿಭಾಗದ ಸಿಂಗಲ್ಸ್‌ನಲ್ಲಿ ಕಂಚಿನ ಪದಕ ಗೆದ್ದರು.

ಬಾಲಕರ ಸೆಮಿಫೈನಲ್‌ನಲ್ಲಿ ಅಶ್ವಜಿತ್ ಎಂ. 5-11, 11-5, 6-11, 11-3, 11-6ರಿಂದ ಸಾತ್ವಿಕ್ ಅವರನ್ನು; ದೇವ್ ಪ್ರಣವ್ ಭಟ್ 11-5, 5-11, 11-9, 11-5ರಿಂದ ಸಿದ್ಧಾಂತ್ ಅವರನ್ನು ಮಣಿಸಿದರು.

ಬಾಲಕಿಯರ ಸೆಮಿಫೈನಲ್‌ನಲ್ಲಿ ದಿವಿಜಾ ಪೌಲ್ 11-2, 12-10, 11-5ರಿಂದ ಯುಕ್ತಾ ಅವರನ್ನು ಸೋಲಿಸಿದರು.

ಕೆಎಸ್‌ಆರ್‌ಟಿಸಿ–ಸಾರಿಗೆ ಮಿತ್ರ ಆ್ಯಪ್ ಬಿಡುಗಡೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕೆಎಸ್‌ಆರ್‌ಟಿಸಿ–ಸಾರಿಗೆ ಮಿತ್ರ ಎಚ್‌ಆರ್‌ಎಂಎಸ್–2.0 ಮೊಬೈಲ್ ಆ್ಯಪ್ ಅನ್ನು ಸಾರಿಗೆ ಸಚಿವ ರಾಮಲಿಂಗಾರೆಡ್ಡಿ ಗುರುವಾರ ಬಿಡುಗಡೆ ಮಾಡಿದರು.

ಡಿಜಿಟಲ್ ಪರಿವರ್ತನೆ, ಪಾರದರ್ಶಕತೆ, ಕಾರ್ಯಕ್ಷಮತೆ ವೃದ್ಧಿಗೊಳಿಸಲು ಮತ್ತು ನೌಕರರ ಕಲ್ಯಾಣದ ಬಗ್ಗೆ ಕೇಂದ್ರೀಕರಿಸಿ ಹೊಸ ಆ್ಯಪ್ ಅನ್ನು ಹೊಸ ವರ್ಷದ ಮೊದಲ ದಿನ ಬಿಡುಗಡೆ ಮಾಡಲಾಗಿದೆ. ತ್ವರಿತವಾಗಿ ಮಾನವ ಸಂಪನ್ಮೂಲ ಸೇವೆಗಳನ್ನು ಸ್ಮಾರ್ಟ್ ಫೋನ್ ಮೂಲಕ ಒದಗಿಸುವ ಉದ್ದೇಶದಿಂದ ಅಭಿವೃದ್ಧಿಪಡಿಸಲಾಗಿದೆ ಎಂದು ಸಚಿವರು ತಿಳಿಸಿದರು.

ವೈಶಿಷ್ಟ್ಯಗಳು: ಜಿಯೋ–ಫೆನ್ಸಿಂಗ್ ಆಧಾರಿತ ಹಾಜರಾತಿ ವ್ಯವಸ್ಥೆ, ಮಾಸಿಕ ಹಾಜರಾತಿ ವೀಕ್ಷಣೆ, ವೈಯಕ್ತಿಕ ವಿವರ, ಸೇವಾ ದಾಖಲಾತಿ (ಸರ್ವಿಸ್ ರಿಜಿಸ್ಟರ್) ವಿವರ, ಕುಟುಂಬ ಸದಸ್ಯರ ಮಾಹಿತಿ ಹಾಗೂ ನಾಮನಿರ್ದೇಶಿತ (ನಾಮಿನಿ) ವಿವರಗಳು ಇದರಲ್ಲಿವೆ. ಮಾಸಿಕ ವೇತನ ಪಟ್ಟಿ (ಪೇ ಸ್ಲಿಪ್) ಒಂದೇ ಕ್ಲಿಕ್‌ನಲ್ಲಿ ಡೌನ್‌ಲೋಡ್ ಮಾಡಿಕೊಳ್ಳಬಹುದು. ರಜೆ ನಿರ್ವಹಣಾ ವ್ಯವಸ್ಥೆ ಮೂಲಕ ಖಾತೆಯಲ್ಲಿರುವ ರಜೆ ವಿವರಗಳ ಪರಿಶೀಲನೆ, ಆಂತರಿಕ ಸಂವಹನ ವ್ಯವಸ್ಥೆಯನ್ನು ಮತ್ತಷ್ಟು ಬಲಪಡಿಸಿ, ನಿಗಮದ ವಿವಿಧ ವಿಭಾಗಗಳಿಂದ ಹೊರಡಿಸಲಾಗುವ ಸುತ್ತೋಲೆ ವಿವರ ಲಭ್ಯ ಇರಲಿದೆ.

ಸೌಜನ್ಯದಿಂದ ವರ್ತಿಸಿ: ಪೊಲೀಸ್ ಸಿಬ್ಬಂದಿಗೆ ಸೂಚನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ವಾಹನ ತಪಾಸಣಾ ಸಂದರ್ಭದಲ್ಲಿ ಹಾಗೂ ದಂಡದ ಮೊತ್ತ ವಸೂಲಿ ಮಾಡುವಾಗ ಚಾಲಕರು ಹಾಗೂ ಸಾರ್ವಜನಿಕರೊಂದಿಗೆ ಸೌಜನ್ಯದಿಂದ ವರ್ತಿಸಬೇಕು ಎಂದು ಸಂಚಾರ ಮತ್ತು ರಸ್ತೆ ಸುರಕ್ಷತೆ ವಿಭಾಗದ ಹೆಚ್ಚುವರಿ ಪೊಲೀಸ್ ಮಹಾನಿರ್ದೇಶಕ ಆರ್.ಹಿತೇಂದ್ರ ಅವರು ಪೊಲೀಸ್ ಸಿಬ್ಬಂದಿಗೆ ಸೂಚಿಸಿದ್ದಾರೆ.

ಕೆಲವು ಪೊಲೀಸ್ ಸಿಬ್ಬಂದಿ ವಾಹನ ತಪಾಸಣೆ ವೇಳೆ ಚಾಲಕರ ಮೇಲೆ ದೌರ್ಜನ್ಯ, ಹಲ್ಲೆ, ಕಿರುಕುಳ, ಅವಹೇಳನಕಾರಿ, ಅವಾಚ್ಯ ಶಬ್ದಗಳ ಬಳಕೆ ಮಾಡಿ ಸಾರ್ವಜನಿಕ ಸ್ಥಳಗಳಲ್ಲಿ ವಾಗ್ವಾದಕ್ಕಿಳಿದು ಅವಮಾನ ಮಾಡುವಂತಹ ಘಟನೆಗಳು ನಿರಂತರವಾಗಿ ನಡೆಯುತ್ತಿರುವುದು ಸಾಮಾಜಿಕ ಜಾಲತಾಣಗಳಲ್ಲಿ ಮತ್ತು ಮಾಧ್ಯಮಗಳಲ್ಲಿ ವರದಿಯಾಗುತ್ತಿರುವುದು ಕಂಡುಬಂದಿರುವ ಬಗ್ಗೆ ರಾಜ್ಯ ಪೊಲೀಸ್ ದೂರುಗಳ ಪ್ರಾಧಿಕಾರ ಸದಸ್ಯ ಮೋಹನ್ ಕುಮಾರ್ ದಾನಪ್ಪ ದೂರು ನೀಡಿದ್ದರು.

ದೂರಿನ ಬೆನ್ನಲ್ಲೆ ಆದೇಶ ಹೊರಡಿಸಿರುವ ಹಿತೇಂದ್ರ, ಸಾರ್ವಜನಿಕರ ದೂರುಗಳನ್ನು ಗಂಭೀರವಾಗಿ ಪರಿಗಣಿಸಿ, ತ್ವರಿತವಾಗಿ ಕ್ರಮ ಕೈಗೊಳ್ಳುವಂತೆ ನಿರ್ದೇಶನ ನೀಡಿದ್ದಾರೆ.

ವೈದ್ಯೆಗೆ ಕಿರುಕುಳ: ಆರೋಪಿ ಸೆರೆ

ಪ್ರಜಾವಾಣಿ ವಾರ್ತೆ


ರಾಕೇಶ್

ಬೆಂಗಳೂರು: ವೈದ್ಯೆಗೆ ಕಿರುಕುಳ ನೀಡಿದ್ದ ಆರೋಪಿಯನ್ನು ಸೋಲದೇವನಹಳ್ಳಿ ಠಾಣೆ ಪೊಲೀಸರು ಬಂಧಿಸಿದ್ದಾರೆ.

ತಮಕೂರಿನ ರಾಕೇಶ್ (21) ಬಂಧಿತ ಆರೋಪಿ.

‘ಸಿ.ಸಿ.ಟಿ.ವಿ ಕ್ಯಾಮೆರಾದಲ್ಲಿ ಸೆರೆಯಾದ ದೃಶ್ಯಾವಳಿ ಆಧರಿಸಿ ಆರೋಪಿಯನ್ನು ಪತ್ತೆಹಚ್ಚಿ ಬಂಧಿಸಲಾಗಿದೆ. ವಿಚಾರಣೆ ನಡೆಸಿ ನ್ಯಾಯಾಲಯಕ್ಕೆ ಹಾಜರುಪಡಿಸಲಾಗಿತ್ತು. ನ್ಯಾಯಾಲಯವು ಆರೋಪಿಯನ್ನು ನ್ಯಾಯಾಂಗ ವಶಕ್ಕೆ ಒಪ್ಪಿಸಿದ್ದು ಪರಪ್ಪನ ಅಗ್ರಹಾರ ಜೈಲಿಗೆ ಕಳುಹಿಸಲಾಗಿದೆ’ ಎಂದು ಪೊಲೀಸರು ಹೇಳಿದರು.

ಡಿ.17ರಂದು ಬೆಳಗಿನ ಜಾವ ಕರ್ತವ್ಯ ಮುಗಿಸಿ ಪೇಯಿಂಗ್ ಗೆಸ್ಟ್ ತೆರಳುತ್ತಿದ್ದ ವೈದ್ಯೆಯ ಬಳಿ ಆರೋಪಿ ಅಸಭ್ಯವಾಗಿ ವರ್ತಿಸಿ ಪರಾರಿಯಾಗಿದ್ದ ಎಂದು ಪೊಲೀಸರು ಮಾಹಿತಿ ನೀಡಿದ್ದಾರೆ.

ಕರ್ತವ್ಯ ಮುಗಿಸಿ ಬರುತ್ತಿದ್ದ ವೈದ್ಯೆಗೆ ಆಕೆಯ ಪಿಜಿ ಮುಂಭಾಗದಲ್ಲಿಯೇ ಎದುರಾಗಿದ್ದ ಆರೋಪಿ, ಬಸ್ ನಿಲ್ದಾಣದ ವಿಳಾಸ ಕೇಳುವ ನೆಪದಲ್ಲಿ ಮಾತನಾಡಿಸಿದ್ದ. ವೈದ್ಯೆ ಭಯದಿಂದಲೇ ವಿಳಾಸ ಹೇಳಿ ಪೇಯಿಂಗ್ ಗೆಸ್ಟ್‌ನ ಗೇಟ್ ತೆರೆಯಲು ಮುಂದಾಗಿದ್ದರು. ಆಗ ಸ್ಕೂಟಿ ನಿಲ್ಲಿಸಿ ಹತ್ತಿರ ಬಂದಿದ್ದ ಆರೋಪಿ, ಆಕೆಯ ದೇಹ ಸ್ಪರ್ಶಿಸುತ್ತಾ ಅಸಭ್ಯವಾಗಿ ವರ್ತಿಸಿದ್ದ. ವೈದ್ಯೆ ಜೋರಾಗಿ ಕೂಗಿದ್ದರಿಂದ ಆರೋಪಿ ಅಲ್ಲಿಂದ ಪರಾರಿ ಆಗಿದ್ದ ಎಂದು ಪೊಲೀಸರು ಹೇಳಿದರು.

ಆರೋಪಿಯ ವಿರುದ್ಧ ಹಳೆಯ ಪ್ರಕರಣಗಳಿಲ್ಲ. ತಾಯಿ ಜತೆಗೆ ಬೆಂಗಳೂರಿನಲ್ಲಿ ಆರೋಪಿ ವಾಸವಿದ್ದ. ಪರಿಚಿತರನ್ನು ಭೇಟಿಯಾಗಲು ಚಿಕ್ಕಬಾಣಾವರಕ್ಕೆ ತೆರಳುತ್ತಿದ್ದ ವೇಳೆ ಕೃತ್ಯ ಎಸಗಿದ್ದ ಎಂದು ಪೊಲೀಸರು ಹೇಳಿದರು.

ಅಪರಾಧ ಸುದ್ದಿ

ಅಸಭ್ಯ ವರ್ತನೆ: ಇಬ್ಬರ ಬಂಧನ


ಅಂಶ್ ಮೆಹ್ತಾ


ಪರ್ವ್ ರಾತಿ

ಹೊಸ ವರ್ಷದ ಸಂಭ್ರಮಾಚರಣೆ ಸಂದರ್ಭದಲ್ಲಿ ಮದ್ಯದ ಅಮಲಿನಲ್ಲಿ ಯುವತಿಯರೊಂದಿಗೆ ಅಸಭ್ಯವಾಗಿ ವರ್ತಿಸಿ, ಪೊಲೀಸರ ಕರ್ತವ್ಯಕ್ಕೂ ಅಡ್ಡಿಪಡಿಸಿದ್ದ ತಮಿಳುನಾಡಿನ ಇಬ್ಬರನ್ನು ವಿಧಾನಸೌಧ ಠಾಣೆಯ ಪೊಲೀಸರು ಬಂಧಿಸಿದ್ದಾರೆ.

ಚೆನ್ನೈನ ಅಂಶ್ ಮೆಹ್ತಾ (22) ಹಾಗೂ ಪರ್ವ್ ರಾತಿ (22) ಬಂಧಿತರು.

ಹೊಸ ವರ್ಷಾಚರಣೆ ಸಂಭ್ರಮದ ಬಳಿಕ ನಾಲ್ವರು ಯುವತಿಯರು ಅಂಬೇಡ್ಕರ್ ರಸ್ತೆಯಲ್ಲಿ ಕ್ಯಾಬ್‌ಗಾಗಿ ಕಾಯುತ್ತಿದ್ದರು. ಸ್ಥಳಕ್ಕೆ ಬಂದಿದ್ದ ಆರೋಪಿಗಳು, ಯವತಿಯರೊಂದಿಗೆ ಅನುಚಿತವಾಗಿ ವರ್ತಿಸಿದ್ದರು. ಯುವತಿಯರು ನೀಡಿದ ಮಾಹಿತಿ ಮೇರೆಗೆ ಸ್ಥಳಕ್ಕೆ ಪೊಲೀಸರು ಬಂದಿದ್ದರು. ಆರೋಪಿಗಳನ್ನು ಪ್ರಶ್ನೆ ಮಾಡಿದ್ದ ಪೊಲೀಸರು, ಬುದ್ಧಿಮಾತು ಹೇಳಿ ಸ್ಥಳದಿಂದ ತೆರಳುವಂತೆ ಸೂಚಿಸಿದ್ದರು. ಪಾನಮತ್ತರಾಗಿದ್ದ ಆರೋಪಿಗಳು ಪೊಲೀಸ್ ಸಿಬ್ಬಂದಿಯನ್ನು ತಳ್ಳಾಡಿ, ರಿಫ್ಲೆಕ್ಟರ್ ಜಾಕೆಟ್ ಹರಿದು ಹಾಕಿದ್ದರು ಎಂದು ಮೂಲಗಳು ಹೇಳಿವೆ.

ಕಾನ್‌ಸ್ಟೆಬಲ್ ಕೆ.ರವಿ ನೀಡಿದ ದೂರಿನ ಮೇರೆಗೆ ಪ್ರಕರಣ ದಾಖಲಿಸಿಕೊಂಡು ಆರೋಪಿಗಳನ್ನು ಬಂಧಿಸಲಾಗಿದೆ ಎಂದು ಪೊಲೀಸರು ಹೇಳಿದರು.

ಅಳಿದ ಮರಗಳಿಂದ ಕಾಷ್ಠಶಿಲ್ಪ ಕಲಾಕೃತಿ

ಲಾಲ್‌ಬಾಗ್‌ನಲ್ಲಿ ಎರಡನೇ ಬಾರಿಗೆ ರಾಷ್ಟ್ರೀಯ ಮರಗೆತ್ತನೆ ಶಿಬಿರ ಆರಂಭ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಲಾಲ್‌ಬಾಗ್‌ನಲ್ಲಿ ಏಳು ವರ್ಷದಿಂದ ಮಳೆ–ಗಾಳಿ, ವಯಸ್ಸಾಗಿ ಧರೆಗುರುಳಿದ ಮರಗಳಿಂದ ಪರಿಸರಸ್ನೇಹಿ ‘ಕಾಷ್ಠಶಿಲ್ಪ ಕಲಾಕೃತಿ’ಗಳನ್ನು ರಚಿಸಿ, ‘ಮರ ಸಂಗ್ರಹಾಲಯ’ದಲ್ಲಿರಿಸುವ 14 ದಿನಗಳ ಶಿಬಿರ ಶುಕ್ರವಾರ ಆರಂಭವಾಯಿತು.

ತೋಟಗಾರಿಕೆ ಇಲಾಖೆ, ಕರ್ನಾಟಕ ಶಿಲ್ಪಕಲಾ ಅಕಾಡೆಮಿ ಸಹಯೋಗದಲ್ಲಿ ‘2ನೇ ರಾಷ್ಟ್ರೀಯ ಮರಗೆತ್ತನೆ ಶಿಬಿರ’ದಲ್ಲಿ ರಾಜ್ಯದ ವಿವಿಧ ಜಿಲ್ಲೆಗಳು ಹಾಗೂ ಮುಂಬೈ, ಛತ್ತೀಸಗಢದಿಂದ 50 ಪರಿಣತ ಶಿಲ್ಪಿಗಳು ಭಾಗವಹಿಸಿದ್ದಾರೆ.

ಕಳೆದ ಏಳು ವರ್ಷಗಳಿಂದ ನಾನಾ ಕಾರಣಗಳಿಂದಾಗಿ ಉರುಳಿ ಬಿದ್ದ ಮಹಾಘನಿ, ನೀಲಗಿರಿ ಸೇರಿದಂತೆ 30ಕ್ಕೂ ಹೆಚ್ಚು ಬೃಹತ್ ಮರಗಳ ಕಾಂಡ, ರೆಂಬೆ–ಕೊಂಬೆಗಳನ್ನು ಸಂಗ್ರಹಿಸಿಡಲಾಗಿದೆ. ಮರಗೆತ್ತನೆ ಶಿಬಿರದಿಂದ ಶಿಲ್ಪಿಗಳು ಮರಗಳ ಮೇಲೆ ಆಕರ್ಷಕ ಆಕೃತಿಗಳನ್ನು ರಚಿಸಲಿದ್ದು, ಅವುಗಳನ್ನು ಮರ ಸಂಗ್ರಹಾಲಯಕ್ಕೆ (ವುಡ್ ಮ್ಯೂಸಿಯಂ) ಸೇರಿಸಲಾಗುತ್ತದೆ.

ಬ್ರಿಟಿಷರ ಕಾಲದಲ್ಲಿ ಪರಿಚಯವಾದ ನೀಲಗಿರಿ, ಮಹಾಘನಿ, ಅಕೇಶಿಯಾದ ಎಂಟು ಬೃಹತ್ ಮರಗಳಿದ್ದು, ಅವುಗಳ ಮೇಲೆ 35 ಕಲಾಕೃತಿಗಳನ್ನು ರಚಿಸಲಾಗುತ್ತದೆ. ಜನವರಿ 17ರವರೆಗೆ ಶಿಬಿರ ನಡೆಯಲಿದ್ದು, ಕಲಾಕೃತಿ ನಿರ್ಮಿಸುವ ಜವಾಬ್ದಾರಿಯನ್ನು ಒಂದು ತಂಡಕ್ಕೆ ವಹಿಸಲಾಗಿದೆ ಎಂದು ತೋಟಗಾರಿಕೆ ಇಲಾಖೆಯ ಹೆಚ್ಚುವರಿ ನಿರ್ದೇಶಕ ಎಂ. ಜಗದೀಶ್ ತಿಳಿಸಿದರು.


ಲಾಲ್‌ಬಾಗ್‌ನಲ್ಲಿ ಶುಕ್ರವಾರ ಮರಗೆತ್ತನೆ ಶಿಬಿರಕ್ಕೆ ಚಾಲನೆ ನೀಡಲಾಯಿತು. ಅ.ನ. ಯಲ್ಲಪ್ಪರೆಡ್ಡಿ, ಎಂ.ಸಿ. ರಮೇಶ್, ಪಿ.ಎಸ್ ಕುಮಾರ್, ಜಗದೀಶ್ ಉಪಸ್ಥಿತರಿದ್ದರು

‘ದೇಶದ ಮೊದಲ ‘ವುಡ್ ಮ್ಯೂಸಿಯಂ’ ಎಂಬ ಹೆಗ್ಗಳಿಕೆಗೆ ಪಾತ್ರವಾಗಿರುವ ಲಾಲ್‌ಬಾಗ್‌ನಲ್ಲಿ 2018ರಲ್ಲಿ ಮೊದಲ ಮರಗೆತ್ತನೆ ಶಿಬಿರವನ್ನು ಆಯೋಜಿಸಲಾಗಿತ್ತು. ಆ ಸಂದರ್ಭದಲ್ಲಿ 45ಕ್ಕೂ ಹೆಚ್ಚು ಬೃಹತ್ ಗಾತ್ರದ ಕಾಷ್ಠಶಿಲ್ಪಗಳನ್ನು ವಿನ್ಯಾಸಗೊಳಿಸಿ, ಗಾಜಿನ ಮನೆಯ ಹಿಂಭಾಗದಲ್ಲಿರುವ ಸಂಗ್ರಹಾಲಯದಲ್ಲಿ ಇರಿಸಲಾಗಿದೆ’ ಎಂದು ತಿಳಿಸಿದರು.

ಕಲ್ಲಿನ ಕಲಾಕೃತಿಗಳನ್ನು ರಚಿಸಲು, ಎಚ್.ಡಿ. ಕೋಟೆಯಿಂದ ಸುಮಾರು ಐದು ಟನ್ ತೂಕದ ಎರಡು ‘ಸೋಕ್ ಸ್ಟೋನ್’ ತರಿಸಲಾಗಿದೆ. ಸಸ್ಯಕಾಶಿಯ ಪರಿಕಲ್ಪನೆಯಡಿ ಕಲಾಕೃತಿಗಳನ್ನು ರಚಿಸಲಾಗುತ್ತದೆ ಎಂದರು.

ನೂರಾರು ವರ್ಷ ಬಾಳಿಕೆ ಬರುವ ಕಲಾಕೃತಿಗಳನ್ನು ಪರಿಸರಕ್ಕೆ ಕೊಡುಗೆಯಾಗಿ ನೀಡಲು ಈ ಶಿಬಿರ ಸಹಕಾರಿಯಾಗಲಿದೆ. ತೋಟಗಾರಿಕೆ ಇಲಾಖೆಯಿಂದ ಸುಮಾರು ₹15 ಲಕ್ಷ ಹಾಗೂ ಕರ್ನಾಟಕ ಶಿಲ್ಪಕಲಾ ಅಕಾಡೆಮಿಯಿಂದ ಸುಮಾರು ₹7.50 ಕೋಟಿ ವಿನಿಯೋಗಿಸಲಾಗುತ್ತಿದೆ ಎಂದು ಎಂ. ಜಗದೀಶ್ ತಿಳಿಸಿದರು.

ತೋಟಗಾರಿಕೆ ಮತ್ತು ರೇಷ್ಮೆ ಇಲಾಖೆಯ ಕಾರ್ಯದರ್ಶಿ ಆರ್. ಗಿರೀಶ್, ತೋಟಗಾರಿಕೆ ಇಲಾಖೆ ನಿರ್ದೇಶಕ ವೈ.ಎಸ್. ಪಾಟೀಲ, ಉಪ ನಿರ್ದೇಶಕ ಎಚ್.ಟಿ. ಬಾಲಕೃಷ್ಣ, ಪರಿಸರ ತಜ್ಞ ಅ.ನ. ಯಲ್ಲಪ್ಪರೆಡ್ಡಿ, ಕರ್ನಾಟಕ ಶಿಲ್ಪಕಲಾ ಅಕಾಡೆಮಿ ಅಧ್ಯಕ್ಷ ರಮೇಶ್, ಕರ್ನಾಟಕ ಲಲಿತಕಲಾ ಅಕಾಡೆಮಿ ಅಧ್ಯಕ್ಷ ಪ.ಸ. ಕುಮಾರ್ ಅವರು ಶಿಬಿರ ಉದ್ಘಾಟನಾ ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು.

ಕಾರು ಡಿಕ್ಕಿ: ಮುಖ್ಯ ಶಿಕ್ಷಕ ಸಾವು


ಜಗದೀಶ್

ದೊಡ್ಡಬಳ್ಳಾಪುರ: ತಾಲ್ಲೂಕಿನ ಕಾಡನೂರು ಕೈಮರದ ಸಮೀಪ ಶನಿವಾರ ಬೆಳಗ್ಗೆ ರಸ್ತೆಯಲ್ಲಿ ಅಡ್ಡಬಂದ ವ್ಯಕ್ತಿಗೆ ಡಿಕ್ಕಿ ಹೊಡೆಯುವುದನ್ನು ತಪ್ಪಿಸಲು ಹೋಗಿ ಕಾರುವೊಂದು ಮರಕ್ಕೆ ಡಿಕ್ಕಿ ಹೊಡೆದು, ಕಾರು ಚಲಾಯಿಸುತ್ತಿದ್ದ ಶಿಕ್ಷಕ ಮೃತಪಟ್ಟಿದ್ದಾರೆ.

ದೊಡ್ಡಬಳ್ಳಾಪುರ ನಗರದ ಮಾರುಕಟ್ಟೆ ಸರ್ಕಾರಿ ಶಾಲೆ ಮುಖ್ಯ ಶಿಕ್ಷಕ ಜಗದೀಶ್ (58) ಮೃತರು.

ತಾಲ್ಲೂಕಿನ ಪುರುಷನ ಹಳ್ಳಿಯ ಜಗದೀಶ್ ನೆಲಮಂಗಲದಲ್ಲಿ ವಾಸವಿದ್ದರು.

ಶನಿವಾರ ಮುಂಜಾನೆ ಶಾಲೆಗೆ ಪ್ರತಿದಿನದಂತೆ ಕಾರಿನಲ್ಲಿ ಬರುವ ವೇಳೆ ಅಪಘಾತ ಸಂಭವಿಸಿದೆ. ಗಂಭೀರವಾಗಿ ಗಾಯಗೊಂಡಿದ್ದ ಮುಖ್ಯ ಶಿಕ್ಷಕ ಸ್ಥಳದಲ್ಲೇ ಮೃತಪಟ್ಟಿದ್ದಾರೆ ಎಂದು ಪೊಲೀಸರು ತಿಳಿಸಿದ್ದಾರೆ.

ಮೃತರಿಗೆ ಪತ್ನಿ, ಮಗಳು ಇದ್ದಾರೆ. ಗ್ರಾಮಾಂತರ ಠಾಣೆಯಲ್ಲಿ ದೂರು ದಾಖಲಾಗಿದೆ.

ಪ್ರಶ್ನೆಪತ್ರಿಕೆ ಸೋರಿಕೆ: ತನಿಖೆಗೆ ಸಮಿತಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಪ್ರಶ್ನೆಪತ್ರಿಕೆ ಸೋರಿಕೆ ಆರೋಪಗಳ ಕುರಿತು ಪರಿಶೀಲನೆ ನಡೆಸಲು ಡಾ.ಮನ್‌ಮೋಹನ್ ಸಿಂಗ್ ಅವರು ಬೆಂಗಳೂರು ನಗರ ವಿಶ್ವವಿದ್ಯಾಲಯ ಆಂತರಿಕ ತನಿಖಾ ಸಮಿತಿ ರಚಿಸಿದೆ.

2026ರ ಜ.1ರಂದು ಬಿ.ಕಾಂ 5ನೇ ಸೆಮಿಸ್ಟರ್‌ನ ಅಡ್ವಾನ್ಸ್ಡ್ ಅಕೌಂಟಿಂಗ್ ವಿಷಯದ ಪ್ರಶ್ನೆಪತ್ರಿಕೆ ಸಾಮಾಜಿಕ ಜಾಲತಾಣಗಳಲ್ಲಿ ಹರಿದಾಡಿತ್ತು. ಆದರೆ, ಈ ಆರೋಪವನ್ನು ವಿಶ್ವವಿದ್ಯಾಲಯದ ಅಧಿಕಾರಿಗಳು ನಿರಾಕರಿಸಿದ್ದರು. ಪರೀಕ್ಷೆಯನ್ನು ನಿಗದಿತ ವೇಳಾಪಟ್ಟಿಯಂತೆ ನಡೆಸಲಾಗಿದೆ ಎಂದು ಸ್ಪಷ್ಟಪಡಿಸಿದ್ದರು.

ಕೆಪಿಸಿಸಿ ಪ್ರಧಾನ ಕಾರ್ಯದರ್ಶಿ ಎ.ಪಿ.ಬಸವರಾಜು ಅವರು ಪ್ರಶ್ನೆಪತ್ರಿಕೆ ಸೋರಿಕೆ ವಿಷಯ ಕುರಿತು ಸಮಗ್ರ ತನಿಖೆ ನಡೆಸುವಂತೆ ನಗರ ಪೊಲೀಸ್ ಆಯುಕ್ತರಿಗೆ ದೂರು ಸಲ್ಲಿಸಿದ್ದರು.

ಈ ಎಲ್ಲ ಬೆಳವಣಿಗೆಗಳ ನಂತರ ವಿಶ್ವವಿದ್ಯಾಲಯವು ಸಿಂಡಿಕೇಟ್ ಸದಸ್ಯ ಎಚ್.ಕೃಷ್ಣರಾಮ್ ಅವರ ಅಧ್ಯಕ್ಷತೆಯಲ್ಲಿ ಸಮಿತಿ ರಚಿಸಿದ್ದು, ವರದಿ ಸಲ್ಲಿಸುವಂತೆ ಸೂಚಿಸಿದೆ.

ಎಐ ಕಲಿತರಷ್ಟೇ ಕೆಲಸ...

ಒಂದನೇ ಪುಟದಿಂದ...

ಈ ಸಂಗತಿಗಳು ಜಾಗತಿಕ ಮಟ್ಟದಲ್ಲಿ ಸರ್ವೇ ಸಾಮಾನ್ಯ ಎಂಬಂತಾಗಿದೆ. ಭವಿಷ್ಯದ ಕುರಿತು ಅಪಾರ ಕನಸು ಹೊಂದಿರುವ ವಿದ್ಯಾರ್ಥಿಗಳು ಮಾತ್ರವಲ್ಲ, ಬದುಕು ಕಟ್ಟಿಕೊಳ್ಳಲು ನಿತ್ಯ ಪ್ರಯಾಸಪಡುತ್ತಿರುವ ದುಡಿಯುವ ವರ್ಗ, ನಿವೃತ್ತಿಯ ಅಂಚಿನಲ್ಲಿರುವವರೂ ನೌಕರಿ ಉಳಿಸಿಕೊಳ್ಳಲು ಕೃತಕ ಬುದ್ಧಿಮತ್ತೆ ಕಲಿಕೆ ಆರಂಭಿಸಿದ್ದಾರೆ.

ಅಷ್ಟಕ್ಕೂ ಎಐ ಸೃಷ್ಟಿಸಿದ ಆತಂಕ ಎಂಥದ್ದು...?

ಎಐ ಎಂಬುದು ನಿನ್ನೆ ಹುಟ್ಟಿ, ಇಂದು ಮುಗಿಲೆತ್ತರಕ್ಕೆ ಬೆಳೆದು ನಿಂತ ಪೆಡಂಭೂತವಲ್ಲ. ಯಂತ್ರಗಳಿಗೆ ಬುದ್ಧಿ ಕಲಿಸುವ ಕೆಲಸ 1950ರಿಂದಲೂ ಸಾಗುತ್ತಲೇ ಬಂದಿದೆ. ಈ ಹಿಂದೆ ಎರಡು ಬಾರಿ ಕೃತಕ ಬುದ್ಧಿಮತ್ತೆ ತನ್ನ ಪ್ರವೇಶಕ್ಕೆ ಪ್ರಯತ್ನ ಮಾಡಿದರೂ, ಡಿಜಿಟಲ್ ಪರಿಸರ ಅದಕ್ಕೆ ಪೂರಕವಾಗಿಲ್ಲದ ಕಾರಣ ಅದರ ಪ್ರಭಾವ ಅಷ್ಟಾಗಿ ಬಾಧಿಸಿರಲಿಲ್ಲ. ಯಂತ್ರಗಳ ಕೈಗೆ ಬುದ್ಧಿ ನೀಡುವ ಪ್ರಯತ್ನದಲ್ಲಿ 1965ರಲ್ಲಿ ಮೊದಲ ಅಲೆ, 1985ರಲ್ಲಿ ರೊಬೊ ರೂಪದಲ್ಲಿ ಎರಡನೇ ಅಲೆಯಾಗಿ ಅಪ್ಪಳಿಸಿದರೂ, ದೊಡ್ಡಮಟ್ಟದ ಆಘಾತ ಸೃಷ್ಟಿಸುವಲ್ಲಿ ಅವು ವಿಫಲವಾದವು. ಆದರೆ ಅಂತರ್ಜಾಲ ಹಾಗೂ ಸ್ಮಾರ್ಟ್‌ಫೋನ್ ಪ್ರವೇಶವೊಂದು ಡಿಜಿಟಲ್ ವಿರಾಟರೂಪ ತೋರಿಸಿದೆ.

ಸ್ಮಾರ್ಟ್‌ಫೋನ್ ಪ್ರವೇಶದೊಂದಿಗೆ ಯಾಹೂ ಹಾಗೂ ಗೂಗಲ್ ಸರ್ಚ್ ಎಂಜಿನ್‌ಗಳು ಬಹಳಷ್ಟು ಕೆಲಸಗಳನ್ನು ಕಡಿಮೆ ಮಾಡಿದವು. ಆಗಲೂ ಇದೇ ಚರ್ಚೆ. ಕಂಪ್ಯೂಟರ್‌ಗಳು ನೌಕರಿ ಕಸಿದುಕೊಳ್ಳುತ್ತವೆ ಎಂಬುದೇ. ಆದರೆ ಈ ಸರ್ಚ್ ಎಂಜಿನ್ ಹಾಗೂ ಅಭಿವೃದ್ಧಿಗೊಂಡ ಹಲವು ತಂತ್ರಾಂಶಗಳನ್ನೇ ಅಸ್ತ್ರ ಮಾಡಿಕೊಂಡ ತಂತ್ರಜ್ಞರು, ಆ ಮೂಲಕವೇ ಉದ್ಯೋಗ ಕಂಡುಕೊಂಡರು. ಉದ್ಯೋಗ ಸೃಜಿಸಿದರು. ಅಬಾಲವೃದ್ಧರಾದಿಯಾಗಿ ಏನು ಬೇಕಿದ್ದರೂ ಗೂಗಲ್ ಅನ್ನು ಕೇಳು ಎನ್ನುವಷ್ಟರ ಮಟ್ಟಿಗೆ ತಂತ್ರಜ್ಞಾನಕ್ಕೆ ಸಮಾಜ ಇಂದು ಒಗ್ಗಿಕೊಂಡಿದೆ.

ಒಂದು ಕೇಳಿದರೆ 5 ಕೋಟಿ ಉತ್ತರಗಳನ್ನು ನೀಡುವ ಸಾಮರ್ಥ್ಯವಿರುವ ಗೂಗಲ್ ಸರ್ಚ್ ಮೂಲಕ ಒಂದನ್ನು ಆಯ್ಕೆ ಮಾಡಿಕೊಳ್ಳಬೇಕಾದ ಹೊರೆ ಸದ್ಯ ಬಳಕೆದಾರರದ್ದು. ಆದರೆ ಮಾಹಿತಿ ನೀಡಿದರಷ್ಟೇ ಸಾಲದು, ಅದನ್ನು ಆಳದಲ್ಲಿ ಶೋಧಿಸಿ, ನನಗೇನು ಬೇಕು ಎಂಬುದನ್ನು ಅರಿತು, ವಿಶ್ಲೇಷಿಸಿ, ಸಂಸ್ಕರಿಸಿ ನೀಡುವ ಹೊಣೆಯನ್ನು ಈಗ ಎಐ ನಿಭಾಯಿಸುತ್ತಿದೆ. ಹೀಗಾಗಿ ಕೈಗಾರಿಕಾ ಕ್ರಾಂತಿಯ ನಂತರದಲ್ಲಿ ಮನುಷ್ಯರ ಜೀವನಮಟ್ಟ ಉತ್ತಮಪಡಿಸುವಲ್ಲಿ ದೊಡ್ಡ ಪರಿವರ್ತನೆಯನ್ನು ಎಐ ತರಲಿದೆ ಎಂದು ಇಡೀ ಜಗತ್ತೇ ಹೇಳುತ್ತಿದೆ.

ಇದರ ಪ್ರವೇಶದಿಂದ ರೋಗ ಪತ್ತೆ ಹಿಂದಿಗಿಂತಲೂ ಬೇಗ ಆಗುತ್ತಿದೆ. ಮಳೆ ಹಾಗೂ ಹವಾಮಾನ ವರದಿಗಳು, ಚಂಡ ಮಾರುತದ ಮಾಹಿತಿ ತ್ವರಿತವಾಗಿ ಮತ್ತು ನಿಖರವಾಗಿ ಲಭ್ಯವಾಗುತ್ತಿದೆ. ಶಿಕ್ಷಣ ಹಾಗೂ ಕಲಿಕೆ ಹಿಂದೆಂದಿಗಿಂತಲೂ ಪರಿಣಾಮಕಾರಿಯಾಗಿದೆ. ಮಾಧ್ಯಮಗಳಲ್ಲಿ ಸರ್ಚ್ ಎಂಜಿನ್ ಆಪ್ಟಿಮೈಸೇಷನ್ ಉತ್ತಮವಾಗುತ್ತಿರುವುದರಿಂದ ಸುದ್ದಿಗಳು ತ್ವರಿತವಾಗಿ ಜನರ ಕೈಯಲ್ಲಿರುವ ಸಾಧನಗಳನ್ನು ತಲುಪುತ್ತಿವೆ. ಹೀಗೆ ಒಂದೇ ಎರಡೇ. ಮನುಷ್ಯರನ್ನು ಅರ್ಥ ಮಾಡಿಕೊಳ್ಳುತ್ತಿರುವ ಯಂತ್ರಗಳು ಅತಿ ವೇಗದಲ್ಲಿ ತಮ್ಮನ್ನು ತಾವು ಉತ್ತಮಪಡಿಸಿಕೊಳ್ಳುತ್ತಾ ಸಾಗುತ್ತಿವೆ. ಜತೆಗೆ ಮನುಷ್ಯರ ಜೀವನದ ಗುಣಮಟ್ಟವನ್ನೂ ಉತ್ತಮಪಡಿಸುತ್ತಿದೆ ಎಂದರೆ ಅತಿಶಯೋಕ್ತಿಯಂತೂ ಅಲ್ಲ.

ಹಾಗಿದ್ದರೆ ಮನುಷ್ಯರಿಗಿಂತ ಎಐ ಬುದ್ಧಿ ಚುರುಕೇ...?

‘ಹಿಂದೆ ಮೊಬೈಲ್ ಇಲ್ಲದ ಕಾಲವೊಂದಿತ್ತು. ಸ್ಥಿರ ದೂರವಾಣಿಗಳು ಇದ್ದ ಸಂದರ್ಭದಲ್ಲಿ ಬಹಳಷ್ಟು ಜನರ ಫೋನ್ ಸಂಖ್ಯೆಗಳನ್ನು ಬಾಯಲ್ಲೇ ಹೇಳುವಷ್ಟು ಸಾಮರ್ಥ್ಯ ಬಹುತೇಕರಿಗಿತ್ತು. ಯಾರ ಫೋನ್ ಸಂಖ್ಯೆ ಕೇಳಿದರೂ ಮಕ್ಕಳು ಪಟಪಟನೆ ಹೇಳುತ್ತಿದ್ದರು. ಈಗ ಅಪ್ಪ, ಅಮ್ಮನ ಫೋನ್ ಸಂಖ್ಯೆಯನ್ನೇ ಪದೇ ಪದೇ ನೆನಪಿಸುವಷ್ಟರ ಮಟ್ಟಿಗೆ ಸುಲಭ ಸೌಕರ್ಯಗಳ ದಾಸರಾಗಿದ್ದೇವೆ’ ಎಂದು ಇನ್ನರ್‌ವರ್ಸ್ ಟೆಕ್‌ನ ಸಿಇಒ ಹಾಗೂ ಸಹ ಸಂಸ್ಥಾಪಕ ಕೆ.ಆರ್. ಶಿವರಾಮ್ ಹೇಳುತ್ತಾರೆ.

ಕೃತಕ ಬುದ್ಧಿಮತ್ತೆ ಕ್ಷೇತ್ರದಲ್ಲಿ ಕಳೆದ ಎರಡು ದಶಕಗಳಿಂದ ಕೆಲಸ ಮಾಡುತ್ತಿರುವ ಅವರು, ಕೃತಕ ಬುದ್ಧಿಮತ್ತೆ ಇಡೀ ಜಗತ್ತನ್ನೇ ಆವರಿಸುತ್ತದೆ ಎಂಬ ಮಾತನ್ನು ಒಪ್ಪುವುದಿಲ್ಲ. ಆದರೆ ಕೃತಕ ಬುದ್ಧಿಮತ್ತೆಯನ್ನು ಕಲಿಯದಿದ್ದರೆ ಅವಕಾಶದಲ್ಲಿ ಹಿಂದೆ ಬೀಳುವುದಂತೂ ಖಂಡಿತಾ ಎಂಬ ಎಚ್ಚರಿಕೆಯನ್ನೂ ನೀಡುತ್ತಾರೆ.

‘ಕೃತಕ ಬುದ್ಧಿಮತ್ತೆ ಮೂಲಕ ‘ಹ್ಯೂಮನ್ 2.0‘ ಅಂದರೆ ಮನುಷ್ಯರ ಎರಡನೇ ಆವೃತ್ತಿ ಆರಂಭವಾಗಿದೆ. ಇಲ್ಲಿ ಕಲಿತು ಪರಿಣಿತರಾದ ಪ್ರತಿಯೊಬ್ಬ ವ್ಯಕ್ತಿಯೂ ಒಂದು ಶತಕೋಟಿ ಡಾಲರ್ ಕಂಪನಿಯ ಒಡೆಯನಾಗಲು ಸಾಧ್ಯ. ಹಾಗೆಯೇ ‘ಶೋಧಿಸು’ ಮತ್ತು ‘ಹುಡುಕು’ ಪ್ರಕ್ರಿಯೆಯಿಂದ ‘ಕೇಳು’ ಮತ್ತು ‘ಉತ್ಪಾದಿಸು’ ಎಂಬ ಯುಗಕ್ಕೆ ನಾವು ಪರಿವರ್ತನೆಗೊಂಡಿದ್ದೇವೆ.

ಇದನ್ನು ಸದುಪಯೋಗಪಡಿಸಿಕೊಂಡಿದ್ದೇ ಆದಲ್ಲಿ ಜಗತ್ತು ಮತ್ತೊಂದು ಎತ್ತರಕ್ಕೆ ಏರಲಿದೆ. ಡಾರ್ವಿನ್‌ನ ವಿಕಾಸವಾದದಲ್ಲಿ ಹೇಳಿರುವಂತೆ, ಇಲ್ಲಿ ಬಲಿಷ್ಠರಷ್ಟೇ (ಕೃತಕ ಬುದ್ಧಿಮತ್ತೆಯ ಜ್ಞಾನ ಮತ್ತು ಸೃಜನಶೀಲತೆ) ಉಳಿಯಲಿದ್ದಾರೆ’ ಎನ್ನುವುದು ಶಿವರಾಂ ಅವರ ಲೆಕ್ಕಾಚಾರ.

ಮೇಧಶಕ್ತಿಯ ಈ ಕ್ರಾಂತಿಯಿಂದ ಭಾರತ, ಜಗತ್ತಿನ ಹೊಸ ರೂಪ

ಕಳೆದ ಒಂದು ದಶಕದಲ್ಲಿ ಆಗಿರುವ ಬದಲಾವಣೆಯನ್ನು ಗಮನಿಸಿದರೆ ಕೃತಕ ಬುದ್ಧಿಮತ್ತೆ ಎಂಬುದು ವೈಜ್ಞಾನಿಕ ಕುತೂಹಲ ಎಂದು ನೋಡುವುದಕ್ಕಿಂತ ಹೆಚ್ಚಾಗಿ ನಾಗರಿಕತೆಯನ್ನೇ ಹೊಸ ರೂಪದೊಂದಿಗೆ ಪರಿವರ್ತಿಸುವ ಸಲಕರಣೆಯಾಗಿ ಹೊರಹೊಮ್ಮಿದೆ. ಆರ್ಥಿಕತೆಯನ್ನೇ ಬದಲಾಯಿಸಿದೆ, ಉದ್ಯೋಗ ಕ್ಷೇತ್ರವನ್ನೇ ಮರು ವ್ಯಾಖ್ಯಾನಿಸಿದೆ. ಮನುಷ್ಯನ ಸೃಜನಶೀಲತೆಗೆ ಹೊಸ ಭಾಷ್ಯ ಬರೆದಿದೆ. ಹೀಗಾಗಿ ಎಐ ಎಂಬುದು ಯಂತ್ರದೊಳಗೆ ಕಾಣದೆ ಕೂತು ಕೆಲಸ ಮಾಡುವ ಒಂದು ಸಲಕರಣೆಯಷ್ಟೇ ಅಲ್ಲ, 21ನೇ ಶತಮಾನದ ಪ್ರಮುಖ ಪಾತ್ರಧಾರಿ ಎಂದರೆ ತಪ್ಪಾಗದು ಎಂದೆನ್ನುತ್ತಾರೆ ಎಐ ಕ್ಷೇತ್ರದಲ್ಲೇ ಆಳವಾಗಿ ಅಧ್ಯಯನ ನಡೆಸಿರುವ ವೈಸ್‌ವರ್ಕ್‌ನ ಸಿಇಒ ಡಾ. ಮದನ ಕುಮಾರ್ ಶ್ರೀನಿವಾಸನ್.

‘ಹುಡುಕಾಟ, ಮುಂದಾಲೋಚನೆ, ತರ್ಕ ಮತ್ತು ಹೊಸದರ ಸೃಷ್ಟಿ ಇವೆಲ್ಲವೂ ಕೃತಕ ಬುದ್ಧಿಮತ್ತೆಯ ಮುಂದುವರಿದ ಭಾಗವಾದ ಡೀಪ್ ಲರ್ನಿಂಗ್‌ನಿಂದ ಸಾಧ್ಯವಾಗಿದೆ. ಏಕೆಂದರೆ ಅಪಾರವಾದ ಮಾಹಿತಿಯನ್ನು ಓದಿ, ಅದರಲ್ಲಿರುವ ಪೂರಕ ಮಾಹಿತಿಯನ್ನು ಹೆಕ್ಕಿ, ಅದನ್ನು ವಿಶ್ಲೇಷಿಸಿ ನೀಡುವುದು ಮನುಷ್ಯರಿಂದ ಕೆಲವೇ ನಿಮಿಷಗಳಲ್ಲಿ ಅಸಾಧ್ಯ. ಅದನ್ನು ಸಾಧ್ಯವಾಗಿಸಿದ್ದು ಎಐ.

ಕೃತಕ ಬುದ್ಧಿಮತ್ತೆ ಎಂಬುದರ ಉದಯವು ಕೇವಲ ತಾಂತ್ರಿಕ ಪ್ರಗತಿಯಷ್ಟೇ ಅಲ್ಲ, ಅದೊಂದು ಸಾಮಾಜಿಕ ಬದಲಾವಣೆಗೆ ಕಾರಣವೂ ಹೌದು. ಭವಿಷ್ಯದಲ್ಲಿ ಅಸಾಧಾರಣ ಅವಕಾಶಗಳನ್ನು ಸೃಷ್ಟಿಸಬಹುದಾದ ಈ ಸಲಕರಣೆ, ಬೆದರಿಕೆಯನ್ನೂ ಒಡ್ಡುತ್ತಿದೆ’ ಎನ್ನುವುದು ಅವರ ಎಚ್ಚರಿಕೆಯ ನುಡಿ.

₹4 ಲಕ್ಷ ಕೋಟಿ ವಹಿವಾಟು ನಡೆಸಲಿರುವ ಜನರೇಟಿವ್ ಎಐ

ಕೃತಕ ಬುದ್ಧಿಮತ್ತೆ ಎಂಬ ಮಾರುಕಟ್ಟೆಯು 2030ರ ಹೊತ್ತಿಗೆ ₹1.62 ಲಕ್ಷ ಕೋಟಿಯಷ್ಟು ದೊಡ್ಡ ಮಾರುಕಟ್ಟೆಯಾಗಿ ಬೆಳೆಯಲಿದೆ. ಇದು ಜಾಗತಿಕ ಜಿಡಿಪಿಗೆ ₹14 ಲಕ್ಷ ಕೋಟಿಯಷ್ಟು ಕೊಡುಗೆ ನೀಡಲಿದೆ. ಜನರೇಟಿವ್ ಎಐ ಎಂಬ ಕ್ಷೇತ್ರವು ವಾರ್ಷಿಕ ₹2.3 ಲಕ್ಷ ಕೋಟಿಯಿಂದ ₹3.9 ಲಕ್ಷ ಕೋಟಿಯಷ್ಟು ವಹಿವಾಟು ನಡೆಸಲಿದೆ ಎಂದೇ ಅಂದಾಜಿಸಲಾಗಿದೆ. ಅಂದರೆ ಭಾರತದ ತಂತ್ರಜ್ಞಾನ ಕ್ಷೇತ್ರದಲ್ಲೇ ಹೊಸ ಶಕೆ ಆರಂಭವಾಗಲಿದೆ. ಕೋಡಿಂಗ್, ಟೆಸ್ಟಿಂಗ್, ಗ್ರಾಹಕರ ಬೆಂಬಲ, ಅನಲಿಟಿಕ್ಸ್ ಮತ್ತು ಹಣಕಾಸು ವ್ಯವಹಾರಗಳೂ ಸ್ವಯಂ ಚಾಲಿತವಾಗಲಿವೆ’ ಎನ್ನುವುದು ಅವರ ಅಂದಾಜು.

ಭಾರತದ ಐಟಿ ದಿಗ್ಗಜ ಕಂಪನಿಗಳಾದ ಟಿಸಿಎಸ್, ಇನ್ಫೊಸಿಸ್, ವಿಪ್ರೊ, ಎಚ್‌ಸಿಎಲ್‌ನಂತಹ ಕಂಪನಿಗಳೂ ಈಗ ಕೃತಕ ಬುದ್ಧಿಮತ್ತೆ ಆಧಾರಿತ ಕಾರ್ಯಚಟುವಟಿಕೆಗಳನ್ನು ತಮ್ಮೆಲ್ಲಾ ವಿಭಾಗಗಳಲ್ಲೂ ಅಳವಡಿಸಿಕೊಳ್ಳಲಿವೆ. ಐಟಿ ಸೇವಾ ಕಂಪನಿಗಳಾಗಿದ್ದ ಇವುಗಳು ಜಾಗತಿಕ ಎಐ ಕೇಂದ್ರಗಳಾಗಿ ಪರಿವರ್ತನೆ ಹೊಂದಲಿವೆ.

‘ಹಾಗಾದರೆ ಕೃತಕ ಬುದ್ಧಿಮತ್ತೆ ಸರ್ವಾಂತರ್ಯಾಮಿಯಾಗಲಿದೆ ಎಂಬ ಮಾತೂ ನಿಜವಲ್ಲ. ಏಕೆಂದರೆ ವ್ಯಕ್ತಿಯ ಸೃಜನಶೀಲತೆ ಎಂಬುದು ಕೃತಕ ಬುದ್ಧಿಮತ್ತೆಗಿಂತಲೂ ಹೆಚ್ಚು ಬೇಡಿಕೆಯುಳ್ಳ ಕ್ಷೇತ್ರವಾಗಿದೆ. ಇದು ಈಗಾಗಲೇ ₹2.7 ಲಕ್ಷ ಕೋಟಿಯಷ್ಟು ವ್ಯವಹಾರ ಹೊಂದಿದೆ. ಸೃಜನಶೀಲತೆಗೆ ಕೃತಕ ಬುದ್ಧಿಮತ್ತೆಯ ಬಲ ಸಿಕ್ಕರೆ ಉದ್ಯಮಗಳ ಜಿಗಿತ ನೂರ್ಮಡಿಯಾಗಲಿದೆ’ ಎಂಬುದು ಮದನ್ ಅವರ ಲೆಕ್ಕಾಚಾರ.

‘ಸದ್ಯದ ತಂತ್ರಜ್ಞಾನ ಜಗತ್ತಿನಲ್ಲಿ ಜ್ಞಾನಕ್ಕೆ ಸಂಬಂಧಿಸಿದ ಶೇ 60ರಿಂದ ಶೇ 70ರಷ್ಟು ಕೆಲಸಗಳು ಕೃತಕ ಬುದ್ಧಿಮತ್ತೆಯನ್ನೇ ಆಧರಿಸಿದೆ. ಇದು ಕಾನೂನು ಕ್ಷೇತ್ರದಿಂದ ಔಷಧ ಕ್ಷೇತ್ರದವರೆಗೂ ವ್ಯಾಪಿಸಿದೆ. ಒಬ್ಬ ಶತಕೋಟಿ ಉದ್ದಿಮೆದಾರನಾಗುವುದರಿಂದ ಹಿಡಿದು, ಎಐ ಮನೋವಿಜ್ಞಾನಿ, ಆರೋಗ್ಯ, ಔಷಧ, ಲೆಕ್ಕಪರಿಶೋಧನೆ, ಕಾನೂನು, ತಯಾರಿಕೆ ಕ್ಷೇತ್ರ ಮತ್ತು ಸಾರಿಗೆ, ಶಿಕ್ಷಣವನ್ನು ಸಾಮರ್ಥ್ಯಕ್ಕೆ ಪರಿವರ್ತಿಸಬಲ್ಲ ಸಾಧನವಾಗಿಯೂ ಇದು ರೂಪುಗೊಳ್ಳಲಿದೆ’ ಎನ್ನುವರು.

ಕೃತಕ ಬುದ್ಧಿಮತ್ತೆ ಹೇಗೆಲ್ಲಾ ನೆರವಾಗಬಹುದು...?

ಮನುಷ್ಯನ ಕಲಿಕೆಯ ಗುಣಗಳಾದ ಓದು, ತರ್ಕಶಕ್ತಿ, ಸಮಸ್ಯೆಗೆ ಪರಿಹಾರ ಕಂಡುಕೊಳ್ಳುವ ಗುಣ ಮತ್ತು ನಿರ್ಧಾರ ತೆಗೆದುಕೊಳ್ಳುವ ಶಕ್ತಿಯನ್ನೇ ಆಧರಿಸಿ ಕೃತಕ ಬುದ್ಧಿಮತ್ತೆಯನ್ನು ತಂತ್ರಜ್ಞರು ಅಭಿವೃದ್ಧಿಪಡಿಸಿದ್ದಾರೆ. ಉದ್ಯಮಗಳಲ್ಲಿ ಇದರ ಬೆಳವಣಿಗೆ ಮತ್ತು ಅಳವಡಿಕೆಯು ಒಂದೆಡೆ ಆಶಾವಾದ ಹಾಗೂ ಮತ್ತೊಂದೆಡೆ ಆತಂಕವನ್ನು ಉಂಟು ಮಾಡಿದೆ. ಸಾಮಾಜಿಕ, ಆರ್ಥಿಕ ಮತ್ತು ಆಡಳಿತದ ಮೇಲೂ ಪರಿಣಾಮ ಬೀರಬಹುದು ಎಂಬ ಪ್ರಶ್ನೆ ಮೂಡಿಸಿದೆ ಎಂದು ಲಂಡನ್‌ನಲ್ಲಿ ನೆಲೆಸಿರುವ ಮೈಂಡ್ ಡೈನಾಮಿಕ್ಸ್ ಇಂಟರ್‌ನ್ಯಾಷನಲ್ ಕಂಪನಿಯ ನಿರ್ದೇಶಕ ಹಾಗೂ ಕೃತಕ ಬುದ್ಧಿಮತ್ತೆ ವಿಷಯದಲ್ಲಿ ಸಂಶೋಧನೆ ನಡೆಸುತ್ತಿರುವ ಹುಬ್ಬಳ್ಳಿ ಮೂಲದ ವಿವೇಕ್ ತೋಂಟದಾರ್ಯ ಹಾಗೂ ಅವರ ಪತ್ನಿ ವೀಣಾ ಯಸ್ಲೂರ್ ಅವರ ಅನಿಸಿಕೆ.

ವಿವಿಧ ಕ್ಷೇತ್ರಗಳನ್ನು ಗಮನಿಸುವುದಾದರೆ, ಕೃತಕ ಬುದ್ಧಿಮತ್ತೆ ಅಳವಡಿಸಿಕೊಳ್ಳುವುದರಿಂದ ಆರೋಗ್ಯ ಕ್ಷೇತ್ರದಲ್ಲಿ ತ್ವರಿತ ಮತ್ತು ನಿಖರ ಚಿಕಿತ್ಸೆ ಸಾಧ್ಯ. ಹಣಕಾಸು ಕ್ಷೇತ್ರದಲ್ಲಿ ವಂಚನೆ ಮತ್ತು ಅಪಾಯಗಳನ್ನು ಬೇಗನೆ ಗುರುತಿಸಿ ಸೋರಿಕೆ ತಡೆಗಟ್ಟಬಹುದು. ಕಾನೂನು ಕ್ಷೇತ್ರದಲ್ಲಿ ಪ್ರಕರಣದ ಅಧ್ಯಯನ, ದಾಖಲಾತಿ ತ್ವರಿತವಾಗಿ ಆಗಲಿದೆ. ಮಷಿನಲ್ ಲರ್ನಿಂಗ್ ಮೂಲಕ ನೂರಾರು ಪುಟಗಳ ದಾಖಲೆಗಳನ್ನು ಕೆಲವೇ ಕ್ಷಣಗಳಲ್ಲಿ ಓದಿ ಸಂಕ್ಷಿಪ್ತವಾಗಿ ವಿವರಿಸಲು ಸಾಧ್ಯವಿದೆ. ತಯಾರಿಕಾ ವಲಯ, ಸಾರಿಗೆ ಮತ್ತು ಸಂಶೋಧನಾ ಕ್ಷೇತ್ರ, ಸ್ವಯಂ ಚಾಲಿತ ವಾಹನ, ಡ್ರೋನ್‌ಗಳ ನಿರ್ವಹಣೆಯಿಂದ ರಕ್ಷಣಾ ಇಲಾಖೆಗೂ ನೆರವಾಗಲಿದೆ. ಶಿಕ್ಷಣ, ಮಾಧ್ಯಮಗಳಲ್ಲೂ ಇದರ ಬಳಕೆ ಪರಿಣಾಮಕಾರಿ.

ವಾರ್ಷಿಕ 250 ಶತಕೋಟಿ ಡಾಲರ್‌ನಷ್ಟು ವಹಿವಾಟನ್ನು ಭಾರತದ ಐಟಿ ಮತ್ತು ಬಿಪಿಒ ಕ್ಷೇತ್ರ ಹೊಂದಿದೆ. ಇದರ ಹಲವು ವಿಭಾಗಗಳು ಕೃತಕ ಬುದ್ಧಿಮತ್ತೆಯಿಂದ ಸಕಾರಾತ್ಮಕ ಹಾಗೂ ನಕಾರಾತ್ಮಕ ಪರಿಣಾಮಗಳನ್ನು ಎದುರಿಸಬಹುದು. ಆದರೆ ಕೃತಕ ಬುದ್ಧಿಮತ್ತೆಯಿಂದ ಉದ್ಯಮ, ಉದ್ಯೋಗ ಹಾಗೂ ಸಮಾಜದಲ್ಲಿ ಬಹಳಷ್ಟು ಉತ್ತಮ ಬದಲಾವಣೆಗಳಾಗಲಿವೆ’ ಎನ್ನುವುದು ಅವರ ಮಾತು.

ಎಐನಿಂದ ಉಂಟಾಗಬಹುದಾದ ಅಪಾಯಗಳೇನು?

ಅತಿ ಹೆಚ್ಚು ವಾಟ್ಸ್‌ಆ್ಯಪ್ ಬಳಕೆದಾರರು ಭಾರತದಲ್ಲಿದ್ದಾರೆ. ಕಾರ್ಪೊರೇಟ್ ಕಂಪನಿಗಳು ಮಾಧ್ಯಮಗಳ ಮಾಲೀಕತ್ವ ಹೊಂದಿವೆ. ಧರ್ಮಾಧಾರಿತ ಸಂಘರ್ಷಗಳು ಸಾಮಾನ್ಯ ಎಂಬಂತಾಗಿದೆ. ಡಿಜಿಟಲ್ ಜ್ಞಾನ ಇನ್ನೂ ವ್ಯಾಪಿಸಬೇಕಿದೆ. ಇಂಥ ಪರಿಸ್ಥಿತಿಯಲ್ಲಿ ಸುಳ್ಳು ಮಾಹಿತಿ ಹರಡಲು ಕೃತಕ ಬುದ್ಧಿಮತ್ತೆ ಬಳಸುವ ಅಪಾಯ ದೊಡ್ಡದಾಗಿದೆ.

ಮನುಷ್ಯರೇ ತಮ್ಮ ಕೆಲಸಗಳನ್ನು ಯಂತ್ರಗಳಿಗೆ ಒಪ್ಪಿಸಿದರೆ ಏಕಾಗ್ರತೆ, ಹೊಸ ಆಲೋಚನೆ, ತಮ್ಮದೇ ಆದ ರಚನಾತ್ಮಕ ಕೆಲಸಗಳು ಮರೆಯಾಗುವ ಅಪಾಯವಿದೆ.

ತಯಾರಿಕೆ, ಚಿಲ್ಲರೆ, ಸರಕು ಸಾಗಣೆ ಮತ್ತು ಬಿಪಿಒ ಮಾದರಿಯ ಏಕತಾನತೆಯುಳ್ಳ ನೌಕರಿಗಳನ್ನು ಕೃತಕ ಬುದ್ಧಿಮತ್ತೆ ಆವರಿಸಲಿದೆ. ಇದರಿಂದ ಉದ್ಯೋಗಗಳ ಸ್ವರೂಪ ಬದಲು ಹಾಗೂ ಅಸಮಾನತೆ ಸೃಷ್ಟಿಯಾಗಲಿದೆ.

ಕೃತಕ ಬುದ್ಧಿಮತ್ತೆಗೆ ಸಂಬಂಧಿಸಿದಂತೆ ಜಗತ್ತಿನ ವಿವಿಧ ರಾಷ್ಟ್ರಗಳು ತಮ್ಮದೇ ಆದ ನೀತಿಯನ್ನು ಹೊಂದಿವೆ. ಇದರಲ್ಲಿ ಬ್ರಿಟನ್ ಮತ್ತು ಐರೋಪ್ಯ ಒಕ್ಕೂಟದಲ್ಲಿ ಎಐ ಸಮಿತಿ ಹಾಗೂ ಸಿಡಿಇಐ ಎಂಬುದು ನೈತಿಕತೆ, ಪಾರದರ್ಶಕತೆ ಮತ್ತು ಹೊಣೆಗಾರಿಕೆ ಕುರಿತು ಹೇಳುತ್ತದೆ. ಐರೋಪ್ಯ ಒಕ್ಕೂಟದ ಡಿಜಿಟಲ್ ಸೇವಾ ಕಾಯ್ದೆಯಡಿ ಕಠಿಣ ನಿಯಮಗಳನ್ನು ಜಾರಿಗೆ ತಂದಿದೆ. ಉಲ್ಲಂಘಿಸಿದರೆ ಭಾರಿ ದಂಡ ವಿಧಿಸಲು ಇದರಲ್ಲಿ ಅವಕಾಶವಿದೆ.

‘ಎಲ್ಲರಿಗೂ ಎಐ’ ಎಂಬ ದೂರದೃಷ್ಟಿಯನ್ನು ಭಾರತದ ನೀತಿ ಆಯೋಗ ಪ್ರಕಟಿಸಿದೆ. ಸಮಾನವಾದ ಬೆಳವಣಿಗೆ ಮತ್ತು ಜವಾಬ್ದಾರಿಯುತ ಬಳಕೆಗೆ ಇದರಲ್ಲಿ ಒತ್ತು ನೀಡಲಾಗಿದೆ.

ಹೀಗಾಗಿ ಭವಿಷ್ಯವು ಅಲ್ಗಾರಿದಮ್ ಮೇಲಲ್ಲ, ಮನುಷ್ಯನ ಆಲೋಚನಾ ಶಕ್ತಿಯ ಮೇಲೆ, ನೈತಿಕತೆ ಮತ್ತು ಆಡಳಿತದ ಮೇಲೆ ಅವಲಂಬಿತವಾಗಿದೆ. ಭವಿಷ್ಯದ ಪೀಳಿಗೆಯು ತಮ್ಮ ಆಲೋಚನಾ ಶಕ್ತಿಯನ್ನು ಹೆಚ್ಚಿಸಿಕೊಳ್ಳುವುದರ ಜತೆಗೆ, ನೈತಿಕತೆ, ವ್ಯವಸ್ಥೆ ಕುರಿತು ಕಲ್ಪನೆ ಹೊಂದಿದಲ್ಲಿ, ತಮ್ಮಲ್ಲಿರುವ ಜ್ಞಾನದ ಜತೆಗೆ, ಪೂರಕವಾದ ಮತ್ತೊಂದು ಕ್ಷೇತ್ರದ ಜ್ಞಾನವನ್ನೂ ಹೊಂದಿರಬೇಕಾದ್ದು ಕಡ್ಡಾಯ.

ಎಐ, ಜನರೇಟಿವ್ ಎಐ ಏನೇ ಬಂದರೂ ಕಸಿದುಕೊಳ್ಳಲಾಗದ ಉದ್ಯೋಗಗಳನ್ನೂ ತಂತ್ರಜ್ಞರು ಪಟ್ಟಿ ಮಾಡಿದ್ದಾರೆ. ತಜ್ಞ ವ್ಯಕ್ತಿಯ ಅಗತ್ಯವಿರುವ ವೈದ್ಯರು, ಶಸ್ತ್ರಚಿಕಿತ್ಸಕರು, ದುರಸ್ತಿ ಕೆಲಸ ಮಾಡುವವರು, ಸ್ವಾಸ್ಥ್ಯ ಮತ್ತು ಆರೈಕೆ ಕ್ಷೇತ್ರದಲ್ಲಿ ಕೆಲಸ ಮಾಡುವವರ ಅಗತ್ಯ ಸದಾ ಇದ್ದೇ ಇರುತ್ತದೆ.

ಆಹಾರ, ದೂರದೃಷ್ಟಿ, ಸೂಕ್ತ ನಿರ್ಧಾರ ಮತ್ತು ಸಂಬಂಧ ಈ ಮೂರು ವಿಷಯಗಳನ್ನು ನಿರ್ವಹಿಸುವ ವೃತ್ತಿಗಳಾದ ಕೃಷಿ, ಸ್ಟ್ರಾಟಜಿಸ್ಟ್, ಕ್ಲೈಂಟ್ ಮ್ಯಾನೇಜ್ಮೆಂಟ್, ಕ್ರಿಯೇಟಿವ್ ಲೀಡರ್‌ಶಿಪ್, ಶಿಕ್ಷಕರು, ಮಾರ್ಗದರ್ಶಕರು ಇವು ಇದ್ದೇ ಇರುತ್ತವೆ.


ಕಂಪನಿಗಳು ಅಳಿದರೂ ತಂತ್ರಜ್ಞಾನ ಉಳಿಯಲಿದೆ

3ರಿಂದ 6 ತಿಂಗಳ ಒಳಗಾಗಿ ಶೇ 90ರಷ್ಟು ಕೋಡಿಂಗ್ ಕೆಲಸವನ್ನು ಎಐ ವಹಿಸಿಕೊಳ್ಳಲಿದೆ ಎಂದಿದ್ದ (ಮಾರ್ಚ್ 2025) ಆಂಥ್ರೊಪಿಕ್ ಸಿಇಒ ಡೇರಿಯೊ ಅಮೋಡಿ ಅವರ ಮಾತು ಈವರೆಗೂ ನಡೆದಿಲ್ಲ. ಒಂದೊಮ್ಮೆ ಅವರ ಮಾತುಗಳು ನಿಜವಾಗಿದ್ದರೆ 6 ಲಕ್ಷ ಉದ್ಯೋಗಿಗಳನ್ನು ಹೊಂದಿರುವ ಟಿಸಿಎಸ್ ಈವರೆಗೂ 4.4 ಲಕ್ಷ ನೌಕರರನ್ನು ವಜಾಗೊಳಿಸಬೇಕಿತ್ತು. ಆದರೆ ಈವರೆಗೂ ಕಂಪನಿ 12 ಸಾವಿರ ನೌಕರರನ್ನು ಮಾತ್ರ ತೆಗೆದುಹಾಕಿದೆ ಎಂಬುದು ತಂತ್ರಜ್ಞಾನ ಪಂಡಿತರ ಲೆಕ್ಕಾಚಾರ.

ಚಾಟ್‌ಜಿಪಿಟಿ ಪ್ರವೇಶದ ನಂತರ ಕೃತಕ ಬುದ್ಧಿಮತ್ತೆ ಎಂಬ ಅತ್ಯಾಧುನಿಕ ತಂತ್ರಜ್ಞಾನವು ಸಾಕಷ್ಟು ಸದ್ದು ಮಾಡುತ್ತಿದೆ. ಬಹಳಷ್ಟು ಕಂಪನಿಗಳು ಮುನ್ನೆಲೆಗೆ ಬಂದಿವೆ. ಸಿಇಒಗಳೂ ಸಾಕಷ್ಟು ದೊಡ್ಡ ವಾಗ್ದಾನಗಳನ್ನು ಮಾಡುತ್ತಿದ್ದಾರೆ. ಕೃತಕ ಬುದ್ಧಿಮತ್ತೆಯೂ ಈಗ ಉತ್ತುಂಗದಲ್ಲಿದೆ. ಡಾಟಾ ಸೆಂಟರ್, ಸರ್ವರ್ ಇತ್ಯಾದಿಗಳನ್ನು ಒಳಗೊಂಡು ಮೂಲಸೌಕರ್ಯಕ್ಕೆ 2018ರಲ್ಲಿ 100 ಶತಕೋಟಿ ಅಮೆರಿಕನ್ ಡಾಲರ್ ಹೂಡಿಕೆ ಕಂಡಿದ್ದ ಈ ಉದ್ಯಮ, 2026ರ ಹೊತ್ತಿಗೆ 500 ಶತಕೋಟಿ ಡಾಲರ್‌ಗೆ ತಲುಪಲಿದೆ ಎಂದು ಅಂದಾಜಿಸಲಾಗಿದೆ. ಆದರೆ ಇದರಿಂದ ಈವರೆಗೂ ಬಂದ ಆದಾಯ 12 ಶತಕೋಟಿ ಡಾಲರ್ ಮಾತ್ರ ಎಂಬುದು ಬೆರಗು ಮೂಡಿಸುತ್ತದೆ.

90ರ ದಶಕದ ಜೈವಿಕ ತಂತ್ರಜ್ಞಾನ, 2000ದಲ್ಲಿ ಮುನ್ನೆಲೆಗೆ ಬಂದ ಇಂಟರ್‌ನೆಟ್, 2008ರಲ್ಲಿ ಉಂಟಾಗಿದ್ದ ಬ್ಯಾಂಕಿಂಗ್ ಕ್ಷೇತ್ರ ಹಾಗೂ ಈಗಿನ ಕೃತಕ ಬುದ್ಧಿಮತ್ತೆವರೆಗೂ ನೀರ್ಗುಳ್ಳೆಗಳು ಏಳುತ್ತಲೇ ಇವೆ. ಆಯಾ ಸಂದರ್ಭದಲ್ಲಿ ಅವುಗಳು ಸಾಕಷ್ಟು ಸದ್ದು ಮಾಡುತ್ತವೆ. ಯೋಜನೆಗಳೇ ಇಲ್ಲದೆ ಹಲವು ಕಂಪನಿಗಳು ಹುಟ್ಟಿಕೊಳ್ಳುತ್ತವೆ. ಬಹಳಷ್ಟು ಉದ್ಯಮಿಗಳು ಹಣ ಹೂಡುತ್ತಾರೆ. ಅಂತಿಮವಾಗಿ ಗುಳ್ಳೆ ಒಡೆಯುತ್ತದೆ. ಹುಸಿ ಕಂಪನಿಗಳು ದಿವಾಳಿಯಾಗುತ್ತವೆ. ಆದರೆ ಜೈವಿಕ ತಂತ್ರಜ್ಞಾನದಿಂದ ಕೃತಕ ಬುದ್ಧಿಮತ್ತೆವರೆಗೂ ತಂತ್ರಜ್ಞಾನ ಮಾತ್ರ ಶಾಶ್ವತವಾಗಿ ಉಳಿಯುತ್ತದೆ. ಅವುಗಳಿಗೆ ಮೂಲಧಾತುವಾದ ಸೃಜನಶೀಲತೆ ಎಂಬುದಷ್ಟೇ ಸತ್ಯ ಎಂಬುದು ಅಮೆಜಾನ್ ಕಂಪನಿಯ ಮುಖ್ಯಸ್ಥ ಜೆಫ್ ಬೆಜೋಸ್ ಅವರ ಮಾತು.

ಪರಿಕಲ್ಪನೆ: ಯತೀಶ್ ಕುಮಾರ್ ಜಿ. ಡಿ



ಎಐ ಚಿತ್ರ: ಕಣಕಾಲಮಠ



‘ಕೃತಕ ಬುದ್ಧಿಮತ್ತೆ ನೌಕರಿಯನ್ನು ಕಸಿದುಕೊಳ್ಳುವುದಿಲ್ಲ. ಆದರೆ ಕೃತಕ ಬುದ್ಧಿಮತ್ತೆ ಬಲ್ಲ ವ್ಯಕ್ತಿ ಇತರರ ನೌಕರಿಯನ್ನು ಕಿತ್ತುಕೊಳ್ಳಬಲ್ಲ. ಕೃತಕ ಬುದ್ಧಿಮತ್ತೆ ಎಂಬುದು ದೇವರಲ್ಲ. ಅದೊಂದು ಮನುಷ್ಯನೇ ನಿರ್ಮಿಸಿದ ವಿನ್ಯಾಸ. ಇದು ಸಮಾಜವನ್ನು ಮೇಲ್ಮಟ್ಟಕ್ಕೆ ಏರಿಸುತ್ತದೆಯೇ ಹೊರತು, ವಿಭಜಿಸುವುದಿಲ್ಲ. ಕ್ರಿಯಾತ್ಮಕ ಆಲೋಚನೆಯನ್ನು ಇನ್ನಷ್ಟು ವೃದ್ಧಿಸುತ್ತದೆ. ಬಹುತ್ವವನ್ನು ಇನ್ನಷ್ಟು ಬಲಿಷ್ಠಗೊಳಿಸುತ್ತದೆ

ಡಾ. ಮದನ ಕುಮಾರ್ ಶ್ರೀನಿವಾಸನ್, ಸಿಇಒ ವೈಸ್‌ವರ್ಕ್, ಬೆಂಗಳೂರು



ಕೃತಕ ಬುದ್ಧಿಮತ್ತೆಯಿಂದ ಜನರ ಬದುಕು ಇನ್ನಷ್ಟು ಉತ್ತಮವಾಗಲಿದೆ. ಆದರೆ ಇದರ ಬಳಕೆ ಮನುಕುಲಕ್ಕೆ ಪೂರಕವಾಗಿರಬೇಕು. ಉದ್ಯೋಗ ಸೃಜಿಸುವಂತಿರಬೇಕು, ಜನರ ಜೀವನ ಮಟ್ಟ ಇನ್ನಷ್ಟು ಉತ್ತಮವಾಗುವಂತಿರಬೇಕು.

ಕೆ.ಆರ್. ಶಿವರಾಮ್, ಸಿಇಒ ಹಾಗೂ ಸಹ ಸಂಸ್ಥಾಪಕ, ಇನ್ನರ್‌ವರ್ಸ್ ಟೆಕ್, ಬೆಂಗಳೂರು



ಕೃತಕ ಬುದ್ಧಿಮತ್ತೆಯಿಂದ ಉತ್ಪಾದಕತೆ, ಸೇವಾ ವಲಯ, ಸಂಶೋಧನೆಗಳು ಇನ್ನಷ್ಟು ಉತ್ತಮವಾಗಲಿವೆ. ಮನುಷ್ಯರ ಸಾಮರ್ಥ್ಯವನ್ನು ಹೆಚ್ಚಿಸುವ ಮೂಲಕ ಸಮ ಸಮಾಜ ನಿರ್ಮಾಣ ಮತ್ತು ಆರ್ಥಿಕ ಪ್ರಗತಿಗೆ ಕಾರಣವಾಗಲಿದೆ’


ವಿವೇಕ್ ತೋಂಟದಾರ್ಯ, ನಿರ್ದೇಶಕ, ಮೈಂಡ್ ಡೈನಾಮಿಕ್ಸ್ ಇಂಟರ್‌ನ್ಯಾಷನಲ್, ಲಂಡನ್

ಉದ್ಯೋಗ ನಷ್ಟ– ಗೋಲ್ಡ್‌ಮನ್ ಸ್ಯಾಕ್ಸ್ ವರದಿ

ಕೃತಕ ಬುದ್ಧಿಮತ್ತೆ ಪ್ರವೇಶದಿಂದ ಕೆಲ ಉದ್ಯೋಗಗಳು ರದ್ದಾಗಲಿವೆ. ಇನ್ನೂ ಕೆಲವು ಹುದ್ದೆಗಳನ್ನು ಸೃಜಿಸಲಿವೆ. ಯಾವೆಲ್ಲಾ ಕ್ಷೇತ್ರಗಳನ್ನು ಬಾಧಿಸಲಿದೆ ಎಂದು ಅಮೆರಿಕದ ಬಹುರಾಷ್ಟ್ರೀಯ ಹೂಡಿಕೆ ಬ್ಯಾಂಕ್ ಮತ್ತು ಹಣಕಾಸು ಸೇವೆಗಳ ಸಂಸ್ಥೆ ಗೋಲ್ಡ್‌ಮನ್ ಸ್ಯಾಕ್ಸ್ ತನ್ನ ವರದಿಯಲ್ಲಿ ಹೇಳಿದೆ.

ಇದರಲ್ಲಿ ಪ್ರಮುಖವಾಗಿ ಕನ್ಸಲ್ಟಿಂಗ್, ಕಚೇರಿ ಕಾರ್ಯಕಲಾಪಗಳ ನಿರ್ವಹಣೆ ಮಾಡುವ ಅಡ್ಮಿನ್‌ಗಳು, ಕಾಲ್‌ಸೆಂಟರ್ ನೌಕರಿಗಳು ಮರೆಯಾಗಲಿವೆ ಎಂದಿದೆ.

ಗುಂಡಣ್ಣ



25 ವರ್ಷಗಳ ಹಿಂದೆ

ಗುರುವಾರ, 4-1-2001

● ಅಂಗನವಾಡಿ ಕಟ್ಟಡಕ್ಕಾಗಿ ರೂ.5 ಕೋಟಿ ಬಿಡುಗಡೆ

ಬೆಂಗಳೂರು, ಜ.3– ರಾಜ್ಯದ ಎಲ್ಲ ಅಂಗನವಾಡಿ ಕೇಂದ್ರಗಳಿಗೆ ಮುಂದಿನ ಎರಡು ಮೂರು ವರ್ಷಗಳಲ್ಲಿ ಕಟ್ಟಡ ನಿರ್ಮಿಸಲು ಸರ್ಕಾರ ಕ್ರಮ ತೆಗೆದುಕೊಂಡಿದ್ದು, ಅದಕ್ಕಾಗಿ ಈ ವರ್ಷ ಐದು ಸಾವಿರ ಕೇಂದ್ರಗಳಿಗೆ ಕಟ್ಟಡ ಕಟ್ಟಲು ರೂ 5 ಕೋಟಿ ಬಿಡುಗಡೆ ಮಾಡಿದೆ ಎಂದು ಮಹಿಳಾ ಮತ್ತು ಮಕ್ಕಳ ಕಲ್ಯಾಣ ಸಚಿವೆ ಮೋಟಮ್ಮ ಇಂದು ಇಲ್ಲಿ ತಿಳಿಸಿದರು.

ರಾಜ್ಯದ 40 ಸಾವಿರ ಅಂಗನವಾಡಿ ಕೇಂದ್ರಗಳ ಪೈಕಿ 16 ಸಾವಿರ ಕೇಂದ್ರಗಳಿಗೆ ಸ್ವಂತ ಕಟ್ಟಡಗಳಿಲ್ಲ. ಪ್ರತಿಯೊಂದು ಕಟ್ಟಡವನ್ನು ಸುಮಾರು ರೂ1.25 ಲಕ್ಷ ವೆಚ್ಚದಲ್ಲಿ ಕಟ್ಟಲಾಗುತ್ತದೆ ಎಂದು ಸಚಿವರು ತಿಳಿಸಿದರು.

75 ವರ್ಷಗಳ ಹಿಂದೆ

ಗುರುವಾರ, 4-1-1951

● ಪ್ರಧಾನಿ ಪಂಡಿತ್ ನೆಹ್ರೂ ಲಂಡನ್ನಿಗೆ ಆಗಮನ

ಲಂಡನ್, ಜ.3– ‘‘ಕಾಮನ್ವೆಲ್ತ್ ಪ್ರಧಾನಿಗಳ ಸಮ್ಮೇಳನದ ಕಾರ್ಯಕ್ರಮದ ಪಟ್ಟಿಯಲ್ಲಿ ಅಂತರರಾಷ್ಟ್ರೀಯ ಪರಿಸ್ಥಿತಿ ಪರಿಶೀಲನೆಯೇ ಇರುವುದೆಂದು ಭಾವಿಸುತ್ತೇನೆ’’ ಎಂಬುದಾಗಿ ಬುಧವಾರ ಮಧ್ಯಾಹ್ನ ಲಂಡನ್ನಿಗೆ ಆಗಮಿಸಿದ ಭಾರತದ ಪ್ರಧಾನಿ ಪಂಡಿತ್ ಜವಾಹರಲಾಲ್ ನೆಹ್ರೂ ಅವರು ಪತ್ರಿಕಾ ಪ್ರತಿನಿಧಿಗೆ ತಿಳಿಸಿದರು.

ಲಂಡನ್ ವಿಮಾನ ನಿಲ್ದಾಣದಲ್ಲಿ ಅಮೆರಿಕನ್ ವಿಮಾನವೊಂದು ಅಪಘಾತಕ್ಕೀಡಾದ ಕಾರಣ ಪಂಡಿತ್ ನೆಹ್ರೂ ಅವರ ವಿಮಾನವು ಲಂಡನ್ ವಿಮಾನ ನಿಲ್ದಾಣದಿಂದ 100 ಮೈಲಿ ದೂರದಲ್ಲೇ ಇಳಿಯಿತು.

ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ. ಕಮ್ಮರಡಿ

04 ಜನವರಿ 2026 ಭಾನುವಾರ ಶ್ರೀ ವಿಶ್ವಾವಸು ನಾಮ ಸಂವತ್ಸರ ದಕ್ಷಿಣಾಯನ ಹೇಮಂತ ಋತು ತಿಥಿ: ಪೌಷ ಕೃಷ್ಣ ಪ್ರತಿಪದ್ ಗಂ 12-31 **ನಕ್ಷತ್ರ:** ಪುನರ್ವಸು ಗಂ 15-12 **ಯೋಗ:** ವೈಧೃತಿ **ಗಂ.** 25-48 ಕರಣ: ಕೌಲವ ಗಂ. 12-31 ಧನು ಮಾಸದ 20 ನೇ ದಿನ. **ಮಳೆ ನಕ್ಷತ್ರ:** ಪೂರ್ವಾಷಾಢ 2 ನೇ ಪಾದ. **ರಾಹುಕಾಲ:** ಸಾಯಂಕಾಲ 04-30 - 06-00 **ಸೂರ್ಯೋದಯ:** 06-58 **ಸೂರ್ಯಾಸ್ತ:** 06-13 **ಮುಸ್ಲಿಂ ದಿನಾಂಕ:** 14 ರಜಬ್ **ಅದೃಷ್ಟ ಸಂಖ್ಯೆ:** 4, 1

ಮೇಷ: ದೇಹಕ್ಕೆ ಅತಿಯಾದ ಶ್ರಮವಾದರೂ ಇಷ್ಟ ಪ್ರಾಪ್ತಿಗಾಗಿ ಕಾರ್ಯವನ್ನು ಸಾಧಿಸಿದ ಸಂತೋಷ ಇರುವುದು. ತಾಯಿಯವರ ಆರೋಗ್ಯ ಸುಧಾರಿಸಿ ಆಸ್ಪತ್ರೆಯಿಂದ ಮನೆಗೆ ಬರುವಂತಾಗಲಿದೆ.

ವೃಷಭ: ಔದ್ಯೋಗಿಕ ವಿದ್ಯಾರ್ಥಿಗಳು ಹೆಚ್ಚಿನ ಶ್ರಮದಿಂದ ಉತ್ತಮ ಅಂಕಗಳನ್ನು ಗಳಿಸುವಲ್ಲಿ ಯಶಸ್ವಿಯಾಗುವಿರಿ. ಸತ್ಕಾರ್ಯಗಳಲ್ಲಿ ಆದಾಯವನ್ನು ಮೀರಿ ಖರ್ಚುಗಳಿದ್ದರೂ ಚಿಂತಿಸುವ ಅಗತ್ಯವಿಲ್ಲ.

ಮಿಥುನ: ಸಂಘದಲ್ಲಿ ನಾಯಕತ್ವವನ್ನು ವಹಿಸುತ್ತಿರುವುದರಿಂದ ತಪ್ಪುಗಳಿಗೆ ನೇರವಾಗಿ ಅಲ್ಲದಿದ್ದರೂ ಹೊಣೆಗಾರಿಕೆ ನಿಮ್ಮದೂ ಸಹ ಆಗಿರುತ್ತದೆ. ನಿಮ್ಮ ಪ್ರಯತ್ನಗಳಿಗೆ ವ್ಯಕ್ತಿಯೊಬ್ಬರ ಬೆಂಬಲ ದೊರೆತು ಯಶಸ್ವಿಯಾಗಿ ನೆರವೇರಲಿದೆ.

ಕರ್ಕಾಟಕ: ಇಂದಿನ ದಿನದ ಪರಿಸ್ಥಿತಿಗಳನ್ನು ನೀವು ನಿಮ್ಮ ಅನುಕೂಲಕ್ಕೆ ತಕ್ಕಂತೆ ರೂಪಿಸಿಕೊಳ್ಳುವ ಪ್ರಯತ್ನದಲ್ಲಿ ಸಫಲರಾಗುವಿರಿ. ವಿದ್ಯಾರ್ಥಿಗಳಲ್ಲಿ ಸ್ಪರ್ಧಾತ್ಮಕ ಮನೋಭಾವ ಹೆಚ್ಚಾಗಿ ಸ್ನೇಹಿತರಲ್ಲಿ ಭಿನ್ನಾಭಿಪ್ರಾಯ ಮೂಡಲಿದೆ.

ಸಿಂಹ: ನಿಮ್ಮ ವ್ಯವಹಾರದ ಮೂಲ ವಿಚಾರವನ್ನು ನಿಮ್ಮ ಉತ್ತರಾಧಿಕಾರಿಗಳಿಗೆ ತಿಳಿಸುವ ಮನಸ್ಸಾಗಲಿದೆ. ನಿಮ್ಮ ಜೀವನದ ಶೈಲಿಯಲ್ಲಿ ಬದಲಾವಣೆಯ ಗಾಳಿ ಬೀಸಲು ಆರಂಭಿಸುತ್ತದೆ. ಮುಖ್ಯ ಕೆಲಸಗಳಿಗೆ ಆಪ್ತರ ಸಲಹೆ ಅಗತ್ಯ.

ಕನ್ಯ: ರಾಜಕೀಯ ವ್ಯಕ್ತಿಗಳಿಗೆ ಸಾಮಾಜಿಕವಾಗಿ ಜನ ಬೆಂಬಲದ ಮತ್ತು ಆರ್ಥಿಕತೆಯ ಕೊರತೆ ಕಾಡಲಿದೆ. ದುಡ್ಡಿನ ವಿಷಯದಲ್ಲಿ ಮೋಸ ಹೋಗುವ ಸಂಭವವಿದೆ. ಹೆತ್ತವರೊಂದಿಗೆ ವಾಗ್ವಾದ ಅಶ್ರೇಯಸ್ಸಿಗೆ ಕಾರಣವಾಗುತ್ತದೆ.

ತುಲಾ: ಕುಟುಂಬದಲ್ಲಿ ಇರುವಂತಹ ಎಲ್ಲರ ಅಭಿಪ್ರಾಯವನ್ನೂ ಕೇಳಿ ತೀರ್ಮಾನಿಸುವ ಮನಸ್ಥಿತಿಯನ್ನು ಬೆಳೆಸಿಕೊಳ್ಳಿ. ಈ ದಿನ ನಿಮಗೆ ಯಾವುದೇ ಸಮಸ್ಯೆಗೆ ಪರಿಹಾರ ಕಂಡುಹಿಡಿಯಲು ಕಷ್ಟವಾಗುವುದಿಲ್ಲ.

ವೃಶ್ಚಿಕ: ವಿವಾಹದ ವಿಷಯದಲ್ಲಿ ಮೌನ ಮುರಿಯುವುದು ಅನಿವಾರ್ಯ ಆಗುವುದು. ಹವಾ ಬದಲಾವಣೆಗಾಗಿ ಕಿರು ಪ್ರವಾಸದ ಸಾಧ್ಯತೆಗಳಿವೆ. ಪತ್ರಿಕೋದ್ಯಮಿಗಳಿಗೆ ಕ್ರಿಯಾತ್ಮಕ ಬರವಣಿಗೆಯಿಂದ ಏಳಿಗೆ ದೊರಕುವುದು.

ಧನು: ಗುರಿಯನ್ನು ಮುಟ್ಟುವತ್ತ ನಿಮ್ಮ ಹಾದಿಯನ್ನು ಮತ್ತೊಮ್ಮೆ ಪರಿಶೀಲಿಸಿ ಕೊಂಡಲ್ಲಿ ನಿಮ್ಮ ಯೋಜನೆಗಳು ನೀವು ಆಲೋಚಿಸಿದಕ್ಕಿಂತಲೂ ಹೆಚ್ಚು ಪ್ರಾಯೋಗಿಕವಾಗಿ ನೆರವೇರುವುದು. ವೃತ್ತಿರಂಗದಲ್ಲಿ ಎಚ್ಚರವಿರಲಿ.

ಮಕರ: ವಿದ್ಯಾರ್ಥಿಗಳು ಹೆಚ್ಚಿನ ಯಶಸ್ಸಿಗಾಗಿ ಅದರಲ್ಲೂ ವಿಶೇಷವಾಗಿ ವಿಜ್ಞಾನ ವಿಷಯದಲ್ಲಿ ಪರಿಶ್ರಮವನ್ನು ಪಡಬೇಕಾಗುತ್ತದೆ. ಹಿರಿಯರು ನಡೆಸಿಕೊಂಡು ಬಂದ ಧಾರ್ಮಿಕ ವಿಧಿವಿಧಾನವನ್ನು ಆಚರಿಸುವ ಬಗ್ಗೆ ತೀರ್ಮಾನಿಸಿ.

ಕುಂಭ: ನಿರುದ್ಯೋಗಿಗಳಿಗೆ ಪ್ರತಿಷ್ಠಿತರ ಪರಿಚಯದಿಂದ ಗೌರವಾನ್ವಿತ ಜಾಗದಲ್ಲಿ ಉದ್ಯೋಗ ಸಿಗಲಿದೆ. ಹೆಂಡತಿ ಮಕ್ಕಳೊಂದಿಗೆ ಕೈಗೊಂಡ ಪ್ರವಾಸ ಸುಖದಾಯಕವಾಗಿರುವುದು. ಕೈ ತಪ್ಪಿದ ಅವಕಾಶಗಳು ಪುನಃ ದೊರೆಯಲಿದೆ.

ಮೀನ: ನಿಮ್ಮ ಆಲೋಚನೆಯಲ್ಲಿ ಸಹೋದ್ಯೋಗಿಗಳ ಯಾವುದೇ ತರಹದ ಒತ್ತಡಕ್ಕೆ ಮಣಿಯದೆ ಕೆಲಸದಲ್ಲಿ ಮುನ್ನುಗ್ಗಿ. ಕಚ್ಚಾ ತೈಲದ ವ್ಯವಹಾರದಲ್ಲಿರುವವರಿಗೆ ಅಧಿಕ ಲಾಭ ಸಿಗಲಿದೆ. ಆರೋಗ್ಯದ ವಿಚಾರದಲ್ಲಿ ಅಸಡ್ಡೆ ತೋರದಿರಿ.

ಪದಬಂಧ 6274

ವಿದ್ಯಾ ವಿನಯ್

ಎಡದಿಂದ ಬಲಕ್ಕೆ

1. ವನದಲ್ಲಿ ದೊರೆತಿರುವ ಆದಾಯ (4)
3. ಕಾಡು ಪ್ರಾಣಿ ಇಲ್ಲಿದೆ (4)
5. ದುಃಖಕ್ಕೆ ಮೂಲವಾದ ಅತೀ ಆಸೆ (3)
6. ಒಂದು ಕಡೆಯಿಂದ ಇನ್ನೊಂದಡೆಗೆ ಸಾಗಿಸುವಿಕೆ (3)
8. ವರ ನೀಡಿರುವ ಅನಾವಶ್ಯಕ ವಿವರಣೆ (3)
10. ಮಂಕ ಹೊತ್ತಿರುವ ಬುಟ್ಟಿ (3)
11. ಸರದ ಜೊತೆಯಿರಿಸಿದ ಸಾಮಾನು (3)
13. ದೇವಾಲಯದ ಗೋಪುರದ ತುದಿ (3)
15. ಈಕೆ ಒಡಹುಟ್ಟಿದವಳು (4)
16. ಪಟದಲ್ಲಿಯೇ ಈ ತೊಳಲಾಟ! (4)

ಮೇಲಿಂದ ಕೆಳಕ್ಕೆ

1. ವರ ಪಡೆದಿರುವ ಬೇಡ (4)
2. ನನಗದು ಬೇಕು ಎಂದವನ ಕೈಯಲ್ಲಿನ ದುಡ್ಡು (3)
3. ಮದುವೆ ಗಂಡು ತೋರಿರುವ ವ್ಯಾಯಾಮದ ಪಟ್ಟು (3)
4. ಕಾಲವನ್ನು ತೋರಿಸುವ ಯಂತ್ರ (4)
7. ಈತ ವಾದ್ಯ ನುಡಿಸುವವನು (3)
9. ವಾಗ್ಮಿ ಇಲ್ಲಿಗೆ ಬಂದಿದ್ದಾನೆ (3)
10. ಮಂದ ಬುದ್ಧಿಯವನ ಮುಗುಳುನಗೆ (4)
12. ಕುಡಿಗಣ್ಣಲ್ಲಿ ನೋಡಿದ ನೋಟ (4)
13. ಪಾಪ! ಕರಿಯ ಮರಿ ಬಿದ್ದಿದೆ ಈ ಪ್ರಪಾತದಲ್ಲಿ! (3)
14. ಸರಸದ ಮಾತುಕತೆ (3)

1			2	■	3			4
	■	■		■		■	■	
	■	■	5			■	■	
6	7		■	■	■	8	9	
■		■	■	■	■	■		■
10			■	■	■	11		12
	■	■	13		14	■	■	
	■	■		■		■	■	
15				■	16			

6273ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ: 1. 2.ಲುಬ್ಧಕ 5.ಡಿಕಾವು 6.ಹಸುಗೂಸು 9.ಬರ 10.ಪಗಡಿ 11.ಸುವರ್ಣರಥ 12.ಗಣಿತ 13.ರಾಡಿ 14.ಗಟವಾಣಿ 16.ವಿರಹ 18.ಬೆವರು

ಮೇಲಿಂದ ಕೆಳಕ್ಕ: 1.ಮನೋಹರ 2.ಲುರಗೂ 3.ಕಡಿ 4.ಠಾವು 7.ಸುವರ್ಣಯುಗ 8.ಗಡಿಬಿಡಿ 9.ಬಡಗಣ 10.ಪಥ 11.ಸುತ 13.ರಾಣಿವಾಸ 15.ಟಗರು 16.ವಿಶ್ವ 17.ಹಬೆ

ಸುಡೊಕು 6658

ಹೀಗೆ ಆಡಿ: ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

	3		4			2		7
7		4		3			5	
			1			8		3
		7		4				
3		2	9		1			
				6				2
1		8	3		4			5
	2					9	7	8
6		9		2			3	

6657 ಸುಡೊಕು

8	4	5	1	2	6	7	9	3
6	2	9	5	3	7	1	4	8
1	3	7	9	8	4	6	2	5
2	7	8	4	9	1	5	3	6
5	9	3	6	7	8	2	1	4
4	1	6	2	5	3	8	7	9
7	6	4	8	1	9	3	5	2
9	5	1	3	6	2	4	8	7
3	8	2	7	4	5	9	6	1

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor (Responsible for selection of news under the PRB Act): Praveen Kulkarni. Editorial Office: 75, Mahatma Gandhi Road, Bengaluru-560 001. E-mail: editorpv@prajavani.co.in. Phone: 080-45557333, Editorial: 080-45557251, Circ: 080-45557204, Advt: 080-45557163/080-45557164. Also printed at Hubballi-Dharwad, Mangaluru, Kalaburagi, Davanagere, Mysuru and Hospete.

ಬಳ್ಳಾರಿ ಘರ್ಷಣೆ, ಗುಂಡೇಟು ಪ್ರಕರಣ: ಇದಕ್ಕೆ ಯಾರು ಹೊಣೆ?

- ರಾಜಕೀಯ ಪಕ್ಷಗಳ ಪಿತೂರಿ
- ಕಾನೂನು ಸುವ್ಯವಸ್ಥೆ ಕಾಪಾಡಲು ಪೊಲೀಸ್ ವೈಫಲ್ಯ

ಪ್ರತಿಕ್ರಿಯಿಸಲು ಕೋಡ್ ಸ್ಕ್ಯಾನ್ ಮಾಡಿ

ಚಿಟಿಕೆ ಸುದ್ದಿ

‘ಮರ್ಯಾದೆಗೇಡು ಹತ್ಯೆ: ಪ್ರತ್ಯೇಕ ಕಾನೂನು ಬೇಡ’

ಹುಬ್ಬಳ್ಳಿ: ‘ಮಾರ್ಯಾದೆಗೇಡು ಹತ್ಯೆ ಪ್ರಕರಣಗಳ ತನಿಖೆಗೆ ಪ್ರತ್ಯೇಕ ಕಾನೂನು ರೂಪಿಸುವ ಬದಲು, ಇರುವ ಕಾನೂನುಗಳನ್ನೇ ಬಲಪಡಿಸಬೇಕು’ ಎಂದು ಸಂಸದ ಗೋವಿಂದ ಕಾರಜೋಳ ಇಲ್ಲಿ ಅಭಿಪ್ರಾಯಪಟ್ಟರು.

ತಾಲ್ಲೂಕಿನ ಇನಾಂ ವೀರಾಪುರ ಗ್ರಾಮದಲ್ಲಿ ದೌರ್ಜನ್ಯಕ್ಕೆ ಒಳಗಾದ ದೊಡಮನಿ ಕುಟುಂಬ ಸದಸ್ಯರಿಗೆ ಶನಿವಾರ ಸಾಂತ್ವನ ಹೇಳಿ ಸುದ್ದಿಗಾರರ ಜೊತೆ ಮಾತನಾಡಿದರು.

ವಿಧಾನ ಪರಿಷತ್ತಿನ ವಿರೋಧ ಪಕ್ಷದ ನಾಯಕ ಛಲವಾದಿ ನಾರಾಯಣಸ್ವಾಮಿ, ‘ತಪ್ಪು ಮಾಡಿದವರ ಪರ ಮೃದು ಧೋರಣೆ ತಳೆಯದೇ, ಈ ಕಾಯ್ದೆಯಡಿ ಈ ಹಿಂದೆ ಯಾರ್‍ಯಾರಿಗೆ ಏನೇನು ಶಿಕ್ಷೆಯಾಗಿದೆಯೋ ಹಾಗೆಯೇ ಮಾನ್ಯಾ ಪ್ರಕರಣದ ಅಪರಾಧಿಗಳ ಮೇಲೂ ಕ್ರಮ ಜರುಗಿಸಬೇಕು’ ಎಂದರು.

ಚಿತ್ರೋತ್ಸವಕ್ಕೆ ಸೀಮಿತವಾದ ಅಕಾಡೆಮಿ

ನಡೆಯದ ಇತರೆ ಕಾರ್ಯಕ್ರಮಗಳು: ಸದಸ್ಯರ ಅಸಮಾಧಾನ

• ಅಭಿಲಾಷ್ ಪಿ.ಎಸ್.

ಬೆಂಗಳೂರು: ಕನ್ನಡ ಚಿತ್ರೋದ್ಯಮದ ಅಭಿವೃದ್ಧಿಗೆ ಶ್ರಮಿಸಬೇಕಾದ ಕರ್ನಾಟಕ ಚಲನಚಿತ್ರ ಅಕಾಡೆಮಿಯು ಬೆಂಗಳೂರು ಅಂತರರಾಷ್ಟ್ರೀಯ ಚಿತ್ರೋತ್ಸವಕ್ಕಷ್ಟೇ ಸೀಮಿತವಾಗಿದೆ ಎಂದು ಅಕಾಡೆಮಿಯ ಕೆಲವು ಸದಸ್ಯರು ಆರೋಪಿಸಿದ್ದಾರೆ.

ಸಿನಿಮಾಗಳ ಸಂರಕ್ಷಣೆ–ಪ್ರದರ್ಶನ, ಸಿನಿಮಾ ನಿರ್ಮಾಣ ಕೌಶಲ ತರಬೇತಿ, ಜನರಲ್ಲಿ ಸಿನಿಮಾಗಳ ಬಗ್ಗೆ ಆಸಕ್ತಿ, ಸಿನಿಮಾ ಸಂಸ್ಕೃತಿಯ ಪೋಷಣೆಗಾಗಿ ಕಾರ್ಯ ನಿರ್ವಹಿಸುವುದು ಅಕಾಡೆಮಿಯ ಮೂಲ ಮಂತ್ರ. ಆದರೆ, ಅಕಾಡೆಮಿ ಚಿತ್ರೋತ್ಸವ ಬಂದಾಗಷ್ಟೇ ಕ್ರಿಯಾಶೀಲವಾಗುತ್ತದೆ ಎನ್ನುತ್ತಾರೆ ಸದಸ್ಯರು.

2024ರ ಫೆಬ್ರುವರಿಯಲ್ಲಿ ಅಕಾಡೆಮಿ ಅಧ್ಯಕ್ಷರಾಗಿ ಸಾಧು ಕೋಕಿಲ ನೇಮಕವಾದರು. 2025ರ ಫೆಬ್ರುವರಿಯಲ್ಲಿ ಏಳು ಮಂದಿಯನ್ನು ಸಾಮಾನ್ಯ ಸಮಿತಿಗೆ ಸದಸ್ಯರನ್ನಾಗಿ ಸರ್ಕಾರ ನೇಮಿಸಿತು. ಅಕಾಡೆಮಿಯ ಸಾಮಾನ್ಯ ಸಭೆಗಳು ಸಮಯಕ್ಕೆ ಸರಿಯಾಗಿ ನಡೆಯುತ್ತಿಲ್ಲ. ಸೆಪ್ಟೆಂಬರ್ ಬಳಿಕ ಇಲ್ಲಿಯವರೆಗೂ ಸಭೆ ನಡೆದೇ ಇಲ್ಲ.

ಅಕಾಡೆಮಿ ಆಯೋಜಿಸುತ್ತಿದ್ದ ‘ಬೆಳ್ಳಿಹೆಜ್ಜೆ’, ಸಿನಿಮಾ ಕುರಿತಾದ ಕಾರ್ಯಾಗಾರ–ವಿಚಾರ ಸಂಕಿರಣ, ಸಂವಾದಗಳು, ಜಿಲ್ಲಾ ಮಟ್ಟದಲ್ಲಿ ಚಲನಚಿತ್ರೋತ್ಸವ ಸಪ್ತಾಹ, ರಾಷ್ಟ್ರ–ರಾಜ್ಯ ಪ್ರಶಸ್ತಿ ಪಡೆದ ಚಿತ್ರಗಳ ಪ್ರದರ್ಶನ ಮತ್ತು ವಿಶ್ಲೇಷಣೆಯಂಥ ಕಾರ್ಯಕ್ರಮಗಳು ನಿಂತು ಕೆಲ ವರ್ಷಗಳಾಗಿವೆ

> ಹಿಂದಿನ ಅಧ್ಯಕ್ಷರಿಂದ ಏನೂ ಕಾರ್ಯಕ್ರಮ ಆಗಿರಲಿಲ್ಲ. ಕಾರ್ಯಕ್ರಮಗಳಾಗಿದ್ದು ರಾಜೇಂದ್ರ ಸಿಂಗ್ ಬಾಬು ಅವರ ಅವಧಿಯಲ್ಲಿ. ಈಗ ಸಿನಿಮಾದವರಿಗೆ ಅಗತ್ಯವಿರುವ ಕಾರ್ಯಕ್ರಮಗಳನ್ನು ಚರ್ಚಿಸಿದ್ದೇವೆ.
> **ಸಾಧು ಕೋಕಿಲ,** ಅಕಾಡೆಮಿ ಅಧ್ಯಕ್ಷ

> ಬೇರೆಲ್ಲಾ ಅಕಾಡೆಮಿಗಳು ಕೆಲಸ ಮಾಡುತ್ತಿದ್ದು, ನಾವು ನಿಷ್ಕ್ರಿಯರಾಗಿದ್ದೇವೆ. ಕ್ರಿಯಾ ಯೋಜನೆ ಕೊಟ್ಟಿದ್ದರೂ ಕಾರ್ಯಗತವಾಗುತ್ತಿಲ್ಲ. ಅಕಾಡೆಮಿ ಚಿತ್ರೋತ್ಸವಕ್ಕಷ್ಟೇ ಸೀಮಿತವಾಗಿದೆ.
> **ಐವಾನ್ ಡಿಸಿಲ್ವ,** ಸದಸ್ಯ

ಎನ್ನುವುದು ಚಿತ್ರೋದ್ಯಮದಲ್ಲಿರುವವರ ಮಾತು.

‘ಈ ಹಿಂದೆ ನಡೆದ ಸಭೆಗಳಲ್ಲಿ ಕಾರ್ಯಚಟುವಟಿಕೆಗಳು, ಕ್ರಿಯಾ ಯೋಜನೆ ಬಗ್ಗೆ ನಿರ್ಣಯಗಳನ್ನು ಅಂಗೀಕರಿಸಿದ್ದವು. ಸದಸ್ಯರೊಬ್ಬರು ‘ಶಿಕ್ಷಣದಲ್ಲಿ ಚಲನಚಿತ್ರ’ ಎಂಬ ಕಲ್ಪನೆಯಡಿ ವಿದ್ಯಾರ್ಥಿಗಳಿಗಾಗಿ ಸಿನಿಮಾ ಕ್ಲಬ್ ಸ್ಥಾಪನೆ, ಗಡಿನಾಡ ಚಿತ್ರೋತ್ಸವ ಆಯೋಜನೆ ಬಗ್ಗೆ ಪ್ರಸ್ತಾವನೆ ನೀಡಿದ್ದರು. ಆದರೆ ಇದರ ಮುಂದುವರಿಕೆ ಬಗ್ಗೆ ಅಕಾಡೆಮಿ ಇನ್ನೂ ನಿರ್ಧಾರ ಕೈಗೊಂಡಿಲ್ಲ. ಸದಸ್ಯರು ತಾವೇ ಖರ್ಚು ಮಾಡಿ ಇಂತಹ ಕಾರ್ಯಕ್ರಮ



ಚಲನಚಿತ್ರ ಅಕಾಡೆಮಿ

> ಅನುದಾನದ ಕೊರತೆ ಎನ್ನುವುದು ಸರಿಯಾದ ಉತ್ತರವಲ್ಲ. ಚಿತ್ರೋತ್ಸವದ ಸಮಿತಿಗಳಲ್ಲಿ ನಮಗೆ ಅವಕಾಶವೇ ಇಲ್ಲ. ನಮ್ಮನ್ನು ಬಳಸಿಕೊಳ್ಳದೇ ಹೋದರೆ ಸಭೆಗಷ್ಟೇ ಸೀಮಿತವಾಗುತ್ತೇವೆ.
> **ಎಚ್.ವಿಷ್ಣುಕುಮಾರ್,** ಸದಸ್ಯ

> ನಮಗೆ ಭಿನ್ನ ಕಾರ್ಯಕ್ರಮಗಳನ್ನು ಆಯೋಜಿಸುವ ಆಸೆಯಿದೆ. ಚರ್ಚೆಯೂ ನಡೆದಿದೆ. ಎಲ್ಲದಕ್ಕೂ ಅನುದಾನದ ಕೊರತೆ ಇದೆ. ಚಿತ್ರೋತ್ಸವದ ಬಳಿಕ ಕಾರ್ಯಕ್ರಮಗಳು ನಡೆಸುವ ಭರವಸೆ ನೀಡಿದ್ದಾರೆ.
> **ನಿಖಿತಾ ಸ್ವಾಮಿ ಎಸ್.,** ಸದಸ್ಯ

ಆಯೋಜಿಸಲು ಸಿದ್ಧರಿದ್ದರೂ ಒಪ್ಪಿಗೆ ಸಿಗುತ್ತಿಲ್ಲ’ ಎನ್ನುತ್ತಾರೆ ಸದಸ್ಯರೊಬ್ಬರು.

‘ಈ ಎರಡು ವರ್ಷಗಳಲ್ಲಿ ನಟ ಅನಂತನಾಗ್ ಅವರಿಗೆ ಪದ್ಮಭೂಷಣ, ಸಾಹಸ ನಿರ್ದೇಶಕ ಕೆ.ಎಚ್.ರಘು ಅವರಿಗೆ ಪದ್ಮಶ್ರೀ, ನಟ ರಿಷಬ್ ಶೆಟ್ಟಿಗೆ ರಾಷ್ಟ್ರ ಪ್ರಶಸ್ತಿ ದೊರೆತಿದೆ. ನಟ ದ್ವಾರಕೀಶ್, ಬಿ.ಸರೋಜಾದೇವಿ ಸೇರಿದಂತೆ ಹಲವು ಖ್ಯಾತ ಕಲಾವಿದರು–ತಂತ್ರಜ್ಞರನ್ನು ಕಳೆದುಕೊಂಡಿದ್ದೇವೆ. ಆದರೆ ಇವು ಯಾವುವೂ ಅಕಾಡೆಮಿಗೆ ಸಂಭ್ರಮಿಸಬೇಕಾದ, ನುಡಿ ನಮನ ಸಲ್ಲಿಸುವ ಸಂದರ್ಭ ಅನಿಸಲೇ ಇಲ್ಲ. ‘ಶಿವಮ್ಮ’, ‘ಫೋಟೋ’, ‘ಹೆಬ್ಬುಲಿ ಕಟ್’, ‘ಪಪ್ಪಿ’ಯಂಥ ಕಾಡುವ ಚಿತ್ರಗಳು ಬಂದಾಗಲಾಗಲಿ ಅಥವಾ ‘ಕಾಂತಾರ ಚಾಪ್ಟರ್–1’, ‘ಟಾಕ್ಸಿಕ್’ ಮೂಲಕ ಇತರೆ ಚಿತ್ರರಂಗಗಳ ಗಮನ ಕನ್ನಡ ಚಿತ್ರರಂಗದ ಮೇಲೆ ಬಿದ್ದಾಗಲಾಗಲಿ ಅಕಾಡೆಮಿ ಜಾಗೃತವಾಗಲಿಲ್ಲ. ಈ ಸಿನಿಮಾಗಳನ್ನು ಚರ್ಚಿಸುವ, ವಿಶ್ಲೇಷಿಸುವ ವೇದಿಕೆ ಕಲ್ಪಿಸಲೇ ಇಲ್ಲ’ ಎನ್ನುವುದೂ ಚಿತ್ರರಂಗ ದಲ್ಲಿ ಸಕ್ರಿಯರಾಗಿರುವವರ ಮಾತು.

‘ಕಾರ್ಯಕ್ರಮಗಳನ್ನು ಮಾಡದೇ ಇದ್ದರೆ ಹೋರಾಡಿ ಚಲನಚಿತ್ರ ಅಕಾಡೆಮಿ ಮಾಡಿದ ಉದ್ದೇಶವೇ ವಿಫಲವಾಗುತ್ತದೆ. ಹೊಸ ಕಾರ್ಯಕ್ರಮಗಳನ್ನು ಮಾಡಬೇಕು. ಹೀಗಾದರೆ ಚಿತ್ರರಂಗಕ್ಕೆ ಹೊಸ ವಿಷಯ ತರಬಹುದು’ ಎನ್ನುತ್ತಾರೆ ಅಕಾಡೆಮಿ ಮಾಜಿ ಅಧ್ಯಕ್ಷ ರಾಜೇಂದ್ರ ಸಿಂಗ್ ಬಾಬು.

ಬೆಂಗಳೂರಿನ ನಂದಿನಿ ಲೇಔಟ್‌ನಲ್ಲಿ ಎರಡೂವರೆ ಎಕರೆಯಲ್ಲಿರುವ ಕಚೇರಿಯಲ್ಲಿ ಸುಸಜ್ಜಿತವಾದ ಥಿಯೇಟರ್ ನಿರ್ಮಾಣ ಅಕಾಡೆಮಿಗೆ ಇನ್ನೂ ಸಾಧ್ಯವಾಗಿಲ್ಲ.

‘ಕಾರ್ಯಕ್ರಮಗಳಾಗಬೇಕು ಎನ್ನುವುದು ಸದಸ್ಯರ ಬಯಕೆ. ಬೆಳ್ಳಿಹೆಜ್ಜೆ, 50 ವರ್ಷ ಪೂರೈಸಿದ ಸಂಸ್ಥೆಗಳಿಗೆ, ಕಲಾವಿದರಿಗೆ ಸನ್ಮಾನ ಮಾಡಬೇಕು, ಅಕಾಡೆಮಿಯಲ್ಲಿ ಬಹುಪರದೆ ಚಿತ್ರಮಂದಿರ ನಿರ್ಮಾಣವಾದರೆ ಚಿತ್ರೋತ್ಸವಕ್ಕೂ, ಚಿತ್ರರಂಗಕ್ಕೂ ಸಹಾಯವಾಗಲಿದೆ ಎನ್ನುವ ಸಲಹೆ ನೀಡಿದ್ದೆ. ‘ಅನುದಾನದ ಕೊರತೆಯಿದೆ, ಮುಖ್ಯಮಂತ್ರಿಗಳನ್ನು ಕೇಳಿದ್ದೇವೆ’ ಎನ್ನುವ ಉತ್ತರ ದೊರೆಯಿತು’ ಎನ್ನುತ್ತಾರೆ ಸದಸ್ಯ ಸುಧೀಂದ್ರ ವೆಂಕಟೇಶ್.

ಅಕಾಡೆಮಿ ಚಟುವಟಿಕೆಗಳಿಗೆ ಘೋಷಣೆ ಯಾಗಿದ್ದ ಅನುದಾನವನ್ನು ಮೈಸೂರಿನಲ್ಲಿ ನಿರ್ಮಾಣವಾಗಲಿರುವ ಚಿತ್ರನಗರಿಯ ಕಾಂಪೌಂಡ್ ನಿರ್ಮಾಣಕ್ಕೆ ಕೊಡಲಾಗಿದೆ. ಇದರಿಂದ ಉಳಿದ ಕಾರ್ಯಕ್ರಮ ಅನುಷ್ಠಾನಕ್ಕೆ ತೊಡಕಾಗಿದೆ ಎನ್ನುತ್ತಾರೆ ಸದಸ್ಯರೊಬ್ಬರು.

ಅಕಾಡೆಮಿಯಲ್ಲಿ ಬಹುಪರದೆಗಳಿರುವ ಚಿತ್ರಮಂದಿರ ಸಮುಚ್ಚಯದ ನಿರ್ಮಾಣ, ಚಲನಚಿತ್ರ ಭಂಡಾರವನ್ನು ₹3 ಕೋಟಿ ವೆಚ್ಚದಲ್ಲಿ ಸ್ಥಾಪಿಸುವ ಬಗ್ಗೆ ಬಜೆಟ್‌ನಲ್ಲಿ ಘೋಷಿಸಲಾಗಿದೆ. ‘ಖಾಸಗಿ ಸಹಭಾಗಿತ್ವದಲ್ಲಿ ಈ ಚಿತ್ರ ಮಂದಿರ ನಿರ್ಮಾಣದ ಯೋಜನೆ ಹಾಕಿಕೊಳ್ಳುತ್ತಿದ್ದೇವೆ. ಆದರೆ ಹೂಡಿಕೆ ದಾರರು ಬೇಕಾಗಿದ್ದಾರೆ’ ಎನ್ನುತ್ತಾರೆ ಅಕಾಡೆಮಿ ಅಧ್ಯಕ್ಷ ಸಾಧು ಕೋಕಿಲ.

ಸಿಹಿ ದಾಸೋಹ

ಪ್ರಜಾವಾಣಿ ಚಿತ್ರ: ಭರತ್ ಕಂದಕೂರ



ಕೊಪ್ಪಳದ ಗವಿಮಠದ ಮಹಾದಾಸೋಹದ ಮನೆಯಲ್ಲಿ ಶನಿವಾರ ತಯಾರಿಸಿದ ಮೈಸೂರು ಪಾಕ್ ಜೋಡಿಸುತ್ತಿರುವ ಸ್ವಯಂ ಸೇವಕರು

‘ವಿದ್ಯಾರ್ಥಿನಿಯರಿಗೆ ಋತುಚಕ್ರ ರಜೆ ನೀಡಿ’

ಬೆಂಗಳೂರು: ‘ಪ್ರೌಢಶಾಲೆ ಮತ್ತು ಕಾಲೇಜುಗಳ ವಿದ್ಯಾರ್ಥಿನಿಯರಿಗೆ ಋತು ಚಕ್ರ ರಜೆ ನೀಡಬೇಕು’ ಎಂದು ರಾಜ್ಯ ಮಕ್ಕಳ ಹಕ್ಕುಗಳ ರಕ್ಷಣಾ ಆಯೋಗದ ಅಧ್ಯಕ್ಷ ಶಶಿಧರ್ ಕೋಸಂಬೆ ಒತ್ತಾಯಿಸಿದ್ದಾರೆ.

ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಿಗೆ ಈ ಬಗ್ಗೆ ಅವರು ಪತ್ರ ಬರೆದಿದ್ದಾರೆ.

‘ಶಾಲಾ–ಕಾಲೇಜುಗಳ ವಿದ್ಯಾರ್ಥಿನಿಯರಿಗೆ ಶಿಕ್ಷಣದ ಜೊತೆಗಿದೆ ರಕ್ಷಣೆ ಎಂಬ ಶೀರ್ಷಿಕೆ ಅಡಿಯಲ್ಲಿ ಸಂವಾದ ಮತ್ತು ಅಹವಾಲು ಸ್ವೀಕಾರ ಕಾರ್ಯಕ್ರಮವನ್ನು ಆಯೋಗ ನಡೆಸಿತ್ತು. ಈ ಸಂವಾದದಲ್ಲಿ, ಅನೇಕ ವಿದ್ಯಾರ್ಥಿನಿಯರು ಋತು ಚಕ್ರ ರಜೆ ನೀಡುವಂತೆ ಮನವಿ ಸಲ್ಲಿಸಿದ್ದಾರೆ. 10ರಿಂದ 18 ವರ್ಷದೊಳಗಿನ ವಿದ್ಯಾರ್ಥಿನಿಯರಿಗೆ ಋತು ಚಕ್ರಕ್ಕೆ ಒಳಗಾಗದ ಸಂದರ್ಭದಲ್ಲಿ ಮಾನಸಿಕ ಹಾಗೂ ದೈಹಿಕ ಆರೋಗ್ಯದ ಸಮಸ್ಯೆಯಿಂದ ಶಾಲಾ–ಕಾಲೇಜುಗಳಿಗೆ ಗೈರಾಗುತ್ತಿದ್ದಾರೆ. ಮಕ್ಕಳ ಶಿಕ್ಷಣದ ಮೇಲೆ ವ್ಯತಿರಿಕ್ತ ಪರಿಣಾಮ ಬೀರುವ ಸಾಧ್ಯತೆ ಇದೆ. ಆದ್ದರಿಂದ ವಿದ್ಯಾರ್ಥಿನಿಯರಿಗೆ ಹಾಜರಾತಿ ಸಹಿತ ಋತುಚಕ್ರ ರಜೆ ನೀಡಬೇಕು’ ಎಂದು ಪತ್ರದಲ್ಲಿ ಉಲ್ಲೇಖಿಸಿದ್ದಾರೆ.

2025ರಲ್ಲಿ 198 ಮಂದಿಯಿಂದ 564 ಅಂಗಾಂಗ ದಾನ

ಅಂಗಾಂಗ ದಾನ ಪ್ರಮಾಣ ಹೆಚ್ಚಳ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯದಲ್ಲಿ ಕಳೆದ ವರ್ಷ 198 ಮಂದಿಯಿಂದ 564 ಅಂಗಾಂಗಗಳನ್ನು ದಾನವಾಗಿ ಪಡೆಯಲಾಗಿದೆ. ಈವರೆಗೆ ವರ್ಷವೊಂದರಲ್ಲಿ ನಡೆದ ಗರಿಷ್ಠ ಅಂಗಾಂಗ ದಾನ ಇದಾಗಿದೆ.

ಅಂಗಾಂಗಕ್ಕಾಗಿ ಸಾವಿರಾರು ಮಂದಿ ಎದುರು ನೋಡುತ್ತಿರುವ ಕಾರಣ, ರಾಜ್ಯದಲ್ಲಿ ಆರೋಗ್ಯ ಇಲಾಖೆಯ ಜತೆಗೆ ವಿವಿಧ ಸರ್ಕಾರೇತರ ಸಂಸ್ಥೆಗಳು ಹಾಗೂ ಆಸ್ಪತ್ರೆಗಳು ಕೂಡ ಅಂಗಾಂಗ ದಾನದ ಬಗ್ಗೆ ಜಾಗೃತಿ ಮೂಡಿಸುತ್ತಿವೆ. ಇದರಿಂದಾಗಿ 2025ರಲ್ಲಿ ಅಂಗಾಂಗ ದಾನಿಗಳ ಸಂಖ್ಯೆ ಹೆಚ್ಚಳವಾಗಿದೆ. ಆರೋಗ್ಯ ಇಲಾಖೆಯಡಿ ಕಾರ್ಯನಿರ್ವಹಿಸುತ್ತಿರುವ ಜೀವ ಸಾರ್ಥಕತೆ ಸಂಸ್ಥೆಯು ಅಂಗಾಂಗ ದಾನಕ್ಕೆ ಪ್ರೋತ್ಸಾಹಿಸುವ ಜತೆಗೆ, ಅಂಗಾಂಗ ವೈಫಲ್ಯಕ್ಕೊಳಗಾದವರಿಗೆ ಅಂಗಾಂಗಗಳನ್ನು ಒದಗಿಸಲು



ವರ್ಷವಾರು ಅಂಗಾಂಗ ದಾನ

ವರ್ಷ	ದಾನಿಗಳು	ಅಂಗಾಂಗ	ಅಂಗಾಂಶ
2021	70	187	90
2022	151	415	348
2023	178	469	393
2024	162	457	339
2025	198	553	397

ನೆರವಾಗುತ್ತಿದೆ. 2023ರಲ್ಲಿ 178 ಮಂದಿಯಿಂದ 469 ಅಂಗಾಂಗಗಳನ್ನು ದಾನವಾಗಿ ಪಡೆಯಲಾಗಿತ್ತು. 2024ರಲ್ಲಿ ದಾನಿಗಳ ಸಂಖ್ಯೆ ಇಳಿಕೆಯಾಗಿತ್ತು.

ಅಂಗಾಂಗಗಳ ಜತೆಗೆ ಅಂಗಾಂಶವನ್ನೂ ದಾನಿಗಳಿಂದ ಪಡೆದು ಒದಗಿಸಲಾಗುತ್ತಿದೆ. 288 ಕಾರ್ನಿಯಾ ಸೇರಿ ಒಟ್ಟು 397 ಅಂಗಾಂಶಗಳನ್ನು ದಾನವಾಗಿ ಪಡೆಯಲಾಗಿದೆ. ಇವು ವರ್ಷವೊಂದರಲ್ಲಿ ದಾನವಾಗಿ ಸ್ವೀಕರಿಸಲಾದ ಗರಿಷ್ಠ ಅಂಗಾಂಶಗಳಾಗಿವೆ. ರಾಜ್ಯ ಸರ್ಕಾರವು ಅಂಗಾಂಗ ದಾನಕ್ಕೆ ಉತ್ತೇಜನ ನೀಡುತ್ತಿದ್ದು, ಅಂಗಾಂಗ ದಾನಿಗಳ ಕುಟುಂಬಸ್ಥರಿಗೆ ಪ್ರಶಂಸನಾ ಪತ್ರಗಳನ್ನು ನೀಡಲಾಗುತ್ತಿದೆ. ಗಣರಾಜ್ಯೋತ್ಸವ ಹಾಗೂ ಸ್ವಾತಂತ್ರ್ಯೋತ್ಸವ ಸಮಾರಂಭದಲ್ಲಿ ಗೌರವಿಸಲಾಗುತ್ತಿದೆ.

‘ಅಂಗಾಂಗ ವೈಫಲ್ಯದಿಂದ ಬಳಲುತ್ತಿರುವ, ಅಂಗಾಂಗಕ್ಕಾಗಿ ಎದುರುನೋಡುತ್ತಿರುವ ಸಂಖ್ಯೆ ವರ್ಷದಿಂದ ವರ್ಷಕ್ಕೆ ಹೆಚ್ಚಳವಾಗುತ್ತಿದೆ. ಮಾನವ ಅಂಗಾಂಗ ದಾನ ಕಸಿ ಕಾಯ್ದೆ 1994, ಅಂಗಾಂಗ ದಾನಕ್ಕೆ ಉತ್ತೇಜನ ನೀಡುತ್ತಿದೆ. ಮಿದುಳು ನಿಷ್ಕ್ರಿಯಗೊಂಡ ಯಾವುದೇ ವ್ಯಕ್ತಿ ಅಂಗಾಂಗಗಳನ್ನು ದಾನ ಮಾಡಬಹುದಾಗಿದೆ. ಒಬ್ಬ ದಾನಿಯು ಹೃದಯ, ಮೂತ್ರಪಿಂಡ, ಶ್ವಾಸಕೋಶ, ಯಕೃತ್ತು, ಸಣ್ಣ ಕರುಳು ಹಾಗೂ ಮೇದೋಜೀರಕ ಗ್ರಂಥಿ ದಾನದ ಮೂಲಕ ಎಂಟು ಜೀವಗಳಿಗೆ, ಹೃದಯದ ಕವಾಟ, ಚರ್ಮ, ಕಣ್ಣುಗುಡ್ಡೆ ಸೇರಿ ವಿವಿಧ ಅಂಗಾಂಶಗಳ ನೆರವಿನಿಂದ 50 ಮಂದಿಗೆ ನೆರವಾಗಬಹುದಾಗಿದೆ’ ಎಂದು ಜೀವಸಾರ್ಥಕತೆ ಸಂಸ್ಥೆ ತಿಳಿಸಿದೆ.

ಮೂರನೇ ಸ್ಥಾನದಲ್ಲಿ ರಾಜ್ಯ

ರಾಜ್ಯವಾರು ಅಂಗಾಂಗ ದಾನದಲ್ಲಿ ಕರ್ನಾಟಕ ಮೂರನೇ ಸ್ಥಾನದಲ್ಲಿದೆ. ಕಳೆದ ವರ್ಷ (2025) ತಮಿಳುನಾಡಿನಲ್ಲಿ 267 ಮಂದಿಯ ಅಂಗಾಂಗವನ್ನು ದಾನವಾಗಿ ಪಡೆಯಲಾಗಿತ್ತು. ತೆಲಂಗಾಣ ಎರಡನೇ ಸ್ಥಾನ (205), ಕರ್ನಾಟಕ ಮೂರನೇ ಸ್ಥಾನ (198), ಮಹಾರಾಷ್ಟ್ರ ನಾಲ್ಕನೇ ಸ್ಥಾನ (153) ಹಾಗೂ ಗುಜರಾತ್ ಐದನೇ ಸ್ಥಾನದಲ್ಲಿದೆ (152) ಎಂದು ಆರೋಗ್ಯ ಇಲಾಖೆ ತಿಳಿಸಿದೆ.

ಹೊರೆಕಾಣಿಕೆ ಕೊಡ್ತೀವಿ: ಸಮಿತಿ ಅನುಮತಿ ನೀಡಿಲ್ಲ: ಶಾಸಕ

ಪ್ರಜಾವಾಣಿ ವಾರ್ತೆ

ಉಡುಪಿ: ‘ಶೀರೂರು ಮಠದ ಪರ್ಯಾಯ ಮಹೋತ್ಸವದ ಅಂಗವಾಗಿ ಇದೇ 13ರಂದು ಹೊರೆ ಕಾಣಿಕೆ ನೀಡಲಾಗುವುದು’ ಎಂದು ‘ಉಡುಪಿ ಜಿಲ್ಲಾ ಮುಸ್ಲಿಂ ಸೌಹಾರ್ದ ಪರ್ಯಾಯ ಸಮಿತಿ’ ಅಧ್ಯಕ್ಷ ಕೆ. ಅಬೂಬಕ್ಕರ್ ಪರ್ಕಳ ಶನಿವಾರ ಇಲ್ಲಿ ಪತ್ರಿಕಾಗೋಷ್ಠಿಯಲ್ಲಿ ತಿಳಿಸಿದರು.

‘ಪುರಾತನ ಕಾಲದಿಂದ ಶ್ರೀ ಕೃಷ್ಣ ಮಠದಲ್ಲಿ ನಡೆದು ಬರುತ್ತಿರುವ ಹಿಂದೂ-ಮುಸ್ಲಿಮರ ಸೌಹಾರ್ದ ಹಾಗೂ ಏಕತೆ ಜೀವಂತವಾಗಿರಿಸಲು ಈ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ’ ಎಂದು ಹೇಳಿದರು.

ಅನುಮತಿ ನೀಡಿಲ್ಲ: ‘ಹೊರೆಕಾಣಿಕೆ ನೀಡುವುದಾಗಿ ಮುಸ್ಲಿಂ ಸೌಹಾರ್ದ ಪರ್ಯಾಯ ಸಮಿತಿ ಸದಸ್ಯರು ಪ್ರಕಟಿಸಿದ್ದು, ಅದಕ್ಕೆ ಸ್ವಾಗತ ಸಮಿತಿ ಅನುಮತಿ ನೀಡಿಲ್ಲ’ ಎಂದು ಶೀರೂರು ಪರ್ಯಾಯ ಸ್ವಾಗತ ಸಮಿತಿಯ ಅಧ್ಯಕ್ಷ, ಶಾಸಕ ಯಶ್‌ಪಾಲ್ ಸುವರ್ಣ ಹೇಳಿಕೆಯಲ್ಲಿ ತಿಳಿಸಿದ್ದಾರೆ.

‘ಸಮಿತಿಯವರು ಈವರೆಗೂ ಹೊರೆಕಾಣಿಕೆ ಕುರಿತು ಯಾವುದೇ ಮಾಹಿತಿ ನೀಡಿಲ್ಲ. ಮಠದ ವತಿಯಿಂದಲೂ ಹೊರೆಕಾಣಿಕೆ ನೀಡುವಂತೆ ಮನವಿ ಮಾಡಿಲ್ಲ’ ಎಂದು ತಿಳಿಸಿದ್ದಾರೆ.

ಶೀರೂರು ಮಠಾಧೀಶ ವೇದವರ್ಧನ ತೀರ್ಥರ ಪ್ರಥಮ ಪರ್ಯಾಯವು ಇದೇ 18ರಂದು ನಡೆಯಲಿದೆ.

ಎರಡು ಕ್ಷೇತ್ರ: ಉಪಚುನಾವಣೆಗೆ ಸಿದ್ಧತೆ

ಮೇಟಿ, ಶಾಮನೂರು ಕ್ಷೇತ್ರ: ಮತದಾರರ ಪಟ್ಟಿ ಪರಿಷ್ಕರಣೆ ಕಾರ್ಯ ಶುರು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕಾಂಗ್ರೆಸ್‌ನ ಎಚ್.ವೈ.ಮೇಟಿ ಮತ್ತು ಶಾಮನೂರು ಶಿವಶಂಕರಪ್ಪ ಅವರ ನಿಧನದಿಂದ ತೆರವಾಗಿದ್ದ ಬಾಗಲಕೋಟೆ ಹಾಗೂ ದಾವಣಗೆರೆ ದಕ್ಷಿಣ ವಿಧಾನಸಭಾ ಕ್ಷೇತ್ರಗಳ ಉಪ ಚುನಾವಣೆಗೆ ಚುನಾವಣಾ ಆಯೋಗವು ತಯಾರಿ ಆರಂಭಿಸಿದೆ.


ಇದರ ಭಾಗವಾಗಿ ಎರಡೂ ಕ್ಷೇತ್ರಗಳ ಮತದಾರರ ಪಟ್ಟಿ ಪರಿಷ್ಕರಣೆಗೆ ಚಾಲನೆ ನೀಡಿದೆ. ರಾಜ್ಯ ಮುಖ್ಯ ಚುನಾವಣಾಧಿಕಾರಿ ಕಚೇರಿಯು ಆದೇಶ ಹೊರಡಿಸಿದ್ದು, ಮತದಾರರ ಪಟ್ಟಿಯ ವಿಶೇಷ ಪರಿಷ್ಕರಣೆ ನಡೆಯಲಿದೆ ಎಂದು ತಿಳಿಸಿದೆ.

ಎರಡೂ ಕ್ಷೇತ್ರಗಳಿಗೆ ಸಂಬಂಧಪಟ್ಟ ಮತದಾರರ ಪಟ್ಟಿಗಳ ಕರಡನ್ನು ಶನಿವಾರ ಬಿಡುಗಡೆ ಮಾಡಿದೆ. ಚುನಾವಣಾ ಆಯೋಗದ ಜಾಲತಾಣ, ಎರಡೂ ಜಿಲ್ಲೆಗಳ ಜಿಲ್ಲಾಧಿಕಾರಿ, ಮತದಾರರ ನೋಂದಣಿ ಅಧಿಕಾರಿ, ಸಹಾಯಕ ಮತದಾರರ ನೋಂದಣಿ ಅಧಿಕಾರಿ ಕಚೇರಿಗಳನ್ನು ಕರಡು ಮತದಾರರಪಟ್ಟಿ ಲಭ್ಯವಿರಲಿದೆ ಎಂದು ತಿಳಿಸಿದೆ.



ವೇಳಾಪಟ್ಟಿ

- **ಜನವರಿ 3;** ಕರಡು ಮತದಾರರಪಟ್ಟಿ ಪ್ರಕಟಣೆ
- **ಜನವರಿ 3ರಿಂದ 24;** ಆಕ್ಷೇಪ, ಬದಲಾವಣೆಗೆ ಅರ್ಜಿ ಸಲ್ಲಿಸಲು ಅವಕಾಶ
- **ಫೆಬ್ರುವರಿ 14;** ಅಂತಿಮ ಮತದಾರರ ಪಟ್ಟಿ ಪ್ರಕಟಣೆ



ಸಂಬಂಧಿತ ಕ್ಷೇತ್ರಗಳ ಮತದಾರರು, ಮತದಾರರ ಪಟ್ಟಿಯಲ್ಲಿ ತಮ್ಮ ಹೆಸರು ಇದೆಯೇ, ತಮ್ಮ ಮಾಹಿತಿ ಸರಿಯಾಗಿ ಇದೆಯೇ ಎಂಬುದನ್ನು ಪರಿಶೀಲಿಸಿಕೊಳ್ಳಬೇಕು. ಯಾವುದೇ ಆಕ್ಷೇಪ ಮತ್ತು ಮನವಿಗಳು ಇದ್ದರೆ, ಜನವರಿ 3ರಿಂದ ಜನವರಿ 24ರವರೆಗೆ ಸಲ್ಲಿಸಬಹುದು. ಫೆಬ್ರುವರಿ 7ರ ಒಳಗೆ ಅವುಗಳನ್ನು ವಿಲೇವಾರಿ ಮಾಡಲಾಗುತ್ತದೆ. ಫೆಬ್ರುವರಿ 14ಕ್ಕೆ ಅಂತಿಮ ಪಟ್ಟಿ ಪ್ರಕಟಿಸಲಾಗುತ್ತದೆ ಎಂದು ಮಾಹಿತಿ ನೀಡಿದೆ.

ಮತದಾರರ ಪಟ್ಟಿಗೆ ಹೊಸದಾಗಿ ಹೆಸರು ಸೇರಿಸಲು ನಮೂನೆ–6, ಅನಿವಾಸಿ ಭಾರತೀಯರು ನಮೂನೆ–6ಎ, ಆಕ್ಷೇಪಗಳನ್ನು ನಮೂನೆ–7 ಮತ್ತು ವಿಳಾಸ ಬದಲಾವಣೆಗಳನ್ನು ನಮೂನೆ–8ರ ಮೂಲಕ ಸಲ್ಲಿಸಬೇಕು. ಸಂಬಂಧಿತ ಮತಗಟ್ಟೆ ಅಧಿಕಾರಿಗಳಿಗೆ ಈ ಅರ್ಜಿಗಳನ್ನು ಸಲ್ಲಿಸಬಹುದು. ಆಯೋಗದ ಮೊಬೈಲ್ ಅಪ್ಲಿಕೇಷನ್, ಜಾಲತಾಣದಲ್ಲಿ ಆನ್‌ಲೈನ್ ಮೂಲಕವೂ ಅರ್ಜಿ ಸಲ್ಲಿಸಬಹುದು ಎಂದು ತಿಳಿಸಿದೆ.

₹ 71 ಲಕ್ಷ ವಂಚನೆ: ಪ್ರಕರಣ ದಾಖಲು

ಪ್ರಜಾವಾಣಿ ವಾರ್ತೆ

ಉಪ್ಪಿನಂಗಡಿ (ದಕ್ಷಿಣ ಕನ್ನಡ): ಸಮೀಪದ ಪೆರ್ನೆಯಲ್ಲಿನ ಬ್ಯಾಂಕ್ ಆಫ್ ಬರೋಡಾ ಶಾಖೆಯ ಉಪ ಪ್ರಬಂಧಕ ಪುಲುಗುಜ್ಜು ಸುಬ್ರಹ್ಮಣ್ಯಂ (30) ನಾಪತ್ತೆಯಾಗಿದ್ದಾರೆ. ಅವರು ಬ್ಯಾಂಕ್‌ಗೆ ₹ 71.41 ಲಕ್ಷ ವಂಚನೆ ಬಗ್ಗೆ ಬ್ಯಾಂಕ್ ಅಧಿಕಾರಿಗಳು ಉಪ್ಪಿನಂಗಡಿ ಪೊಲೀಸರಿಗೆ ದೂರು ನೀಡಿದ್ದಾರೆ.



ಸುಬ್ರಹ್ಮಣ್ಯಂ

‘ಸುಬ್ರಹ್ಮಣ್ಯಂ ಅವರು ಶಾಖೆಯ ಎಟಿಎಂನ ಮೇಲ್ವಿಚಾರಣೆ ನೋಡಿಕೊಳ್ಳುತ್ತಿದ್ದರು. ಬ್ಯಾಂಕ್‌ನ ಎಟಿಎಂಗೆ ನಿತ್ಯ ನಿಗದಿತ ಹಣ ಜಮೆ ಮಾಡುತ್ತಿರಲಿಲ್ಲ. ₹ 70.86 ಲಕ್ಷ ವಂಚಿಸಿದ್ದಾರೆ. ₹ 55 ಸಾವಿರ ಅಂದಾಜು ಮೌಲ್ಯದ ಚಿನ್ನಒಯ್ದಿದ್ದಾರೆ’ ಎಂದು ಬ್ಯಾಂಕ್‌ನ ಮಂಗಳೂರು ಪ್ರಾದೇಶಿಕ ವ್ಯವಸ್ಥಾಪಕ ಸಿ.ವಿ.ಎಸ್. ಚಂದ್ರಶೇಖರ್ ದೂರಿನಲ್ಲಿ ತಿಳಿಸಿದ್ದಾರೆ.

ಡಿ.17ರಂದು ಆರೋಪಿಯು ಹಣ ದುರುಪಯೋಗಪಡಿಸಿರುವುದು ಗೊತ್ತಾಗಿದ್ದು, ಅಂದು ಅಸೌಖ್ಯದ ಕಾರಣ ನೀಡಿ ಕಚೇರಿಯಿಂದ ತೆರಳಿದ್ದರು. ಬಳಿಕ ನಾಪತ್ತೆಯಾಗಿದ್ದಾರೆ ಎಂದು ಅವರು ಹೇಳಿದ್ದಾರೆ.

ನಿಧನ ವಾರ್ತೆ

ಪ್ರಭಾಕರ ಭಂಡಾರಿ ಕರ್ಕಿ

ಹೊನ್ನಾವರ (ಉತ್ತರ ಕನ್ನಡ): ಯಕ್ಷಗಾನದ ಮದ್ದಲೆ ವಾದಕ, ಕರ್ಕಿ ನಿವಾಸಿ ಪ್ರಭಾಕರ ಭಂಡಾರಿ (85) ಹೃದಯಾಘಾತದಿಂದ ಶನಿವಾರ ನಿಧನರಾದರು. ಅವರಿಗೆ ಪತ್ನಿ ಮತ್ತು ನಾಲ್ವರು ಪುತ್ರರು ಇದ್ದಾರೆ.



ಮದ್ದಲೆ ವಾದನದ ಜತೆಯಲ್ಲಿಯೇ ಚಂಡೆ ಸೇರಿ ಇತರೆ ಚರ್ಮ ವಾದ್ಯಗಳ ತಯಾರಿಕೆಯಲ್ಲೂ ಪ್ರಭಾಕರ ಅವರು ನಿಷ್ಣಾತರಾಗಿದ್ದರು. ವಿವಿಧ ಯಕ್ಷಗಾನ ಮೇಳಗಳಲ್ಲಿ ಮದ್ದಲೆ ವಾದಕರಾಗಿದ್ದರು. ರಾಜ್ಯೋತ್ಸವ ಪ್ರಶಸ್ತಿ, ಉಪ್ಪೂರು ಪ್ರಶಸ್ತಿ, ಕಾಳಿಂಗ ನಾವಡ ಪ್ರಶಸ್ತಿ ಸೇರಿ ಹಲವು ಪ್ರಶಸ್ತಿಗಳು ಅವರಿಗೆ ಸಂದಿದ್ದವು.

ರಸ್ತೆಬದಿ ನಲುಗುತ್ತಿವೆ ಜೀವಗಳು...

ತಾಪಮಾನ ಕುಸಿತ ● ಕಳಪೆ ಆಹಾರ ಸೇವನೆ ● 15 ಮಂದಿ ನಿರಾಶ್ರಿತರು ಮೃತ

ಪ್ರಜಾವಾಣಿ ವಾರ್ತೆ

ಬೆಂಗಳೂರು: ವಿಪರೀತ ಚಳಿ, ದೂಳು, ಪುಂಡರ ಕಾಟ, ಬೀದಿನಾಯಿಗಳ ಹಾವಳಿ... ಇಂತಹ ಸಂಕಷ್ಟಗಳ ನಡುವೆ ನಿರಾಶ್ರಿತರು ನಗರದಲ್ಲಿ ನಲುಗುತ್ತಿದ್ದಾರೆ. ರಸ್ತೆಬದಿಯಲ್ಲಿಯೇ ಅವರ ಜೀವನ ಕಮರುತ್ತಿದೆ.

ಹೊರ ರಾಜ್ಯ, ಹೊರ ಜಿಲ್ಲೆಯಿಂದ ಕೂಲಿ ಅರಸಿ ನಗರಕ್ಕೆ ಬಂದವರು, ಭಿಕ್ಷುಕರು ಆಶ್ರಯ ತಾಣವಿಲ್ಲದೇ ಪಾದಚಾರಿ ಮಾರ್ಗ, ರಸ್ತೆಬದಿ, ಮಳಿಗೆಗಳ ಎದುರು, ಮೇಲ್ಸೇತುವೆ ಕೆಳಗೆ, ಮೆಜೆಸ್ಟಿಕ್‌ನಲ್ಲಿ ರಾತ್ರಿ ವೇಳೆ ನಿದ್ರೆಗೆ ಜಾರುತ್ತಿದ್ದಾರೆ. ಪುಟ್ಟ ಮಕ್ಕಳು, ವಯೋವೃದ್ಧರು ಚಳಿಗೆ ಥರ ಗುಟ್ಟುತ್ತಿದ್ದಾರೆ.

ಡಿಸೆಂಬರ್‌ನಲ್ಲಿ ತಾಪಮಾನವು ಕನಿಷ್ಠ ಮಟ್ಟಕ್ಕೆ ಕುಸಿದಿತ್ತು. ಅಂತಹ ಸಂದರ್ಭದಲ್ಲಿ ನಿರಾಶ್ರಿತರು ನಲುಗಿ ಹೋಗಿದ್ದರು. ಅಂತವರಿಗೆ ಸ್ವಯಂ ಸೇವಾ ಸಂಸ್ಥೆಗಳು (ಎನ್‌ಜಿಒ) ಬೆಡ್‌ಶೀಟ್ ಹಾಗೂ ಬಟ್ಟೆ ವಿತರಣೆ ಮಾಡಿದ್ದವು. ಆದರೂ, ಅವರ ಕಣ್ಣೀರು ನಿಂತಿಲ್ಲ.

ಪಾದಚಾರಿ ಮಾರ್ಗದಲ್ಲಿ ಮಲಗಿದ್ದವರಿಗೆ ವಾಹನ ಡಿಕ್ಕಿಯಾಗಿ, ಚಳಿ ಸೇರಿದಂತೆ ಬೇರೆ ಬೇರೆ ಕಾರಣಕ್ಕೆ ನಗರದಲ್ಲಿ ಕಳೆದ 40 ದಿನಗಳಲ್ಲಿ 15 ಮಂದಿ ನಿರಾಶ್ರಿತರು ಮೃತಪಟ್ಟಿದ್ದಾರೆ.

ಕೆ.ಆರ್. ಮಾರುಕಟ್ಟೆ, ಮಲ್ಲೇಶ್ವರ, ಮೆಜೆಸ್ಟಿಕ್, ರೈಲ್ವೆ ನಿಲ್ದಾಣಗಳ ಸುತ್ತಮುತ್ತ ಇಂತಹ ಕಹಿ ಘಟನೆಗಳು ನಡೆದಿವೆ. ಆಯಾ ಠಾಣಾ ವ್ಯಾಪ್ತಿಯ ಪೊಲೀಸರು ಅಸಹಜ ಸಾವು ಪ್ರಕರಣ ದಾಖಲಿಸಿಕೊಂಡಿದ್ದಾರೆ.

'ಬೆಂಗಳೂರಿಗೆ ಕೆಲಸ ಅರಸಿ ಬರುವ ಕಾರ್ಮಿಕರ ಸಂಖ್ಯೆ ಹೆಚ್ಚಿದೆ. ಈ ವರ್ಷ ಡಿಸೆಂಬರ್‌ನಲ್ಲಿ ಚಳಿ ಹೆಚ್ಚಿತ್ತು. ಡಿ.22ರಿಂದ 25ರ ನಡುವೆ ರಾತ್ರಿ ವೇಳೆ ತಾಪಮಾನ ತೀವ್ರವಾಗಿ ಕುಸಿದಿತ್ತು. ಅದರಲ್ಲೂ ಒಂದು ದಿನ ಕನಿಷ್ಠ ಉಷ್ಣಾಂಶ 13 ಡಿಗ್ರಿ ಸೆಲ್ಸಿಯಸ್‌ಗೆ ಕುಸಿದಿತ್ತು. ಬೇಸಿಗೆ ದಿನಗಳಲ್ಲಿ ಉಷ್ಣಾಂಶ ಏರಿಕೆ ಆಗಿದ್ದರೆ ಅಥವಾ ಚಳಿಗಾಲದಲ್ಲಿ ತಾಪಮಾನ ತೀವ್ರ ಕುಸಿದಂತಹ ಸಂದರ್ಭಗಳಲ್ಲಿ ಸಾವು–ನೋವುಗಳು ಸಂಭವಿಸುವ ಸಾಧ್ಯತೆಯಿದೆ. 15 ಮಂದಿ ನಿರಾಶ್ರಿತರ ಸಾವಿಗೆ ಚಳಿಯೇ ಕಾರಣವೆಂದು ನೇರವಾಗಿ ಹೇಳಲು ಸಾಧ್ಯವಿಲ್ಲ. ಅವರ ಆರೋಗ್ಯ ಸಮಸ್ಯೆಯ ಕಾರಣವೂ ಇರಬಹುದು' ಎಂದು ಪೊಲೀಸ್ ಅಧಿಕಾರಿಯೊಬ್ಬರು ಹೇಳಿದರು.

ತಾಪಮಾನ ಕುಸಿತ, ಕಲುಷಿತ ಗಾಳಿ, ಕಳಪೆಮಟ್ಟದ ಆಹಾರ ಹಾಗೂ ನೀರು ಸೇವನೆಯಿಂದ ಆರೋಗ್ಯ ಸಮಸ್ಯೆ ಆಗುತ್ತದೆ. ನಿರಾಶ್ರಿತರು ಸಹಜವಾಗಿ ಚಳಿಯ ಸಂದರ್ಭದಲ್ಲೂ ರಸ್ತೆಬದಿಯಲ್ಲಿ ರಾತ್ರಿ ಮಲಗಿದಾಗ ಸಾವು ಸಂಭವಿಸುವಂತಹ ಅಪಾಯ ಇರುತ್ತದೆ ಎಂದು ವೈದ್ಯರೊಬ್ಬರು ಹೇಳುತ್ತಾರೆ.

ಈ ರೀತಿಯ ಸನ್ನಿವೇಶ ಕಂಡು ಬೆಂಗಳೂರು ಪೊಲೀಸರು ಸಹ ನಿರಾಶ್ರಿತರಿಗೆ ನೆರವು ನೀಡಿದ್ದರು. ಅಲ್ಲದೇ ಕೆಲವು ಎನ್‌ಜಿಒಗಳು ಮೂಲಕವು ಬೆಡ್‌ಶೀಟ್ ಹಾಗೂ ಬೆಚ್ಚನೆಯ ಉಡುಗೆಗಳನ್ನು ವಿತರಣೆ ಮಾಡುವಂತೆಯೂ ಮನವಿ ಮಾಡಿದ್ದರು.

ನಿರಾಶ್ರಿತರಿಗೆ ರಾತ್ರಿ ವೇಳೆ ವಾಸ್ತವ್ಯಕ್ಕೆ ಜಿಬಿಎ 74 ನಿರಾಶ್ರಿತರ ಕೇಂದ್ರಗಳನ್ನು ಮಂಜೂರು ಮಾಡಿತ್ತು. ಆದರೆ, 48 ಅಷ್ಟೇ ನಿರ್ಮಾಣಗೊಂಡು ಕಾರ್ಯಾಚರಣೆ ನಡೆಸುತ್ತಿವೆ. ಅದರಲ್ಲೂ ಕೆಲವು ನಿರಾಶ್ರಿತರ ಕೇಂದ್ರಗಳಲ್ಲಿ ಸೌಲಭ್ಯಗಳೇ ಇಲ್ಲವಾಗಿದೆ. ನಿರಾಶ್ರಿತರ ಕೇಂದ್ರಗಳಲ್ಲಿ 2022ರಲ್ಲಿದ್ದ ಪರಿಸ್ಥಿತಿಯೇ ಈಗಲೂ ಇದೆ ಎಂದು ಆರೋಪವಿದೆ. ನಗರದಲ್ಲಿ ನಿರಾಶ್ರಿತರ ಸಂಖ್ಯೆ ಹೆಚ್ಚಿದೆ. ಕನಿಷ್ಠ 120 ಆಶ್ರಯ ತಾಣಗಳು ಬೇಕಿವೆ ಎಂದು ಅಂದಾಜಿಸಲಾಗಿದೆ.

ಬಹುತೇಕ ನಿರಾಶ್ರಿತರ ಕೇಂದ್ರಗಳು ರಾತ್ರಿ ವೇಳೆ ಭರ್ತಿಯೇ ಆಗಿರುವುದಿಲ್ಲ. ಆದರೂ, ನಿರಾಶ್ರಿತರು ರಸ್ತೆಬದಿಯಲ್ಲೇ ಮಲಗುತ್ತಿದ್ದಾರೆ. ಇದಕ್ಕೆ ಕಾರಣ ಹುಡುಕುತ್ತಾ ಸಾಗಿದಾಗ, 'ಕೆಲವು ಕೇಂದ್ರಗಳಲ್ಲಿ ಒಂದು ಹೊತ್ತು ಮಾತ್ರ ಊಟ ಸಿಗುತ್ತದೆ. ಭಿಕ್ಷೆ ಬೇಡುವುದಕ್ಕೂ ಬಿಡುವುದಿಲ್ಲ. ಅದೇ ರಸ್ತೆಯ ಬದಿಯಲ್ಲಿ ಮಲಗಿದರೆ ಎನ್‌ಜಿಗಳು ಊಟ, ಬಟ್ಟೆ ನೀಡುತ್ತಾರೆ' ಎಂದು ಕೆಲವು ನಿರಾಶ್ರಿತರು ಹೇಳಿದರು.



ರಸ್ತೆಬದಿಯಲ್ಲಿ ನಿದ್ರೆಗೆ ಜಾರಿರುವ ನಿರಾಶ್ರಿತ ಚಿತ್ರ: ವಿ.ಪುಷ್ಕರ್

ಅನುದಾನದ ಕೊರತೆ

ಕೇಂದ್ರ ಪುರಸ್ಕೃತ ರಾಷ್ಟ್ರೀಯ ನಗರ ಜೀವನೋಪಾಯ ಅಭಿಯಾನ (ಡೇ–ನಲ್ಮ್) ಅಡಿ ಸ್ಥಳೀಯ ಸಂಸ್ಥೆಗಳು, ನಿರಾಶ್ರಿತರ ನೋಂದಣಿ ಮಾಡಿಕೊಂಡು ಅವರಿಗೆ ಆಶ್ರಯ ಕಲ್ಪಿಸಬೇಕು. ನಿರಾಶ್ರಿತರ ಕೇಂದ್ರಗಳನ್ನು ನಡೆಸುತ್ತಿರುವ ಸ್ವಯಂ ಸೇವಾ ಸಂಸ್ಥೆಗಳಿಗೆ ಸ್ಥಳೀಯ ಸಂಸ್ಥೆಗಳಿಂದ ಪ್ರೋತ್ಸಾಹ ಹಾಗೂ ಅನುದಾನ ಹಂಚಿಕೆ ಕಡಿಮೆಯಾಗಿದೆ. ನಿರಾಶ್ರಿತರ ನೋಂದಣಿ ಸಹ ವರ್ಷದಿಂದ ವರ್ಷಕ್ಕೆ ಹೆಚ್ಚುತ್ತಿದೆ. ಆದರೆ, ಅನುದಾನ ಹಂಚಿಕೆ ಕಡಿಮೆ ಇರುವ ಕಾರಣಕ್ಕೆ ನಿರಾಶ್ರಿತರು ರಸ್ತೆಬದಿಯಲ್ಲೇ ಆಶ್ರಯ ಪಡೆದುಕೊಳ್ಳುವ ಸ್ಥಿತಿಯಿದೆ ಎಂದು ಎನ್‌ಜಿಒ ಪ್ರತಿನಿಧಿಯೊಬ್ಬರು ಹೇಳಿದರು.

ಚಿಟಿಕೆ ಸುದ್ದಿ

ಆನೇಕಲ್–ಬೊಮ್ಮಸಂದ್ರಕ್ಕೆ 4 ಹೆಚ್ಚುವರಿ ಬಸ್

ಬೆಂಗಳೂರು: ಆನೇಕಲ್ ಬಸ್ ನಿಲ್ದಾಣದಿಂದ ಬೊಮ್ಮಸಂದ್ರ ಮೆಟ್ರೊ ನಿಲ್ದಾಣಕ್ಕೆ ಬಿಎಂಟಿಸಿ ಬಸ್‌ಗಳ ಸಂಖ್ಯೆ ಹೆಚ್ಚಿಸಲಾಗಿದ್ದು, ಜ.5ರಿಂದ ಸಂಚರಿಸಲಿವೆ.

ಆನೇಕಲ್ ಬಸ್ ನಿಲ್ದಾಣ ಮತ್ತು ಬೊಮ್ಮಸಂದ್ರ ಮೆಟ್ರೊ ನಿಲ್ದಾಣಕ್ಕೆ ಚಿಕ್ಕ ಹೆಗಡೆ ಕ್ರಾಸ್, ಇಗ್ಗಲೂರು ಹಾಗೂ ಚಂದಾಪುರ ಮಾರ್ಗವಾಗಿ ಬೊಮ್ಮಸಂದ್ರ ಮಾರ್ಗವಾಗಿ ಬಸ್‌ಗಳು ಸಂಚರಿಸಲಿವೆ. ನಾಲ್ಕು ಬಸ್‌ಗಳು ಪ್ರತಿದಿನ ಬೆಳಿಗ್ಗೆ 5.35ರಿಂದ ರಾತ್ರಿ 9.20ರವರೆಗೆ ಟ್ರಿಪ್ ನಡೆಸಲಿವೆ ಎಂದು ಬಿಎಂಟಿಸಿ ಅಧಿಕಾರಿಗಳು ತಿಳಿಸಿದ್ದಾರೆ.

'ಬೋಧಗಯಾ ಬಿಟ್ಟುಕೊಡಿ'

ಬೆಂಗಳೂರು: ಬೌದ್ಧರ ಪವಿತ್ರ ಸ್ಥಳ ಬೋಧಗಯಾ ಮಹಾಬೋಧಿ, ಮಹಾ ವಿಹಾರದ ಸಂಪೂರ್ಣ ಆಡಳಿತವನ್ನು ಬೌದ್ಧರಿಗೆ ನೀಡಬೇಕು ಎಂದು ಒತ್ತಾಯಿಸಿ ಜ. 6ರಂದು ಸ್ವಾತಂತ್ರ್ಯ ಉದ್ಯಾನದಲ್ಲಿ ಮುಖ್ಯಮಂತ್ರಿಗಳಿಗೆ ಮನವಿ ಸಲ್ಲಿಸಲಾಗುವುದು' ಎಂದು ಉಪಾಸಿಕಾ ಮತ್ತು ಉಪಾಸಕಾ ಚಾರಿಟಬಲ್ ಟ್ರಸ್ಟ್‌ನ ಅಧ್ಯಕ್ಷ ಬಂತೆ ಬೋಧಿದತ್ತ ತಿಳಿಸಿದರು.

ಶನಿವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, 'ಸರ್ಕಾರ 1949ರ ಬೋಧಗಯಾ ದೇವಾಲಯ ಕಾಯ್ದೆಯನ್ನು ರದ್ದುಗೊಳಿಸಿ, ದೇವಾಲಯದಲ್ಲಿ ಹಿಂದೂ ಧರ್ಮದ ಕ್ರಿಯಾ ಚಟುವಟಿಕೆಗಳಿಗೆ ಕಡಿವಾಣ ಹಾಕಬೇಕು. ಬೌದ್ಧ ಧರ್ಮದ ಹಕ್ಕುಗಳ ರಕ್ಷಣೆಗಾಗಿ ಪ್ರತ್ಯೇಕ ಕಾನೂನು ರಚಿಸಬೇಕು' ಎಂದು ಆಗ್ರಹಿಸಿದರು.

ಸಾತನೂರು ಗ್ರಾ.ಪಂ ಸುಜಾತ ಅಧ್ಯಕ್ಷೆ

ಯಲಹಂಕ: ಬ್ಯಾಟರಾಯನಪುರ ಕ್ಷೇತ್ರದ ಸಾತನೂರು ಗ್ರಾಮ ಪಂಚಾಯಿತಿಯ ನೂತನ ಅಧ್ಯಕ್ಷರಾಗಿ ಸುಜಾತ ಎಸ್.ಎಲ್. ಆನಂದಗೌಡ ಅವಿರೋಧವಾಗಿ ಆಯ್ಕೆಯಾಗಿದ್ದಾರೆ.



ಸುಜಾತ

ಎಂ.ಕೃಷ್ಣಪ್ಪ ಅವರ ರಾಜೀನಾಮೆಯಿಂದ ತೆರವಾಗಿದ್ದ ಸ್ಥಾನಕ್ಕಾಗಿ ಶನಿವಾರ ಚುನಾವಣಾ ಪ್ರಕ್ರಿಯೆ ನಡೆಯಿತು. ಒಟ್ಟು 11 ಸದಸ್ಯಬಲ ಹೊಂದಿರುವ ಪಂಚಾಯಿತಿಯಲ್ಲಿ ಸುಜಾತ ಒಬ್ಬರೇ ನಾಮಪತ್ರ ಸಲ್ಲಿಸಿದ್ದರು.

ಗ್ರಾಮ ಪಂಚಾಯಿತಿ ಮಾಜಿ ಅಧ್ಯಕ್ಷ ಶಿವಣ್ಣ, ಸದಸ್ಯರಾದ ಮಾನಸ, ಮಾಲ ಎಂ., ಅಶ್ವಿನಿ, ಮುನಿತಿಮ್ಮರಾಯಪ್ಪ, ನಾರಾಯಣಸ್ವಾಮಿ ಉಪಸ್ಥಿತರಿದ್ದರು.

ತೆರಿಗೆ ಪಾವತಿಸದ 60 ವಾಣಿಜ್ಯ ಕಟ್ಟಡಕ್ಕೆ ಬೀಗ

ಬೆಂಗಳೂರು: ಪೂರ್ವ ನಗರ ಪಾಲಿಕೆ ವ್ಯಾಪ್ತಿಯಲ್ಲಿ ಆಸ್ತಿ ತೆರಿಗೆ ಪಾವತಿಸದ 60 ವಾಣಿಜ್ಯ ಕಟ್ಟಡಗಳಿಗೆ ಶನಿವಾರ ಬೀಗಮುದ್ರೆ ಹಾಕಲಾಗಿದೆ.

ಕೆ.ಆರ್ ಪುರ ವಲಯ ವ್ಯಾಪ್ತಿಯಲ್ಲಿನ ಬಹು ವರ್ಷಗಳಿಂದ ಆಸ್ತಿ ತೆರಿಗೆ ಪಾವತಿಸದೆ ಬಾಕಿದಾರರಾಗಿದ್ದ ವಾಣಿಜ್ಯ ಕಟ್ಟಡಗಳಿಗೆ ವಲಯ ಜಂಟಿ ಆಯುಕ್ತೆ ಸುಧಾ ನೇತೃತ್ವದಲ್ಲಿ ಕಂದಾಯ ವಸೂಲಾತಿ ತಂಡವು ಬೀಗ ಮುದ್ರೆ ಹಾಕಿದೆ ಎಂದು ಆಯುಕ್ತ ಡಿ.ಎಸ್. ರಮೇಶ್ ತಿಳಿಸಿದರು.

ಕಂದಾಯ ವಸೂಲಾತಿ ಸೀಲಿಂಗ್ ಕಾರ್ಯಾಚರಣೆಯಲ್ಲಿ 76 ಕಟ್ಟಡಗಳನ್ನು ಪರಿಶೀಲಿಸಲಾಗಿದ್ದು, ಆ ಪೈಕಿ 16 ಸ್ವತ್ತುಗಳ ಆಸ್ತಿ ಮಾಲಿಕರು ಸ್ಥಳದಲ್ಲಿ ಬಾಕಿ ಆಸ್ತಿ ತೆರಿಗೆ ಪಾವತಿಸಿದರು. ಇನ್ನುಳಿದ 60 ಸ್ವತ್ತುಗಳಿಗೆ ಬೀಗ ಹಾಕುವ ಮೂಲಕ ಸ್ವತ್ತಿನ ಮಾಲೀಕರಿಂದ ಬಾಕಿ ಆಸ್ತಿ ತೆರಿಗೆ ವಸೂಲಾತಿಗೆ ಕ್ರಮವಹಿಸಲಾಗಿದೆ ಎಂದು ಆಯುಕ್ತರು ತಿಳಿಸಿದರು.


ಸುದ್ದಿ 2 ನಿಮಿಷ

ನಾಲ್ಕು ಚಿರತೆ ಸಾವು: ತಪ್ಪಿತಸ್ಥರ ಬಂಧನಕ್ಕೆ ಒತ್ತಾಯ

ಕೆಂಗೇರಿ: 'ಚಿರತೆಗಳ ಸಾವಿಗೆ ಕಾರಣರಾದ ತಪ್ಪಿತಸ್ಥರನ್ನು ಕೂಡಲೇ ಬಂಧಿಸದಿದ್ದರೆ ಸರ್ಕಾರದ ವಿರುದ್ಧ ಉಗ್ರ ಪ್ರತಿಭಟನೆ ನಡೆಸಬೇಕಾಗುತ್ತದೆ' ಎಂದು ಶಾಸಕ ಎಸ್.ಟಿ. ಸೋಮಶೇಖರ್ ಎಚ್ಚರಿಕೆ ನೀಡಿದರು.

'ಯಶವಂತಪುರ ಕ್ಷೇತ್ರದ ಚಿಕ್ಕನಹಳ್ಳಿ ಗ್ರಾಮ ಪಂಚಾಯಿತಿ ವ್ಯಾಪ್ತಿಯ ಸೂಲಿವಾರ ಸಮೀಪದ ಎಸ್.ಗೊಲ್ಲಹಳ್ಳಿಯಲ್ಲಿ ಬಂಡೆ ಸ್ಫೋಟದಿಂದ ನಾಲ್ಕು ಚಿರತೆಗಳು ಸಾವಿಗೀಡಾಗಿವೆ. ಸ್ಫೋಟಿಸಿದ ಪ್ರಭಾವಿಗಳು ತಪ್ಪಿಸಿಕೊಳ್ಳಲು ಯತ್ನಿಸುತ್ತಿರುವ ಮಾಹಿತಿ ಇದೆ. ಈ ಸಂಬಂಧ ಅರಣ್ಯಾಧಿಕಾರಿ, ಗಣಿ ಮತ್ತು ಭೂ ವಿಜ್ಞಾನ ಇಲಾಖೆಯ ನಿರ್ದೇಶಕರಿಗೂ ಚಿರತೆಗಳ ಸಾವಿನ ಕುರಿತು ಮಾಹಿತಿ ನೀಡಿ ತಪ್ಪಿತಸ್ಥರ ವಿರುದ್ಧ ಕಾನೂನು ಕ್ರಮ ಕೈಗೊಳ್ಳಬೇಕು' ಎಂದು ಒತ್ತಾಯಿಸಿದರು.

'ಕ್ಷೇತ್ರದ ವ್ಯಾಪ್ತಿಯಲ್ಲಿ ಇತ್ತೀಚಿಗೆ ಕಾನೂನುಬಾಹಿರ ಕಲ್ಲು ಗಣಿಗಾರಿಕೆ ಎಗ್ಗಿಲ್ಲದೆ ನಡೆಯುತ್ತಿದೆ. ಇದರಿಂದ ಗಣಿಬಾಧಿತ ವ್ಯಾಪ್ತಿಯ ಮನೆಗಳು ಬಿರುಕು ಬಿಟ್ಟು ಹಾನಿಗೆ ಒಳಗಾಗುತ್ತಿವೆ. ದೂಳಿನಿಂದ ಗ್ರಾಮಸ್ಥರ ಆರೋಗ್ಯ ಹದಗೆಡುತ್ತಿದೆ. ಶಬ್ದ ಹಾಗೂ ಮಾಲಿನ್ಯದಿಂದ ಪರಿಸರ ನಾಶವಾಗುತ್ತಿದ್ದು, ಕೂಡಲೇ ಸರ್ಕಾರ ಕಾನೂನುಬಾಹಿರ ಕಲ್ಲು ಗಣಿಗಾರಿಕೆಯನ್ನು ಬಂದ್ ಮಾಡಬೇಕು' ಎಂದು ಆಗ್ರಹಿಸಿದರು.



ರಾಜೇಂದ್ರಸಿಂಗ್ ಸೇರಿ ಮೂವರಿಗೆ ಮೈಸೂರು ವಿವಿ ಗೌರವ ಡಾಕ್ಟರೇಟ್

ಮೈಸೂರು: ಚಿತ್ರ ನಿರ್ದೇಶಕ, ನಿರ್ಮಾಪಕ ಎಸ್.ವಿ. ರಾಜೇಂದ್ರಸಿಂಗ್ ಬಾಬು, ಕರ್ನಾಟಕ ಮಾನವ ಹಕ್ಕುಗಳ ಆಯೋಗದ ಅಧ್ಯಕ್ಷ ಟಿ.ಶ್ಯಾಮ್ ಭಟ್ ಮತ್ತು ಮೈಸೂರಿನ ಗ್ಲೋಬಲ್ ಎಜುಕೇಷನ್ ಟ್ರಸ್ಟ್ ಅಧ್ಯಕ್ಷ ಪಿ. ಜಯ ಚಂದ್ರರಾಜು ಅವರನ್ನು ಮೈಸೂರು ವಿಶ್ವವಿದ್ಯಾಲಯದಿಂದ ಗೌರವ ಡಾಕ್ಟರೇಟ್ ಪದವಿಗೆ ಆಯ್ಕೆ ಮಾಡಿದೆ.

'ಜ.5ರಂದು 106ನೇ ಘಟಿಕೋತ್ಸವದಲ್ಲಿ ಪದವಿ ಪ್ರದಾನ ಮಾಡಲಾಗುವುದು. ರಾಜ್ಯಪಾಲ ಥಾವರಚಂದ್ ಗೆಹಲೋತ್ ಅಧ್ಯಕ್ಷತೆ ವಹಿಸಲಿದ್ದು, 'ಇಸ್ರೊ' ಮಾಜಿ ಅಧ್ಯಕ್ಷ ಎಸ್.ಸೋಮನಾಥ್ ಘಟಿಕೋತ್ಸವ ಭಾಷಣ ಮಾಡುವರು' ಎಂದು ಕುಲಪತಿ ಪ್ರೊ.ಎನ್.ಕೆ.ಲೋಕನಾಥ್ ಶನಿವಾರ ಸುದ್ದಿಗೋಷ್ಠಿಯಲ್ಲಿ ತಿಳಿಸಿದರು.

ರಾಜ್ಯ ಬಿಜೆಪಿ ಸತ್ಯಶೋಧನಾ ತಂಡದಿಂದ ಅಧ್ಯಯನ: ಎಸ್‌.ಆರ್‌. ವಿಶ್ವನಾಥ್

ಬಿಜೆಪಿ ಅಧ್ಯಕ್ಷರಿಗೆ ಕೋಗಿಲು ಬಡಾವಣೆ ವರದಿ

ಪ್ರಜಾವಾಣಿ ವಾರ್ತೆ

ಯಲಹಂಕ: 'ಕೋಗಿಲು ಬಡಾವಣೆಯಲ್ಲಿ ಶೆಡ್‌ಗಳನ್ನು ತೆರವುಗೊಳಿಸಿರುವ ಪ್ರಕರಣಕ್ಕೆ ಸಂಬಂಧಿಸಿದ ಸಮಗ್ರ ವರದಿಯನ್ನು ಇನ್ನೆರಡು ದಿನಗಳಲ್ಲಿ ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷರಿಗೆ ಸಲ್ಲಿಸಲಾಗುವುದು' ಎಂದು ಶಾಸಕ ಎಸ್.ಆರ್. ವಿಶ್ವನಾಥ್ ತಿಳಿಸಿದರು.

ಕೋಗಿಲು ಬಡಾವಣೆಯ ಫಕೀರ್ ಕಾಲೊನಿ ಹಾಗೂ ವಸೀಮ್ ಬಡಾವಣೆಯಲ್ಲಿ ಮನೆ–ಗುಡಿಸಲುಗಳ ನಿರ್ಮಾಣದ ಸತ್ಯಾಸತ್ಯತೆ ಪರಿಶೀಲನೆಗಾಗಿ ಎಸ್.ಆರ್. ವಿಶ್ವನಾಥ್ ನೇತೃತ್ವದಲ್ಲಿ ರಚಿಸಿರುವ ರಾಜ್ಯ ಬಿಜೆಪಿ ಸತ್ಯಶೋಧನಾ ತಂಡವು ಶನಿವಾರ ಸ್ಥಳಕ್ಕೆ ಭೇಟಿ ನೀಡಿ ಮಾಹಿತಿ ಸಂಗ್ರಹಿಸಿತು.

'ಈ ಬಡಾವಣೆಯಲ್ಲಿ ಶೇ 95ರಷ್ಟು ಮನೆಗಳು ಎರಡು ವರ್ಷಗಳಲ್ಲಿ ನಿರ್ಮಾಣಗೊಂಡಿವೆ. ಬಿಬಿಎಂಪಿಗೆ ಜಾಗ ಹಸ್ತಾಂತರವಾದ ವಿವರ, ಸರ್ವೆ ನಂಬರ್, ಗೂಗಲ್ ಮ್ಯಾಪ್ ದಾಖಲೆಗಳು ಹಾಗೂ ಕಾನೂನು ಅಂಶ ಸೇರಿದಂತೆ ಎಲ್ಲ ಮಾಹಿತಿಗಳು ವರದಿಯಲ್ಲಿ ಒಳಗೊಳ್ಳಲಿವೆ' ಎಂದು ವಿಶ್ವನಾಥ್ ತಿಳಿಸಿದರು. ಈ ವರದಿಯನ್ನು ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷರು, ರಾಜ್ಯಪಾಲರಿಗೆ ಸಲ್ಲಿಸುವ ಅಥವಾ ನ್ಯಾಯಾಲಯದಲ್ಲಿ ಪ್ರಶ್ನಿಸುವ ಕುರಿತು ಚಿಂತನೆ ನಡೆದಿದೆ ಎಂದು ಹೇಳಿದರು.

'ನಾನೂ ನೂರು ಗುಡಿಸಲುಗಳನ್ನು ಹಾಕಿಸಬಹುದು. ಒಡೆದ ನಂತರ ಮನೆ ಕೊಡಬೇಕಾಗುತ್ತದೆ. ನೆರೆಪೀಡಿತರು, ರಾಜಕಾಲುವೆಗಳ ಮೇಲೆ ಮನೆ ಕಟ್ಟಿದವರಿಗೆ ಇನ್ನೂ ಮನೆ ನೀಡಿಲ್ಲ. ಇದು ಸಂಪೂರ್ಣವಾಗಿ ಮತಬ್ಯಾಂಕ್ ರಾಜಕಾರಣ' ಎಂದು ಆರೋಪಿಸಿದರು.



ಕೋಗಿಲು ಬಡಾವಣೆಯ ಫಕೀರ್ ಕಾಲೋನಿ ಹಾಗೂ ವಸೀಮ್ ಬಡಾವಣೆಯಲ್ಲಿ ಎಸ್‌ಆರ್‌. ವಿಶ್ವನಾಥ್ ನೇತೃತ್ವದ ರಾಜ್ಯ ಬಿಜೆಪಿ ಸತ್ಯಶೋಧನಾ ತಂಡವು ಅಧ್ಯಯನ ನಡೆಸಿತು

ಜನವರಿ 5ರಂದು ಕೋಗಿಲು ಬಡಾವಣೆಯಲ್ಲಿ ಭಾರಿ ಹೋರಾಟ ನಡೆಸಲಾಗುವುದು. ರಾಜೀವ್ ಗಾಂಧಿ ಗೃಹನಿರ್ಮಾಣ ನಿಗಮದಡಿ ಅರ್ಜಿ ಸಲ್ಲಿಸಿರುವವರು ಈ ಹೋರಾಟದಲ್ಲಿ ಭಾಗವಹಿಸಲಿದ್ದಾರೆ ಎಂದು ತಿಳಿಸಿದರು.

ವಸೀಮ್ ಬಡಾವಣೆಯನ್ನು ನಿರ್ಮಿಸಿದ ವ್ಯಕ್ತಿಯ ವಿರುದ್ಧ ಕಠಿಣ ಕ್ರಮ ಕೈಗೊಳ್ಳಬೇಕೆಂದು ಆಗ್ರಹಿಸಿದರು.

'ಹಣ ಪಡೆದು ಅಕ್ರಮವಾಗಿ ಮನೆಗಳನ್ನು ಒದಗಿಸಿರುವವರನ್ನು ಕಾನೂನು ಕ್ರಮದಡಿಯಲ್ಲಿ ಬಂಧಿಸಬೇಕು. ವಸೀಮ್ ಆಗಿರಲಿ ಅಥವಾ ವಿಶ್ವನಾಥ್ ಆಗಿರಲಿ, ತಪ್ಪು ಮಾಡಿದರೆ ಒದ್ದು ಒಳಗೆ ಹಾಕಬೇಕು. ವಸೀಮ್ ಬಡಾವಣೆಯ ನಿರ್ಮಾತೃ ಕಾಂಗ್ರೆಸ್‌ನ ಸ್ಥಳೀಯ ಮುಖಂಡ ಹಾಗೂ ಸಚಿವರಿಗೆ ಹತ್ತಿರದ ವ್ಯಕ್ತಿ' ಎಂದು ಆರೋಪಿಸಿದರು.

'₹3.5 ಲಕ್ಷದಿಂದ ₹4 ಲಕ್ಷಕ್ಕೆ ಗುಡಿಸಲು ಹಾಕಿಸುವ ಬಗ್ಗೆ ಧ್ವನಿ ಮುದ್ರಿಕೆಗಳು ನಮ್ಮಬಳಿ ಇವೆ. ಆಧಾರ್ ಕಾರ್ಡ್ ಹಾಗೂ ಮತದಾರರ ಗುರುತಿನ ಚೀಟಿ ಮಾಡಿಸಿ ಕೊಟ್ಟಿರುವ ದಾಖಲೆಗಳನ್ನು ಅಧಿಕಾರಿಗಳಿಗೆ ನೀಡಲಾಗುವುದು' ಎಂದು ಹೇಳಿದರು.

ಬಿಜೆಪಿ ರಾಜ್ಯ ಮಹಿಳಾ ಘಟಕದ ಉಪಾಧ್ಯಕ್ಷೆ ಮಾಳವಿಕಾ ಅವಿನಾಶ್, ಶಾಸಕರಾದ ಮುನಿರಾಜ್, ಕೆ.ಎಸ್. ನವೀನ್, ರಾಜ್ಯ ಕಾರ್ಯದರ್ಶಿ ತಮ್ಮೇಶ್ ಗೌಡ, ಬೆಂಗಳೂರು ಉತ್ತರ ಜಿಲ್ಲಾ ಘಟಕದ ಅಧ್ಯಕ್ಷ ಎಸ್. ಹರೀಶ್ ಉಪಸ್ಥಿತರಿದ್ದರು.

ಜಿಬಿಎಗೆ ವರದಿ ಸಲ್ಲಿಕೆ

ಕೋಗಿಲು ಬಡಾವಣೆಯಲ್ಲಿ ಮನೆ ಕಳೆದುಕೊಂಡವರ ಮಾಹಿತಿ ಸಂಗ್ರಹಿಸಿ ಕಂದಾಯ ಇಲಾಖೆ ಮತ್ತು ಉತ್ತರ ನಗರ ಪಾಲಿಕೆಯ ಅಧಿಕಾರಿಗಳು ಗ್ರೇಟರ್ ಬೆಂಗಳೂರು ಪ್ರಾಧಿಕಾರಕ್ಕೆ ವರದಿ ಸಲ್ಲಿಸಿದ್ದಾರೆ.

ಫಕೀರ್ ಕಾಲೊನಿಯ 40 ಮನೆ ತೆರವು ಮಾಡಲಾಗಿದ್ದು, ಅದರಲ್ಲಿ 56 ಕುಟುಂಬಗಳಿದ್ದವು. ನ್ಯೂ ಫಕೀರ್ ಕಾಲೊನಿಯಲ್ಲಿ 45 ಮನೆ ತೆರವು ಮಾಡಿದ್ದು, 50 ಕುಟುಂಬಗಳಿದ್ದವು. ವಸೀಂ ಲೇಔಟ್‌ನಲ್ಲಿ 82 ಮನೆ ತೆರವು ಮಾಡಿದ್ದು, 82 ಕುಟುಂಬಗಳಿದ್ದವು. ಇವುಗಳಲ್ಲಿ 156 ಮುಸ್ಲಿಂ, 31 ಹಿಂದೂ, ಒಂದು ಕ್ರಿಶ್ಚಿಯನ್ ಕುಟುಂಬ ಎಂದು ಗುರುತಿಸಲಾಗಿದೆ.

ದಾಖಲೆ ಪರಿಶೀಲನೆ: ಮನೆ ಕಳೆದುಕೊಂಡವರಿಂದ 250 ಅರ್ಜಿಗಳು ಬಂದಿದ್ದವು. ಅವರ ಮತದಾರರ ಚೀಟಿ, ಆಧಾರ್ ಕಾರ್ಡ್ ಇನ್ನಿತರ ದಾಖಲೆಗಳನ್ನು ಪರಿಶೀಲಿಸಲಾಯಿತು. ಐದು ಜನರಲ್ಲಿ ದಾಖಲೆಗಳಿರಲಿಲ್ಲ. ಉಳಿದವರಲ್ಲಿ ಈ ದಾಖಲೆಗಳಿದ್ದವು ಎಂದು ಯಲಹಂಕ ತಹಶೀಲ್ದಾರ್ ಶ್ರೇಯಸ್ ತಿಳಿಸಿದ್ದಾರೆ.

ಬಿಜೆಪಿ ಪ್ರತಿಭಟನೆ ನಾಳೆ

ಬೆಂಗಳೂರು: ಮನೆಗಳ ಮಂಜೂರಾತಿಗಾಗಿ ರಾಜೀವ್ ಗಾಂಧಿ ವಸತಿ ನಿಗಮಕ್ಕೆ 65,000 ಅರ್ಜಿಗಳು ಸಲ್ಲಿಕೆಯಾಗಿದ್ದು, ಕೋಗಿಲು ಬಡಾವಣೆಯ ನಿರಾಶ್ರಿತರಿಗೆ ಮನೆಗಳನ್ನು ಹಂಚಿಕೆ ಮಾಡುವಾಗ ಕನ್ನಡಿಗರಿಗೆ ಮೊದಲ ಆದ್ಯತೆ ನೀಡಬೇಕು ಎಂದು ವಿಧಾನಸಭೆ ವಿರೋಧ ಪಕ್ಷದ ನಾಯಕ ಆರ್.ಅಶೋಕ ಒತ್ತಾಯಿಸಿದರು.

ನಿಗಮಕ್ಕೆ ಭೇಟಿ ನೀಡಿ, ಅಧಿಕಾರಿಗಳ ಜತೆ ಚರ್ಚಿಸಿದ ಬಳಿಕ ಮಾತನಾಡಿದ ಅವರು, 'ನಿಗಮವು ಸುಮಾರು 7,000 ಮನೆಗಳನ್ನು ನಿರ್ಮಿಸಿದೆ. ಇನ್ನೂ 10,000 ಮನೆಗಳು ನಿರ್ಮಾಣ ಹಂತದಲ್ಲಿವೆ. ಕೇರಳ ಮುಖ್ಯಮಂತ್ರಿ ಪಿಣರಾಯಿ ವಿಜಯನ್ ಹಾಗೂ ಎಐಸಿಸಿ ಪ್ರಧಾನ ಕಾರ್ಯದರ್ಶಿ ವೇಣುಗೋಪಾಲ್ ನಡುವೆ ನಡೆಯುತ್ತಿರುವ ಸಂಘರ್ಷಕ್ಕೆ ಕನ್ನಡಿಗರು ಬಲಿಯಾಗಿದ್ದಾರೆ. 13,000 ಜನರು ಪ್ರವಾಹದಿಂದ ಮನೆ ಕಳೆದುಕೊಂಡಿದ್ದರೂ ಅವರಿಗೆ ಮನೆ ನೀಡಿಲ್ಲ' ಎಂದು ದೂರಿದರು.

'80 ವರ್ಷದ ಮಹಿಳೆಯೊಬ್ಬರು ಪೂರ್ತಿ ಮೊತ್ತ ಪಾವತಿಸಿದರೂ ಅವರಿಗೆ ಮನೆ ವಿತರಣೆಯಾಗಿಲ್ಲ. ಕಳೆದ ನಾಲ್ಕು ತಿಂಗಳಿಂದ ಅವರು ಅಲೆದಾಡುತ್ತಿದ್ದಾರೆ. ಕುಡಿಯುವ ನೀರು ಹಾಗೂ ವಿದ್ಯುತ್ ಸಂಪರ್ಕ ಸಿಕ್ಕಿಲ್ಲ. ಇದೆ ರೀತಿ ಸಾವಿರಾರು ಕನ್ನಡಿಗರು ಮನೆಗಾಗಿ ಕಾಯುತ್ತಿದ್ದಾರೆ. ಸರ್ಕಾರ ನಿರ್ಲಕ್ಷ್ಯ ಖಂಡಿಸಿ ಇದೇ ಜ.5ರಂದು ಪ್ರತಿಭಟನೆ ಹಮ್ಮಿಕೊಳ್ಳಲಾಗಿದೆ' ಎಂದರು.



ಶಿಕ್ಷಕಿಯರ ದಿನಾಚರಣೆಯಲ್ಲಿ ಸಾವಿತ್ರಿ ಬಾಯಿ ಫುಲೆ ಅವರ ಭಾವಚಿತ್ರಕ್ಕೆ ಪುಷ್ಪನಮನ ಸಲ್ಲಿಸಲಾಯಿತು

ಸಾವಿತ್ರಿಬಾಯಿ ಫುಲೆ ಜನ್ಮದಿನ: ಶಿಕ್ಷಕಿಯರ ದಿನಾಚರಣೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಗಂಡು ಮಕ್ಕಳಿಗೆ ಉತ್ತಮ ಗುಣಮಟ್ಟದ ಶಿಕ್ಷಣ, ಹೆಣ್ಣು ಮಕ್ಕಳಿಗೆ ಸಾಮಾನ್ಯ ಶಿಕ್ಷಣ ಕೊಡಿಸುವ ಪೋಷಕರ ಮನೋಭಾವ ಬದಲಾಗಬೇಕು ಎಂದು ಡಾ.ಮನಮೋಹನ್ ಸಿಂಗ್ ಬೆಂಗಳೂರು ನಗರ ವಿಶ್ವವಿದ್ಯಾಲಯದ ಕುಲಪತಿ ಬಿ.ರಮೇಶ್ ಹೇಳಿದರು.

ಭಾರತದ ಪ್ರಥಮ ಶಿಕ್ಷಕಿ ಸಾವಿತ್ರಿ ಬಾಯಿ ಫುಲೆಯವರ ಜನ್ಮದಿನದ ಪ್ರಯುಕ್ತ ಡಾ.ಮನಮೋಹನ್ ಸಿಂಗ್ ಬೆಂಗಳೂರು ನಗರ ವಿಶ್ವವಿದ್ಯಾಲಯದ ಮಹಿಳಾ ಅಧ್ಯಯನ ಕೇಂದ್ರ ಹಮ್ಮಿಕೊಂಡಿದ್ದ 'ಶಿಕ್ಷಕಿಯರ ದಿನಾಚರಣೆ'ಯಲ್ಲಿ ಅವರು ಮಾತನಾಡಿದರು.

ವಿಶ್ವವಿದ್ಯಾಲಯಗಳಲ್ಲಿ ಹೆಣ್ಣು ಮಕ್ಕಳು ಶೇಕಡ 70ರಷ್ಟು ಇದ್ದಾರೆ. ಆದರೆ, ವೃತ್ತಿಪರ ಶಿಕ್ಷಣದ ಅವಕಾಶಗಳಿಂದ ವಂಚಿತರಾಗಿದ್ದಾರೆ ಎಂದರು.

ಸಾಮಾಜಿಕ ಕಾರ್ಯಕರ್ತೆ ಗಾಯತ್ರಿ ಎನ್. ಮಾತನಾಡಿ, 'ಬ್ರಿಟಿಷ್ ಭಾರತದಲ್ಲಿ ಸಾವಿತ್ರಿಬಾಯಿ ಫುಲೆ ನಡೆಸಿದ ಶಿಕ್ಷಣ ಕ್ರಾಂತಿಯ ಫಲವಾಗಿ ಇಂದು ಸ್ತ್ರೀಯರು ಅಧಿಕ ಸಂಖ್ಯೆಯಲ್ಲಿ ವಿದ್ಯಾಭ್ಯಾಸ ಪಡೆಯುವ ಅವಕಾಶ ಲಭ್ಯವಾಗಿದೆ. ಚರಿತ್ರೆಯ ಉದ್ದಕ್ಕೂ ಮಹಿಳೆಯರನ್ನು ಕಡೆಗಣಿಸಿದಂತೆ ಸಾವಿತ್ರಿಬಾಯಿ ಫುಲೆಯವರ ಸ್ತ್ರೀ ಸಬಲೀಕರಣದ ಅಮೋಘ ಕೊಡುಗೆಯನ್ನು ಕಡೆಗಣಿಸಲಾಗಿತ್ತು. ಬಹಳ ತಡವಾಗಿ ಸ್ಮರಿಸಲಾಗುತ್ತಿದೆ' ಎಂದು ವಿಶ್ಲೇಷಿಸಿದರು.

ಸಿಂಡಿಕೇಟ್ ಸದಸ್ಯರಾದ ಆಯಿಷಾ ಫರ್ಜಾನ, ಮಹಿಳಾ ಅಧ್ಯಯನ ಕೇಂದ್ರದ ನಿರ್ದೇಶಕಿ ಮೇಧಾ ಇಟಗಿ ಹುಯಿಲಗೋಳ, ವಾಣಿಜ್ಯ ನಿಕಾಯದ ಡೀನ್ ಕೆ.ಆರ್. ಜಲಜಾ, ಸಿಂಡಿಕೇಟ್ ಸದಸ್ಯರಾದ ಶಿಲ್ಪಶ್ರೀ, ಎಚ್. ಕೃಷ್ಣರಾಮ್, ವಿದ್ಯಾವಿಷಯಕ ಪರಿಷತ್ತಿನ ಸದಸ್ಯರಾದ ನಂದಕಿಶೋರ್ ಉಪಸ್ಥಿತರಿದ್ದರು.

ಸೀತೆಪಲ್ಲಿ ಶ್ರೀನಿವಾಸ್ ಕಮಾಂಡಿಂಗ್ ಇನ್ ಚೀಫ್

ಬೆಂಗಳೂರು: ಭಾರತೀಯ ವಾಯು ಪಡೆ ತರಬೇತಿ ಕಮಾಂಡ್‌ನ 'ವಾಯುಪಡೆ ಕಮಾಂಡಿಂಗ್-ಇನ್-ಚೀಫ್' (ಎಒಸಿ-ಇನ್-ಸಿ)ಆಗಿ ಏರ್ ಮಾರ್ಷಲ್ ಶ್ರೀನಿವಾಸ್ ಗುರುವಾರ ಅಧಿಕಾರ ವಹಿಸಿಕೊಂಡರು.

ರಾಷ್ಟ್ರೀಯ ರಕ್ಷಣಾ ಅಕಾಡೆಮಿಯ ಹಳೆಯ ವಿದ್ಯಾರ್ಥಿಯಾಗಿರುವ ಏರ್ ಮಾರ್ಷಲ್ ಶ್ರೀನಿವಾಸ್ ಅವರನ್ನು 1987ರಲ್ಲಿ ಐಎಎಫ್‌ನ ಫೈಟರ್ ವಿಭಾಗದಲ್ಲಿ ನಿಯೋಜಿಸಲಾಗಿತ್ತು. ಮಿಗ್-21, ಇಸ್ಕ್ರಾ, ಕಿರಣ್, ಪಿಸಿ-7 ಎಂಕೆ II, ಎಚ್‌ಪಿಟಿ-32, ಮೈಕ್ರೊಲೈಟ್ ಸೇರಿದಂತೆ ವಿವಿಧ ವಿಮಾನಗಳಲ್ಲಿ 4,200 ಗಂಟೆಗಳ ಹಾರಾಟದ ಅನುಭವ ಹೊಂದಿದ್ದಾರೆ. 'ಎ' ಶ್ರೇಣಿಯ ಫ್ಲೈಯಿಂಗ್ ಬೋಧಕರಾಗಿದ್ದು, ಚೇತಕ್/ಚೀತಾ ಹೆಲಿಕಾಪ್ಟರ್‌ನಲ್ಲಿ 2ನೇ ಪೈಲಟ್ ಮತ್ತು ಪೆಚೋರಾ ಕ್ಷಿಪಣಿ ವ್ಯವಸ್ಥೆಯಲ್ಲಿ ಕಾರ್ಯಾಚರಣೆ ಅಧಿಕಾರಿಯಾಗಿ ಕಾರ್ಯನಿರ್ವಹಿಸಿದ್ದರು.

ವಾಯುಪಡೆ ಅಕಾಡೆಮಿಯ ಕಮಾಂಡೆಂಟ್, ಪಶ್ಚಿಮ ಗಡಿಯಲ್ಲಿರುವ ಫೈಟರ್ ಬೇಸ್‌ನ ಏರ್ ಆಫೀಸರ್ ಕಮಾಂಡಿಂಗ್ ಮತ್ತು ಪ್ರಮುಖ ಫ್ಲೈಯಿಂಗ್ ತರಬೇತಿ ನೆಲೆ. ಎಒಸಿ ಅಡ್ವಾನ್ಸ್ ಎಚ್‌ಕ್ಯೂ ವೆಸ್ಟರ್ನ್ ಏರ್ ಕಮಾಂಡ್ (ಜೈಪುರ), ಫ್ಲೈಯಿಂಗ್ ಇನ್‌ಸ್ಟ್ರಕ್ಟರ್ಸ್ ಸ್ಕೂಲ್‌ನ ಕಮಾಂಡಿಂಗ್ ಆಫೀಸರ್, ಇನ್‌ಸ್ಟಿಟ್ಯೂಟ್ ಆಫ್ ಏರೋಸ್ಪೇಸ್ ಸೇಫ್ಟಿ ಮತ್ತು ಸಿಒ ಕಮಾಂಡೆಂಟ್ ಆಗಿ ಕಾರ್ಯನಿರ್ವಹಿಸಿದ್ದಾರೆ. ಪ್ರಧಾನ ಕಚೇರಿ ಎಸ್‌ಡಬ್ಲ್ಯುಎಸಿಯಲ್ಲಿ ಹಿರಿಯ ಅಧಿಕಾರಿಯಾಗಿದ್ದ ಅವರನ್ನು ಈಗ ಕಮಾಂಡಿಂಗ್-ಇನ್-ಚೀಫ್ ಮಾಡಲಾಗಿದೆ.

ಶ್ರೀನಿವಾಸ್ ಅವರ ಅತ್ಯುತ್ತಮ ಸೇವೆಯನ್ನು ಗುರುತಿಸಿ 2017ರಲ್ಲಿ ವಿಶಿಷ್ಟ ಸೇವಾ ಪದಕ ಮತ್ತು 2024ರಲ್ಲಿ ಅತಿ ವಿಶಿಷ್ಟ ಸೇವಾ ಪದಕವನ್ನು ನೀಡಿ ರಾಷ್ಟ್ರಪತಿಯವರು ಗೌರವಿಸಿದ್ದಾರೆ.



ಬೊಮ್ಮನಹಳ್ಳಿಯ (ಸಿಎಂಸಿ ಕಟ್ಟಡ) ಜಿಬಿಎ ಜಂಟಿ ಆಯುಕ್ತರ ಕಚೇರಿಯಲ್ಲಿ ಉದ್ಯೋಗಿಗಳ ಭವಿಷ್ಯ ನಿಧಿ ಸಂಸ್ಥೆ (ಇಪಿಎಫ್‌ಒ) ಅಧಿಕಾರಿಗಳು ಪಿಎಂವಿಬಿಆರ್‌ವೈ ಮತ್ತು ಇಇಸಿ 2025 ಯೋಜನೆಗಳ ಕುರಿತು ಪೌರಕಾರ್ಮಿಕರು ಮತ್ತು ಬಿಬಿಎಂಪಿ ಗುತ್ತಿಗೆದಾರರಿಗೆ ಮಾಹಿತಿ ನೀಡಿದರು. ಇಪಿಎಫ್‌ಒ ಪ್ರಾದೇಶಿಕ ಸಮಿತಿಯ ಸದಸ್ಯ ನಾಗನಾಥ್, ಆರ್‌ಪಿಎಫ್‌ಸಿ–I ಸಂತೋಷ್ ಜೈಸ್ವಾಲ್, ಎಪಿಎಫ್‌ಸಿ ಎಸ್‌. ಮಂಜುನಾಥ್ ಹಾಜರಿದ್ದರು

'ಎಚ್‌ಎಂಟಿ ಭೂಮಿ ಮರಳಿ ಪಡೆಯಲು ಶ್ರಮಿಸಿ'

ಪ್ರಜಾವಾಣಿ ವಾರ್ತೆ

ಬೆಂಗಳೂರು: ಎಚ್‌ಎಂಟಿ ವಶದಲ್ಲಿರುವ ಜಮೀನು ಅರಣ್ಯವೇ ಆಗಿರಲಿ, ಬ್ರಿಟಿಷರ ಕಾಲದಲ್ಲಿ ನೀಡಲಾಗಿರುವ ಗುತ್ತಿಗೆಯೇ ಆಗಿರಲಿ ಅದನ್ನು ಉಳಿಸಿಕೊಳ್ಳಲು ಶ್ರಮಿಸಬೇಕು ಎಂದು ಅರಣ್ಯ ಸಚಿವ ಈಶ್ವರ ಖಂಡ್ರೆ ಅಧಿಕಾರಿಗಳಿಗೆ ಸೂಚಿಸಿದರು.



ಈಶ್ವರ ಖಂಡ್ರೆ

ಇಲಾಖೆ ಅಧಿಕಾರಿಗಳ ಜತೆ ಗುರುವಾರ ಸಭೆ ನಡೆಸಿದ ಅವರು, 'ಈ ಜಮೀನಿನ ಮೌಲ್ಯ ಸುಮಾರು ₹50 ಸಾವಿರ ಕೋಟಿಗೂ ಹೆಚ್ಚು ಇದೆ. ಈ ಅರಣ್ಯ ಭೂಮಿಯ ವಿವಾದ ಹೈಕೋರ್ಟ್ ಮತ್ತು ಸುಪ್ರೀಂ ಕೋರ್ಟ್‌ನಲ್ಲಿದ್ದು ಬೆನ್ನು ಹತ್ತಿ ಮರಳಿ ಪಡೆಯಬೇಕು ಎಂದು ಸೂಚಿಸಿದರು.

'ನಾನು ಸಚಿವನಾದ ಬಳಿಕ ಅರಣ್ಯ ಒತ್ತುವರಿ ತೆರವಿಗೆ ಹಾಗೂ ಪ್ರಕೃತಿ, ಪರಿಸರ ಸಂರಕ್ಷಣೆಗೆ ಒತ್ತು ನೀಡಿದ್ದು, ನಿಮ್ಮೆಲ್ಲರ ಸಹಕಾರದಿಂದ ಕೋಟ್ಯಂತರ ರೂಪಾಯಿ ಬೆಲೆ ಬಾಳುವ ಅರಣ್ಯ ಒತ್ತುವರಿ ತೆರವುಗೊಳಿಸಲಾಗಿದೆ. ವೃಕ್ಷ ಸಂರಕ್ಷಣೆ, ಸಂವರ್ಧನೆ ಆಗುತ್ತಿದೆ' ಎಂದು ಹೇಳಿದರು.

'ಅಧಿಕಾರಿಗಳ ಮಾರ್ಗದರ್ಶನದಲ್ಲಿ ಮುಂಚೂಣಿ ಸಿಬ್ಬಂದಿ ಉತ್ತಮವಾಗಿ ಕಾರ್ಯನಿರ್ವಹಿಸುತ್ತಿದ್ದು, ಕರ್ನಾಟಕದ ಅರಣ್ಯ ಇಲಾಖೆ ದೇಶಕ್ಕೇ ಮಾದರಿಯಾಗಿದೆ. ಕೊಡಗಿನಲ್ಲಿ ಆನೆ ದಾಳಿಯಿಂದ ವ್ಯಕ್ತಿಯೊಬ್ಬರು ಮೃತಪಟ್ಟಿದ್ದಾರೆ. ಇದು ನೋವಿನ ಸಂಗತಿ. ಮಾನವ–ವನ್ಯಜೀವಿ ಸಂಘರ್ಷ ದೊಡ್ಡ ಸವಾಲಾಗಿದ್ದು, ಇದಕ್ಕೆ ಶಾಶ್ವತ ಪರಿಹಾರ ಒದಗಿಸಲು ತಜ್ಞರ ಸಲಹೆ ಪಡೆದು ಎಲ್ಲರೂ ಪ್ರಾಮಾಣಿಕತೆ ಮತ್ತು ಶ್ರದ್ಧೆಯಿಂದ ಕೆಲಸ ಮಾಡಬೇಕು' ಎಂದು ಸಲಹೆ ನೀಡಿದರು.

ಸಭೆಯಲ್ಲಿ ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ ಮತ್ತು ಅರಣ್ಯ ಪಡೆ ಮುಖ್ಯಸ್ಥೆ ಮೀನಾಕ್ಷಿ ನೇಗಿ, ಮುಖ್ಯ ವನ್ಯಜೀವಿ ಪರಿಪಾಲಕರಾದ ಪಿ.ಸಿ.ರೇ, ಎಪಿಸಿಸಿಎಫ್ ಕುಮಾರ್ ಪುಷ್ಕರ್ ಮತ್ತು ಮನೋಜ್ ಪಾಲ್ಗೊಂಡಿದ್ದರು.

'ಬೆಂಗಳೂರು ಗ್ಯಾಸ್ ಚೇಂಬರ್ ಆಗಬಾರದು'

ದೆಹಲಿಯಂತೆ ಬೆಂಗಳೂರು ಗ್ಯಾಸ್ ಚೇಂಬರ್ ಆಗದಂತೆ ಎಚ್ಚರಿಕೆ ವಹಿಸಬೇಕು. ಇದಕ್ಕಾಗಿ ಮುಂಜಾಗರೂಕತಾ ಕ್ರಮಗಳನ್ನು ಕೈಗೊಳ್ಳಬೇಕು ಎಂದೂ ಈಶ್ವರ ಖಂಡ್ರೆ ತಿಳಿಸಿದರು.

'ಇತ್ತೀಚೆಗೆ ದೆಹಲಿಗೆ ಹೋಗಿದ್ದಾಗ ಹೊಗೆ ಮತ್ತು ಮಂಜಿನಿಂದ ಕೂಡಿದ ವಾತಾವರಣದಲ್ಲಿ ಉಸಿರಾಡಲೂ ಕಷ್ಟವಾಯಿತು' ಎಂದರು.

ಬೆಂಗಳೂರು ನಗರದ ರಕ್ಷಣೆಗೆ ಕಟಿಬದ್ಧರಾಗಿ, ರಾಜ್ಯ ಸರ್ಕಾರ ಮತ್ತು ಕೇಂದ್ರ ಸರ್ಕಾರ ಪರಿಸರ ಸಂರಕ್ಷಣೆಗಾಗಿ ರೂಪಿಸಿರುವ ಎಲ್ಲ ಕಾಯ್ದೆಗಳನ್ನು ಕಟ್ಟುನಿಟ್ಟಾಗಿ ಪಾಲಿಸುವಂತೆಯೂ ಅವರು ಸೂಚಿಸಿದರು.

ದಾಸನಪುರ: ಅಗತ್ಯ ದಾಖಲೆ ಪಡೆಯಲು ಲಂಚಕ್ಕೆ ಬೇಡಿಕೆ–ಆರೋಪ

ಪಂಚಾಯಿತಿಗೆ ಬೀಗ ಹಾಕಿ ಪ್ರತಿಭಟನೆ

ಪ್ರಜಾವಾಣಿ ವಾರ್ತೆ

ನೆಲಮಂಗಲ: 'ಅಗತ್ಯ ದಾಖಲೆಗಳನ್ನು ಪಡೆಯಲು ಲಂಚಕ್ಕೆ ಬೇಡಿಕೆ ಇಡುತ್ತಾರೆ' ಎಂದು ಆರೋಪಿಸಿ ಪಂಚಾಯಿತಿ ಸದಸ್ಯರು ಮತ್ತು ಸಾರ್ವಜನಿಕರು ಪಿಡಿಒ ವಿರುದ್ಧ ಪ್ರತಿಭಟನೆ ನಡೆಸಿ ಬೆಂಗಳೂರು ಉತ್ತರ ತಾಲ್ಲೂಕು ದಾಸನಪುರ ಪಂಚಾಯಿತಿ ಕಚೇರಿಗೆ ಶನಿವಾರ ಬೀಗ ಹಾಕಿ ಪ್ರತಿಭಟಿಸಿದರು.

'ಖಾತೆ, ಮರಣ ಪ್ರಮಾಣಪತ್ರ ಹಾಗೂ ಇತರೆ ಕಂದಾಯ, ವೈಯಕ್ತಿಕ ದಾಖಲೆಗಳನ್ನು ಪಡೆಯಲು ಅರ್ಜಿ ಹಾಕಿ, ಹಣ ನೀಡುವವರೆಗೂ ಖಡತಗಳು ಮುಂದಕ್ಕೆ ಹೋಗುವುದಿಲ್ಲ. ವಿಲೇವಾರಿ ಆಗುವುದಿಲ್ಲ. ಕೂಡಲೇ ಪಿಡಿಒ ಉಷಾ ಅವರನ್ನು ಅಮಾನತು, ಇಲ್ಲವೆ ವರ್ಗಾಯಿಸಬೇಕು, ಹಿರಿಯ ಅಧಿಕಾರಿಗಳು ಸ್ಥಳಕ್ಕೆ ಬರುವವರೆಗೂ ಪ್ರತಿಭಟನೆ ನಿಲ್ಲಿಸುವುದಿಲ್ಲ' ಎಂದು ಪಂಚಾಯಿತಿ ಸದಸ್ಯರು ಹಾಗೂ ಸಾರ್ವಜನಿಕರು ಪ್ರತಿಭಟಿಸಿದರು.

'ಸಾರ್ವಜನಿಕರೊಂದಿಗೆ ಅಗೌರವದಿಂದ ನಡೆದುಕೊಳ್ಳುತ್ತಾರೆ. ನೇರವಾಗಿ ಲಂಚಕ್ಕೆ ಬೇಡಿಕೆ ಇಡುತ್ತಾರೆ. ಹಣ ಕೊಟ್ಟವರಿಗೆ ಕೆಲಸ ಮಾಡಿಕೊಡುತ್ತಾರೆ. ಸರಿಯಾದ ಸಮಯಕ್ಕೆ ಕೆಲಸಕ್ಕೆ ಹಾಜರಾಗುವುದಿಲ್ಲ' ಎಂದು ಮಧುಸೂದನ್ ದೂರಿದರು.

'ಖಡತ ವಿಲೇವಾರಿ ಮಾಡಲು ನ್ಯಾಯಾಲಯದ ಆದೇಶವಿದ್ದರೂ ಆಗುವುದಿಲ್ಲ ಎಂದು ಉತ್ತರ ಹೇಳುತ್ತಾರೆ, ಕಾರಣವನ್ನೂ ತಿಳಿಸುತ್ತಿಲ್ಲ. 11 ತಿಂಗಳಿಂದ ಅಲೆದು ಅಲೆದು ಸುಸ್ತಾಗಿದೆ' ಎಂದು ಹನುಮಂತರಾಯಪ್ಪ ಹೇಳಿದರು.

ಪ್ರತಿಭಟನೆ ತೀವ್ರ ಸ್ವರೂಪ ಪಡೆಯುತ್ತಿದ್ದಂತೆ, ಮಾದನಾಯಕನಹಳ್ಳಿ ಪೊಲೀಸರು ಸ್ಥಳಕ್ಕೆ ಬಂದು ಬೀಗ ತೆಗೆಸಿ ಪಿಡಿಒ ಹಾಗೂ ಸಿಬ್ಬಂದಿಯನ್ನು ಒಳಗೆ ಕಳುಹಿಸಿದರು. ಪ್ರತಿಭಟನಕಾರರು ಧಿಕ್ಕಾರ ಕೂಗುವ ವೇಳೆ, ಪಿಡಿಒ ಉಷಾ ಜೈಕಾರ ಕೂಗಿದರು.

ಸ್ಥಳಕ್ಕೆ ಕಾರ್ಯನಿರ್ವಹಣಾಧಿಕಾರಿ ಜೋಸೆಫ್ ಭೇಟಿ ನೀಡಿದರು. ಸಾರ್ವಜನಿಕರ ದೂರುಗಳನ್ನು ಆಲಿಸಿ ತನಿಖೆ ನಡೆಸಿ ಹತ್ತು ದಿನಗಳ ಒಳಗಾಗಿ ಕ್ರಮ ಕೈಗೊಳ್ಳಲಾಗುವುದು ಎಂದು ತಿಳಿಸಿದರು.



ಪ್ರತಿಭಟನಕಾರರು ಧಿಕ್ಕಾರ ಕೂಗುವ ವೇಳೆ ಪಿಡಿಒ ಉಷಾ ಅವರು ಜೈಕಾರ ಕೂಗಿದರು

20 ಕೆರೆಗಳಲ್ಲಿ ಪರಿಸರಸ್ನೇಹಿ ಬೋಟಿಂಗ್

ಪ್ರವಾಸೋದ್ಯಮ ಇಲಾಖೆ ಸಹಯೋಗದಲ್ಲಿ ಯೋಜನೆ: ಜಿಬಿಎ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಜಿಬಿಎ ವ್ಯಾಪ್ತಿಯಲ್ಲಿರುವ 20 ಕೆರೆಗಳಲ್ಲಿ ಪರಿಸರಸ್ನೇಹಿ ಬೋಟಿಂಗ್ ವ್ಯವಸ್ಥೆಯನ್ನು ಮೊದಲ ಹಂತದಲ್ಲಿ ಆರಂಭಿಸಲು ಕ್ರಮ ಕೈಗೊಳ್ಳಬೇಕು ಎಂದು ಜಿಬಿಎ ಮುಖ್ಯ ಆಯುಕ್ತ ಎಂ. ಮಹೇಶ್ವರ್ ರಾವ್ ಅಧಿಕಾರಿಗಳಿಗೆ ಸೂಚಿಸಿದರು.

ವಿವಿಧ ವಿಷಯಗಳ ಕುರಿತು ಅಧಿಕಾರಿಗಳೊಂದಿಗೆ ಶನಿವಾರ ಸಭೆ ನಡೆಸಿದ ಅವರು, 'ಕೆರೆಗಳನ್ನು ಸಾರ್ವಜನಿಕ ಆಕರ್ಷಣಾ ಕೇಂದ್ರಗಳಾಗಿ ಅಭಿವೃದ್ಧಿ ಪಡಿಸಬೇಕು. ಈ ಉದ್ದೇಶದಿಂದ ಪ್ರವಾಸೋದ್ಯಮ ಇಲಾಖೆಯೊಂದಿಗೆ ಸಮನ್ವಯ ಸಾಧಿಸಬೇಕು' ಎಂದರು.

'ಕೆರೆಗಳನ್ನು ಆಕರ್ಷಣಾ ತಾಣಗಳಾಗಿ ಮಾಡುವುದರಿಂದ ನಾಗರಿಕರ ಒಡನಾಟ ಹೆಚ್ಚಾಗಲಿದೆ. ಕೆರೆಗಳಲ್ಲಿ ಇಂಧನ ಆಧಾರಿತ ಬೋಟಿಂಗ್ ವ್ಯವಸ್ಥೆಗೆ ಅವಕಾಶ ಇರುವುದಿಲ್ಲ. ಆದ್ದರಿಂದ ಮಾಲಿನ್ಯರಹಿತ, ಪರಿಸರ ಸ್ನೇಹಿ ಬೋಟಿಂಗ್ ವ್ಯವಸ್ಥೆಯನ್ನು ಜಾರಿಗೊಳಿಸುವಂತೆ ಯೋಜನೆ ರೂಪಿಸಬೇಕು. ಜೊತೆಗೆ ಜಲಚರ ಜೀವಜಾಲಕ್ಕೆ ಯಾವುದೇ ರೀತಿಯ ತೊಂದರೆಯಾಗದಂತೆ ಶೂನ್ಯ ಮಾಲಿನ್ಯ ವ್ಯವಸ್ಥೆಯನ್ನು ರೂಪಿಸಬೇಕು' ಎಂದು ಅವರು ನಿರ್ದೇಶನ ನೀಡಿದರು.

ಜಿಬಿಎ ವ್ಯಾಪ್ತಿಯ ಎಲ್ಲ ಅಭಿವೃದ್ಧಿ ಕಾರ್ಯಗಳಲ್ಲಿ ಪ್ರಕೃತಿ ಆಧಾರಿತ ಹಾಗೂ ಪರಿಸರ ಸ್ನೇಹಿ ತತ್ವಗಳಿಗೆ ಆದ್ಯತೆ ನೀಡಬೇಕು. ಪರಿಸರ ಸ್ನೇಹಿ ಸಾರ್ವಜನಿಕ ಆಕರ್ಷಣಾ ಚಟುವಟಿಕೆಗಳು ಮತ್ತು ಪರಿಣಾಮಕಾರಿ ಪ್ರವಾಹ ನಿಯಂತ್ರಣ ಕ್ರಮಗಳನ್ನು ಕೇಂದ್ರಬಿಂದುವಾಗಿ ಇಟ್ಟುಕೊಂಡು ಕಾರ್ಯನಿರ್ವಹಿಸುವಂತೆ ಸೂಚಿಸಿದರು.

ಬಾತುಕೋಳಿಗಳು ನೀರಿನ ಸ್ವಾಭಾವಿಕ 'ಏರೇಟರ್ಸ್' ಹಾಗೂ ನೀರಿನ ಗುಣಮಟ್ಟದ ಸುಧಾರಣೆಗೆ ಸಹಕಾರಿಯಾಗಿವೆ. ಆದ್ದರಿಂದ ಕೆರೆಗಳಲ್ಲಿ ಬಾತುಕೋಳಿಗಳನ್ನು ಸಾಕುವ ಬಗ್ಗೆ ಸಾಧಕ-ಬಾಧಕಗಳನ್ನು ಪರಿಶೀಲಿಸಬೇಕು. ಅದು ಸಾಧ್ಯವಿದ್ದಲ್ಲಿ, ಬಾತುಕೋಳಿಗಳ ಪಾಲನೆ ಮತ್ತು ನಿರ್ವಹಣೆಯ ಸಂಪೂರ್ಣ ಹೊಣೆಗಾರಿಕೆಯನ್ನು ಕಾನೂನಾತ್ಮಕತೆ ದೃಷ್ಟಿಯಿಂದ ಟೆಂಡರ್ ಮೂಲಕ ವಹಿಸಬೇಕು ಎಂದರು.

ನಗರ ಪಾಲಿಕೆಗಳು ಹಾಗೂ ಸಂಬಂಧಿತ ಸಂಸ್ಥೆಗಳು ಕೈಗೊಳ್ಳುವ ಎಲ್ಲಾ ಕಾರ್ಯಗಳು ಪ್ರಕೃತಿ ಆಧಾರಿತ ಮತ್ತು ಪರಿಸರ ಸ್ನೇಹಿ ತತ್ವಗಳಿಗೆ ಕಟ್ಟುನಿಟ್ಟಾಗಿ ಅನುಗುಣವಾಗಿರಬೇಕು. ಇದರಿಂದ ದೀರ್ಘಕಾಲಿಕ ಪರಿಸರ ಸ್ಥಿರತೆ ಹಾಗೂ ಹವಾಮಾನ ಪ್ರತಿರೋಧ ಸಾಮರ್ಥ್ಯವನ್ನು ಹೆಚ್ಚಿಸಬಹುದು ಎಂದು ಅವರು ತಿಳಿಸಿದರು.

ವಿಶೇಷ ಆಯುಕ್ತ ಆರ್. ರಾಮಚಂದ್ರನ್, ಮುಖ್ಯ ಎಂಜಿನಿಯರ್ ಹೇಮಲತಾ, ಕಾರ್ಯಪಾಲಕ ಎಂಜಿನಿಯರ್ ನಿತ್ಯಾ ಉಪಸ್ಥಿತರಿದ್ದರು.

ಮುಖ್ಯಾಂಶಗಳು

- ಸಾರ್ವಜನಿಕ ಆಕರ್ಷಣಾ ಕೇಂದ್ರಗಳಾಗಿ ಅಭಿವೃದ್ಧಿ ಪಡಿಸಬೇಕು
- ಪರಿಸರ ಸ್ನೇಹಿ ತತ್ವಗಳಿಗೆ ಆದ್ಯತೆ ನೀಡಬೇಕು
- ಶೂನ್ಯಮಾಲಿನ್ಯ ವ್ಯವಸ್ಥೆ ರೂಪಿಸಬೇಕು



ಪ್ರವಾಹ ನಿಯಂತ್ರಣಕ್ಕೆ ಪರಿಹಾರ

ನಗರದಲ್ಲಿನ ಪ್ರವಾಹ ಪೀಡಿತ ಪ್ರದೇಶಗಳನ್ನು ಗುರುತಿಸಿ, ಪ್ರಕೃತಿ ಆಧಾರಿತ ಪ್ರವಾಹ ನಿಯಂತ್ರಣ ಪರಿಹಾರಗಳನ್ನು ರೂಪಿಸಬೇಕು. ಮಳೆಗಾಲಕ್ಕೂ ಮುನ್ನ ಮುನ್ನೆಚ್ಚರಿಕಾ ಕ್ರಮಗಳನ್ನು ಕೈಗೊಳ್ಳುವ ಜೊತೆಗೆ, ಬೃಹತ್ ನೀರುಗಾಲುವೆಗಳಲ್ಲಿ ಹೂಳೆತ್ತುವುದು, ಅಡ್ಡಿಯಾಗಿರುವ ತಡೆಗಳನ್ನು ತೆರವುಗೊಳಿಸುವುದು ಹಾಗೂ ನೈಸರ್ಗಿಕ ನೀರು ಹರಿವಿನ ವ್ಯವಸ್ಥೆಯನ್ನು ಪುನಶ್ಚೇತನಗೊಳಿಸುವ ಕಾರ್ಯಗಳನ್ನು ಆದ್ಯತೆಯಿಂದ ಕೈಗೊಳ್ಳಬೇಕು ಎಂದು ಮಹೇಶ್ವರ್ ರಾವ್ ಅವರು ಅಧಿಕಾರಿಗಳಿಗೆ ನಿರ್ದೇಶನ ನೀಡಿದರು.

ಮುಂದಿನ ನಾಲ್ಕು ತಿಂಗಳೊಳಗೆ ಪೂರ್ಣಗೊಳಿಸಬಹುದಾದ ಪ್ರವಾಹ ನಿಯಂತ್ರಣ ಕಾರ್ಯಗಳಿಗಾಗಿ ಸಮಗ್ರ ಕಾರ್ಯಯೋಜನೆಯನ್ನು ತಯಾರಿಸುವಂತೆ ಸೂಚಿಸಿ, ಮಳೆಗಾಲದಲ್ಲಿ ಪ್ರವಾಹದ ಪರಿಣಾಮವನ್ನು ಕಡಿಮೆಗೊಳಿಸುವ ಉದ್ದೇಶದಿಂದ ಅತಿ ಸೂಕ್ಷ್ಮ ಹಾಗೂ ಅಪಾಯಕಾರಿ ಪ್ರದೇಶಗಳಿಗೆ ಹೆಚ್ಚಿನ ಆದ್ಯತೆ ನೀಡಿ ಸಮಸ್ಯೆಗಳನ್ನು ಬಗೆಹರಿಸುವಂತೆ ತಿಳಿಸಿದರು.

ಪಾಲಿಕೆಗಳಿಗೆ ಆದಾಯ

'ಬೋಟಿಂಗ್ ವ್ಯವಸ್ಥೆ ಕಲ್ಪಿಸುವ ಅನುಕೂಲಕರವಾಗಿರುವ ಕೆರೆಗಳನ್ನು ಪಟ್ಟಿ ಮಾಡಲಾಗುತ್ತದೆ. ಬೋಟಿಂಗ್ ವ್ಯವಸ್ಥೆಯಿದ್ದಾಗ ಸುತ್ತಮುತ್ತ ವಾಹನ ನಿಲುಗಡೆ, ತಿಂಡಿ-ತಿನಿಸುಗಳ ಸೌಲಭ್ಯ ಇರಬೇಕು. ಇದಕ್ಕಾಗಿ ದೊಡ್ಡದಾದ ಕೆರೆಗಳನ್ನೇ ಗುರುತಿಸಬೇಕಾಗಿದೆ. ಜಿಬಿಎ ವತಿಯಿಂದ ಕೆರೆಗಳ ಪಟ್ಟಿ ತಯಾರಿಸಿ, ಯೋಜನೆಯನ್ನು ಕರ್ನಾಟಕ ಕೆರೆ ಸಂರಕ್ಷಣೆ ಮತ್ತು ಅಭಿವೃದ್ಧಿ ಪ್ರಾಧಿಕಾರಕ್ಕೆ (ಕೆಟಿಸಿಡಿಎ) ಸಲ್ಲಿಸಲಾಗುತ್ತದೆ. ಅವರಿಂದ ಸಮ್ಮತಿ ದೊರೆತ ಮೇಲೆ ಅದನ್ನು ಪ್ರವಾಸೋದ್ಯಮ ಇಲಾಖೆಗೆ ನೀಡಲಾಗುತ್ತದೆ' ಎಂದು ಜಿಬಿಎ ಕಾರ್ಯಪಾಲಕ ಎಂಜಿನಿಯರ್ ನಿತ್ಯಾ ತಿಳಿಸಿದರು.

'ಪ್ರವಾಸೋದ್ಯಮ ಇಲಾಖೆ ಬೋಟಿಂಗ್ ವ್ಯವಸ್ಥೆ ಕಲ್ಪಿಸಲು ಅಗತ್ಯ ಕ್ರಮವನ್ನು ಕೈಗೊಳ್ಳಬೇಕು. ಪ್ರತಿಯೊಂದು ಕೆರೆಗೆ ಪ್ರತಿ ತಿಂಗಳು ಅಥವಾ ಪ್ರತಿ ವರ್ಷಕ್ಕೆ ವಂತಿಗೆಯನ್ನು ಆಯಾ ನಗರ ಪಾಲಿಕೆಗಳಿಗೆ ಪಾವತಿಸಬೇಕಾಗುತ್ತದೆ' ಎಂದು ಮಾಹಿತಿ ನೀಡಿದರು.



ಜಿಬಿಎ– ನಗರ ಪಾಲಿಕೆಗಳ ಸಾಧಕ ನೌಕರರಿಗೆ 'ಸಾಲುಮರದ ತಿಮ್ಮಕ್ಕ ಪ್ರಶಸ್ತಿ' ಪ್ರದಾನ ಮಾಡಲಾಯಿತು

'ಎಲ್ಲೆಂದರಲ್ಲಿ ಕಸ ಹಾಕಬೇಡಿ'

ಬಿಬಿಎಂಪಿ ನೌಕರರ ಸಹಕಾರ ಸಂಘದಿಂದ ಪ್ರತಿಭಾ ಪುರಸ್ಕಾರ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಕಸ ಎತ್ತಿಕೊಂಡು ಹೋಗುತ್ತಾರೆ ಎಂದು ಉಡಾಫೆಯಿಂದ ನಗರದಲ್ಲಿ ಜನರು ಎಲ್ಲೆಂದರಲ್ಲಿ ಕಸ ಬಿಸಾಕುತ್ತಿದ್ದಾರೆ. ಕಸ ಬಿಸಾಡುವವರ ಕೈಯಲ್ಲಿ ಕಸ ಎತ್ತುವ ಕೆಲಸ ಮಾಡಿಸಬೇಕು ಆಗ ಅದರ ನೋವು ಕಷ್ಟ ತಿಳಿಯುತ್ತದೆ' ಎಂದು ನಟಿ ಲಕ್ಷ್ಮೀ ತಿಳಿಸಿದರು.

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ನೌಕರರ ಸಹಕಾರ ಸಂಘ ನಿಯಮಿತ 112ನೇ ಸಂಸ್ಥಾಪನಾ ದಿನಾಚರಣೆ ಮತ್ತು ಪ್ರತಿಭಾ ಪುರಸ್ಕಾರ, ಸಾಲುಮರದ ತಿಮ್ಮಕ್ಕ ಪ್ರಶಸ್ತಿ ಪ್ರದಾನ ಸಮಾರಂಭದಲ್ಲಿ ಅವರು ಮಾತನಾಡಿದರು.

'ಪೌರ ಕಾರ್ಮಿಕರು ಎಷ್ಟು ಕಷ್ಟಪಟ್ಟು ಕೆಲಸ ಮಾಡುತ್ತಾರೆ. ಯಾರೂ ಕಸ ಬಿಸಾಡಬೇಡಿ. ಎಲ್ಲರು ನಿಸ್ವಾರ್ಥದಿಂದ, ಶುದ್ಧ ಮನಸ್ಸಿನಿಂದ ಬಾಳಬೇಕು' ಎಂದು ಸಲಹೆ ನೀಡಿದರು.

'ಸೌಂದರ್ಯ ಮುಖ್ಯವಲ್ಲ, ಮನಸ್ಸು ಸುಂದರವಾಗಿರಬೇಕು. ಇನ್ನೊಬ್ಬರಗೊಸ್ಕರ ನಾವು ಜೀವನ ಮಾಡಬಾರದು. ಪ್ರತಿಯೊಂದು ಮಕ್ಕಳಿಗೆ ತಾಯಿ ರಕ್ತ ಕುಡಿಸಿ ಬೆಳಸಿದ್ದಾಳೆ, ಧೈರ್ಯವಾಗಿ ಬದುಕು ಸಾಗಿಸಿ. ಜೀವನದಲ್ಲಿ ನಗು ಎಂಬುದು ತಿಳಿದಿರುವುದು ಮನುಷ್ಯರಿಗೆ ಮಾತ್ರ, ಜನರು ನಗುವುದನ್ನ ಮರೆತ್ತಿದ್ದಾರೆ. ಪ್ರಕೃತಿ ದೇವರು ಎಂಬುದು ಮರೆತ್ತಿದ್ದಾರೆ' ಎಂದರು.

ಸಹಕಾರ ಸಂಘದ ಅಧ್ಯಕ್ಷ ಎ.ಅಮೃತ್ ರಾಜ್ ಮಾತನಾಡಿ, 'ನಮ್ಮ ಸಹಕಾರ ಸಂಘವು 112 ವರ್ಷದ ಇತಿಹಾಸವಿರುವ ಸಂಘವಾಗಿದೆ. ಒಬ್ಬರಿಂದ, ಇನ್ನೊಬ್ಬರಿಗೆ ಸಹಕಾರ ನೀಡುವ ತತ್ವದ ಆಧಾರದ ಮೇಲೆ ನಮ್ಮ ಸಹಕಾರ ಸಂಘವು ಅಧಿಕಾರಿ, ನೌಕರರ ಏಳಿಗೆಗಾಗಿ ಶ್ರಮಿಸುತ್ತಿದೆ. ಕರ್ನಾಟಕದಲ್ಲಿ ಮೊದಲ ಬಾರಿಗೆ ಸಾಲು ಮರದ ತಿಮ್ಮಕ್ಕನವರ ಸವಿಸ್ಮರಣೆಯಲ್ಲಿ ಪ್ರಶಸ್ತಿ ಪ್ರದಾನ ಮಾಡಲಾಗುತ್ತಿದೆ' ಎಂದರು.

ಮುಖ್ಯ ಆರೋಗ್ಯಾಧಿಕಾರಿ ಡಾ.ನಿರ್ಮಲ ಬುಗ್ಗಿ, ಆರೋಗ್ಯಾಧಿಕಾರಿ ಡಾ.ಎ.ಎಸ್.ಬಾಲಸುಂದರ್, ಕಂದಾಯದ ಜಂಟಿ ಆಯುಕ್ತೆ ಲಕ್ಷ್ಮಿದೇವಿ ಆರ್, ಮುಖ್ಯ ಎಂಜಿನಿಯರ್ ಬಸವರಾಜ್ ಎಸ್.ಕಬಾಡೆ, ಉಪ ಕಾನೂನು ಸಲಹೆಗಾರ ಮುನಿರಾಜು. ಎಂ., ಸಹಾಯಕ ಕಾರ್ಯಪಾಲಕ ಎಂಜಿನಿಯರ್ ಎಚ್.ಕೆ.ತಿಪ್ಪೇಶ್, ಸಹ ಕಂದಾಯ ಅಧಿಕಾರಿ ಎನ್.ಕೃಷ್ಣ, ವಿಷಯ ಪರಿವೀಕ್ಷಕ ಕುಮಾರ್, ಕಂದಾಯ ಪರಿವೀಕ್ಷಕ ಎಸ್.ಆರ್ಮುಗಂ, ಚಾಲಕ ಸಂಪತ್ ಕುಮಾರ್ ಅವರಿಗೆ ಸಾಲು ಮರದ ತಿಮ್ಮಕ್ಕ ಪ್ರಶಸ್ತಿಯನ್ನು ಪ್ರದಾನ ಮಾಡಲಾಯಿತು.

ಜಿಬಿಎ– ನಗರ ಪಾಲಿಕೆಗಳ ಸಾಧಕ ನೌಕರರಿಗೆ ಸಾಲು ಮರದ ತಿಮ್ಮಕ್ಕ ಪ್ರಶಸ್ತಿ ಪ್ರದಾನ ಮಾಡಲಾಯಿತು. ನಟಿ ವಿನಯ ಪ್ರಸಾದ್, ಸಹಾಯಕ ಆಯುಕ್ತ ಗಿರೀಶ್, ರಾಜ್ಯ ಸರ್ಕಾರಿ ನೌಕರರ ಸಂಘದ ಅಧ್ಯಕ್ಷ ಸಿ.ಎಸ್. ಷಡಕ್ಷರಿ, ಸಹಕಾರಿ ಸಂಘದ ಉಪಾಧ್ಯಕ್ಷ ಕೆ.ಜಿ.ರವಿ ಭಾಗವಹಿಸಿದ್ದರು.

ಕಾರ್ಮಿಕರ ದಾರಿ ತಪ್ಪಿಸುವ ಸರ್ಕಾರ: ಬೊಮ್ಮಾಯಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ವಿಬಿ-ಜಿ ರಾಮ್ ಜಿ' ಗ್ರಾಮೀಣ ಉದ್ಯೋಗ ಖಾತರಿ ಯೋಜನೆ ಬಗ್ಗೆ ರಾಜ್ಯ ಸರ್ಕಾರ ಸುಳ್ಳು ಹೇಳುತ್ತಾ ರಾಜ್ಯದ ಕೂಲಿ ಕಾರ್ಮಿಕರ ದಾರಿ ತಪ್ಪಿಸುತ್ತಿದೆ ಎಂದು ಬಿಜೆಪಿ ಸಂಸದ ಬಸವರಾಜ ಬೊಮ್ಮಾಯಿ ಆರೋಪಿಸಿದ್ದಾರೆ.

'ನರೇಗಾ ಯೋಜನೆಯಲ್ಲಿ ಪ್ರತಿ ವರ್ಷ 100 ದಿನಗಳ ಉದ್ಯೋಗ ಖಾತರಿ ಇತ್ತು. ಈಗ 125 ದಿನಗಳಿಗೆ ಹೆಚ್ಚಳ ಮಾಡಲಾಗಿದೆ. ಕೆಲಸದ ದಿನಗಳನ್ನು ಆಯಾ ಪಂಚಾಯತಿಗಳೇ ನಿರ್ಧಾರ ಮಾಡಬಹುದು. ಆದರೆ, ಕೇಂದ್ರ ಸರ್ಕಾರ ನಿರ್ಧಾರ ಮಾಡುತ್ತದೆ ಎಂಬ ಭೀತಿಯನ್ನು ಕಾಂಗ್ರೆಸ್ ಮೂಡಿಸುತ್ತಿದೆ. ಕೃಷಿ ಚಟುವಟಿಕೆ ಗಳಿಗೆ, ರೈತರಿಗೆ ಅನುಕೂಲ ಮಾಡಿಕೊಡಲು ವರ್ಷದಲ್ಲಿ ಎರಡು ಬಾರಿ ಕೃಷಿ ರಜೆ ನೀಡಲಾಗಿದೆ. ಇಂತಹ ರೈತ ಸ್ನೇಹಿ ನಿಯಮಕ್ಕೆ ರಾಜ್ಯ ಸರ್ಕಾರ ಆಕ್ಷೇಪ ವ್ಯಕ್ತಪಡಿಸಿದೆ. ಕೃಷಿ ವಿರೋಧಿ ನೀತಿ ಅನುಸರಿಸುತ್ತಿದೆ' ಎಂದು ದೂರಿದ್ದಾರೆ.

'ಹಿಂದೆ ಕೂಲಿಕಾರರ ಹೆಸರು ಹೇಳಿ ನರೇಗಾ ಯೋಜನೆ ದುರ್ಬಳಕೆ ಮಾಡಲಾಗುತ್ತಿತ್ತು. ಅದಕ್ಕಾಗಿ ಬಯೊಮೆಟ್ರಿಕ್ ತಂತ್ರಜ್ಞಾನ ಬಳಕೆ ಕಡ್ಡಾಯ ಮಾಡಲಾಗಿದೆ. ರಾಜ್ಯ ಸರ್ಕಾರಗಳು ಅನಗತ್ಯ ವೆಚ್ಚ ಕಡಿಮೆ ಮಾಡಲು, ಭ್ರಷ್ಟಾಚಾರಕ್ಕೆ ಕಡಿವಾಣ ಕೇಂದ್ರ ಮತ್ತು ರಾಜ್ಯ ಸರ್ಕಾರ 60:40 ಅನುಪಾತ ನಿಗದಿ ಮಾಡಲಾಗಿದೆ' ಎಂದಿದ್ದಾರೆ.

ನೀರಿನ ಬಡ್ಡಿ, ದಂಡ ಮನ್ನಾ 16ರಿಂದ ಜಾರಿ

ಮನೆ, ಕಚೇರಿಗಳಿಗೆ ಬರಲಿದೆ ಜಲಮಂಡಳಿ ನೋಟಿಸ್; ₹550 ಕೋಟಿ ಸಂಗ್ರಹದ ಗುರಿ

• ಉಮೇಶ ಭಟ್ಟ ಪಿ.ಎಚ್.

ಬೆಂಗಳೂರು: ಬಾಕಿ ಇರುವ ಅಸಲು ಪಾವತಿಸಿದರೆ ಬಡ್ಡಿ ಹಾಗೂ ದಂಡವನ್ನು ಸಂಪೂರ್ಣವಾಗಿ ಮನ್ನಾ ಮಾಡುವುದಾಗಿ ಜಲಮಂಡಳಿ ಘೋಷಿಸಿರುವ ಯೋಜನೆ ಇದೇ 16ರಿಂದ ಜಾರಿಯಾಗಲಿದ್ದು, ಮಾರ್ಚ್ 31ರವರೆಗೂ ಬಾಕಿ ಪಾವತಿಸಲು ಅವಕಾಶ ಇದೆ.

ಜಲಮಂಡಳಿಯು ಈಗಾಗಲೇ ಮಾರ್ಗಸೂಚಿಗಳನ್ನು ಸಿದ್ಧಪಡಿಸುತ್ತಿದ್ದು, ನೀರಿನ ಬಾಕಿ ಉಳಿಸಿಕೊಂಡಿರುವವರ ಮನೆ, ಕಚೇರಿ ಇಲ್ಲವೇ ವಾಣಿಜ್ಯ ಕಟ್ಟಡಗಳಿಗೆ ಮಂಡಳಿಯ ಸಿಬ್ಬಂದಿ ಸದ್ಯದಲ್ಲೇ ನೋಟಿಸ್ ಜಾರಿ ಮಾಡಲಿದ್ದಾರೆ. ಅಲ್ಲದೇ ಈ ಯೋಜನೆಯ ಪ್ರಯೋಜನದ ಬಗ್ಗೆ ತಿಳಿಸಿಕೊಡಲಿದ್ದಾರೆ.

ಜಲಮಂಡಳಿ ವ್ಯಾಪ್ತಿಯಲ್ಲಿ ಗೃಹ, ವಾಣಿಜ್ಯ, ಅರೆ ವಾಣಿಜ್ಯ, ಸರ್ಕಾರಿ ಹಾಗೂ ರಕ್ಷಣಾ ವಿಭಾಗ ಸೇರಿ 11 ಲಕ್ಷ ಸಂಪರ್ಕಗಳಿವೆ. ಇದರಲ್ಲಿ 4.50 ಲಕ್ಷದಿಂದ 5 ಲಕ್ಷ ಮಂದಿ ಪ್ರತಿ ತಿಂಗಳು ಬಿಲ್ ಪಾವತಿ ಮಾಡುತ್ತಿದ್ದಾರೆ. ಡಿಸೆಂಬರ್ ಅಂತ್ಯಕ್ಕೆ 6.22 ಲಕ್ಷ ಸಂಪರ್ಕಗಳಿಂದ ಸುಮಾರು ₹850 ಕೋಟಿ ಬಾಕಿ ಉಳಿದಿದೆ. ಇದರಲ್ಲಿ ಅಸಲು ಪ್ರಮಾಣ ಸುಮಾರು ₹550 ಕೋಟಿ. ಬಡ್ಡಿಯೇ ಸುಮಾರು ₹300 ಕೋಟಿಯಷ್ಟಿದೆ.

ಬಾಕಿ ತುಂಬುವುದು ಹೇಗೆ?

ನಿಗದಿಪಡಿಸಿರುವ ಅವಧಿಯಲ್ಲಿ ಪೂರ್ಣ ಅಸಲು ಪಾವತಿಸಿದರೆ, ತಂತ್ರಾಂಶದಲ್ಲಿ ಬಡ್ಡಿ ಮತ್ತು ದಂಡದ ಮೊತ್ತ ಸ್ವಯಂಚಾಲಿತವಾಗಿ ಮನ್ನಾ ಆಗಿ ಶೂನ್ಯ ಖಾತೆಯಾಗಿ ತೋರಿಸಲಿದೆ. ಆ ನಂತರ ತಿಂಗಳ ಬಿಲ್ ಮಾತ್ರ ಬರಲಿದೆ.

ಜಲಮಂಡಳಿಯ ಬಿಲ್ ರೀಡರ್ ಆಗಲಿ, ಸಿಬ್ಬಂದಿಯಾಗಲಿ ಅಸಲು ಮೊತ್ತ ಪಡೆಯುವಂತಿಲ್ಲ. ಮಧ್ಯವರ್ತಿಗಳಿಗೂ ಅವಕಾಶವಿಲ್ಲ. ನೋಟಿಸ್‌ನಲ್ಲಿಯೇ ಒಟ್ಟು ಬಾಕಿ ಪ್ರಮಾಣ ನಮೂದಾಗಿರಲಿದೆ. ಬಾಕಿ ಪಾವತಿಸಿದರೆ ಎಷ್ಟು ಬಡ್ಡಿ ಮನ್ನಾ ಆಗಲಿದೆ ಎನ್ನುವುದು ಕೂಡ ಅಲ್ಲೇ ತೋರಿಸುವುದರಿಂದ ಕಚೇರಿಗೆ ಅಲೆಯುವ ಪ್ರಮೇಯ ಇರುವುದಿಲ್ಲ. ಈಗಾಗಲೇ ಗ್ರಾಹಕರು ಪಾವತಿ ಮಾಡುತ್ತಿರುವಂತೆಯೇ ಜಲಮಂಡಳಿ ಕಚೇರಿಗಳು, ಬೆಂಗಳೂರು ಒನ್ ಇಲ್ಲವೇ ಆನ್‌ಲೈನ್ ಮೂಲಕ ಪಾವತಿಸಲು ಅವಕಾಶವಿದೆ.

'ಗ್ರಾಹಕರು ನೇರವಾಗಿ ಜಲಮಂಡಳಿಯ ಅಧಿಕೃತ ವೆಬ್‌ಸೈಟ್‌ಗೆ ಭೇಟಿ ನೀಡಿ ನೋಂದಣಿ ಮಾಡಿಕೊಳ್ಳಬಹುದು. ಇದಕ್ಕಾಗಿ ಆ್ಯಪ್ ಒಂದನ್ನು ರೂಪಿಸಲಾಗುತ್ತಿದೆ' ಎಂದು ಮಂಡಳಿಯ ಪ್ರಧಾನ ಎಂಜಿನಿಯರ್ ಬಿ.ಎಸ್.ದಲಾಯತ್ ತಿಳಿಸಿದರು.

ಯೋಜನೆ ಜಾರಿ ಏಕೆ?: ಹೈದರಾಬಾದ್‌ನಲ್ಲಿ ಜಲಮಂಡಳಿ ಎರಡು ಬಾರಿ ಜಾರಿ ಮಾಡಿದ್ದ ಇದೇ ಮಾದರಿಯ ಯೋಜನೆಯಿಂದ ನಿರೀಕ್ಷಿಸಿದ್ದ ಆದಾಯ ಬಂದಿದ್ದರಿಂದ ಅಂತಹದ್ದೇ ಮಾದರಿಯನ್ನು ಬೆಂಗಳೂರಿನಲ್ಲಿ ಅನುಷ್ಠಾನಗೊಳಿಸಲಾಗುತ್ತಿದೆ.

'ಜಲಮಂಡಳಿ ಹಲವಾರು ಅಭಿವೃದ್ಧಿ ಯೋಜನೆಗಳನ್ನು ಕೈಗೆತ್ತಿಕೊಂಡಿದೆ. ಸಂಪನ್ಮೂಲದ ಅಗತ್ಯ ಇರುವುದರಿಂದ ಇದು ಜಾರಿಯಾಗುತ್ತಿದೆ' ಎಂದು ಮಂಡಳಿಯ ಆರ್ಥಿಕ ಸಲಹೆಗಾರ ಸುಬ್ಬರಾಮಪ್ಪ ತಿಳಿಸಿದರು.



ಬೆಂಗಳೂರು ಜಲಮಂಡಳಿ ಕಚೇರಿ

ಪೊಲೀಸ್ ಇಲಾಖೆಯದ್ದೇ ಅಧಿಕ

ಸರ್ಕಾರಿ ಇಲಾಖೆಗಳಲ್ಲಿ ಪೊಲೀಸ್ ಇಲಾಖೆಯ ಬಾಕಿಯೇ ಹೆಚ್ಚಿದೆ. ಇದರಲ್ಲಿ ವಸತಿ ಸಮುಚ್ಚಯ ಹಾಗೂ ಕಚೇರಿಗಳ ಎರಡು ಖಾತೆಗಳಿವೆ. ವಸತಿ ಸಮುಚ್ಚಯದ 113 ಸಂಪರ್ಕದಿಂದ ₹42 ಕೋಟಿ ಅಸಲು, ₹27 ಕೋಟಿ ಬಡ್ಡಿ, ಕಚೇರಿಗಳ 14 ಸಂಪರ್ಕದಿಂದ ₹3.30 ಕೋಟಿ ಅಸಲು, ₹3.09 ಬಡ್ಡಿ ಬರಬೇಕಾಗಿದೆ.

ಜಿಬಿಎ (ಹಿಂದಿನ ಬಿಬಿಎಂಪಿ) ಅಸಲಿಗಿಂತ ಬಡ್ಡಿಯನ್ನೇ ಹೆಚ್ಚು ಉಳಿಸಿಕೊಂಡಿದೆ. ₹7.88 ಕೋಟಿ ಅಸಲು ಇದ್ದರೆ, ಬಡ್ಡಿ ಪ್ರಮಾಣ ₹17.38 ಕೋಟಿ ಇದೆ.

2025ರ ನವೆಂಬರ್ ಅಂತ್ಯಕ್ಕೆ ಬಾಕಿ ಪ್ರಮಾಣ

ವಿಭಾಗ	ಸಂಪರ್ಕಗಳು	ಅಸಲು	ಬಡ್ಡಿ (ಕೋಟಿಗಳಲ್ಲಿ)
ಗೃಹ	5,29,075	₹228.75	₹144.25
ವಾಣಿಜ್ಯ	48,307	₹104.04	₹60.70
ಅರೆ ವಾಣಿಜ್ಯ	41,927	₹46.87	₹14.32
ಕೈಗಾರಿಕೆ	1484	₹8.58	₹4.27
ಬಿಬಿಎಂಪಿ	489	₹7.88	₹17.38
ಕೇಂದ್ರ ಸರ್ಕಾರ	226	₹22.89	₹2.51
ರಕ್ಷಣಾ ಇಲಾಖೆ	212	₹61.53	₹44.88
ಶಾಸನಬದ್ಧ ಸಂಸ್ಥೆಗಳು	158	₹8.05	₹4.13
ರಾಜ್ಯ ಸರ್ಕಾರ	46	₹42.87	₹2.91
ಇತರೆ	15	₹2.67	₹3.65
ಒಟ್ಟು	6,21,939	₹534.13	₹299



ಬಾಕಿ ಇರುವ ನೀರಿನ ಬಿಲ್ಲಿನ ಅಸಲು ಮೊತ್ತವನ್ನು ಏಕಕಾಲದಲ್ಲಿ ಪಾವತಿಸಿದರೆ, ಬಡ್ಡಿ ಮತ್ತು ದಂಡ ಶೇ 100ರಷ್ಟು ಮನ್ನಾ ಮಾಡುವ ಯೋಜನೆ ಈ ತಿಂಗಳೇ ಜಾರಿಯಾಗಲಿದೆ. ಒಂದೆರಡು ದಿನದಲ್ಲಿ ಮಾರ್ಗಸೂಚಿ ಪ್ರಕಟಿಸುತ್ತೇವೆ

ರಾಮ್ ಪ್ರಸಾತ್ ಮನೋಹರ್, ಅಧ್ಯಕ್ಷ, ಬೆಂಗಳೂರು ಜಲಮಂಡಳಿ

ಚಿತ್ರಮಂದಿರಗಳ ಕೊರತೆ: 'ಶಿವಲೀಲಾ' ತಂಡದ ಪ್ರತಿಭಟನೆ



ಲಿಂಗತ್ವ ಅಲ್ಪಸಂಖ್ಯಾತರ ಜೀವನದ ಬಗ್ಗೆ ಬಿಡುಗಡೆಯಾದ ಚಲನ ಚಿತ್ರ ಶಿವಲೀಲಾ ಸಿನೆಮಾ ಮಂದಿರ ಸಿಗದ ಕಾರಣ ಜೋಗತಿ ಮಂಜಮ್ಮ ಅವರು ಮತ್ತು ಇತರರು ಸೇರಿ ಶನಿವಾರ ನಗರದ ಸ್ವಾತಂತ್ರ್ಯ ಉದ್ಯಾನದಲ್ಲಿ ಪ್ರತಿಭಟನೆ ನಡೆಸಿದರು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಲಿಂಗತ್ವ ಅಲ್ಪಸಂಖ್ಯಾತರ ಕುರಿತಾದ ಕಥೆಯನ್ನು ಹೊಂದಿರುವ 'ಶಿವಲೀಲಾ' ಚಿತ್ರಕ್ಕೆ ಚಿತ್ರಮಂದಿರಗಳನ್ನು ನೀಡದೆ ಅನ್ಯಾಯವೆಸಗಲಾಗುತ್ತಿದೆ ಎಂದು ಆರೋಪಿಸಿ ಚಿತ್ರತಂಡ ನಗರದ ಸ್ವತಂತ್ರ ಉದ್ಯಾನದಲ್ಲಿ ಶನಿವಾರ ಪ್ರತಿಭಟನೆ ನಡೆಸಿತು. ಚಿತ್ರದ ಪ್ರಮುಖ ಪಾತ್ರಧಾರಿ ಮಂಜಮ್ಮ ಜೋಗತಿ ನೇತೃತ್ವದಲ್ಲಿ ನಡೆದ ಪ್ರತಿಭಟನೆಯಲ್ಲಿ ಚಿತ್ರತಂಡ ಭಾಗಿಯಾಗಿತ್ತು.

'ಸಮಾಜದಲ್ಲಿ ಲಿಂಗತ್ವ ಅಲ್ಪಸಂಖ್ಯಾತರು ಹಾಗೂ ಸಾಮಾನ್ಯರ ನಡುವೆ ಇರುವ ಭಿನ್ನಾಭಿಪ್ರಾಯಗಳನ್ನು ತೊಡೆದು ಹಾಕುವ ಬಲವಾದ ಪ್ರಯತ್ನವಿದು. ಸಮಾಜದಲ್ಲಿ ಈ ಸಮುದಾಯದ ಕುರಿತು ಜಾಗೃತಿ ಮೂಡಿಸುವ ಯತ್ನಕ್ಕೆ ಇಡೀ ರಾಜ್ಯದ ಮೂರು ಚಿತ್ರಮಂದಿರಗಳಲ್ಲಿ ತಲಾ ಒಂದು ಪ್ರದರ್ಶನ ಮಾತ್ರ ನೀಡಲಾಗಿದೆ. ಈ ಸಿನಿಮಾ ಪ್ರೋತ್ಸಾಹಿಸುವಂತೆ ಇತ್ತೀಚಿನ ಬೆಳಗಾವಿ ಅಧಿವೇಶನದಲ್ಲಿಯೂ ಸ್ಪೀಕರ್ ಯು.ಟಿ ಖಾದರ್ ಹೇಳಿದ್ದರು. ಶಾಲಾ, ಕಾಲೇಜು ಮಕ್ಕಳು ಕಡ್ಡಾಯವಾಗಿ ಈ ಚಿತ್ರ ನೋಡಲು ಸುತ್ತೋಲೆ ನೀಡಬೇಕೆಂದು ನಾವು ಈ ಮೂಲಕ ಸರ್ಕಾರಕ್ಕೆ ಒತ್ತಾಯಿಸುತ್ತಿದ್ದೇವೆ' ಎಂದು ಚಿತ್ರದ ನಿರ್ದೇಶಕ ಅಶೋಕ್ ಜೈರಾಮ್ ಹೇಳಿದರು.

ಲಿಂಗತ್ವ ಅಲ್ಪಸಂಖ್ಯಾತರ ಬದುಕು ಬವಣೆಗಳನ್ನು ತೋರಿಸುವ ಚಿತ್ರ ಜ.2ರಂದು ತೆರೆಕಂಡಿತ್ತು. 300ಕ್ಕೂ ಹೆಚ್ಚು ಲಿಂಗತ್ವ ಅಲ್ಪಸಂಖ್ಯಾತರು ಚಿತ್ರದಲ್ಲಿ ನಟಿಸಿದ್ದು, ರಮೇಶ್ ಕೃಷ್ಣ ಸಂಗೀತ, ಪ್ರವೀಣ್ ಶೆಟ್ಟಿ ಛಾಯಾಚಿತ್ರ ಗ್ರಹಣವಿದೆ.

5ರಿಂದ ಬೆಂಗಳೂರು ಓಪನ್ ಟೆನಿಸ್ ಟೂರ್ನಿ

ಸುಮಿತ್‌ಗೆ ಪ್ರಜ್ವಲ್ ಮೊದಲ ಎದುರಾಳಿ



ಪ್ರಜ್ವಲ್ ದೇವ್



ಸುಮಿತ್ ನಗಾಲ್

ಬೆಂಗಳೂರು: ಭಾರತದ ಅಗ್ರಮಾನ್ಯ ಆಟಗಾರ ಸುಮಿತ್ ನಾಗಲ್ ಅವರು ಇದೇ 5ರಂದು ಆರಂಭವಾಗಲಿರುವ ಬೆಂಗಳೂರು ಓಪನ್ ಟೆನಿಸ್ ಟೂರ್ನಿಯಲ್ಲಿ ಸ್ಥಳೀಯ ತಾರೆ ಎಸ್.ಡಿ. ಪ್ರಜ್ವಲ್ ದೇವ್ ವಿರುದ್ಧ ಅಭಿಯಾನ ಆರಂಭಿಸುವರು. ಕಬ್ಬನ್ ಪಾರ್ಕ್‌ನ ಎಸ್.ಎಂ.ಕೃಷ್ಣ ಟೆನಿಸ್ ಕ್ರೀಡಾಂಗಣದಲ್ಲಿ 10ನೇ ಆವೃತ್ತಿಯ ಟೂರ್ನಿಯ ಡ್ರಾ ಕಾರ್ಯಕ್ರಮ ಶನಿವಾರ ನಡೆಯಿತು. ಎಟಿಪಿ ಚಾಲೆಂಜರ್ 125 ಹಂತದ ಟೂರ್ನಿ ಇದಾಗಿದ್ದು, ಸಿಂಗಲ್ಸ್ ಮುಖ್ಯಸುತ್ತಿನಲ್ಲಿ ಭಾರತದ ಆರು ಮಂದಿ ಕಣದಲ್ಲಿದ್ದಾರೆ.

ಪ್ರಜ್ವಲ್ ಸೇರಿದಂತೆ ದಕ್ಷಿಣೇಶ್ವರ ಸುರೇಶ್, ಮಾನಸ್ ಧಾಮ್ನೆ ಅವರು ವೈಲ್ಡ್‌ಕಾರ್ಡ್ ಪ್ರವೇಶ ಪಡೆದವರು. ಕರಣ್ ಸಿಂಗ್, ಆರ್ಯನ್ ಶಾ ಕಣದಲ್ಲಿರುವ ಇತರ ಭಾರತೀಯರು. ಒಟ್ಟು 19 ದೇಶಗಳ ಆಟಗಾರರು ಸ್ಪರ್ಧೆಯಲ್ಲಿದ್ದಾರೆ.

ಅಗ್ರ ಶ್ರೇಯಾಂಕ ಪಡೆದಿರುವ ಪೆಡ್ರೊ ಮಾರ್ಟಿನೆಜ್ (ಸ್ಪೇನ್) ಅವರು ಆರಂಭಿಕ ಸುತ್ತಿನಲ್ಲಿ ಕ್ವಾಲಿಫೈಯರ್ ಆಟಗಾರನನ್ನು ಎದುರಿಸಲಿದ್ದಾರೆ. ಸ್ಪೇನ್‌ನ ಪೆಡ್ರೊ ಅವರು ವಿಶ್ವ ಕ್ರಮಾಂಕದಲ್ಲಿ 92ನೇ ಸ್ಥಾನದಲ್ಲಿದ್ದಾರೆ. . ಎರಡನೇ ಶ್ರೇಯಾಂಕದ ಹೆರಾಲ್ಡ್ ಮೇಯೊಟ್ (ಫ್ರಾನ್ಸ್) ಅವರು ರಷ್ಯಾದ ಪೀಟರ್ ಬಾರ್ ಬಿರ್ಯುಕೋವ್ ವಿರುದ್ಧ; ಮೂರನೇ ಶ್ರೇಯಾಂಕದ ಜೇ ಕ್ಲಾರ್ಕ್ (ಬ್ರಿಟನ್) ಅವರು ಫ್ರಾನ್ಸ್‌ನ ಮ್ಯಾಟಿಯೊ ಮಾರ್ಟಿನೊ ವಿರುದ್ಧ; ನಾಲ್ಕನೇ ಶ್ರೇಯಾಂಕದ ಲಾಯ್ಡ್ ಹ್ಯಾರಿಸ್ (ದಕ್ಷಿಣ ಆಫ್ರಿಕಾ) ಅವರು ಫೋರ್ಜ್ಟಿಕ್ ಜೊನಾಸ್ (ಝೆಕ್ ರಿಪಬ್ಲಿಕ್) ವಿರುದ್ಧ ಅಭಿಯಾನ ಆರಂಭಿಸುವರು.

ಡಬಲ್ಸ್‌ನಲ್ಲಿ ಶ್ರೀರಾಮ್ ಬಾಲಾಜಿ– ನೀಲ್ ನೀಲ್ ಓಬರ್‌ಲೀಟ್ನರ್ (ಭಾರತ–ಆಸ್ಟ್ರಿಯಾ) ಜೋಡಿ ಮತ್ತು ಅನಿರುದ್ಧ್ ಚಂದ್ರಶೇಖರ್–ಅರ್ಜುನ್ ಕೆ. (ಭಾರತ) ಜೋಡಿ ಕ್ರಮವಾಗಿ ಮೊದಲೆರಡು ಶ್ರೇಯಾಂಕ ಪಡೆದಿವೆ.

ಮುಂಬೈ ರೇಸ್

ಕಿಂಗ್ ಕೆ ಗೆಲ್ಲುವ ನಿರೀಕ್ಷೆ

ಮಹಾರಾಷ್ಟ್ರ, ಗುಜರಾತ್ ಅಂಡ್ ಗೋವಾ-ಏರಿಯಾ ಟ್ರೋಫಿ ಭಾನುವಾರದ ಮುಂಬೈ ರೇಸ್‌ಗಳ ಪ್ರಧಾನ ಆಕರ್ಷಣೆಯಾಗಿದ್ದು, ಕಿಂಗ್ ಕೆ ಗೆಲ್ಲುವ ನಿರೀಕ್ಷೆಯಿದೆ. ಮಧ್ಯಾಹ್ನ 1:30ಕ್ಕೆ ಪ್ರಾರಂಭವಾಗಲಿರುವ ದಿನದ ಎಂಟು ರೇಸ್‌ಗಳಿಗೆ ನಮ್ಮ ಆಯ್ಕೆ ಈ ಕೆಳಕಂಡಂತಿವೆ:

1ನೇ ರೇಸ್: ಸ್ವಾಟ್‌ಲೈಟ್ 8, ಮ್ಯಾನರ್ ಹೌಸ್ 1, ಅಪ್ಲಾಸ್ 2
2ನೇ ರೇಸ್: ಡೆಡಿಕೇಷನ್ 1, ಡಿಯೆಗೊ ಗಾರ್ಸಿಯಾ 3, ಲಿಟ್ಲ್ ಜಾನ್ 2
3ನೇ ರೇಸ್: ಆಲ್ ಫಾರ್ ಲವ್ 6, ಡೆನ್‌ಸೆಟ್ಸೂ 2, ಟೈರನ್ನಸ್ 4
4ನೇ ರೇಸ್: ಮಾರ್ಗರೆಟ್ಟ 4, ಮಿಸ್ಟಿಕ 5, ವಿಕ್ಟರಿ ಫ್ಲೇರ್ 7
5ನೇ ರೇಸ್: ಕಿಂಗ್ ಕೆ 2, ಕಿಮಿಕೊ 3
6ನೇ ರೇಸ್: ಅಲೆಕ್ಸಾಂಡ್ರಿಯಾ 12, ಎಸ್ಕೇಪ್ ವೆಲಾಸಿಟಿ 5, ಅರಿಯಾನ ಸ್ಟಾರ್ 1
7ನೇ ರೇಸ್: ಎನ್‌ಫೋರ್ಸರ್ 3, ಅಕಿಟಾನಿಯಾ 1, ರಾಫೆಲ್ 5
8ನೇ ರೇಸ್: ಅಗಾಥ 2, ವಿಸ್ಪರ್ 1, ಸ್ಯಾಮ್ಸನ್ 5

ಉತ್ತಮ ಬೆಟ್: ಡೆಡಿಕೇಷನ್

ಜಾಕ್‌ಪಾಟ್‌ಗೆ	1ನೇ ಟ್ರಿಬಲ್	2ನೇ ಟ್ರಿಬಲ್
4,5,6,7,8	2,3,4	6,7,8


ನಗರದಲ್ಲಿ ಇಂದು

ಸಾಮೂಹಿಕ ಸತ್ಯನಾರಾಯಣಸ್ವಾಮಿ ಪೂಜೆ, ಮಹಾವಿಷ್ಣು ಸಹಸ್ರನಾಮ ಹೋಮ, ಲಲಿತಾ ಸಹಸ್ರನಾಮ ಕುಂಕುಮಾರ್ಚನೆ: ಬೆಳಿಗ್ಗೆ 6.30ಕ್ಕೆ ಮಹಾಗಣಪತಿ ಪೂಜೆ, ಸತ್ಯನಾರಾಯಣ ಪೂಜೆ, 9.30ಕ್ಕೆ ಮಹಾವಿಷ್ಣು ಸಹಸ್ರನಾಮ ಹೋಮ, 11.30ಕ್ಕೆ ಸತ್ಯನಾರಾಯಣಸ್ವಾಮಿ ಕಥಾ ಶ್ರವಣ, ಮಧ್ಯಾಹ್ನ 12ಕ್ಕೆ ಪ್ರವಚನ, ಸನ್ಮಾನ ಕಾರ್ಯಕ್ರಮ, 1ಕ್ಕೆ ಮಹಾ ಮಂಗಳಾರತಿ, ಪ್ರಸಾದ ವಿನಿಯೋಗ, ಆಯೋಜನೆ: ವಿಪ್ರ ಸಮಾನ ಮನಸ್ಕರ ಸಂಘ, ಸ್ಥಳ: ಶ್ರೀರೇಣುಕಾ ಯಲ್ಲಮ್ಮ ದೇವಿ ಮತ್ತು ಲಕ್ಷ್ಮಿ ವೆಂಕಟೇಶ್ವರಸ್ವಾಮಿ ದೇವಾಲಯ, ನಿಸರ್ಗ ಬಡಾವಣೆ, ಅಬ್ಬಿಗೆರೆ

'ವಾಕ್ ಟು ಹೀಲ್' ವಾಕಥಾನ್‌ಗೆ ಚಾಲನೆ: ಶ್ರೀಧರ್ ವೆಂಬು, ಆಯೋಜನೆ: ಯೂಥ್ ಫಾರ್ ಸೇವಾ, ಸ್ಥಳ: ಕೆಎಸ್‌ಜಿಇಎ ಕಬ್ಬನ್ ಉದ್ಯಾನ, ಬೆಳಿಗ್ಗೆ 7.30ಕ್ಕೆ

ಕುಮಾರವ್ಯಾಸ ಜಯಂತಿ: ಬೆಳಿಗ್ಗೆ 8.30ಕ್ಕೆ ಮಹಾಕವಿ ಕುಮಾರವ್ಯಾಸನ ಭಾವಚಿತ್ರದೊಂದಿಗೆ ಮೆರವಣಿಗೆ, ಬೆಳಿಗ್ಗೆ 10ಕ್ಕೆ ಉದ್ಘಾಟನೆ: ಎಸ್. ಸುರೇಶ್ ಕುಮಾರ್, ಅತಿಥಿಗಳು: ಕೆ. ಹರೀಶ್, ಎ.ವಿ. ಪ್ರಸನ್ನ, ಆಯೋಜನೆ: ಶ್ರೀ ವಾಗ್ದೇವಿ ಗಮಕಕಲಾ ಪ್ರತಿಷ್ಠಾನ, ಸ್ಥಳ: ಕುಮಾರವ್ಯಾಸ ಮಂಟಪ, ಕನ್ನಡ ಸಹೃದಯರ ಪ್ರತಿಷ್ಠಾನ, ನಾಲ್ಕನೇ ಬ್ಲಾಕ್, ರಾಜಾಜಿನಗರ

'ಶಾಸನತಂತ್ರ ಅಧಿವೇಶನ' ಸರ್ವಪದಾಧಿಕಾರಿಗಳ ಸಮಾವೇಶ: ಸಾನ್ನಿಧ್ಯ: ರಾಘವೇಶ್ವರಭಾರತೀ ಸ್ವಾಮೀಜಿ, ಉದ್ಘಾಟನೆ: ಶಂಕರನಾರಾಯಣ ಭಟ್ಟ, ಅತಿಥಿಗಳು: ಎಂ.ಎಸ್. ಸನತ್‌ಕುಮಾರ್, ಚಕ್ರವರ್ತಿ ಸೂಲಿಬೆಲೆ, ಸಂಗೀತ ಕಛೇರಿ: ರಾಘವೇಂದ್ರ ಗುಬ್ಬಿ ಮತ್ತು ತಂಡ, ಆಯೋಜನೆ: ರಾಮಚಂದ್ರಾಪುರ ಮಠ, ಸ್ಥಳ: ಪುನರ್ವಸು ಭವನ, ಗಿರಿನಗರ, ಬೆಳಿಗ್ಗೆ 9.30



ರಾಘವೇಶ್ವರಭಾರತೀ ಸ್ವಾಮೀಜಿ

ಶ್ರೀಪುರಂದರದಾಸರ, ತ್ಯಾಗರಾಜರ ಆರಾಧನೆ, ವಾರ್ಷಿಕೋತ್ಸವ ಸಮಾರಂಭ: ಸಂಗೀತ ಕಛೇರಿ, ಮೃದಂಗ ತನಿ ಆವರ್ತನ: ತ್ರಿಚೂರ್ ಸಿ. ನರೇಂದ್ರನ್, ಮೃದಂಗ: ಪ್ರಣವ್ ತಿರುಮಲ, ಬಿ.ಎಸ್. ಸಮರ್ಥ್, 'ಶ್ರೀತ್ಯಾಗರಾಜರ ಕೃತಿಗಳಲ್ಲಿ ಸಂಸ್ಕೃತ ಭಾಷೆ' ಸಂಗೀತ ರೂಪಕ: ಟಿ.ಎಸ್. ಸತ್ಯವತಿ, ಆಯೋಜನೆ: ಶ್ರೀಪುರಂದರ ತ್ಯಾಗರಾಜ ದೇವಾಲಯ, ಸಂಗೀತ ಸೇವಾ ಮಂಡಲಿ, ಸ್ಥಳ: ಶ್ರೀಭವಾನಿ ಶಂಕರ ದೇವಸ್ಥಾನ, ವಸಂತಪುರ, ಬೆಳಿಗ್ಗೆ 9.30ರಿಂದ

ಹೆಜ್ಜೆ ಗೆಜ್ಜೆ ಮಧುರ ನಾದ ಸಂಭ್ರಮ: ಅತಿಥಿಗಳು: ವೈ.ಕೆ. ಸಂಧ್ಯಾ ಶರ್ಮ, ಜಗದೀಶ್ ಜಾಲ, ಆಯೋಜನೆ: ನಾಟ್ಯಕುಸುಮಾಂಜಲಿ ಸಾಂಸ್ಕೃತಿಕ ವೇದಿಕೆ, ಸ್ಥಳ: ರವೀಂದ್ರ ಕಲಾಕ್ಷೇತ್ರ, ಜೆ.ಸಿ. ರಸ್ತೆ, ಬೆಳಿಗ್ಗೆ 9.30

ದಲಿತ ಸಾಹಿತ್ಯ ಮತ್ತು ಚಳವಳಿ–50: ಬೆಳಿಗ್ಗೆ 9.30ಕ್ಕೆ 'ಕಲಾ ಮಾಧ್ಯಮಗಳು ಮತ್ತು ಸಮಕಾಲೀನತೆ' ಗೋಷ್ಠಿ: ಸಿ. ಬಸವಲಿಂಗಯ್ಯ, ಕೆ.ಪಿ. ಲಕ್ಷ್ಮಣ್, ಚಂದ್ರಶೇಖರ್, ಶ್ವೇತಾರಾಣಿ ಎಚ್.ಕೆ., 11.45ಕ್ಕೆ 'ದಲಿತ ಚಳವಳಿ ಮತ್ತು ನಾನು ಹಾಗೂ ಮುಂದಿನ ಹಾದಿ' ಗೋಷ್ಠಿ: ಆರ್. ಮೋಹನರಾಜ್, ಡಿ.ಜಿ. ಸಾಗರ್, ಶಿವಾಜಿ ಗಣೇಶನ್, ಕುಂದೂರು ತಿಮ್ಮಯ್ಯ, ವಿ. ನಾಗರಾಜ್, ಗುರುಪ್ರಸಾದ್ ಕೆರೆಗೋಡು, ಜಯನ್ ಮಲ್ಪೆ, ಮಧ್ಯಾಹ್ನ 2.30ಕ್ಕೆ 'ದಲಿತ ಸಬಲೀಕರಣ–ಉದ್ಯಮಶೀಲತೆ ಮತ್ತು ಹೊಸ ತಲೆಮಾರಿನ ಭವಿಷ್ಯದ ಸವಾಲುಗಳು' ಗೋಷ್ಠಿ: ಶ್ರೀಪಾದ್ ಭಟ್, ಪ್ರದೀಪ್ ರಮಾವತ್, ಡಿ.ಟಿ. ವೆಂಕಟೇಶ್, ರುದ್ರು ಪುನೀತ್, ಸಂಜೆ 4ಕ್ಕೆ ಸಮಾರೋಪ ಸಮಾರಂಭ: ಎನ್. ವೆಂಕಟೇಶ್, ಮಾವಳ್ಳಿ ಶಂಕರ್, ಅಧ್ಯಕ್ಷತೆ: ಎಸ್.ಎಂ. ಜಯಕರ, ದು. ಸರಸ್ವತಿ, ಸುಬ್ಬು ಹೊಲೆಯಾರ್, ಎಲ್. ಎನ್. ಮುಕುಂದರಾಜ್, ಕೆ.ಟಿ. ಶಾಂತಲಾ, ಚಂದ್ರಕಾಂತ್ ಕರಿಗಾರ್, ಎಂ. ಸುನೀತಾ, ಕೋಟಿಗಾನಹಳ್ಳಿ ರಾಮಯ್ಯ, ಆಯೋಜನೆ: ಕರ್ನಾಟಕ ಸಾಹಿತ್ಯ ಅಕಾಡೆಮಿ, ಸ್ಥಳ: ವೆಂಕಟಗಿರಿಗೌಡ ಸಭಾಂಗಣ, ಬೆಂಗಳೂರು ವಿಶ್ವವಿದ್ಯಾಲಯ, ಜ್ಞಾನಭಾರತಿ ಆವರಣ

ಉದ್ಘಾಟನಾ ಸಮಾರಂಭ: ಸಾನ್ನಿಧ್ಯ: ಶಿವಸಿದ್ದೇಶ್ವರ ಸ್ವಾಮೀಜಿ, ಉದ್ಘಾಟನೆ: ಬಿ.ಎಸ್. ಪರಮಶಿವಯ್ಯ, ಅತಿಥಿಗಳು: ಎಸ್. ಟಿ. ಸೋಮಶೇಖರ್, ಕೆ.ಎಲ್. ಸಿದ್ದರಾಮಣ್ಣ, ವಿಶ್ವನಾಥ್, ಅಧ್ಯಕ್ಷತೆ: ಬಿ.ಎಸ್. ಶಿವಮೂರ್ತಿ, ಆಯೋಜನೆ: ವೀರಶೈವ ಲಿಂಗಾಯತ ಸಾಂಸ್ಕೃತಿಕ ವೇದಿಕೆ, ಸ್ಥಳ: ಆರ್‌ಪಿಸಿ ಪಾರ್ಟಿ ಹಾಲ್, ದ್ವಾರಕವಾಸ ರಸ್ತೆ, ಭಾರತನಗರ ಎರಡನೇ ಹಂತ, ಬೆಳಿಗ್ಗೆ 10

ಮಲೆನಾಡಿಗರ ಕ್ರೀಡಾಕೂಟ: ಆಯೋಜನೆ: ಮಲೆನಾಡು ಮಿತ್ರವೃಂದ, ಸ್ಥಳ: ಎಚ್‌ಎಂಟಿ ಮೈದಾನ, ಜಾಲಹಳ್ಳಿ, ಬೆಳಿಗ್ಗೆ 10

ಅಭಿನಂದನಾ ಗ್ರಂಥ ಬಿಡುಗಡೆ: ಸಾನ್ನಿಧ್ಯ: ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ, ಸಿದ್ಧಲಿಂಗ ಸ್ವಾಮೀಜಿ, ಸೌಮ್ಯನಾಥ ಸ್ವಾಮೀಜಿ, ಶಿವರುದ್ರ ಸ್ವಾಮೀಜಿ, ಅಧ್ಯಕ್ಷತೆ: ಎಂ. ಕೃಷ್ಣಪ್ಪ, ಉದ್ಘಾಟನೆ: ಎಂ. ವೀರಪ್ಪ ಮೊಯಿಲಿ, ಅತಿಥಿಗಳು: ಈಶ್ವರ ಬಿ. ಖಂಡ್ರೆ, ಪ್ರಿಯಕೃಷ್ಣ, ಆಯೋಜನೆ: ಡಾ. ಮಧುರಾ ಅಶೋಕ್ ಕುಮಾರ್ ಅಭಿನಂದನಾ ಸಮಿತಿ, ಸ್ಥಳ: ಆದಿಚುಂಚನಗಿರಿ ಸಮುದಾಯ ಭವನ, ಮನುವನ, ವಿಜಯನಗರ, ಬೆಳಿಗ್ಗೆ 10.30



ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ

'ಶ್ರೀ ಸಾಹಿತ್ಯ ಪ್ರಶಸ್ತಿ' ಪ್ರದಾನ: ಬರಗೂರು ರಾಮಚಂದ್ರಪ್ಪ, ಪ್ರಶಸ್ತಿ ಸ್ವೀಕರಿಸುವವರು: ಕೆ. ಮರುಳ ಸಿದ್ಧಪ್ಪ, ಅತಿಥಿಗಳು: ಕಮಲಿನಿ ಬಾಲುರಾವ್, ಎಚ್. ದಂಡಪ್ಪ, ಆರ್. ಲಕ್ಷ್ಮೀನಾರಾಯಣ, ಅಧ್ಯಕ್ಷತೆ: ಬೈರಮಂಗಲ ರಾಮೇಗೌಡ, ಆಯೋಜನೆ ಮತ್ತು ಸ್ಥಳ: ಬಿ.ಎಂ.ಶ್ರೀ ಪ್ರತಿಷ್ಠಾನ, ಎನ್.ಆರ್. ಕಾಲೊನಿ, ಬೆಳಿಗ್ಗೆ 10.30



ಕೆ. ಮರುಳಸಿದ್ಧಪ್ಪ

ವಿಶ್ವಕರ್ಮ ಜನಜಾಗೃತಿ ಸಮಾವೇಶ, ಅಮರಶಿಲ್ಪಿ ಜಕಣಾಚಾರಿ ಸಂಸ್ಮರಣೆ: ಉದ್ಘಾಟನೆ: ಎಸ್. ಮುನಿರಾಜು, ಎಸ್.ಟಿ. ಸೋಮಶೇಖರ್, ಅಧ್ಯಕ್ಷತೆ: ಕೆ.ಪಿ. ನಂಜುಂಡಿ ವಿಶ್ವಕರ್ಮ, ಆಯೋಜನೆ: ಅಖಿಲ ಕರ್ನಾಟಕ ವಿಶ್ವಕರ್ಮ ಮಹಾಸಭಾ, ಸ್ಥಳ: ನೀಲಕಂಟೇಶ್ವರಸ್ವಾಮಿ ದೇವಸ್ಥಾನದ ಮುಂಭಾಗ, ಹೆಗ್ಗನಹಳ್ಳಿ ಕ್ರಾಸ್, ಬೆಳಿಗ್ಗೆ 11

ಮಾಸದ ಮಂಥನ: ಅತಿಥಿ: ಜಯಂತ್ ಕಾಯ್ಕಿಣಿ, ಸ್ಥಳ: ನಂ. 17, ಸಾನ್ನಿಧ್ಯ, ದೊಡ್ಡಕನ್ನೆಲ್ಲಿ, ಬೆಳಿಗ್ಗೆ 11

ವಿಪ್ರೋತ್ಸವ–2026: ಮಧ್ಯಾಹ್ನ 3ಕ್ಕೆ ಭಕ್ತಿಸಾರ: ಸಮಸ್ತ ವಿಪ್ರ ಭಜನಾ ಮಂಡಳಿ, ಸಂಜೆ 4ಕ್ಕೆ ಸಾಂಸ್ಕೃತಿಕ ಕಾರ್ಯಕ್ರಮಗಳು, ಸಂಜೆ 5ಕ್ಕೆ **ಸನ್ಮಾನ ಸಮಾರಂಭ, ಭಾರ್ಗವ ಭೂಷಣ ಪ್ರಶಸ್ತಿ ಪ್ರದಾನ: ಸಾನ್ನಿಧ್ಯ:** ಅರ್ಜುನ ಅವಧೂತ ಗುರೂಜಿ, ಉದ್ಘಾಟನೆ: ಆರ್.ವಿ. ದೇಶಪಾಂಡೆ, ಅಧ್ಯಕ್ಷತೆ: ಗೋವಿಂದ ಕುಲಕರ್ಣಿ, ಅತಿಥಿಗಳು: ಸಿ.ಕೆ. ರಾಮಮೂರ್ತಿ, ವಿಶ್ವಾಸ್ ವೈದ್ಯ, ಅಸಗೋಡು ಜಯಸಿಂಹ, ರೇವತಿ ಕಾಮತ್, ಗಿರೀಶ್ ನೀಲಗುಂದ್, ತ್ರಿವಿಕ್ರಮ ಜೋಶಿ, ಪ್ರಶಸ್ತಿ ಸ್ವೀಕರಿಸುವವರು: ಶ್ರೀನಾಥ್, ಆಶಾ ದಿನೇಶ್, ಅರಳುಮಲ್ಲಿಗೆ ಪಾರ್ಥಸಾರಥಿ, ಜಿ. ಶ್ರೀನಿವಾಸ್ ರಾವ್, ವಿಶ್ವೇಶ್ವರ್ ಭಟ್, ಆಯೋಜನೆ: ಅಖಿಲ ಭಾರತೀಯ ಬ್ರಾಹ್ಮಣ ಮಹಾಸಂಘ, ಸ್ಥಳ: ಗಾಯನ ಸಮಾಜ, ಕೃಷ್ಣರಾಜೇಂದ್ರ ರಸ್ತೆ, ಚಿಕ್ಕಣ್ಣ ಗಾರ್ಡನ್, ಬಸವನಗುಡಿ.

ಸವಿಗಾನ ಸಂಭ್ರಮ: ಉದ್ಘಾಟನೆ: ಎಸ್.ಟಿ. ಸೋಮಶೇಖರ್, ಅತಿಥಿಗಳು: ಯೋಗೇಂದ್ರ ಕುಮಾರ್, ಬಸವರಾಜ್ ತೇಲಿ, ಆಯೋಜನೆ: ಸವಿಗಾನಲಹರಿ ಸುಗಮ ಸಂಗೀತ ಶಾಲೆ, ಸ್ಥಳ: ಉರ್ವ ಸಭಾಂಗಣ, ಉಪಕಾರ್ ಕ್ಲಬ್‌ಹೌಸ್‌ನ ಆವರಣ, ಉಲ್ಲಾಳು, ಸಂಜೆ 4ರಿಂದ

ಕರ್ನಾಟಕ ರಾಜ್ಯೋತ್ಸವ, ಹೊಸ ವರ್ಷದ ಸಂಭ್ರಮ, ಜನಪದ–ಕನ್ನಡ ಗೀತೆ ಗುಂಪು ನೃತ್ಯ ಸ್ಪರ್ಧೆಯ ಸಮಾರೋಪ ಸಮಾರಂಭ: ಪ್ರಶಸ್ತಿ ವಿತರಣೆ: ಕೆ.ಎನ್. ಚನ್ನೇಗೌಡ, ಅಧ್ಯಕ್ಷತೆ: ಸಿ.ಎಸ್. ಷಡಕ್ಷರಿ, ಆಯೋಜನೆ ಮತ್ತು ಸ್ಥಳ: ಕರ್ನಾಟಕ ರಾಜ್ಯ ಸರ್ಕಾರಿ ನೌಕರರ ಸಂಘ, ಕಬ್ಬನ್ ಉದ್ಯಾನ, ಸಂಜೆ 5


ನಿರಂತರಂ ರಾಷ್ಟ್ರೀಯ ನೃತ್ಯ, ಸಂಗೀತೋತ್ಸವ: ಸಂಗೀತ ಸಂಭ್ರಮ ಪುರಸ್ಕಾರ ಪ್ರದಾನ, ಅತಿಥಿಗಳು: ಯದುಗಿರಿ ಯತಿರಾಜ ರಾಮಾನುಜ ಜೀಯರ್ ಸ್ವಾಮೀಜಿ, ಡಾ.ಸಿ.ಎನ್. ಅಶ್ವತ್ಥನಾರಾಯಣ, ಚೌಡಯ್ಯ ಸ್ಮಾರಕ ಸಭಾಂಗಣ, ವಯ್ಯಾಲಿ ಕಾವಲ್, ಸಂಜೆ 5

'ಕುವೆಂಪು ನೆನಪು' ಕವಿ–ಕಾವ್ಯ–ಗೀತ ನೃತ್ಯೋತ್ಸವ: ಉದ್ಘಾಟನೆ: ಎಸ್. ರಾಮಲಿಂಗೇಶ್ವರ್, ಅಧ್ಯಕ್ಷತೆ: ಡಿ.ಬಿ. ಮಲ್ಲಿಕಾರ್ಜುನಸ್ವಾಮಿ ಮಹಾಮನೆ, ಅತಿಥಿಗಳು: ಗುಂಡೀಗೆರೆ ವಿಶ್ವನಾಥ್, ಚಂದ್ರಶೇಖರ್ ಎನ್., ಕೆ. ದೇವರಾಜು, ಶಿಲ್ಪಾ ರೇಣುಕಪ್ಪ, ಕುಮಾರ್ ಕೆ.ಎಚ್., ಆಯೋಜನೆ: ರಂಗೋತ್ರಿ, ಸ್ಥಳ: ಕುಮಾರ್ ಅಂಗಳ, ಎಲೆಕೊಡಿಗೆಹಳ್ಳಿ, ಮಾಗಡಿ ರಸ್ತೆ, ಸಂಜೆ 5.30

'ಬೈಠಕ್' ಹಿಂದೂಸ್ತಾನಿ ಸಂಗೀತ ಕಛೇರಿ: ಗಾಯನ: ಸುಷ್ಮಾ ಕಶ್ಯಪ್, ತಬಲಾ: ಶಶಿಭೂಷಣ ಗುರ್ಜರ್, ಹಾರ್ಮೋನಿಯಂ: ಸಮೀರ್ ಹವಾಲ್ದಾರ್, ಆಯೋಜನೆ: ಶ್ರೀರಾಮ ಕಲಾ ವೇದಿಕೆ, ಸ್ಥಳ: ಷಡ್ಜ ಕಲಾ ಕೇಂದ್ರ, ಮೌಂಟ್ ಲೇಔಟ್, ಮಲ್ಲೇಶ್ವರ, ಸಂಜೆ 5.30

ಧನುರ್ಮಾಸದ ಸಂಗೀತ ರುದ್ರ ಸಹಿತ ಇಷ್ಟಲಿಂಗ ಮಹಾ ಶಿವಪೂಜೆ, ಸಿದ್ಧಾಂತ ಶಿಖಾಮಣಿ ಆಧ್ಯಾತ್ಮಿಕ ಆಶೀರ್ವಚನ: 'ಶಿವಕಮಲ ಸಾಹಿತ್ಯ ಪ್ರಶಸ್ತಿ' ಪ್ರದಾನ: ಸಾನ್ನಿಧ್ಯ: ಚಂದ್ರಶೇಖರ ಶಿವಾಚಾರ್ಯ ಸ್ವಾಮೀಜಿ, ಮಲ್ಲಿಕಾರ್ಜುನ ವಿಶ್ವಾರಾಧ್ಯ ಶಿವಾಚಾರ್ಯ ಸ್ವಾಮೀಜಿ, ಮಲಯ ಶಾಂತಮುನಿ ಶಿವಾಚಾರ್ಯ ಸ್ವಾಮೀಜಿ, ಮಹಾಲಿಂಗ ಶಿವಾಚಾರ್ಯ ಸ್ವಾಮೀಜಿ, ಅಧ್ಯಕ್ಷತೆ: ಶೋಭಾ ಕರಂದ್ಲಾಜೆ, ಪ್ರಶಸ್ತಿ ಸ್ವೀಕರಿಸುವವರು: ಪ್ರಶಾಂತ ರಿಪ್ಪನ್‌ಪೇಟೆ, ಆಯೋಜನೆ: ಶ್ರೀ ಜಗದ್ಗುರು ವಿಶ್ವಾರಾಧ್ಯ ಜನಕಲ್ಯಾಣ ಪ್ರತಿಷ್ಠಾನ, ಸ್ಥಳ: ಜಗಜ್ಯೋತಿ ಬಸವೇಶ್ವರ ಸುಜ್ಞಾನ ಮಂಟಪ, ವಿಜಯನಗರ, ಸಂಜೆ 6

ಮಾರ್ಗಶೀರ್ಷೋತ್ಸವ: ಕರ್ನಾಟಕ ಶಾಸ್ತ್ರೀಯ ಸಂಗೀತ ಗಾಯನ: ಅಭಿಷೇಕ್ ರಘುರಾಮ್ ಮತ್ತು ತಂಡ, ಆಯೋಜನೆ ಮತ್ತು ಸ್ಥಳ: ಸುರಭಾರತೀ, ಎಚ್‌ಆರ್‌ಬಿಆರ್ ಲೇಔಟ್, ಸಂಜೆ 6.30



ನಿರ್ಮಲಾನಂದನಾಥ ಸ್ವಾಮೀಜಿ

ದೇವಾಂಗ ಸಂಘದ ಶತಮಾನೋತ್ಸವದ ಉದ್ಘಾಟನಾ ಸಮಾರಂಭ: ಅತಿಥಿಗಳು: ನಿರ್ಮಲಾನಂದನಾಥ ಸ್ವಾಮೀಜಿ, ಸಿದ್ದರಾಮಯ್ಯ, ಡಿ.ಕೆ. ಶಿವಕುಮಾರ್, ಜಿ. ಪರಮೇಶ್ವರ, ಸತೀಶ್ ಜಾರಕಿಹೊಳಿ, ದಿನೇಶ್ ಗುಂಡೂ ರಾವ್, ರಿಜ್ವಾನ್ ಅರ್ಷದ್, ಉಮಾಶ್ರೀ, ಜಿ. ರಮೇಶ್, ಸಮಾರೋಪ ಸಮಾರಂಭ: ಅತಿಥಿಗಳು: ಎಚ್.ಡಿ. ಕುಮಾರಸ್ವಾಮಿ, ಪ್ರಲ್ಹಾದ್ ಜೋಶಿ, ಬಿ.ವೈ. ವಿಜಯೇಂದ್ರ, ಪಿ.ಸಿ. ಮೋಹನ್, ಆಯೋಜನೆ: ದೇವಾಂಗ ಸಂಘ, ಸ್ಥಳ: ಗಾಯಿತ್ರಿ ವಿಹಾರ ಗೇಟ್ ಸಂಖ್ಯೆ–4, ಅರಮನೆ ಮೈದಾನ, ಬೆಳಿಗ್ಗೆ 10ರಿಂದ



ವಿಖ್ಯಾತಾನಂದ ಸ್ವಾಮೀಜಿ

'ನಾರಿ ಶಕ್ತಿ' ರಾಷ್ಟ್ರೀಯ ಸಮ್ಮೇಳನ–2026: ಸಾನ್ನಿಧ್ಯ: ವಿಖ್ಯಾತಾನಂದ ಸ್ವಾಮೀಜಿ, ರೇಣುಕಾನಂದ ಸ್ವಾಮೀಜಿ, ರಾಮಪ್ಪ, ಉದ್ಘಾಟನೆ: ಬಿ.ಕೆ. ಹರಿಪ್ರಸಾದ್, ಅತಿಥಿಗಳು: ರಾಮಲಿಂಗಾರೆಡ್ಡಿ, ದಿನೇಶ್ ಗುಂಡೂರಾವ್, ಮಧು ಬಂಗಾರಪ್ಪ, ಕೋಟಾ ಶ್ರೀನಿವಾಸ ಪೂಜಾರಿ, ಬೇಳೂರು ಗೋಪಾಲಕೃಷ್ಣ, ಎಚ್.ಆರ್. ಗವಿಯಪ್ಪ, ಉಮಾನಾಥ್ ಕೋಟ್ಯಾನ್, ಡಾ. ನಾಗಲಕ್ಷ್ಮೀ ಚೌಧರಿ, ಪ್ರತಿಭಾ ಕುಳಾಯಿ, ಅಧ್ಯಕ್ಷತೆ: ಎಂ. ತಿಮ್ಮೇಗೌಡ,ಆಯೋಜನೆ: ಕರ್ನಾಟಕ ಆರ್ಯ ಈಡಿಗ ಮಹಿಳಾ ಸಂಘ, ಸ್ಥಳ: ನಿಮ್ಹಾನ್ಸ್ ಕನ್ವೆನ್ಷನ್ ಸೆಂಟರ್, ಹೊಸೂರು ರಸ್ತೆ, ಬೆಳಿಗ್ಗೆ 10ರಿಂದ

ಸಾಹಿತ್ಯಿಕ, ಸಾಂಸ್ಕೃತಿಕ ಸೇರಿದಂತೆ ವಿವಿಧ ಪ್ರಕಾರಗಳ ಕಾರ್ಯಕ್ರಮಗಳ ವಿವರಗಳನ್ನು 'ನಗರದಲ್ಲಿ ಇಂದು' ಅಂಕಣದಲ್ಲಿ ಪ್ರಕಟಿಸಲು ಈ ಕೆಳಗಿನ ಇ-ಮೇಲ್‌ಗೆ (ಸಂಜೆ 6 ಗಂಟೆ ಒಳಗೆ) ಕಳುಹಿಸಿ..
nagaradalli_indu@prajavani.co.in

₹25 ಲಕ್ಷ ಪರಿಹಾರ, ಸುಸಜ್ಜಿತ ಮನೆ..

ಮೃತನ ಕುಟುಂಬಕ್ಕೆ ಪರಿಹಾರ ವಿತರಣೆ ಮನೆ ಕೊಡುವುದಾಗಿ ಸಚಿವರ ಅಭಯ

ಪ್ರಜಾವಾಣಿ ವಾರ್ತೆ

ಬಳ್ಳಾರಿ: ಬಳ್ಳಾರಿ ಘರ್ಷಣೆಯಲ್ಲಿ ಗುಂಡೇಟಿನಿಂದ ಮೃತಪಟ್ಟ ಕಾಂಗ್ರೆಸ್ ಕಾರ್ಯಕರ್ತ ರಾಜಶೇಖರ ಅವರ ಕುಟುಂಬಕ್ಕೆ ಬಳ್ಳಾರಿ ಉಸ್ತುವಾರಿ ಸಚಿವ ಜಮೀರ್ ಅಹಮದ್ ಖಾನ್ ಅವರು ಶನಿವಾರ ₹25 ಲಕ್ಷ ಆರ್ಥಿಕ ನೆರವು ನೀಡಿದರು. ಸುಸಜ್ಜಿತ ಮನೆ ನಿರ್ಮಿಸಿ ಕೊಡುವುದಾಗಿ ಭರವಸೆ ನೀಡಿದರು.

ಘಟನೆ ನಡೆದ ಎರಡು ದಿನದ ಬಳಿಕ ಶನಿವಾರ ಬಳ್ಳಾರಿಗೆ ಬಂದ ಸಚಿವರು ರಾಜಶೇಖರ್ ಅವರ ಹುಸೇನ್ ನಗರದ ಮನೆಗೆ ಭೇಟಿ ನೀಡಿ, ಸಾಂತ್ವನ ಹೇಳಿದರು.

'ರಾಜಶೇಖರ್ ನಿಧನದಿಂದ ಕುಟುಂಬ ಆಧಾರಸ್ತಂಭ ಕಳೆದುಕೊಂಡಿದೆ. ಅವರ ಕುಟುಂಬಕ್ಕೆ ಆಸರೆಯಾಗಲು ನಾನು, ಶಾಸಕ ಭರತ್ ರೆಡ್ಡಿ, ಗಣೇಶ್ ಸೇರಿ ನೆರವಾಗಿದ್ದೇವೆ. ಸ್ಲಂ ಬೋರ್ಡ್ ವತಿಯಿಂದ ಅವರಿಗೆ ಸುಸಜ್ಜಿತ ಮನೆ ಕಟ್ಟಿಸಿಕೊಡುವ ಭರವಸೆ ನೀಡಿದ್ದೇನೆ. ಪಕ್ಷದ ವತಿಯಿಂದಲೂ ಹೆಚ್ಚಿನ ನೆರವು ನೀಡಲಾಗುವುದು' ಎಂದು ಜಮೀರ್ ಅಹಮದ್ ಖಾನ್ ಸುದ್ದಿಗಾರರಿಗೆ ತಿಳಿಸಿದರು.

> **ಗಲಾಟೆ ವೇಳೆ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಸ್ಥಳದಲ್ಲಿ ಇದ್ದು ಪರಿಸ್ಥಿತಿ ನಿಯಂತ್ರಿಸಬೇಕಿತ್ತು. ಅವರು ಇಲ್ಲದಿದ್ದಕ್ಕೆ, ಗಲಾಟೆ ವಿಕೋಪಕ್ಕೆ ಹೋಯಿತೆಂದು ಮುಖ್ಯಮಂತ್ರಿಗೆ ಮಾಹಿತಿ ಬಂದಿದೆ**
> **ಶಿವಾನಂದ ಪಾಟೀಲ,** ಸಚಿವ

'ವಾಲ್ಮೀಕಿ ಪ್ರತಿಮೆ ಅನಾವರಣ ನಮ್ಮೆಲ್ಲರ ಬಹು ದಿನಗಳ ಕನಸಾಗಿತ್ತು. ಬ್ಯಾನರ್ ಕಟ್ಟುವ ವಿಷಯದಲ್ಲಿ ಜನಾರ್ದನ ರೆಡ್ಡಿ ದೊಡ್ಡ ಮನಸ್ಸು ಮಾಡಬೇಕಿತ್ತು. ಒಂದು ವೇಳೆ ಬ್ಯಾನರ್ ಬೇಡವೆಂದಿದ್ದರೆ, ಶಾಸಕ ಭರತ್ ರೆಡ್ಡಿಗೆ ಫೋನ್ ಮಾಡಿ ಹೇಳಬಹುದಿತ್ತು. ಇಷ್ಟು ಗಲಾಟೆ ಆಗುತ್ತಿರಲಿಲ್ಲ' ಎಂದರು.

ಇದೇ ವೇಳೆ ಎಚ್.ಎಂ. ರೇವಣ್ಣ ನೇತೃತ್ವದ ಸತ್ಯ ಸಂಶೋಧನಾ ಸಮಿತಿಯು ಜನಾರ್ದನ ರೆಡ್ಡಿ ಮನೆ ಮುಂದಿನ ಗಲಾಟೆ ನಡೆದ ಸ್ಥಳಕ್ಕೆ ಭೇಟಿ ನೀಡಿ ಪರಿಶೀಲಿಸಿದರು. ಶಾಸಕ ಭರತ್ ರೆಡ್ಡಿ ಅವರೊಂದಿಗೆ ಚರ್ಚಿಸಿದ ತಂಡವು ಘಟನೆಯ ಕುರಿತು ಮಾಹಿತಿ ಕಲೆಹಾಕಿತು.


ಸಚಿವ ಜಮೀರ್ ಅಹಮದ್ ಖಾನ್ ಅವರು ರಾಜಶೇಖರ ಕುಟುಂಬದವರಿಗೆ ₹25 ಲಕ್ಷ ಆರ್ಥಿಕ ನೆರವು ನೀಡಿದರು. ಕಂಪ್ಲಿ ಶಾಸಕ ಜೆ.ಎನ್ ಗಣೇಶ್ ಇದ್ದರು

ಗುಂಡು ಹಾರಿಸಿದವ ಶಾಸಕರ ಪರಿಚಿತ

ಬಳ್ಳಾರಿ: 'ಬಳ್ಳಾರಿಯಲ್ಲಿ ಗುರುವಾರ ರಾತ್ರಿ ದಾಳಿಯ ವೇಳೆ ವ್ಯಕ್ತಿಯೊಬ್ಬ ಗುಂಡು ಹಾರಿಸುತ್ತಿರುವುದು, ಆ ವ್ಯಕ್ತಿಗೂ ಭರತ್ ರೆಡ್ಡಿ ಮತ್ತು ಅವರ ಆಪ್ತರಿಗೂ ಸಂಪರ್ಕ ಇದೆ' ಎಂದು ಗಂಗಾವತಿ ಶಾಸಕ ಜಿ. ಜನಾರ್ದನ ರೆಡ್ಡಿ ಇಲ್ಲಿ ಆರೋಪಿಸಿದರು.

ಘರ್ಷಣೆ ಸಂದರ್ಭದಲ್ಲಿ ಚಿತ್ರೀಕರಿಸಿದ್ದ ವಿಡಿಯೊವನ್ನು ತಮ್ಮ ಆರೋಪಕ್ಕೆ ಪೂರಕವಾಗಿ ಅವರು ಶನಿವಾರ ಇಲ್ಲಿ ಮಾಧ್ಯಮಗಳಿಗೆ ಪ್ರದರ್ಶಿಸಿದರು.

'ಬಾಯಿಗೆ ಬಂದಂತೆ ಮಾತನಾಡಿದರೆ ಹೀರೋಗಳು ಆಗುತ್ತೇವೆ ಎಂಬುದು ಭ್ರಮೆ. ನೀವು ಈಗ ಗಾಳಿಗೆ ಜೇರೊ ಆಗಿದ್ದೀರಿ. 2028ರ ಚುನಾವಣೆಯಲ್ಲಿ ನಿಮ್ಮ ರಾಜಕೀಯ ಕಾಲ ಮುಗಿಯುತ್ತದೆ. ಶ್ರೀರಾಮುಲು ಅವರ ಕಾಲಿನ ದೂಳಿಗೂ ನೀವು ಸಮಾನರಲ್ಲ' ಎಂದು ಕಾಂಗ್ರೆಸ್ ನಾಯಕರ ವಿರುದ್ಧ ವಾಗ್ದಾಳಿ ನಡೆಸಿದರು.

ಇದೇ ವೇಳೆ ಶಾಸಕ ಬಿ. ನಾಗೇಂದ್ರ ಅವರ ವಿರುದ್ಧ ಆಕ್ರೋಶ ವ್ಯಕ್ತಪಡಿಸಿದ ಅವರು, 'ದಂಧೆಗಳಲ್ಲಿ ತೊಡಗಿದ್ದ ಅವನನ್ನು ಸರಿದಾರಿಗೆ ತಂದಿದ್ದೇ ನಾವು. ಈಗ ಹಗರಣಗಳಲ್ಲಿ ಸಿಲುಕಿ ಅವನ ರಾಜಕೀಯ ಜೀವನವೂ ಅಂತ್ಯವಾಗುತ್ತಿದೆ' ಎಂದು ಹೇಳಿದರು.

ಎಸ್‌ಪಿ ಅಮಾನತು ಸಮರ್ಥನೆ

ತುಮಕೂರು: 'ಗಲಭೆ ಸ್ಥಳಕ್ಕೆ ತೆರಳಿ ನಿಯಂತ್ರಿಸಲು ಕ್ರಮಕೈಗೊಳ್ಳದ ಮತ್ತು ಸಿಬ್ಬಂದಿಗೆ ಮಾರ್ಗದರ್ಶನ ಕುರಿತು ಸೂಕ್ತ ನಿರ್ಧಾರ ತೆಗೆದುಕೊಳ್ಳದ ಬಳ್ಳಾರಿ ಜಿಲ್ಲಾ ಎಸ್‌ಪಿ ಪವನ್ ನೆಜ್ಜೂರ್ ಅವರನ್ನು ಅನಿವಾರ್ಯವಾಗಿ ಅಮಾನತು ಮಾಡಬೇಕಾಯಿತು' ಎಂದು ಗೃಹ ಸಚಿವ ಜಿ.ಪರಮೇಶ್ವರ ಸಮರ್ಥಿಸಿಕೊಂಡಿದ್ದಾರೆ.

ಶನಿವಾರ ಇಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, 'ಘಟನೆ ಸಂಭವಿಸಿದ ತಕ್ಷಣ ಪರಿಸ್ಥಿತಿ ನಿಯಂತ್ರಣ ಕುರಿತು ತರಬೇತಿ ಕೊಟ್ಟಿರುತ್ತಾರೆ. ಇಷ್ಟು ವರ್ಷ ಕೆಲಸದ ಅನುಭವ ಇರುತ್ತದೆ. ಇದೆಲ್ಲವನ್ನೂ ಯೋಚಿಸಿಯೇ ಜಿಲ್ಲೆಗೆ ನೇಮಕ ಮಾಡಲಾಗುತ್ತದೆ. ಆದರೆ ಸರಿಯಾಗಿ ಕರ್ತವ್ಯ ನಿರ್ವಹಿಸಿಲ್ಲ ಎಂದರು.



'ಕರ್ತವ್ಯಕ್ಕೆ ರಿಪೋರ್ಟ್ ಮಾಡಿಕೊಂಡು ಒಂದು ದಿನ, ಒಂದು ಗಂಟೆ ಆಗಿದೆ ಎಂಬುದು ಮುಖ್ಯವಲ್ಲ. ಕೆಲಸ ಎಂದ ಮೇಲೆ ಕೆಲಸ. ಅವರು ಇಲಾಖೆಗೆ ಹೊಸಬರಲ್ಲ. ಸವಾಲುಗಳು ಎದುರಾದ ತಕ್ಷಣ ಕಾರ್ಯ ಪ್ರವೃತ್ತ ಆಗಬೇಕಾಗುತ್ತದೆ. ಘಟನೆಯಲ್ಲೂ ಸ್ಥಳಕ್ಕೆ ಹೋಗಿ ಗುಂಪು ನಿಯಂತ್ರಿಸಿದ್ದರೆ ಗುಂಡು ಹಾರಿಸುವ ಸ್ಥಿತಿ ಬರುತ್ತಿರಲಿಲ್ಲ' ಎಂದು ಅವರು ಹೇಳಿದರು.

ಜನಾರ್ದನ ರೆಡ್ಡಿ ಕಾಲಿಟ್ಟ ಮೇಲೆ ಗಲಭೆ: ಡಿ.ಕೆ. ಶಿವಕುಮಾರ್

ಬೆಂಗಳೂರು: 'ಶಾಸಕ ನಾರಾ ಭರತ್ ರೆಡ್ಡಿ ಬೆನ್ನಿಗೆ ನಮ್ಮ ಪಕ್ಷ ನಿಲ್ಲಲಿದೆ. ನಾವು ನಮ್ಮ ಕಾರ್ಯಕರ್ತನನ್ನು ಕಳೆದುಕೊಂಡಿದ್ದೇವೆ. ಇದಕ್ಕೆ ಕಾರಣ ಯಾರು ಎಂಬುದು ತನಿಖೆಯಿಂದ ಹೊರಬರಲಿದೆ. ತಪ್ಪು ಮಾಡಿದವರಿಗೆ ಶಿಕ್ಷೆ ಆಗುತ್ತದೆ' ಎಂದು ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್ ಹೇಳಿದರು.

ಸುದ್ದಿಗಾರರ ಜೊತೆ ಶನಿವಾರ ಮಾತನಾಡಿದ ಅವರು, 'ಜನಾರ್ದನ ರೆಡ್ಡಿ ಬಳ್ಳಾರಿಗೆ ಕಾಲಿಡುವವರೆಗೂ ಗಲಾಟೆ ಇರಲಿಲ್ಲ. ಅವರು ಬಂದ ಮೇಲೆ ಗಲಭೆ ಆಗಿದೆ. ಹೀಗಾಗಿ, ಈ ಗಲಾಟೆಯ ಬಗ್ಗೆ ಮಾತನಾಡುವ ಹಕ್ಕು ಅವರಿಗಿಲ್ಲ' ಎಂದರು.

'ನನ್ನ ಹತ್ಯೆಗೆ ಸಂಚು ರೂಪಿಸಿದ್ದರು' ಎಂದು ಜನಾರ್ದನ ರೆಡ್ಡಿ ಆರೋಪಿಸಿರುವ ಬಗ್ಗೆ ಕೇಳಿದಾಗ, 'ಅವರು ಡ್ರಾಮಾ ಮಾಸ್ಟರ್. ಅವರು ಮೊದಲೇ ಸಿನಿಮಾ ನಿರ್ಮಾಪಕರಲ್ಲವೇ? ಕೋಟೆ ನಿರ್ಮಿಸಿಕೊಂಡು ನೂರು ಜನ ಭದ್ರತಾ ಸಿಬ್ಬಂದಿ ಹೊಂದಿರುವವರನ್ನು ಯಾರು ಹತ್ಯೆ ಮಾಡುತ್ತಾರೆ? ಯಾರ ಇತಿಹಾಸ, ಏನು ಎಂಬುದನ್ನು ನೀವೇ (ಮಾಧ್ಯಮ) ಅರ್ಥ ಮಾಡಿಕೊಳ್ಳಬೇಕು' ಎಂದು ತಿರುಗೇಟು ನೀಡಿದರು.

'ವಾಲ್ಮೀಕಿ ಮಹರ್ಷಿಯ ಪುತ್ಥಳಿ ಅನಾವರಣಕ್ಕೆ ಸಂಬಂಧಿಸಿದ ಬ್ಯಾನರ್ ಹಾಕುವುದರಿಂದ ಬಿಜೆಪಿಯವರಿಗೆ ಆಗಿರುವ ತೊಂದರೆಯಾದರೂ ಏನು? ಈ ವಿಚಾರಕ್ಕೆ ರೆಡ್ಡಿ ಜಗಳಕ್ಕೆ ಬರುವ ಅಗತ್ಯವೇನಿತ್ತು? ನಾವು ಕಾರ್ಯಕರ್ತನನ್ನು ಕಳೆದುಕೊಳ್ಳಲು ಬಿಜೆಪಿಯವರು ಕಾರಣ. ಈ ಪ್ರಕರಣದ ತನಿಖೆಯಲ್ಲಿ ನಾನು ಹಸ್ತಕ್ಷೇಪ ಮಾಡುವುದಿಲ್ಲ' ಎಂದರು.


ಶಿವಕುಮಾರ್

'ಬಳ್ಳಾರಿಯಲ್ಲಿ ನಮ್ಮ ಪಕ್ಷದ ಗೆಲುವು ಅರಗಿಸಿಕೊಳ್ಳಲು ಬಿಜೆಪಿಯವರಿಗೆ ಆಗುತ್ತಿಲ್ಲ. ಸೋತ ನಂತರ ಶ್ರೀರಾಮುಲು ಹಾಗೂ ಜನಾರ್ದನ ರೆಡ್ಡಿ ಇಬ್ಬರೂ ತಬ್ಬಿಕೊಂಡು ಓಡಾಡುತ್ತಿದ್ದಾರೆ. ಮತ್ತೆ ಬಳ್ಳಾರಿಯಲ್ಲಿ ತಮ್ಮ ರಿಪಬ್ಲಿಕ್ ತರಲು ಪ್ರಯತ್ನಿಸುತ್ತಿದ್ದಾರೆ. ನಾವು ಅದಕ್ಕೆ ಅವಕಾಶ ನೀಡುವುದಿಲ್ಲ' ಎಂದರು.

ಗನ್ ವಿತರಿಸಲು ನಿಯಮ: 'ಬಳ್ಳಾರಿಯ ಘಟನೆಯ ಬೆನ್ನಲ್ಲೇ ಎಲ್ಲ ಖಾಸಗಿ ಗನ್‌ಗಳನ್ನು ಮುಟ್ಟುಗೋಲು ಹಾಕಿಕೊಳ್ಳಲಾಗಿದೆ. ಗನ್ ವಿತರಿಸಲು ನಿಯಮಾವಳಿ ರೂಪಿಸುತ್ತೇವೆ' ಎಂದು ಶಿವಕುಮಾರ್ ತಿಳಿಸಿದರು.

ಸುದ್ದಿ 2 ನಿಮಿಷ

ಡೀಮ್ಡ್ ಅರಣ್ಯ; ಜಂಟಿ ಸಮೀಕ್ಷೆ ಶೇ 70ರಷ್ಟು ಪೂರ್ಣ: ಸಚಿವ

ಚಿಕ್ಕಬಳ್ಳಾಪುರ: ಡೀಮ್ಡ್ ಅರಣ್ಯ ವಿಸ್ತೀರ್ಣ ಪುನರ್ ಪರಿಶೀಲನೆಗೆ ನಡೆಸುತ್ತಿರುವ ಜಂಟಿ ಸಮೀಕ್ಷೆ ಶೇ70ರಷ್ಟು ಪೂರ್ಣಗೊಂಡಿದೆ ಎಂದು ಅರಣ್ಯ ಸಚಿವ ಈಶ್ವರ ಖಂಡ್ರೆ ಶನಿವಾರ ತಿಳಿಸಿದರು.

ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ರಾಜ್ಯದಲ್ಲಿ ಡೀಮ್ಡ್ ಅರಣ್ಯ ಪ್ರದೇಶ ವಿಸ್ತೀರ್ಣಕ್ಕೆ ಸಂಬಂಧಿಸಿ ಸುಪ್ರೀಂ ಕೋರ್ಟ್‌ಗೆ 2022ರಲ್ಲಿ ಸರ್ಕಾರ ಮಾಹಿತಿ ನೀಡಿತ್ತು, ಆ ಪ್ರಮಾಣ ಪತ್ರದಲ್ಲಿ ಲೋಪದೋಷಗಳಿದ್ದವು. ಅದನ್ನು ಸರಿಪಡಿಸಲು ನಡೆಸುತ್ತಿರುವ ಜಂಟಿ ಸಮೀಕ್ಷೆ ಶೇ 70ರಷ್ಟು ಪೂರ್ಣಗೊಂಡಿದೆ ಎಂದರು.

ಸರ್ಕಾರಿ ಕಟ್ಟಡ, ಪಟ್ಟಾ ಭೂಮಿಯೂ ಡೀಮ್ಡ್ ಅರಣ್ಯದ ಪಟ್ಟಿಯಲ್ಲಿವೆ. ಜಂಟಿ ಸರ್ವೆಯನ್ನು ಬೇಗ ಪೂರ್ಣಗೊಳಿಸಿ ವರದಿ ಸಲ್ಲಿಸಲು ಅರಣ್ಯ, ಕಂದಾಯ ಇಲಾಖೆ ಅಧಿಕಾರಿಗಳಿಗೆ ಸೂಚಿಸಲಾಗಿದೆ ಎಂದರು.



2015ರ ನಂತರ ಆಗಿರುವ ಅರಣ್ಯ ಒತ್ತುವರಿ ಮತ್ತು 2015ರ ಪೂರ್ವದಲ್ಲಿ ಪಟ್ಟಾ ಜಮೀನು ಸೇರಿ 3 ಎಕರೆಗಿಂತ ಹೆಚ್ಚಿನ ಅರಣ್ಯ ಭೂಮಿ ಒತ್ತುವರಿ ಆಗಿದ್ದಲ್ಲಿ ಅದ್ಯತೆ ಮೇಲೆ ತೆರವಿಗೆ ಸೂಚಿಸಲಾಗಿದೆ ಎಂದರು.

15ರಂದು ಹರಿಹರ ಜಾತ್ರಾ ಮಹೋತ್ಸವ

ಹುಬ್ಬಳ್ಳಿ: 'ಹರಿಹರದ ವೀರಶೈವ ಲಿಂಗಾಯತ ಪಂಚಮಸಾಲಿ ಪೀಠದಲ್ಲಿ ಜ.15ರಂದು 'ಹರ ಜಾತ್ರಾ ಉತ್ಸವ' ನಡೆಯಲಿದೆ. ಈ ಸಾಲಿನಿಂದ ರಾಜ್ಯ, ರಾಷ್ಟ್ರೀಯ, ಅಂತರರಾಷ್ಟ್ರೀಯ ಮಟ್ಟದ ಒಬ್ಬ ಸಾಧಕರಿಗೆ 'ಕಿತ್ತೂರು ರಾಣಿ ಚನ್ನಮ್ಮ ಪ್ರಶಸ್ತಿ' ಪ್ರದಾನ ಮಾಡಲಾಗುವುದು' ಎಂದು ವಚನಾನಂದ ಸ್ವಾಮೀಜಿ ಇಲ್ಲಿ ಹೇಳಿದರು. 'ಪ್ರಶಸ್ತಿಗೆ ಪುರುಷರನ್ನು ಪರಿಗಣಿಸಲಾಗುವುದು. ಪ್ರಶಸ್ತಿ ಆಯ್ಕೆ ಸಮಿತಿ ರಚಿಸಿದ್ದು, ಶೀಘ್ರವೇ ಹೆಸರು ಪ್ರಕಟಿಸಲಾಗುವುದು' ಎಂದು ಶನಿವಾರ ಪತ್ರಿಕಾಗೋಷ್ಠಿಯಲ್ಲಿ ತಿಳಿಸಿದರು.

'2020ರಿಂದ ಪ್ರತಿ ವರ್ಷ ಜಾತ್ರಾ ಮಹೋತ್ಸವ ನಡೆಸುತ್ತಿದ್ದು, ಆರೋಗ್ಯ ಮತ್ತು ಉದ್ಯೋಗ ಮೇಳವೂ ನಡೆಯುತ್ತದೆ. ಈ ವರ್ಷ ಕಿತ್ತೂರು ಚನ್ನಮ್ಮ ವಿಜಯೋತ್ಸವದ ಪ್ರಮುಖವಾದುದಾಗಿದೆ' ಎಂದು ಹೇಳಿದರು.

ಸಿಬಿಐ ತನಿಖೆಗೆ ಶರವಣ ಒತ್ತಾಯ

ಬೆಂಗಳೂರು: 'ಶಾಸಕ ಜನಾರ್ದನ ರೆಡ್ಡಿ ವಿರುದ್ಧ ಸಂಚು ಮಾಡಿ, ದಾಳಿ ನಡೆಸಲಾಗಿದೆ. ಆಡಳಿತ ಪಕ್ಷವೇ ಇದರಲ್ಲಿ ಶಾಮೀಲಾಗಿದ್ದು, ಪ್ರಕರಣದ ತನಿಖೆಯನ್ನು ಸಿಬಿಐಗೆ ಒಪ್ಪಿಸಬೇಕು' ಎಂದು ವಿಧಾನ ಪರಿಷತ್ತಿನಲ್ಲಿ ಜೆಡಿಎಸ್ ಉಪನಾಯಕ ಟಿ.ಎ.ಶರವಣ ಒತ್ತಾಯಿಸಿದ್ದಾರೆ.

ಪತ್ರಿಕಾ ಹೇಳಿಕೆ ನೀಡಿರುವ ಶರವಣ, 'ಈ ಹಿಂಸಾಚಾರದಲ್ಲಿ ಕಾಂಗ್ರೆಸ್ ಶಾಸಕರು, ಕಾರ್ಯಕರ್ತರು ಹೇಗೆ ವರ್ತಿಸಿದ್ದಾರೆ ಎಂಬುದನ್ನು ನಾಡಿನ ಜನ ನೋಡಿದ್ದಾರೆ. ರಾಜ್ಯದಲ್ಲಿ ಹೊಸ ರೀತಿಯ ಅಪಾಯಕಾರಿ ರಕ್ತರಾಜಕಾರಣವನ್ನು ಕಾಂಗ್ರೆಸ್ ಆರಂಭಿಸಿದೆ. ಶಾಸಕ ಭರತ್ ರೆಡ್ಡಿ ಅಂಗರಕ್ಷಕರು ಜನಾರ್ದನ ರೆಡ್ಡಿ ಮನೆಯನ್ನು ಗುರಿಯಾಗಿಸಿಕೊಂಡು ದಾಳಿ ನಡೆಸಿರುವ ರೀತಿಯು, ಅದು ಪೂರ್ವಯೋಜಿತ ಎಂಬುದನ್ನು ಸಾಬೀತು ಮಾಡುತ್ತದೆ' ಎಂದಿದ್ದಾರೆ.


ಟಿ.ಎ.ಶರವಣ

'ರಾಜ್ಯದಲ್ಲಿ ಆಡಳಿತ ವ್ಯವಸ್ಥೆ ಕುಸಿದು ಬಿದ್ದಿದ್ದು, ಗೂಂಡಾ ರಾಜ್ ಬಂದಿದೆ. ಸರ್ಕಾರ ನಿಷ್ಪಕ್ಷಪಾತವಾಗಿ ತನಿಖೆ ನಡೆಯಲು ಬಿಡುತ್ತದೆ ಎಂಬ ನಂಬಿಕೆ ಇಲ್ಲ. ಹೀಗಾಗಿ ಸಿಬಿಐ ಅಥವಾ ನ್ಯಾಯಾಂಗ ತನಿಖೆ ನಡೆಸಬೇಕು' ಎಂದು ಆಗ್ರಹಿಸಿದ್ದಾರೆ.

ಶಾಸಕರೇ ಕಚ್ಚಾಡುವುದು ಸರಿಯಲ್ಲ: ಸ್ಪೀಕರ್

ಮಂಗಳೂರು: 'ಶಾಸಕರು ಸಿನಿಮಾ ಶೈಲಿಯಲ್ಲಿ ಕಚ್ಚಾಡುವುದು, ರಾಜಕೀಯ ದ್ವೇಷ ಸಾಧಿಸುವುದು ಸರಿಯಲ್ಲ. ಕೆಲ ಜನಪ್ರತಿನಿಧಿಗಳ ಇಂಥ ನಡವಳಿಕೆಯಿಂದ ಇತರರನ್ನೂ ಜನ ಹಾಗೇ ನೋಡುತ್ತಾರೆ' ಎಂದು ವಿಧಾನಸಭಾಧ್ಯಕ್ಷ ಯು.ಟಿ.ಖಾದರ್ ಹೇಳಿದರು.

ಬಳ್ಳಾರಿಯಲ್ಲಿ ಘರ್ಷಣೆ ಹಾಗೂ ನಂತರದ ಬೆಳವಣಿಗೆ ಕುರಿತು ಇಲ್ಲಿ ಶನಿವಾರ ಪ್ರತಿಕ್ರಿಯಿಸಿದ ಅವರು, 'ಶಾಸಕರೇ ಏಕವಚನದಲ್ಲಿ ಬೈದಾಡಿಕೊಳ್ಳುವುದು ಸರಿಯಲ್ಲ. ಶಾಸಕರ ವರ್ತನೆ ಸಂಸ್ಕೃತಿ, ಗೌರವ ಉಳಿಸುವ ರೀತಿಯಲ್ಲಿ ಇರಬೇಕು' ಎಂದರು.

ಸ್ಥಳದಲ್ಲಿದ್ದ ಎಸ್‌ಪಿ: ವಿಡಿಯೊ ಹರಿದಾಟ

ಬಳ್ಳಾರಿ: ಘರ್ಷಣೆ ಸ್ಥಳದಲ್ಲಿ ಇರಲಿಲ್ಲ ಎಂಬ ಕಾರಣಕ್ಕೆ ಅಮಾನತುಗೊಂಡಿರುವ ಬಳ್ಳಾರಿ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿಯಾಗಿದ್ದ ಪವನ್ ನೆಜ್ಜೂರ್ ಅವರು ಘಟನಾ ಸ್ಥಳದಲ್ಲಿದ್ದು, ಪರಿಶೀಲಿಸುತ್ತಿರುವ ವಿಡಿಯೊಗಳು ಸಾಮಾಜಿಕ ಮಾಧ್ಯಮಗಳಲ್ಲಿ ಹರಿದಾಡತೊಡಗಿವೆ.

ಡಿಐಜಿ ವರ್ತಿಕಾ ಕಟಿಯಾರ್ ಅವರ ಜತೆಗೇ ಪರಿಸ್ಥಿತಿ ಅವಲೋಕನ ನಡೆಸುತ್ತಿರುವುದು, 'ಎಷ್ಟು ಜನ ಸೇರಿದ್ದಾರಪ್ಪ' ಎಂಬ ವರ್ತಿಕಾ ಅವರ ಪ್ರಶ್ನೆಗೆ ಉತ್ತರಿಸುತ್ತಾ ಅವರೊಂದಿಗೆ ಹೆಜ್ಜೆ ಹಾಕುತ್ತಾ ನಡೆದುಕೊಂಡು ಹೋಗುತ್ತಿರುವ ದೃಶ್ಯಗಳು ವಿಡಿಯೊದಲ್ಲಿ ಇವೆ.

'ಫೋನ್‌ನಲ್ಲಿ ಮಾತನಾಡುತ್ತಾ ಅಧಿಕಾರಿಗಳಿಗೆ ಸೂಚಿಸುತ್ತಿರುವುದು, ಹತ್ಯೆ ನಡೆದ ಸ್ಥಳದಲ್ಲಿ ರಕ್ತದ ಕಲೆಗಳನ್ನು ಪರಿಶೀಲಿಸುತ್ತ ನಿಂತಿರುವ ಚಿತ್ರಗಳು ಅವರು ಸ್ಥಳದಲ್ಲೇ ಇದ್ದರು ಎಂಬುದನ್ನು ಹೇಳುತ್ತಿವೆ. ಮೊದಲ ಘರ್ಷಣೆ ನಡೆದ ಬಳಿಕ ನಗರ ಡಿವೈಎಸ್‌ಪಿ ಅವರಿಂದ ವಿವರಣೆ ಪಡೆಯುತ್ತಿರುವ ವಿಡಿಯೊಗಳೂ ಸದ್ಯ ಸಿಕ್ಕಿವೆ.


ಡಿಐಜಿ ವರ್ತಿಕಾ ಕಟಿಯಾರ್ ಅವರೊಂದಿಗೆ ನಿಂತಿರುವ ಎಸ್‌ಪಿ ಪವನ್ ನೆಜ್ಜೂರ್

'ಶಾಸಕ ಭರತ್ ರೆಡ್ಡಿ ಬಂಧಿಸಿ'

ಹುಬ್ಬಳ್ಳಿ: 'ಬಳ್ಳಾರಿಯ ಘಟನೆಗೆ ಸಂಬಂಧಿಸಿ ಕಾಂಗ್ರೆಸ್ ಶಾಸಕ ಭರತ್ ರೆಡ್ಡಿ ಅವರನ್ನು ದ್ವೇಷಭಾಷಣ ಕಾಯ್ದೆಯಡಿ ಬಂಧಿಸಬೇಕು' ಎಂದು ಮೇಲ್ಮನೆ ಪ್ರತಿಪಕ್ಷ ನಾಯಕ ಛಲವಾದಿ ನಾರಾಯಣಸ್ವಾಮಿ ಆಗ್ರಹಿಸಿದರು.

'ಗಲಾಟೆ ಪ್ರಕರಣಕ್ಕೆ ಕಾರಣ ಯಾರು ಎನ್ನುವುದು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಿಗೆ ಸ್ಪಷ್ಟವಾಗಿ ಗೊತ್ತು. ಅದಕ್ಕೆ ಜಿಲ್ಲಾ ಉಸ್ತುವಾರಿ ಸಚಿವ ಜಮೀರ್ ಅಹಮದ್ ಖಾನ್ ಅವರಿಗೆ, ಶಾಸಕರಿಗೆ ಬುದ್ದಿ ಹೇಳಿ ಎಂದಿದ್ದಾರೆ' ಎಂದು ಅವರು ಶನಿವಾರ ಸುದ್ದಿಗಾರರಿಗೆ ತಿಳಿಸಿದರು.

'ಸರ್ಕಾರಿ ಗನ್ ಮ್ಯಾನ್ ಬಳಸುವ ಗುಂಡುಗಳಿಗೆ ಲೆಕ್ಕ ನೀಡಬೇಕು. ಖಾಸಗಿ ಗನ್ ಮ್ಯಾನ್‌ಗಳು ಬಳಸುವ ಗುಂಡುಗಳಿಗೆ ಲೆಕ್ಕ ಇಲ್ಲ? ಗಲಾಟೆ ನಡೆಸಿದ್ದು, ಹಲ್ಲೆ ನಡೆಸಿದ್ದು, ಗುಂಡು ಹೊಡೆದಿದ್ದು, ಸತ್ತಿದ್ದು ಅವರದ್ದೇ ಪಕ್ಷದವರು. ಪ್ರಕರಣ ದಾಖಲಿಸಿದ್ದು ಮಾತ್ರ ಜನಾರ್ದನ ರೆಡ್ಡಿ, ಇತರರ ವಿರುದ್ಧ' ಎಂದು ಹರಿಹಾಯ್ದರು.

ಪಾದಯಾತ್ರೆ ಮಾಡುತ್ತೇವೆ: ಶ್ರೀರಾಮುಲು

ಒಂದನೇ ಪುಟದಿಂದ...
ಅಲ್ಲದೆ, ಎಸ್‌ಪಿ ಅವರ ಅಮಾನತು ಆದೇಶ ಹಿಂಪಡೆಯಬೇಕು. ಜನಾರ್ದನ ರೆಡ್ಡಿ ಅವರಿಗೆ ಸೂಕ್ತ ಭದ್ರತೆ ನೀಡಬೇಕು. ಶಾಸಕ ಭರತ್‌ರೆಡ್ಡಿ ಅವರ ವಿರುದ್ಧ ಪ್ರಕರಣ ದಾಖಲಿಸಬೇಕು' ಎಂದು ಆಗ್ರಹಿಸಿದರು. 'ಡಿವೈಎಸ್‌ಪಿ ಚಂದ್ರಕಾಂತ ನಂದಾರೆಡ್ಡಿ, ತಮ್ಮ ಸಮಕ್ಷದಲ್ಲೇ ನನ್ನ ಮನೆ ಮೇಲೆ ಕಲ್ಲು, ಬಾಟಲಿ ತೂರಾಟ ಮಾಡಿಸಿದರು. ಗುಂಡಿನ ದಾಳಿಗೆ ಕಾರಣರಾದರು. ಎಸ್‌ಪಿ ವೃತ್ತದಿಂದ ಶಾಸಕ ಭರತ್ ರೆಡ್ಡಿ ನಮ್ಮ ಮನೆಯತ್ತ ಬರುವಾಗಲೇ ಡಿವೈಎಸ್‌ಪಿ ಅವರಿಗೆ ರಕ್ಷಣೆ ಒದಗಿಸಿದ್ದರು' ಎಂದು ಗಂಗಾವತಿ ಶಾಸಕ ಜನಾರ್ದನ ರೆಡ್ಡಿ ಆರೋಪಿಸಿದರು.


ಎಐಯುಟಿಯುಸಿ ನೇತೃತ್ವದಲ್ಲಿ ಬೆಂಗಳೂರು ಸ್ವಾತಂತ್ರ್ಯ ಉದ್ಯಾನದಲ್ಲಿ ಶನಿವಾರ ಬೆಂಗಳೂರು ವಲಯ ಮಟ್ಟದ ಆಶಾ ಕಾರ್ಯಕರ್ತೆಯರು ಪ್ರತಿಭಟನೆ ನಡೆಸಿದರು

ಪ್ರೋತ್ಸಾಹಧನ: 'ಆಶಾ' ಆಗ್ರಹ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬಾಕಿ ಉಳಿದಿರುವ ಪ್ರೋತ್ಸಾಹ ಧನ ಬಿಡುಗಡೆಗೆ ಆಗ್ರಹಿಸಿ ರಾಜ್ಯ ಸಂಯುಕ್ತ ಆಶಾ ಕಾರ್ಯಕರ್ತೆಯರ ಸಂಘದ (ಎಐಯುಟಿಯುಸಿ) ನೇತೃತ್ವದಲ್ಲಿ ಸ್ವಾತಂತ್ರ್ಯ ಉದ್ಯಾನದಲ್ಲಿ ಶನಿವಾರ ಬೆಂಗಳೂರು ವಲಯ ಮಟ್ಟದ ಆಶಾ ಕಾರ್ಯಕರ್ತೆಯರು ಪ್ರತಿಭಟಿಸಿದರು.

ಪ್ರೋತ್ಸಾಹಧನ ಬಿಡುಗಡೆ ಮಾಡದ ರಾಜ್ಯ ಸರ್ಕಾರ ವಿರುದ್ಧ ಪ್ರತಿಭಟನಕಾರರು ಆಕ್ರೋಶ ಹೊರಹಾಕಿದರು. ವಿವಿಧೆಡೆಯಿಂದ ಪ್ರತಿಭಟನೆಯಲ್ಲಿ ಪಾಲ್ಗೊಂಡಿದ್ದ ಆಶಾ ಕಾರ್ಯಕರ್ತೆಯರು, 'ಎನ್‌ಎಚ್‌ಎಂ ಪ್ರೋತ್ಸಾಹ ಧನ ಬಿಡುಗಡೆ ಮಾಡಬೇಕು' ಎಂದು ಪಟ್ಟುಹಿಡಿದರು. ಪ್ರತಿಭಟನೆಯ ನಂತರ ಸಂಘದ ರಾಜ್ಯ ಉಪಾಧ್ಯಕ್ಷೆ ಟಿ.ಸಿ. ರಮಾ ನೇತೃತ್ವದಲ್ಲಿ ಪ್ರತಿಭಟನಕಾರರು ಆರೋಗ್ಯ ಸೌಧಕ್ಕೆ ತೆರಳಿ ಎನ್‌ಎಚ್‌ಎಂ ನಿರ್ವಹಣಾಧಿಕಾರಿ ಅವಿನಾಶ್ ಮೆನನ್ ಅವರಿಗೆ ಮನವಿ ಸಲ್ಲಿಸಿದರು. ಬಾಕಿ ಹಣವನ್ನು ಜ. 5ರ ಒಳಗೆ ಬಿಡುಗಡೆ ಮಾಡುವುದಾಗಿ ಅವಿನಾಶ್ ಮೆನನ್ ಅವರು ಭರವಸೆ ನೀಡಿದ್ದಾರೆ ಎಂದು ಸಂಘದ ವಕ್ತಾರ ಶ್ರೀಕಾಂತ್ ಮಾಹಿತಿ ನೀಡಿದರು.

ಅಂತಿಮ ವರದಿ ಬಳಿಕ ನಿರ್ಧಾರ

ಎಸ್‌ಐಟಿ ಕೋರಿಕೆ ಒಪ್ಪದ ನ್ಯಾಯಾಲಯ

ಧರ್ಮಸ್ಥಳ ಪ್ರಕರಣ

ಪ್ರಜಾವಾಣಿ ವಾರ್ತೆ

ಬೆಳ್ತಂಗಡಿ (ದಕ್ಷಿಣ ಕನ್ನಡ): ಧರ್ಮಸ್ಥಳ ಗ್ರಾಮಕ್ಕೆ ಸಂಬಂಧಿಸಿದ ಪ್ರಕರಣದಲ್ಲಿ ವಿಶೇಷ ತನಿಖಾ ತಂಡ (ಎಸ್‌ಐಟಿ) ಬೆಳ್ತಂಗಡಿಯ ಜೆಎಂಎಫ್‌ಸಿ ನ್ಯಾಯಾಲಯಕ್ಕೆ ಸಲ್ಲಿಸಿದ್ದ ವರದಿಯನ್ವಯ ಆರೋಪಿಗಳ ವಿರುದ್ಧ ಕ್ರಮಕ್ಕೆ ಅನುಮತಿ ನೀಡಬೇಕು ಎಂಬ ಕೋರಿಕೆಯನ್ನು ಪುರಸ್ಕರಿಸಿಲ್ಲ.

ಪ್ರಕರಣಕ್ಕೆ ಸಂಬಂಧಿಸಿ ಅಂತಿಮ ವರದಿ ಸಲ್ಲಿಕೆಯಾದ ಬಳಿಕವೇ ಈ ಬಗ್ಗೆ ಆದೇಶ ಮಾಡುವುದಾಗಿ ನ್ಯಾಯಾಲಯ ಸ್ಪಷ್ಟಪಡಿಸಿದೆ. ಗ್ರಾಮದಲ್ಲಿ ಹಿಂದೆ ನಡೆದಿದೆ ಎನ್ನಲಾದ ಅಪರಾಧ ಕೃತ್ಯಗಳ ಮೃತದೇಹಗಳ ಹೂತು ಹಾಕಲಾಗಿದೆ ಎಂದು ಆರೋಪಿಸಲಾದ ಪ್ರಕರಣದ ಸಂಬಂಧ ಎಸ್‌ಐಟಿ ವರದಿ ಸಲ್ಲಿಸಿತ್ತು.

ಆರೋಪಿಯನ್ನು ಬಂಧಿಸಿದ 90 ದಿನಗಳಲ್ಲಿ ಎಸ್‌ಐಟಿ ವರದಿ ಸಲ್ಲಿಸಬೇಕಾಗಿತ್ತು. ಆರೋಪಿ ಚಿನ್ನಾ ಸಿ.ಎನ್ ನ್ಯಾಯಾಂಗ ಬಂಧನದಲ್ಲಿದ್ದಾಗ ಎಸ್‌ಐಟಿಯು ಭಾರತೀಯ ನಾಗರಿಕ ಸುರಕ್ಷಾ ಸಂಹಿತೆಯ (ಬಿಎನ್‌ಎಸ್‌ಎಸ್) ಸೆಕ್ಷನ್ 215 ಅಡಿ 3,900 ಪುಟಗಳ ವರದಿಯನ್ನು ನ.20ರಂದು ಸಲ್ಲಿಸಿತ್ತು. ಈ ಪ್ರಕರಣದಲ್ಲಿ ಸುಳ್ಳು ಪುರಾವೆಗಳನ್ನು ಸಲ್ಲಿಸಿ ಯಾವ ರೀತಿ ನ್ಯಾಯಾಲಯದ ದಾರಿ ತಪ್ಪಿಸಲಾಗಿದೆ ಎಂದು ಎಸ್‌ಐಟಿ ವಿವರಿಸಿತ್ತು.

ಆರೋಪಿ ಚಿನ್ನ ಸಿ.ಎನ್, ಮಹೇಶ್ ಶೆಟ್ಟಿ ತಿಮರೋಡಿ, ಗಿರೀಶ ಮಟ್ಟೆಣ್ಣವರ, ಜಯಂತ್ ಟಿ., ವಿಠಲ ಗೌಡ, ಸುಜಾತಾ ಭಟ್ ನ್ಯಾಯಾಲಯದ ದಾರಿ ತಪ್ಪಿಸಿರುವ ಕುರಿತು ಬಿಎನ್‌ಎಸ್‌ಎಸ್ ಸೆಕ್ಷನ್ 379ರ ಅಡಿ ತನಿಖೆಗೆ ನಿರ್ದೇಶನ ನೀಡುವಂತೆ ಎಸ್‌ಐಟಿ ಕೋರಿತ್ತು.

'ಮಹೇಶ್ ಶೆಟ್ಟಿ ತಿಮರೋಡಿ, ಗಿರೀಶ ಮಟ್ಟೆಣ್ಣವರ, ಜಯಂತ್ ಟಿ., ವಿಠಲ ಗೌಡ ಮತ್ತು ಸುಜಾತಾ ಭಟ್ ತನಿಖೆಗೆ ಸಹಕರಿಸಿಲ್ಲ' ಎಂದು ಎಸ್‌ಐಟಿಯು ವರದಿಯಲ್ಲಿ ಉಲ್ಲೇಖಿಸಿರುವುದನ್ನು ನ್ಯಾಯಾಲಯವು ಗಮನಿಸಿದೆ. ಎಸ್‌ಐಟಿಯು ಈಗ ಸಲ್ಲಿಸಿರುವ ವರದಿ ಅನ್ವಯ ನ್ಯಾಯಾಲಯವು ಈ ಹಂತದಲ್ಲಿ ಯಾವುದೇ ಆದೇಶ ಪ್ರಕಟಿಸುವುದಿಲ್ಲ. ಪ್ರಕರಣಕ್ಕೆ ಸಂಬಂಧಿಸಿದಂತೆ ಅಂತಿಮ ವರದಿ ಸಲ್ಲಿಸಿ' ಎಂದು ಬೆಳ್ತಂಗಡಿಯ ಜೆಎಂಎಫ್‌ಸಿ ನ್ಯಾಯಾಲಯದ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರಾದ ಟಿ.ಎಚ್.ವಿಜಯೇಂದ್ರ ತಿಳಿಸಿದರು.

ಶ್ರೀ ಕ್ಷೇತ್ರ ಧರ್ಮಸ್ಥಳ ಮಂಜುನಾಥ ದೇವಸ್ಥಾನವನ್ನು ಈ ಪ್ರಕರಣದಲ್ಲಿ 'ಸಂತ್ರಸ್ತ' ಎಂದು ಪರಿಗಣಿಸಿ, ವಿಚಾರಣೆ ವೇಳೆ ಕ್ಷೇತ್ರದ ಪರವಾಗಿ ವಾದ ಮಂಡಿಸಲು ಅವಕಾಶ ನೀಡಬೇಕು ಎಂದು ಕೋರಿ ದೇವಸ್ಥಾನದ ವಕ್ತಾರ ಪಾರ್ಶ್ವನಾಥ್ ಜೈನ್ 2025ರ ಡಿ.31ರಂದು ಅರ್ಜಿ ಸಲ್ಲಿಸಿದ್ದರು. ದೇವಸ್ಥಾನದ ಕಡೆಯ ಅರ್ಜಿಗೆ ಸಂಬಂಧಿಸಿ ಆಕ್ಷೇಪಣೆ ಸಲ್ಲಿಸಲು ಕಾಲಾವಕಾಶ ನೀಡುವಂತೆ ಸರ್ಕಾರಿ ವಕೀಲರಾದ ದಿವ್ಯರಾಜ ಹೆಗ್ಡೆ ಕೋರಿದ್ದರಿಂದ ನ್ಯಾಯಾಧೀಶರು, ಆ ಕುರಿತ ವಿಚಾರಣೆಯನ್ನು ಇದೇ 23ಕ್ಕೆ ಮುಂದೂಡಿದರು.

ಎ.ಐ ಕ್ಯಾಮೆರಾ, ಜಿಪಿಎಸ್ ಆಧಾರಿತ ನಿಯಂತ್ರಣ ಕೇಂದ್ರಗಳ ಆರಂಭ

ವನ್ಯಜೀವಿ ಸಂಘರ್ಷ ತಡೆಗೆ ತಂತ್ರಜ್ಞಾನ

ಪ್ರಜಾವಾಣಿ ವಾರ್ತೆ


ಬೆಂಗಳೂರು: ಮಾನವ-ವನ್ಯಜೀವಿ ಸಂಘರ್ಷ ತಡೆಗಾಗಿ ಅರಣ್ಯ ಇಲಾಖೆಯು ಅತ್ಯಾಧುನಿಕ ಸವಲತ್ತುಗಳಿಂದ ಕೂಡಿರುವ ರಾಜ್ಯ ಮಟ್ಟದ ನೂತನ ಸಮಗ್ರ ನಿರ್ದೇಶನ ಮತ್ತು ನಿಯಂತ್ರಣ ಕೇಂದ್ರ ಹಾಗೂ ಏಳು ವಿಭಾಗೀಯ ಕೇಂದ್ರಗಳನ್ನು ಆರಂಭಿಸಿದೆ.

ಅರಣ್ಯ ಭವನದಲ್ಲಿ ಶನಿವಾರ ನಡೆದ ಕಾರ್ಯಕ್ರಮದ ವೇಳೆ, ಅರಣ್ಯ ಸಚಿವ ಈಶ್ವರ ಬಿ.ಖಂಡ್ರೆ ಅವರು ಈ ಕೇಂದ್ರಗಳಿಗೆ ಚಾಲನೆ ನೀಡಿದರು.

'ಮಾನವ-ವನ್ಯಜೀವಿ ಸಂಘರ್ಷ ನಿಯಂತ್ರಣಕ್ಕಿಂತ, ಅಂತಹ ಸ್ಥಿತಿ ತಲೆದೋರುವುದನ್ನು ತಡೆಯುವುದೇ ಹೆಚ್ಚು ಪರಿಣಾಮಕಾರಿ. ತಡೆ ಮತ್ತು ನಿಯಂತ್ರಣ ಕ್ರಮಗಳನ್ನು ಗಮನದಲ್ಲಿ ಇರಿಸಿಕೊಂಡೇ ಈ ಕೇಂದ್ರಗಳನ್ನು ರೂಪಿಸಲಾಗಿದೆ. ಇದಕ್ಕಾಗಿ ಕೃತಕ ಬುದ್ಧಿಮತ್ತೆ, ಅತ್ಯಾಧುನಿಕ ಕ್ಯಾಮೆರಾ, ಜಿಪಿಎಸ್ ತಂತ್ರಜ್ಞಾನಗಳನ್ನು ಬಳಸಿಕೊಳ್ಳಲಾಗುತ್ತಿದೆ' ಎಂದರು.

'ಅರಣ್ಯ ಪ್ರದೇಶದ ಹೊರಗೆ ಕಾಡುಪ್ರಾಣಿಗಳು ಓಡಾಡುತ್ತಿರುವುದು ಸಾರ್ವಜನಿಕರ ಗಮನಕ್ಕೆ ಬಂದರೆ, ಅರಣ್ಯ ಇಲಾಖೆ ಸಹಾಯವಾಣಿ 1926ಕ್ಕೆ ಕರೆ ಮಾಡಿ ಮಾಹಿತಿ ನೀಡಬೇಕು. ಆ ಕರೆಯ ಮಾಹಿತಿಯು ರಾಜ್ಯಮಟ್ಟದ ಸಮಗ್ರ ನಿರ್ದೇಶನ ಮತ್ತು ನಿಯಂತ್ರಣ ಕೇಂದ್ರಕ್ಕೆ ಹೋಗಲಿದೆ. ಅಲ್ಲಿಂದ ಸಂಬಂಧಿತ ವಿಭಾಗೀಯ ಅಥವಾ ವಲಯ ಮಟ್ಟದ ನಿಯಂತ್ರಣ ಕೊಠಡಿಗೆ ನಿರ್ದೇಶನ ರವಾನೆಯಾಗಲಿದೆ' ಎಂದು ವಿವರಿಸಿದರು.

> **ಅತ್ಯಾಧುನಿಕ ತಂತ್ರಜ್ಞಾನಗಳನ್ನು ಬಳಸಿಕೊಂಡು, ಮಾನವ-ವನ್ಯಜೀವಿ ಸಂಘರ್ಷವನ್ನು ಪರಿಣಾಮಕಾರಿಯಾಗಿ ತಡೆಗಟ್ಟುವುದು ಈ ಉಪಕ್ರಮದ ಉದ್ದೇಶ**
> **ಈಶ್ವರ ಬಿ.ಖಂಡ್ರೆ,** ಅರಣ್ಯ ಸಚಿವ



'ಆನಂತರ, ವನ್ಯಜೀವಿಗಳನ್ನು ಅರಣ್ಯ ಪ್ರದೇಶಕ್ಕೆ ಮರಳಿ ಕಳುಹಿಸುವ, ಮಾನವ-ವನ್ಯಜೀವಿ ಸಂಘರ್ಷ ಉಂಟಾಗುವುದನ್ನು ತಡೆಯುವಂತಹ ಕ್ರಮಗಳನ್ನು ತೆಗೆದುಕೊಳ್ಳಲಾಗುತ್ತದೆ. ಸಮಸ್ಯೆ ಬಗೆಹರಿಯುವವರೆಗೂ ರಾಜ್ಯಮಟ್ಟದ ಕೇಂದ್ರದ ಅಧಿಕಾರಿಗಳು, ನಿಗಾ ಇರಿಸಲಿದ್ದಾರೆ' ಎಂದು ಮಾಹಿತಿ ನೀಡಿದರು.

11 ವಿಭಾಗೀಯ ಕೇಂದ್ರಗಳು: ರಾಜ್ಯದಲ್ಲಿ ಈಚೆಗಷ್ಟೇ ವಿಭಾಗೀಯ ಮಟ್ಟದ ನಾಲ್ಕು ನಿರ್ದೇಶನ ಮತ್ತು ನಿಯಂತ್ರಣ ಕೇಂದ್ರಗಳನ್ನು ಆರಂಭಿಸಲಾಗಿತ್ತು. ಈಗ ಇನ್ನೂ ಏಳು ವಿಭಾಗೀಯ ಮಟ್ಟದ ಕೇಂದ್ರಗಳನ್ನು ಆರಂಭಿಸಲಾಗಿದ್ದು, ಅವುಗಳ ಸಂಖ್ಯೆ 11ರಷ್ಟಾಗಿದೆ. ಈ ಹನ್ನೊಂದೂ ಕೇಂದ್ರಗಳು ಬೆಂಗಳೂರಿನ ಅರಣ್ಯ ಭವನದಲ್ಲಿರುವ ರಾಜ್ಯಮಟ್ಟದ ಕೇಂದ್ರದ ನಿರ್ದೇಶನದೊಂದಿಗೆ ಕಾರ್ಯನಿರ್ವಹಿಸಲಿವೆ. 1926 ಸಂಖ್ಯೆಯ ಸಹಾಯವಾಣಿಗೆ ಕರೆ ಮಾಡಿದರೆ, ಸಂಬಂಧಪಟ್ಟ ಕೇಂದ್ರಕ್ಕೆ ಮಾಹಿತಿ ರವಾನೆಯಾಗಲಿದೆ.

1926ಗೆ ಕರೆ ಮಾಡಿದರೆ ಸಾಕು...

- ಅರಣ್ಯ ಪ್ರದೇಶದ ಹೊರಗೆ ಎಲ್ಲೇ ವನ್ಯಜೀವಿಗಳು ಕಂಡರೆ, ಸಾರ್ವಜನಿಕರು 1926 ಸಹಾಯವಾಣಿಗೆ ಕರೆ ಮಾಡಿದರೆ ಸಾಕು. ಸ್ವಯಂಚಾಲಿತವಾಗಿ ಕೇಂದ್ರ ಮತ್ತು ಸಂಬಂಧಿತ ವಲಯ ನಿಯಂತ್ರಣ ಕೇಂದ್ರಕ್ಕೆ ಮಾಹಿತಿ ಹೋಗಲಿದೆ
- ಎಐ ಕ್ಯಾಮೆರಾ ಮತ್ತು ಏರಿಯಲ್ ಚಿತ್ರಗಳ ಆಧಾರದಲ್ಲಿ ವನ್ಯಜೀವಿಗಳ ಮೇಲೆ ಈ ಕೇಂದ್ರಗಳು ನಿಗಾ ಇರಿಸಲಿವೆ. ಸಿಬ್ಬಂದಿಯ ಕಾರ್ಯಾಚರಣೆ ವೇಳೆಯೂ ಈ ಚಿತ್ರಗಳನ್ನು ಬಳಸಿಕೊಳ್ಳಲಾಗುತ್ತದೆ
- ರೇಡಿಯೊ ಕಾಲರ್ ಅಳವಡಿಸಿದ ಆನೆಗಳ ಮೇಲೆ ನಿಗಾ ಇರಿಸಲಿವೆ. ಅವುಗಳ ಚಲನವಲನ ಕುರಿತಾಗಿ ಸಂಬಂಧಿತ ಅರಣ್ಯಾಧಿಕಾರಿಗಳಿಗೆ ಮಾಹಿತಿ ರವಾನೆಯಾಗಲಿದೆ
- ಮಾನವ-ವನ್ಯಜೀವಿ ಸಂಘರ್ಷದ ಸಾಧ್ಯತೆ ಇರುವ ಪ್ರದೇಶಗಳ ಮೇಲೆ ಸದಾ ನಿಗಾ ಇರಿಸಲಾಗಿರುತ್ತದೆ. ಅಗತ್ಯ ಎದುರಾದಲ್ಲಿ ಕ್ಷಿಪ್ರ ಕಾರ್ಯಾಚರಣೆ ತಂಡವನ್ನು ರಚಿಸಲಾಗುತ್ತದೆ
- ಜಿಪಿಎಸ್ ಆಧಾರಿತ ಗಸ್ತು ಪಡೆಗಳ ಸಂಪರ್ಕದಲ್ಲಿದ್ದು, ಸಾರ್ವಜನಿಕರಿಂದ ದೂರು ಬಂದೊಡನೆ ಗಸ್ತು ಪಡೆಗಳಿಗೆ ನಿರ್ದೇಶನ ಹೋಗಲಿದೆ. ಗಸ್ತು ಪಡೆಗಳಿಗೆ ಎಐ ಕ್ಯಾಮೆರಾ ಆಧಾರಿತ ಚಿತ್ರ ಮತ್ತು ಮಾಹಿತಿಗಳನ್ನು ಒದಗಿಸಲಾಗುತ್ತದೆ
- ಸೌರ ಬೇಲಿ, ರೈಲು ಕಂಬಿ ಬೇಲಿ, ಆನೆ ತಡೆ ಕಂದಕಗಳ ಮೇಲೆ ಈ ಕೇಂದ್ರಗಳು ನಿಗಾ ಇರಿಸಿರಲಿವೆ. ಇವುಗಳ ಬಳಿ ವನ್ಯಜೀವಿಗಳು ಸುಳಿದಾಗ ಸಂಬಂಧಿತ ವಲಯ ಅರಣ್ಯಾಧಿಕಾರಿ ಮತ್ತು ತಂಡಕ್ಕೆ ಮಾಹಿತಿ ರವಾನೆಯಾಗಲಿದೆ
- ಮೇಲಿನ ಎಲ್ಲ ಸಂದರ್ಭದಲ್ಲೂ ಸಂಬಂಧಿತ ಪ್ರದೇಶದ ಸಾರ್ವಜನಿಕರಿಗೆ ಮಾಹಿತಿ ಮತ್ತು ಮುನ್ನೆಚ್ಚರಿಕೆ ಸೂಚನೆಗಳು ರವಾನೆಯಾಗಲಿವೆ



ಅರಮನೆ ಬಳಿ ಸಂಭವಿಸಿದ್ದ ಅವಘಡ ● 10 ದಿನ ಕಳೆದರೂ ಸರ್ಕಾರದಿಂದ ಸಿಗದ ಪರಿಹಾರ

ಬದುಕು ಕಸಿದ ಸಿಲಿಂಡರ್ ಸ್ಫೋಟ

● ಶಿವಪ್ರಸಾದ್ ರೈ

ಮೈಸೂರು: 'ಅಮ್ಮ ಬೇಕು, ಎಲ್ಲಿದ್ದಾರೆ...'

ಅಂಬಾವಿಲಾಸ ಅರಮನೆ ಮುಂಭಾಗ ನಡೆದ ಸಿಲಿಂಡರ್ ಸ್ಫೋಟದಲ್ಲಿ ಮೃತಪಟ್ಟ ಲಕ್ಷ್ಮಿ ಮನೆಯಲ್ಲಿ ಇದೇ ಮಾತು ಮಾರ್ದನಿಸುತ್ತಿದೆ. ಸ್ಫೋಟದ ಸ್ಥಳದಲ್ಲಿದ್ದ ಅವರ ಮಗಳು ನಿತ್ಯ ಅಮ್ಮನಿಗಾಗಿ ಹಾತೊರೆಯುತ್ತಿದ್ದಾಳೆ. ಸರ್ಕಾರದ ಪರಿಹಾರವೂ ಇಲ್ಲದೆ ಕುಟುಂಬ ಮಗುವಿನ ಭವಿಷ್ಯದ ಬಗ್ಗೆ ಚಿಂತಿಸುತ್ತಿದೆ.

ಸ್ಫೋಟ ನಡೆದು ಹತ್ತು ದಿನ ಕಳೆದರೂ ಸರ್ಕಾರ ಪರಿಹಾರ ಘೋಷಿಸದಿರುವುದು ಮೃತರ ಕುಟುಂಬಗಳನ್ನು ಆತಂಕಕ್ಕೆ ದೂಡಿವೆ. ಸರ್ಕಾರದ ಗಮನಸೆಳೆಯುವಷ್ಟು ಶಕ್ತಿ ಇಲ್ಲದೆ ಅಸಹಾಯಕರಾಗಿದ್ದಾರೆ.

ಮುಖ್ಯಾಂಶಗಳು
- ತಾಯಿ ಸಾವಿನ ಆಘಾತದಿಂದ ಹೊರಬರದ ಪುತ್ರಿ
- ಬಾಲಕಿಯ ಶಿಕ್ಷಣಕ್ಕಾದರೂ ನೆರವಾಗುವಂತೆ ಮನವಿ

ಮಂಡ್ಯದ ನಿವಾಸಿಯಾದ ಲಕ್ಷ್ಮಿ, ಕೆಲ ವರ್ಷಗಳ ಹಿಂದೆ ಪತಿ ರಾಜೇಶ್ ಅವರೊಂದಿಗೆ ಬೆಂಗಳೂರಿನ ಬ್ಯಾಡರಹಳ್ಳಿಗೆ ಬಂದಿದ್ದರು. ಪತಿ ಆಟೊರಿಕ್ಷಾ ಚಾಲಕರು. ಲಕ್ಷ್ಮಿ ಅವರದ್ದು ಟೈಲರ್ ವೃತ್ತಿ. ಬೆಳವಾಡಿಯಲ್ಲಿನ ನಾದಿನಿಯ ಮನೆಗೆ ಬಂದ ಅವರು ಅರಮನೆ ಬಳಿಯಿಂದ ತೆರಳುತ್ತಿರುವಾಗ ಸಿಲಿಂಡರ್ ಸ್ಫೋಟವಾಗಿ, ಕರುಳು ಹೊರ ಬಂದಿತ್ತು. ಕೆ.ಆರ್ ಆಸ್ಪತ್ರೆಯಲ್ಲಿ ಡಿ.26ರಂದು ಮೃತಪಟ್ಟರು.


ಮಂಜುಳಾ


ಲಕ್ಷ್ಮಿ

ಮಗಳು 4ನೇ ತರಗತಿ ಓದುತ್ತಿದ್ದಾಳೆ. ಕಣ್ಣೆದುರೇ ನಡೆದ ಘಟನೆಯಲ್ಲಿ ತಾಯಿ ಗಾಯಗೊಂಡಿದ್ದನ್ನು ನೋಡಿ ಬೆಚ್ಚಿದ ಆಕೆ ಆ ಭಯದಿಂದ ಇನ್ನೂ ಹೊರಬಂದಿಲ್ಲ.

'ಮಗುವಿಗೆ ಉತ್ತಮ ವಿದ್ಯಾಭ್ಯಾಸ ನೀಡಬೇಕೆಂದು ಹಗಲಿರುಳು ದುಡಿದು ಹಣ ಸಂಗ್ರಹಿಸಿ ಓದುತ್ತಿದ್ದ ಲಕ್ಷ್ಮಿ, ತಮ್ಮದಲ್ಲದ ತಪ್ಪಿಗೆ ಬಲಿಯಾಗಿದ್ದಾರೆ. ಆ ಮಗುವಿನ ಭವಿಷ್ಯ ಹೇಗೆ ಎಂಬ ಚಿಂತೆ ಕುಟುಂಬವನ್ನು ಕಾಡುತ್ತಿದೆ.

'ಬಾಲಕಿಯು ಲಕ್ಷ್ಮಿ ಅವರ ಸಹೋದರಿಯ ಆರೈಕೆಯಲ್ಲಿದ್ದಾಳೆ. ಸರ್ಕಾರವು ಮಗುವಿನ ಶಿಕ್ಷಣಕ್ಕಾದರೂ ಸಹಾಯ ಮಾಡಬೇಕು' ಎಂಬುದು ಕುಟುಂಬದವರ ಕೋರಿಕೆ.

> **ಸಿಲಿಂಡರ್ ಸ್ಫೋಟದಲ್ಲಿ ಮೃತಪಟ್ಟವರ ಕುಟುಂಬದವರು ಪರಿಹಾರಕ್ಕಾಗಿ ಸಲ್ಲಿಸಿರುವ ಮನವಿಯನ್ನು ಪರಿಶೀಲಿಸಿ, ಸಂಬಂಧಿಸಿದವರ ಗಮನಕ್ಕೆ ತರುವೆ**
> **ಜಿ. ಲಕ್ಷ್ಮೀಕಾಂತ ರೆಡ್ಡಿ,** ಜಿಲ್ಲಾಧಿಕಾರಿ

ಅರಮನೆಯ ದೀಪಾಲಂಕಾರ ವೀಕ್ಷಿಸಲು ಬಂದ ನಂಜನಗೂಡಿನ ಚಾಮಲಾಪುರ ಬೀದಿಯ ನಿವಾಸಿ ಮಂಜುಳಾ ಕುಟುಂಬವೂ ತೊಂದರೆಯಲ್ಲಿದೆ. ಈ ಕುಟುಂಬ ಜೀವನ ನಿರ್ವಹಣೆಗಾಗಿ ಆಡು ಸಾಕಣೆ ಮಾಡುತ್ತಿದೆ. ಮಂಜುಳಾ ಅವರಿಗೆ ತಂದೆ ಹಾಗೂ ಅಣ್ಣ ಇದ್ದಾರೆ.

ಗಾಯಾಳುಗಳನ್ನು ವಿಚಾರಿಸಲು ಬಂದಿದ್ದ ಉಸ್ತುವಾರಿ ಸಚಿವ ಡಾ.ಎಚ್.ಸಿ.ಮಹದೇವಪ್ಪ 'ಗಾಯಾಳುಗಳ ಚಿಕಿತ್ಸೆಯ ವೆಚ್ಚ ಸರ್ಕಾರ ಭರಿಸುತ್ತದೆ' ಎಂದು ತಿಳಿಸಿದ್ದರು. ಲಕ್ಷ್ಮಿ ಅವರ ಕುಟುಂಬವು ಪರಿಹಾರಕ್ಕಾಗಿ ಸಚಿವ ಎಚ್.ಸಿ.ಮಹದೇವಪ್ಪ ಹಾಗೂ ಜಿಲ್ಲಾಧಿಕಾರಿಗೆ ಮನವಿ ಸಲ್ಲಿಸಿದೆ.

ಕಲಾಧಾರ

ಪ್ರಜಾವಾಣಿ ಚಿತ್ರ
ಸಂಜೀವ ಅಕ್ಕಿ


ವಿಜಯಪುರದ ಗೋಳಗುಮ್ಮಟ ಆವರಣದಲ್ಲಿ ನಡೆದ 'ಕಲಾಧಾರ' ಕಾರ್ಯಕ್ರಮದಲ್ಲಿ ಪಂ.ವೆಂಕಟೇಶ ಕುಮಾರ್ ಅವರು ಹಿಂದೂಸ್ತಾನಿ ಸಂಗೀತ ಕಾರ್ಯಕ್ರಮ ನಡೆಸಿಕೊಟ್ಟರು

‘ವಿಶೇಷ ಕ್ರಮ; ನಿಯಮವಲ್ಲ’

ಅಲಹಾಬಾದ್ ಹೈಕೋರ್ಟ್ ಆದೇಶ ರದ್ದುಪಡಿಸಿದ ಸುಪ್ರೀಂ ಕೋರ್ಟ್

ತನಿಖೆಗೆ ಕಾಲಮಿತಿ

ನವದೆಹಲಿ(ಪಿಟಿಐ): ಕೆಲವೊಮ್ಮೆ ಪರವಾನಗಿ ಪಡೆದ ಪ್ರಕರಣದಲ್ಲಿ ತನಿಖೆಯನ್ನು ಪೂರ್ಣಗೊಳಿಸುವುದಕ್ಕೆ ನ್ಯಾಯಾಲಯಗಳು ತನಿಖಾ ಸಂಸ್ಥೆಗಳಿಗೆ ಕಾಲಮಿತಿ ನಿಗದಿ ಮಾಡುತ್ತವೆ. ಇದು ಅಸಾಧಾರಣ ಕ್ರಮವೇ ಹೊರತು ಸಾಮಾನ್ಯ ನಿಯಮವೇನಲ್ಲ ಎಂದು ಸುಪ್ರೀಂ ಕೋರ್ಟ್ ಹೇಳಿದೆ.

ದಾಖಲೆಗಳನ್ನು ತಿರುಚಿ ಶಸ್ತ್ರಾಸ್ತ್ರ ಆರೋಪಿಗೆ ಬಲವಂತದ ಕ್ರಮದಿಂದ ರಕ್ಷಣೆ ನೀಡಿ ಹಾಗೂ ಆತನ ವಿರುದ್ಧದ ತನಿಖೆಯನ್ನು 90 ದಿನಗಳ ಒಳಗಾಗಿ ಪೂರ್ಣಗೊಳಿಸುವಂತೆ ಉತ್ತರ ಪ್ರದೇಶ ಪೊಲೀಸರಿಗೆ ಸೂಚಿಸಿ ಅಲಹಾಬಾದ್ ಹೈಕೋರ್ಟ್ ನೀಡಿರುವ ಆದೇಶ ಪರಿಶೀಲನೆ ವೇಳೆ ಸುಪ್ರೀಂ ಕೋರ್ಟ್ ಈ ಅಭಿಪ್ರಾಯ ಹೇಳಿದೆ.

ನ್ಯಾಯಮೂರ್ತಿಗಳಾದ ಸಂಜಯ್ ಕರೋಲ್ ಹಾಗೂ ಎನ್.ಕೆ.ಸಿಂಗ್ ಅವರು ಇದ್ದ ನ್ಯಾಯಪೀಠ ಈ ಕುರಿತ ಅರ್ಜಿ ವಿಚಾರಣೆ ನಡೆಸಿದ್ದು, ಡಿಸೆಂಬರ್ 19ರಂದು ತೀರ್ಪು ನೀಡಿದೆ.

‘ಕೆಲ ನಿರ್ದಿಷ್ಟ ಪ್ರಕರಣಗಳಲ್ಲಿ ನಡೆಯುತ್ತಿರುವ ತನಿಖೆ ವಿಳಂಬವಾಗುತ್ತಿದೆ ಎಂಬುದನ್ನು ಗಮನಿಸಿದ ಬಳಿಕವೇ ನ್ಯಾಯಾಲಯಗಳು ಮಧ್ಯಪ್ರವೇಶಿಸಿ, ತನಿಖೆ ಪೂರ್ಣಗೊಳಿಸಲು ಕಾಲಮಿತಿ ನಿಗದಿ ಮಾಡಿರುವ ನಿದರ್ಶನಗಳಿವೆ.

ಆದರೆ, ಇದು ಸಾಮಾನ್ಯ ನಿಯಮ ಅಲ್ಲ’ ಎಂದಿರುವ ನ್ಯಾಯಪೀಠ, ಹೈಕೋರ್ಟ್ ಆದೇಶ ರದ್ದುಗೊಳಿಸಿ ತೀರ್ಪು ನೀಡಿದೆ.

‘ಒಂದು ವೇಳೆ, ಕಾಲ ಮಿತಿ ನಿಗದಿ ಮಾಡದಿದ್ದಲ್ಲಿ ಪ್ರತಿಕೂಲ ಪರಿಣಾಮಗಳು ಕಂಡುಬರಬಹುದು. ಇಂತಹ ಸಂದರ್ಭಗಳಲ್ಲಿ ತನಿಖೆ ಪೂರ್ಣಗೊಳಿಸುವುದಕ್ಕೆ ಕಾಲಮಿತಿ ನಿಗದಿ ಮಾಡಿ ನ್ಯಾಯಾಲಯಗಳು ಆದೇಶಿಸುತ್ತವೆ. ಸಂವಿಧಾನದ 21ನೇ ವಿಧಿಯು ಪ್ರತಿಯೊಬ್ಬರಿಗೂ ತ್ವರಿತ ವಿಚಾರಣೆಯ ಹಕ್ಕು ನೀಡಿದೆ’ ಎಂದು ಪೀಠ ಹೇಳಿದೆ.

ಕೇರಳ ಮಾಜಿ ಸಚಿವ ಆ್ಯಂಟೊನಿಗೆ 3 ವರ್ಷ ಜೈಲು

ತಿರುವನಂತಪುರ(ಪಿಟಿಐ): ಡ್ರಗ್ಸ್ ಜಪ್ತಿ ಪ್ರಕರಣದಲ್ಲಿ ಸಾಕ್ಷ್ಯಗಳನ್ನು ತಿರುಚಿದ್ದಕ್ಕಾಗಿ ಕೇರಳದ ಮಾಜಿ ಸಾರಿಗೆ ಸಚಿವ ಹಾಗೂ ಹಾಲಿ ಶಾಸಕ ಆ್ಯಂಟೊನಿ ರಾಜು ಹಾಗೂ ಕೋರ್ಟ್‌ನ ಮಾಜಿ ಗುಮಾಸ್ತ ಕೆ.ಎಸ್.ಜೋಸ್‌ಗೆ ಮೂರು ವರ್ಷ ಜೈಲು ಶಿಕ್ಷೆ ವಿಧಿಸಿ ನ್ಯಾಯಾಲಯ ಶನಿವಾರ ಆದೇಶಿಸಿದೆ.

ಆ್ಯಂಟೊನಿ ರಾಜು, ಆಡಳಿತಾರೂಢ ಎಲ್‌ಡಿಎಫ್ ಮೈತ್ರಿಕೂಟದ ಅಂಗಪಕ್ಷವಾದ ಜನಾಧಿಪತ್ಯ ಕೇರಳ ಕಾಂಗ್ರೆಸ್‌ನ ಶಾಸಕ.

1990ರಲ್ಲಿ ತಿರುವನಂತಪುರ ಅಂತರರಾಷ್ಟ್ರೀಯ ವಿಮಾನನಿಲ್ದಾಣದಲ್ಲಿ ಆಸ್ಟ್ರೇಲಿಯಾ ಪ್ರಜೆಯೊಬ್ಬರಿಂದ 61.5 ಗ್ರಾಂ ಹಶೀಶ್ ಜಪ್ತಿ ಮಾಡಲಾಗಿತ್ತು. ಈ ಪ್ರಕರಣಕ್ಕೆ ಸಂಬಂಧಿಸಿದ ಸಾಕ್ಷ್ಯಗಳನ್ನು ತಿರುಚಿದ್ದ ಆರೋಪದಡಿ ಆ್ಯಂಟೊನಿ ರಾಜು ಮತ್ತು ಜೋಸ್ ವಿರುದ್ಧ ಪ್ರಕರಣ ದಾಖಲಾಗಿತ್ತು. ಪ್ರಕರಣದ ವಿಚಾರಣೆ ನಡೆಸಿದ ಇಲ್ಲಿನ ನೆಡುಮಂಗಾಡ್ ನ್ಯಾಯಾಲಯದ ನ್ಯಾಯಾಧೀಶೆ ರುಬಿ ಇಸ್ಮಾಯಿಲ್, ಇಬ್ಬರು ತಪ್ಪಿತಸ್ಥರೆಂದು ತೀರ್ಮಾನಿಸಿ ಶಿಕ್ಷೆ ವಿಧಿಸಿದ್ದಾರೆ.

ಈ ಪ್ರಕರಣದಲ್ಲಿ ತನಿಖಾಧಿಕಾರಿಯಾಗಿದ್ದ ಜೈಮೋಹನ್ ಅವರು ನ್ಯಾಯಾಲಯದ ಆದೇಶವನ್ನು ಸ್ವಾಗತಿಸಿದ್ದಾರೆ.

‘ಶಿಕ್ಷೆಯ ಪ್ರಮಾಣಕ್ಕಿಂತ ಅವರನ್ನು ಅಪರಾಧಿಗಳೆಂದು ತೀರ್ಮಾನಿಸಿ ನ್ಯಾಯಾಲಯ ಆದೇಶಿಸಿರುವುದು ನನಗೆ ಮುಖ್ಯ ಎನಿಸಿದೆ. ಸಾಕ್ಷ್ಯಗಳನ್ನು ತಿರುಚಿದವರಿಗೆ ಶಿಕ್ಷೆ ನೀಡಲಾಗಿದೆ’ ಎಂದು ಸುದ್ದಿಗಾರರಿಗೆ ತಿಳಿಸಿದ್ದಾರೆ.

‘ನವೋದಯ ವಿದ್ಯಾಲಯ ಸ್ಥಾಪಿಸಲೇಬೇಕು’

ತಮಿಳುನಾಡಿಗೆ ‘ಸುಪ್ರೀಂ’ ಸೂಚನೆ

ಪ್ರಜಾವಾಣಿ ವಾರ್ತೆ

ನವದೆಹಲಿ: ದ್ವಿಭಾಷಾ ನೀತಿ ಅನುಸರಿಸಲಾಗುತ್ತಿದೆ ಎಂಬ ಕಾರಣ ನೀಡುತ್ತಿದ್ದ ತಮಿಳುನಾಡು, ರಾಜ್ಯದಲ್ಲಿ ಜವಾಹರ ನವೋದಯ ವಿದ್ಯಾಲಯಗಳನ್ನು ಸ್ಥಾಪಿಸಿರಲಿಲ್ಲ. ಇಂತಹ ಕ್ರಮ ಕೈಗೊಂಡ ದೇಶದ ಏಕೈಕ ರಾಜ್ಯವೂ ಆಗಿತ್ತು. ಆದರೆ, ಇತ್ತೀಚೆಗೆ ಸುಪ್ರೀಂ ಕೋರ್ಟ್ ಈ ಕುರಿತು ನೀಡಿರುವ ತೀರ್ಪಿನಿಂದಾಗಿ ತಮಿಳುನಾಡು ಸರ್ಕಾರ ಈಗ ರಾಜ್ಯದಲ್ಲಿ ಈ ಶಾಲೆಗಳನ್ನು ಸ್ಥಾಪಿಸಲೇಬೇಕಾಗಿದೆ.

ತೀರ್ಪಿನ ಬೆನ್ನಲ್ಲೇ ತಮಿಳುನಾಡು ಸರ್ಕಾರಕ್ಕೆ ಪತ್ರ ಬರೆದಿರುವ ಶಿಕ್ಷಣ ಸಚಿವಾಲಯವು, ನವೋದಯ ಶಾಲೆಗಳನ್ನು ಸ್ಥಾಪಿಸಲು ಅಗತ್ಯವಿರುವ ಮೂಲಸೌಕರ್ಯಗಳ ಕುರಿತು ಚರ್ಚಿಸಲು ಶೀಘ್ರವೇ ಸಭೆ ಆಯೋಜಿಸುವಂತೆ ಸೂಚಿಸಿದೆ.

ಈ ಕುರಿತು ಸುಪ್ರೀಂ ಕೋರ್ಟ್ ಡಿಸೆಂಬರ್ 16ರಂದು ತೀರ್ಪು ನೀಡಿದೆ. ‘ಜವಾಹರ ನವೋದಯ ವಿದ್ಯಾಲಯಗಳನ್ನು ಸ್ಥಾಪಿಸುವುದಿಲ್ಲ ಎಂದು ತಮಿಳುನಾಡು ಸರ್ಕಾರ ಹೇಳುವಂತಿಲ್ಲ. ಈ ಶಾಲೆಗಳನ್ನು ಸ್ಥಾಪಿಸುವ ಪ್ರಕ್ರಿಯೆಗೆ 15 ದಿನಗಳ ಒಳಗಾಗಿ ಚಾಲನೆ ನೀಡಬೇಕು’ ಎಂದು ನಿರ್ದೇಶಿಸಿದೆ.

‘ರಾಜ್ಯದ ಪ್ರತಿ ಜಿಲ್ಲೆಯಲ್ಲಿ ನವೋದಯ ಶಾಲೆ ಸ್ಥಾಪಿಸಲು ಎಷ್ಟು ಜಮೀನು ಅಗತ್ಯವಿದೆ ಎಂಬ ಬಗ್ಗೆ ವಿವರಗಳನ್ನು ಸಿದ್ಧಪಡಿಸಬೇಕು’ ಎಂದೂ ಸೂಚಿಸಿದೆ.

6ರಿಂದ 10ನೇ ತರಗತಿವರೆಗೆ 3 ಭಾರತೀಯ ಭಾಷೆಗಳಲ್ಲಿ ಬೋಧಿಸಬೇಕು. ಇವುಗಳಲ್ಲಿ 2 ಭಾರತೀಯ ಭಾಷೆಗಳೇ ಆಗಿರಬೇಕು ಎಂದು ರಾಷ್ಟ್ರೀಯ ಶಿಕ್ಷಣ ನೀತಿ–2020 (ಎನ್‌ಇಪಿ) ಹೇಳುತ್ತದೆ.

6 ರಾಜ್ಯಗಳಿಗೆ ಪತ್ರ

ಎನ್‌ಇಪಿ ಅಡಿ ಕೇಂದ್ರ ಸರ್ಕಾರ ರೂಪಿಸಿರುವ ನೀತಿಯನ್ನು ಪಾಲನೆ ಮಾಡುವಂತೆ ಸೂಚಿಸಿ ತಮಿಳುನಾಡು, ಕೇರಳ, ಪುದುಚೆರಿ, ಆಂಧ್ರಪ್ರದೇಶ, ತೆಲಂಗಾಣ ಹಾಗೂ ಛತ್ತೀಸಗಢ ರಾಜ್ಯಗಳಿಗೆ ಕೇಂದ್ರ ಸರ್ಕಾರ ಎರಡನೇ ಬಾರಿ ಪತ್ರ ಬರೆದಿದೆ. ಈ ಮೊದಲು, 2023ರ ಫೆ. 9ರಂದು ಈ ರಾಜ್ಯಗಳಿಗೆ ಪತ್ರ ಬರೆದಿತ್ತು.

ಕಾಂಗ್ರೆಸ್‌ಗೆ ಮರಳಿದ ಟಿಎಂಸಿ ಸಂಸದೆ

ನವದೆಹಲಿ (ಪಿಟಿಐ): ಪಶ್ಚಿಮ ಬಂಗಾಳದ ವಿಧಾನಸಭಾ ಚುನಾವಣೆಗೂ ಮುನ್ನ, ಟಿಎಂಸಿ ರಾಜ್ಯಸಭಾ ಸದಸ್ಯೆ ಮೌಸಮ್ ನೂರ್ ಅವರು ಕಾಂಗ್ರೆಸ್ ಪಕ್ಷಕ್ಕೆ ಮರಳಿದ್ದಾರೆ.


ಮೌಸಮ್ ನೂರ್

‘ರಾಜ್ಯದಲ್ಲಿ ಬದಲಾವಣೆ ಬೇಕಿದೆ. ಅದು ನನ್ನಿಂದಲೇ ಆರಂಭವಾಗಲಿ. ನಾನು ಯಾವುದೇ ಷರತ್ತುಗಳಿಲ್ಲದೆ ಪಕ್ಷಕ್ಕೆ ಮರಳಿದ್ದೇನೆ’ ಎಂದಿದ್ದಾರೆ.

ಇವರ ರಾಜ್ಯಸಭಾ ಅವಧಿ ಏಪ್ರಿಲ್‌ನಲ್ಲಿ ಕೊನೆಗೊಳ್ಳಲಿದ್ದು, ಮುಂಬರುವ ಚುನಾವಣೆಯಲ್ಲಿ ಮಾಲ್ಡಾ ಕ್ಷೇತ್ರದಿಂದ ಸ್ಪರ್ಧಿಸುವ ಸಾಧ್ಯತೆಯಿದೆ.

ಹಲ್ಲೆ: 6 ಪೊಲೀಸರಿಗೆ ಗಾಯ

ಟಿಎಂಸಿ ಕಾರ್ಯಕರ್ತನ ಬಂಧನಕ್ಕೆ ತೆರಳಿದ ವೇಳೆ ದಾಳಿ

ಕೋಲ್ಕತ್ತ (ಪಿಟಿಐ): ಜಮೀನು ಹಾಗೂ ಜಲಕಾಯಗಳನ್ನು ಕಾನೂನುಬಾಹಿರವಾಗಿ ಅತಿಕ್ರಮಿಸಿಕೊಂಡ ಆರೋಪ ಎದುರಿಸುತ್ತಿರುವ ಟಿಎಂಸಿ ಕಾರ್ಯಕರ್ತರೊಬ್ಬರನ್ನು ಬಂಧಿಸಲು ಸಂದೇಶ್‌ಖಾಲಿಗೆ ತೆರಳಿದ್ದ ಪೊಲೀಸರ ಮೇಲೆ ಗುಂಪೊಂದು ದಾಳಿ ನಡೆಸಿದೆ. ಈ ದಾಳಿಯಲ್ಲಿ 6 ಜನ ಪೊಲೀಸರು ಗಾಯಗೊಂಡಿದ್ದು, ಒಂದು ಪೊಲೀಸ್ ವಾಹನ ಧ್ವಂಸಗೊಂಡಿದೆ.

ಆರೋಪಿಯಾಗಿರುವ ಟಿಎಂಸಿ ಕಾರ್ಯಕರ್ತ ಮುಸಾ ಮೊಲ್ಲಾ ಎಂಬಾತನನ್ನು ಬಂಧಿಸಲು ನಜತ್ ಠಾಣೆ ಪೊಲೀಸರು ಬೊಯರ್‌ಮಾರಿ ಗ್ರಾಮಕ್ಕೆ ಶುಕ್ರವಾರ ರಾತ್ರಿ ತೆರಳಿದ್ದ ವೇಳೆ ಈ ಘಟನೆ ನಡೆದಿದೆ. ದಾಳಿಗೆ ಸಂಬಂಧಿಸಿ 9 ಮಂದಿಯನ್ನು ಬಂಧಿಸಲಾಗಿದೆ ಎಂದು ಪೊಲೀಸರು ತಿಳಿಸಿದ್ದಾರೆ.

‘ಹಿಂಸಾಚಾರಕ್ಕೆ ಪ್ರಚೋದನೆ ನೀಡಿದ ಆರೋಪದ ಮೇಲೆ ಗ್ರಾಮ ಪಂಚಾಯಿತಿ ಅಧ್ಯಕ್ಷ ಹಾಗೂ ಉಪಾಧ್ಯಕ್ಷನನ್ನು ವಶಕ್ಕೆ ಪಡೆಯಲಾಗಿದೆ’ ಎಂದೂ ತಿಳಿಸಿದ್ದಾರೆ.

ಬರುವ ಏಪ್ರಿಲ್‌ನಲ್ಲಿ ಪಶ್ಚಿಮ ಬಂಗಾಳ ವಿಧಾನಸಭೆಗೆ ಚುನಾವಣೆ ನಡೆಯಲಿದೆ. ಈ ಘಟನೆಯು ರಾಜ್ಯದ ಕರಾವಳಿ ಪ್ರದೇಶವನ್ನು ಮತ್ತೊಮ್ಮೆ ರಾಜಕೀಯ ಜಟಾಪಟಿಯ ಕೇಂದ್ರಬಿಂದುವಾಗಿಸಿದೆ ಎನ್ನಲಾಗುತ್ತಿದೆ.

‘ಗ್ರಾಮಕ್ಕೆ ತೆರಳಿದ್ದ ಪೊಲೀಸರು, ಮೊಲ್ಲಾನನ್ನು ಆತನ ನಿವಾಸದಲ್ಲಿ ಬಂಧಿಸಿ, ಪೊಲೀಸ್ ವಾಹನದಲ್ಲಿ ಕೂರಿಸಲು ಯತ್ನಿಸಿದರು. ಈ ವೇಳೆ, ಗ್ರಾಮಸ್ಥರಿದ್ದ ಗುಂಪೊಂದು ವಾಹನ ಅಡ್ಡಗಟ್ಟಿ, ಕಲ್ಲು ತೂರಾಟ ನಡೆಸಿತು. ನಂತರ ವಾಹನವನ್ನು ಧ್ವಂಸಗೊಳಿಸಿತು’ ಎಂದು ಪೊಲೀಸರು ಹೇಳಿದ್ದಾರೆ.

‘ಈ ವೇಳೆ ಉಂಟಾದ ಉದ್ರಿಕ್ತ ಪರಿಸ್ಥಿತಿಯ ಲಾಭ ಮಾಡಿಕೊಂಡ ಮೊಲ್ಲಾ ಪರಾರಿಯಾಗಿದ್ದು, ಆತನ ಪತ್ತೆಗೆ ಶೋಧ ನಡೆಯುತ್ತಿದೆ’ ಎಂದು ಪೊಲೀಸರು ಹೇಳಿದ್ದಾರೆ.

> **ಘಟನೆಯು ಟಿಎಂಸಿ ಕಾರ್ಯಕರ್ತರಲ್ಲಿನ ಹತಾಶೆ ತೋರಿಸುತ್ತದೆ. ಈ ಹಿಂದೆ ಕೇಂದ್ರೀಯ ಸಂಸ್ಥೆಗಳ ಸಿಬ್ಬಂದಿ ಮೇಲೆ ದಾಳಿ ನಡೆದಿತ್ತು, ಈಗ ರಾಜ್ಯ ಪೊಲೀಸರ ಮೇಲೆ ನಡೆದಿದೆ**
> **ಸಜಲ್ ಘೋಷ್,** ಬಿಜೆಪಿ ನಾಯಕ

> **ತಮ್ಮ ಕರ್ತವ್ಯ ನಿಭಾಯಿಸಿರುವ ಪೊಲೀಸರ ಮೇಲೆ ದಾಳಿ ನಡೆಸಿರುವುದು ವಿಷಾದನೀಯ. ಪಕ್ಷವು ಇಂಥ ಕೃತ್ಯಗಳನ್ನು ಬೆಂಬಲಿಸುವುದಿಲ್ಲ**
> **ಅರೂಪ್ ಚಕ್ರವರ್ತಿ,** ಟಿಎಂಸಿ ವಕ್ತಾರ

ನಕ್ಸಲ್ ಹಿರಿಯ ಮುಖಂಡ ಬರ್ಸೆ ಸುಕ್ಕಾ ಶರಣು

ಪ್ರಜಾವಾಣಿ ವಾರ್ತೆ/ಪಿಟಿಐ

ಹೈದರಾಬಾದ್: ಪೀಪಲ್ಸ್ ಲಿಬರೇಷನ್ ಗೆರಿಲ್ಲಾ ಆರ್ಮಿ (ಪಿಎಲ್‌ಜಿಎ) ಪಡೆಯ ಕಮಾಂಡರ್, ನಕ್ಸಲರ ಹಿರಿಯ ನಾಯಕ ಬರ್ಸೆ ಸುಕ್ಕಾ ಅಲಿಯಾಸ್ ದೇವ ಶಸ್ತ್ರಾಸ್ತ್ರ ತ್ಯಜಿಸಿ ತೆಲಂಗಾಣ ಪೊಲೀಸರ ಮುಂದೆ ಶರಣಾಗಿದ್ದಾರೆ.

ಇದು ತೆಲಂಗಾಣದಲ್ಲಿ ಸಿಪಿಎಂಗೆ (ಮಾವೋವಾದ) ದೊಡ್ಡ ಹಿನ್ನಡೆ ಮತ್ತು ನಕ್ಸಲರ ಪಿಎಲ್‌ಜಿಎ ಭದ್ರಕೋಟೆಯ ಮಹಾ ಪತನ ಎಂದು ಹೇಳಲಾಗುತ್ತಿದೆ. ಬರ್ಸೆ ಸುಕ್ಕಾ ಅವರು ತಮ್ಮ ತಂಡದ 9 ಸದಸ್ಯರೊಂದಿಗೆ ಡಿಜಿಪಿ ಬಿ.ಶಿವಧರ್ ರೆಡ್ಡಿ ಅವರ ಎದುರು ಶರಣಾಗಿದ್ದಾರೆ.

ಛತ್ತೀಸಗಢದ ಸುಕ್ಮಾ, ದಾಂತೆವಾಡ ಮತ್ತು ಬಿಜಾಪುರ ಜಿಲ್ಲೆಗಳಲ್ಲಿ ಪಿಎಲ್‌ಜಿಎಯನ್ನು ಮಾವೋ ನಾಯಕಿ ಮಾದ್ವಿ ಹಿಡ್ಮಾ ಮುನ್ನಡೆಸುತ್ತಿದ್ದರು. ಈ ಪಡೆ ಶೇ 80ರಷ್ಟು ಶಸ್ತ್ರ ಸಜ್ಜಿತ ಹೋರಾಟಗಾರರನ್ನು ಹೊಂದಿತ್ತು. 49 ವರ್ಷದ ಬರ್ಸೆ ಸುಕ್ಕಾ ಮಾದ್ವಿ ನಂತರ ಎರಡನೇ ಪ್ರಮುಖ ಆದಿವಾಸಿ ನಾಯಕ ಎನಿಸಿದ್ದರು. ಇತ್ತೀಚೆಗಷ್ಟೆ ಮಾದ್ವಿ ಪೊಲೀಸರ ಗುಂಡಿಗೆ ಬಲಿಯಾದ ನಂತರ ಬರ್ಸೆ ನೇತೃತ್ವ ವಹಿಸಿಕೊಂಡಿದ್ದರು. ಮಾದ್ವಿ ಮತ್ತು ಬರ್ಸೆ ಇಬ್ಬರೂ ಪುವ್ವರ್ತಿ ಗ್ರಾಮದವರು.

‘ನಿರ್ದಯ ನಾಯಕ’ ಎಂದೇ ಕರೆಸಿಕೊಂಡಿದ್ದ ಬರ್ಸೆ, ಶಸ್ತ್ರಾಸ್ತ್ರ ತಯಾರಿಕೆ ಮತ್ತು ಸೇನಾ ತಂತ್ರಗಾರಿಕೆಯಲ್ಲಿ ನಿಪುಣರಾಗಿದ್ದರು. 2013ರಲ್ಲಿ ನಡೆದಿದ್ದ ಛತ್ತೀಸಗಢದ ಮಾಜಿ ಸಚಿವ ಮಹೇಂದ್ರ ಕರ್ಮ ಮತ್ತು ಕಾಂಗ್ರೆಸ್‌ನ ಕೆಲ ಮುಖಂಡರ ಹತ್ಯೆಯಲ್ಲಿ ಇವರ ಕೈವಾಡ ಕೇಳಿಬಂದಿತ್ತು.


ಶರಣಾದ ನಕ್ಸಲರು

ಬರ್ಸೆ ಸುಕ್ಕಾ ಅವರ ಶರಣಾಗತಿ ತೆಲಂಗಾಣದಲ್ಲಿ ಪಿಎಲ್‌ಜಿಎ ಮತ್ತು ಸಿಪಿಎಂನ ತೆಲಂಗಾಣ ರಾಜ್ಯ ಸಮಿತಿಗೆ ಅವಸಾನದ ಸೂಚನೆ ಎಂದು ಪೊಲೀಸರು ತಿಳಿಸಿದ್ದಾರೆ.

ಬರ್ಸೆ, ಕಾರೆಗುಟ್ಟ ಬೆಟ್ಟದಲ್ಲಿ ಪಿಎಲ್‌ಜಿಎ ಘಟಕ ಮುನ್ನಡೆಸುತ್ತಿದ್ದರು. ತೆಲಂಗಾಣ, ಛತ್ತೀಸಗಢ, ಮಹಾರಾಷ್ಟ್ರ ಪೊಲೀಸರು ಮತ್ತು ಎನ್‌ಐಎ, ಬರ್ಸೆ ಬಗ್ಗೆ ಮಾಹಿತಿ ಕೊಟ್ಟವರಿಗೆ ₹75 ಲಕ್ಷ ಬಹುಮಾನ ಘೋಷಿಸಿದ್ದರು ಎಂದು ತೆಲಂಗಾಣ ನಕ್ಸಲ್ ನಿಗ್ರಹ ಪಡೆ ಹಿರಿಯ ಅಧಿಕಾರಿ ತಿಳಿಸಿದ್ದಾರೆ.

20 ನಕ್ಸಲರ ಶರಣಾಗತಿ

ಬರ್ಸೆ ಸುಕ್ಕಾ, ಕಂಕನಾಲ ರಾಜಿ ರೆಡ್ಡಿ ಅಲಿಯಾಸ್ ವೆಂಕಟೇಶ್ ಸೇರಿದಂತೆ 20 ಮಂದಿ ನಕ್ಸಲರು ತೆಲಂಗಾಣ ಪೊಲೀಸರ ಮುಂದೆ ಶರಣಾಗಿದ್ದಾರೆ. ಇವರ ಬಗ್ಗೆ ಮಾಹಿತಿ ಕೊಟ್ಟವರಿಗೆ ₹ 1.82 ಕೋಟಿ ಬಹುಮಾನ ಘೋಷಿಸಲಾಗಿತ್ತು.

ಶರಣಾದ ನಕ್ಸಲರು ಎ.ಕೆ–47, 10 ಬಂದೂಕುಗಳು, ಗ್ರನೇಡ್, ಏರ್‌ಗನ್ ಸೇರಿದಂತೆ 48 ಶಸ್ತ್ರಾಸ್ತ್ರಗಳು ಮತ್ತು 2,206 ಮದ್ದುಗುಂಡುಗಳನ್ನು ಪೊಲೀಸರಿಗೆ ಒಪ್ಪಿಸಿದ್ದಾರೆ.

ಕಂಕನಾಲ ರಾಜಿ ರೆಡ್ಡಿ ಅಲಿಯಾಸ್ ವೆಂಕಟೇಶ್ ವಾರಂಗಲ್ ಮತ್ತು ಕರೀಮ್‌ನಗರ ಜಿಲ್ಲೆಗಳಲ್ಲಿ ನಕ್ಸಲ್ ಚಟುವಟಿಕೆ ಮುನ್ನಡೆಸುತ್ತಿದ್ದರು.

ಸದ್ಯ ತೆಲಂಗಾಣದ 17 ಸಕ್ರಿಯ ನಕ್ಸಲರು ದೇಶದ ವಿವಿಧೆಡೆ ಹರಡಿಕೊಂಡಿದ್ದಾರೆ. ಈ ಪಟ್ಟಿಯಲ್ಲಿದ್ದ ಇತರೆ 33 ಮಂದಿ ಈಗಾಗಲೇ ಸಿಪಿಎಂ ತೊರೆದಿರುವ ಮಾಹಿತಿ ಇದೆ ಎಂದು ಡಿಜಿಪಿ ಶಿವಧರ್ ರೆಡ್ಡಿ ತಿಳಿಸಿದ್ದಾರೆ.

ಪ್ರಯಾಗ್‌ರಾಜ್‌ನ ತ್ರಿವೇಣಿ ಸಂಗಮದಲ್ಲಿ ಮಿಂದೆದ್ದ ಭಕ್ತಸಮೂಹ

ಪುಷ್ಯ ಪೂರ್ಣಿಮೆ: ಭಕ್ತರಿಂದ ಪುಣ್ಯಸ್ನಾನ

ಪ್ರಯಾಗ್‌ರಾಜ್ (ಪಿಟಿಐ): ಮಾಘ ಮಾಸದ ‘ಪುಷ್ಯ ಪೂರ್ಣಿಮೆ’ಯಂದು ಇಲ್ಲಿನ ತ್ರಿವೇಣಿ ಸಂಗಮದಲ್ಲಿ ಅಪಾರ ಸಂಖ್ಯೆಯ ಭಕ್ತರು ಪುಣ್ಯಸ್ನಾನ ಮಾಡಿದರು.

ಮೈಕೊರೆವ ಚಳಿಯನ್ನು ಲೆಕ್ಕಿಸದೆ ಶನಿವಾರ ನಸುಕಿನಲ್ಲೇ ವೃದ್ಧರು, ಮಕ್ಕಳು ಸೇರಿದಂತೆ ಎಲ್ಲ ವಯೋಮಾನದವರು ಗಂಗಾ–ಯಮುನಾ–ಸರಸ್ವತಿಯ ಸಂಗಮದಲ್ಲಿ ಮಿಂದೆದ್ದರು.

ಮಾಘ ಮೇಳವು ಶನಿವಾರದಿಂದ ಆರಂಭಗೊಂಡಿದ್ದು, ಫೆ. 15ರವರೆಗೆ ನಡೆಯಲಿದೆ. ಮೊದಲ ದಿನವೇ ಅನೇಕ ಸಾಧು–ಸಂತರು, ಸ್ವಾಮೀಜಿಗಳು ತಮ್ಮ ಭಕ್ತರೊಂದಿಗೆ ಪುಣ್ಯಸ್ನಾನ ಮಾಡಿದರು. ಶನಿವಾರ ಬೆಳಿಗ್ಗೆ ಹೊತ್ತಿಗೆ 9 ಲಕ್ಷಕ್ಕೂ ಹೆಚ್ಚು ಭಕ್ತರು ಪುಣ್ಯಸ್ನಾನ ಮಾಡಿದ್ದಾರೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.


ಪ್ರಯಾಗ್‌ರಾಜ್‌ನ ತ್ರಿವೇಣಿ ಸಂಗಮದಲ್ಲಿ ಪುಷ್ಯ ಪೌರ್ಣಿಮೆಯಂದು ಪುಣ್ಯಸ್ನಾನ ಮಾಡಿದ ಅಪಾರ ಸಂಖ್ಯೆಯ ಭಕ್ತರು – ಪಿಟಿಐ ಚಿತ್ರ

‘ಪುಣ್ಯಸ್ನಾನಕ್ಕಾಗಿ ಬರುವ ಭಕ್ತರಿಗಾಗಿ ಮೇಳದಲ್ಲಿ ಹತ್ತು ಸ್ನಾನಘಟ್ಟ ನಿರ್ಮಿಸಲಾಗಿದೆ. 9 ತೆಪ್ಪದ ಸೇತುವೆಗಳನ್ನು ನಿರ್ಮಿಸಲಾಗಿದೆ’ ಎಂದು ಪ್ರಯಾಗ್‌ರಾಜ್ ವಿಭಾಗೀಯ ಆಯುಕ್ತೆ ಸೌಮ್ಯಾ ಅಗರ್ವಾಲ್ ಹೇಳಿದ್ದಾರೆ.

ಮಾಘಮೇಳ ಪ್ರದೇಶದಲ್ಲಿ ಯಾತ್ರಾರ್ಥಿಗಳಿಗಾಗಿ ಪ್ರತ್ಯೇಕ ಪಟ್ಟಣ ಸ್ಥಾಪಿಸಲಾಗಿದೆ. ಈ ಪಟ್ಟಣಕ್ಕೆ ‘ಪ್ರಯಾಗ್ವಾಲ್’ ಎಂದು ಹೆಸರಿಡಲಾಗಿದ್ದು, ಇದು ನಾಗವಾಸುಕಿ ದೇಗುಲದ ಎದುರಿದೆ.

‘ಅಂದಾಜು ಐದು ಲಕ್ಷ ಭಕ್ತರು ಶನಿವಾರದಿಂದಲೇ ‘ಕಲ್ಪವಾಸ’ ಆರಂಭಿಸಿದರು. ಇವರೆಲ್ಲರೂ ಒಂದು ತಿಂಗಳು ತ್ರಿವೇಣಿ ಸಂಗಮದ ತಟದಲ್ಲೇ ಬೀಡುಬಿಟ್ಟು ಧಾರ್ಮಿಕ ಕೈಂಕರ್ಯ ಕೈಗೊಳ್ಳಲಿದ್ದಾರೆ’ ಎಂದು ತ್ರಿವೇಣಿ ಸಂಗಮ ಆರತಿ ಸೇವಾ ಸಮಿತಿಯ ಅಧ್ಯಕ್ಷ ಆಚಾರ್ಯ ರಾಜೇಂದ್ರ ಮಿಶ್ರಾ ತಿಳಿಸಿದ್ದಾರೆ.

ಚಿಟಿಕೆ ಸುದ್ದಿ

ಕ್ಷಿಪಣಿ ಪರೀಕ್ಷೆ ಯಶಸ್ವಿ

ಇಸ್ಲಾಮಾಬಾದ್ (ಪಿಟಿಐ): ಪಾಕಿಸ್ತಾನವು ಸ್ವದೇಶಿ ತಂತ್ರಜ್ಞಾನ ಬಳಸಿ ಅಭಿವೃದ್ಧಿಪಡಿಸಿರುವ, ತೈಮೂರ್ ಕ್ಷಿಪಣಿ ವ್ಯವಸ್ಥೆಯ ಪರೀಕ್ಷಾರ್ಥ ಪ್ರಯೋಗವನ್ನು ಯಶಸ್ವಿಯಾಗಿ ನಡೆಸಿದೆ ಎಂದು ಅಲ್ಲಿನ ಸೇನೆ ಶನಿವಾರ ತಿಳಿಸಿದೆ.

‘600 ಕಿ.ಮೀ ದೂರದವರೆಗಿನ ಗುರಿಗಳನ್ನು ಹೊಡೆದುರುಳಿಸಬಲ್ಲ ಈ ಕ್ಷಿಪಣಿಯ ಯಶಸ್ವಿ ಪರೀಕ್ಷೆಯು ರಾಷ್ಟ್ರೀಯ ಬಾಹ್ಯಾಕಾಶ ಮತ್ತು ರಕ್ಷಣಾ ಸಾಮರ್ಥ್ಯಗಳ ಪ್ರಗತಿಯ ಮತ್ತೊಂದು ಮೈಲಿಗಲ್ಲಾಗಿದೆ’ ಎಂದು ಸೇನೆ ಬಿಡುಗಡೆ ಮಾಡಿದ ಹೇಳಿಕೆಯಲ್ಲಿ ತಿಳಿಸಿದೆ.

‘ಸಾಂಪ್ರದಾಯಿಕ ಸಿಡಿತಲೆಗಳನ್ನು ಹೊತ್ತೊಯ್ಯಬಲ್ಲ ಕ್ಷಿಪಣಿಯು ಸಮುದ್ರ ಮತ್ತು ಭೂಮಿ ಮೇಲಿನ ಗುರಿಗಳನ್ನು ನಿಖರವಾಗಿ ನಾಶಪಡಿಸುವ ಸಾಮರ್ಥ್ಯವನ್ನು ಹೊಂದಿದೆ’ ಎಂದಿದೆ.

ಶತ್ರುಗಳ ವಾಯು ಮತ್ತು ಕ್ಷಿಪಣಿ ರಕ್ಷಣಾ ವ್ಯವಸ್ಥೆಗಳನ್ನು ಪರಿಣಾಮಕಾರಿಯಾಗಿ ತಪ್ಪಿಸಲು ತೈಮೂರ್ ಕ್ಷಿಪಣಿಯನ್ನು ಅತ್ಯಂತ ಕಡಿಮೆ ಎತ್ತರದಲ್ಲಿ ಹಾರುವಂತೆ ವಿನ್ಯಾಸಗೊಳಿಸಲಾಗಿದೆ.

ಹಿಂದೂ ವ್ಯಾಪಾರಿ ಸಾವು

ಒಂದನೇ ಪುಟದಿಂದ...

ಬಳಿಕ, ಅವರ ತಲೆಗೆ ಪೆಟ್ರೋಲ್ ಸುರಿದು ಬೆಂಕಿ ಹಚ್ಚಲಾಗಿತ್ತು. ದಾಸ್ ಅವರು ತಕ್ಷಣವೇ ಹತ್ತಿರದಲ್ಲಿ ಇದ್ದ ಕೊಳಕ್ಕೆ ಧುಮುಕಿದ್ದರು. ಸ್ಥಳೀಯರು ನೆರವಿಗೆ ಧಾವಿಸಿ ಅವರನ್ನು ಹತ್ತಿರದ ಆಸ್ಪತ್ರೆಗೆ ದಾಖಲಿಸಿದ್ದರು. ಬಳಿಕ, ಹೆಚ್ಚಿನ ಚಿಕಿತ್ಸೆಗಾಗಿ ಢಾಕಾದ ಆಸ್ಪತ್ರೆಗೆ ಸ್ಥಳಾಂತರಿಸಲಾಗಿತ್ತು. ಆದರೂ, ಚಿಕಿತ್ಸೆಗೆ ಸ್ಪಂದಿಸದೆ ಶನಿವಾರ ಬೆಳಿಗ್ಗೆ ಮೃತಪಟ್ಟರು.

‘ಭಯದ ವಾತಾವರಣ ಸೃಷ್ಟಿಸಲು ಅಲ್ಪಸಂಖ್ಯಾತ ಸಮುದಾಯದ ಜನರು ಮತ್ತು ಮನೆಗಳ ಮೇಲೆ ಪೆಟ್ರೋಲ್ ಸುರಿದು ಬೆಂಕಿ ಹಚ್ಚಲಾಗುತ್ತಿದೆ’ ಎಂದು ದೇವನಾಥ್ ಕಳವಳ ವ್ಯಕ್ತಪಡಿಸಿದ್ದಾರೆ.

ಮುಂಬೈ ಧಾರಣೆ (ಶೇಂಗಾ)	
03-01-2026	
ಜಾವಾ 70/80(ಹೊಸ)	10800-10900
ಜಾವಾ 80/90(ಹೊಸ)	10100-10200
ದಪ್ಪ ಮಧ್ಯಪ್ರದೇಶ (ಹೊಸ)	7800-7900
ದಪ್ಪ ಗುಜರಾತ್ (ಹೊಸ)	9100-9200
ಶೇಂಗಾ ಎಣ್ಣೆ (10 ಕೆಜಿಗೆ)	
ಕಚ್ಚಾ (ತೆರಿಗೆ ಬಿಟ್ಟು)	1595 (1595)
ಒಂದು ವಾರದ ಡೆಲಿವರಿ	1590 (1590)
ಪಾಮ್ ವಾರದ ಡೆಲಿವರಿ	1253 (1248)
ಸೂರ್ಯಕಾಂತಿ ಎಣ್ಣೆ ಕಚ್ಚಾ	1430 (1425)
ಚಿನ್ನ-ಬೆಳ್ಳಿ (ಜಿಎಸ್‌ಟಿ ಸೇರಿಲ್ಲ)	
ಅಪರಂಜಿ ಚಿನ್ನ 10 ಗ್ರಾಂ	1,33,700 (1,34,000)
ಬೆಳ್ಳಿ ಕೆ.ಜಿಗೆ	2,32,700 (2,34,000)

ಆವರಣದಲ್ಲಿ ಹಿಂದಿನ ವಹಿವಾಟಿನ ಧಾರಣೆ

ಸಂಘರ್ಷ ಶಮನ: ಚೀನಾ ಪಾತ್ರವೂ ಇತ್ತು–ಪಾಕ್

ಇಸ್ಲಾಮಾಬಾದ್ (ಪಿಟಿಐ): ‘ಆಪರೇಷನ್ ಸಿಂಧೂರದ ವೇಳೆ ಉಲ್ಬಣಿಸಿದ್ದ ಪಾಕಿಸ್ತಾನ – ಭಾರತ ನಡುವಿನ ಸಂಘರ್ಷ ತಣಿಸುವಲ್ಲಿ ಚೀನಾದ ಪಾತ್ರವೂ ಇತ್ತು’ ಎಂದು ಪಾಕಿಸ್ತಾನ ಹೇಳಿದೆ. ಸಂಘರ್ಷ ಶಮನ ವಿಚಾರದಲ್ಲಿ ತಮ್ಮ ದೇಶ ವಹಿಸಿದ ಪಾತ್ರದ ಬಗ್ಗೆ ಚೀನಾದ ವಿದೇಶಾಂಗ ಸಚಿವರು ಇತ್ತೀಚೆಗೆ ಹೇಳಿಕೆ ನೀಡಿದ್ದರು.

2025ರಲ್ಲಿ ಚೀನಾವು ಮಧ್ಯಸ್ಥಿಕೆ ವಹಿಸಿದ ವಿಚಾರಗಳ ಪಟ್ಟಿಯಲ್ಲಿ ಭಾರತ ಮತ್ತು ಪಾಕಿಸ್ತಾನ ಸಂಘರ್ಷದ ವಿಚಾರವನ್ನೂ ಸೇರಿಸಲಾಗಿದೆ. ಆದರೆ, ‘ಎರಡೂ ದೇಶಗಳ ಡಿಜಿಎಂಒಗಳು ಸೇರಿ ಸಂಘರ್ಷ ಅಂತ್ಯಗೊಳಿಸುವ ಮಾತುಕತೆ ನಡೆಸಿದ್ದರು’ ಎಂದು ಭಾರತವು ಹೇಳುತ್ತಾ ಬಂದಿದೆ.

‘ಪಾಕ್ ನಾಯಕರೊಂದಿಗೆ ಚೀನಾ ನಿರಂತರ ಸಂಪರ್ಕದಲ್ಲಿತ್ತು. ಮೇ 6ರಿಂದ 10ರ ಒಳಗೆ ಅಥವಾ ಅದಕ್ಕೂ ಮೊದಲು ಅಥವಾ ನಂತರ ಭಾರತದ ನಾಯಕರೊಂದಿಗೆ ಚೀನಾ ಮಾತುಕತೆ ನಡೆಸಿತ್ತು. ಶಾಂತಿ ನೆಲಸಲು ಚೀನಾ ನಡೆಸಿದ ರಾಜತಾಂತ್ರಿಕ ಯತ್ನ ಇದಾಗಿತ್ತು’ ಎಂದು ಪಾಕ್‌ನ ವಿದೇಶಾಂಗ ಕಚೇರಿ ವಕ್ತಾರ ಹೇಳಿದ್ದಾರೆ.

ಮೊಟ್ಟೆ ಧಾರಣೆ (ಎನ್‌ಇಸಿಸಿ) ಬೆಂಗಳೂರು	
100 ಕ್ಕೆ	₹685
12 ಕ್ಕೆ	₹96
ಮೈಸೂರು: 100 ಕ್ಕೆ	₹706

ಎನ್.ಆರ್.ಪುರ ರಬ್ಬರ್ (ಪ್ರತಿ ಕೆ.ಜಿಗೆ)	
ಆರ್‌ಎಸ್‌ಎಸ್-4	₹181
ಆರ್‌ಎಸ್‌ಎಸ್-5	₹176
ಗುಡ್ ಲಾಟ್	₹164

ರಾಮನಗರ ರೇಷ್ಮೆಗೂಡು	
ಮಿಶ್ರತಳಿ(ಸಿ.ಬಿ)	₹500-756
ದ್ವಿತಳಿ (ಬಿ.ವಿ)	₹160-899

ಮುದ್ರಮನೆ ಕಾಫಿ (50 ಕೆಜಿಗೆ)	
ಎಪಿ	₹26750
ಎಸಿ	₹14560
ಆರ್‌ಪಿ	₹17100
ಆರ್‌ಸಿ	₹9750

ಮುಂಬೈ ಖಾದ್ಯ ತೈಲ (ಆವರಣದಲ್ಲಿ ಕಳೆದ ವಹಿವಾಟಿನ ದರ) (10 ಕೆ.ಜಿಗೆ)	
ಶೇಂಗಾ (ರಿಫೈನ್ಡ್)	₹1595 (1585)
ಸೋಯಾ (ರಿಫೈನ್ಡ್)	₹1290 (1285)
ಸೂರ್ಯಕಾಂತಿ (ರಿಫೈನ್ಡ್)	₹1495 (1490)
ಪಾಮೋಲಿನ್	₹1255 (1250)

ಒಣಮೆಣಸಿನಕಾಯಿ ಬೆಲೆ ಚೇತರಿಕೆ

ಬಳ್ಳಾರಿ ಜಿಲ್ಲೆಯ ಶೀತಲಗೃಹಗಳಲ್ಲಿದ್ದ 25 ಲಕ್ಷ ಚೀಲಗಳು ಮಾರಾಟ

ಪ್ರಜಾವಾಣಿ ವಾರ್ತೆ

ಬಳ್ಳಾರಿ: ಮೂರು ವರ್ಷಗಳ ಬಳಿಕ ಒಣಮೆಣಸಿಕಾಯಿಗೆ ಉತ್ತಮ ಬೆಲೆ ಬಂದಿದ್ದು, ಶೀತಲಗೃಹದಲ್ಲಿದ್ದ ಲಕ್ಷಾಂತರ ಮೆಣಸಿನಕಾಯಿ ಚೀಲಗಳು ಖಾಲಿಯಾಗಿವೆ. ಬಳ್ಳಾರಿಯಲ್ಲಿ 40 ಸಾವಿರ ಹೆಕ್ಟೇರ್‌ಗೂ ಹೆಚ್ಚಿನ ಪ್ರದೇಶದಲ್ಲಿ ಮೆಣಸಿನಕಾಯಿ ಬೆಳೆಯಲಾಗುತ್ತದೆ.

2022ರಲ್ಲಿ ಗುಂಟೂರು ಮೆಣಸಿನಕಾಯಿ ಬೆಲೆ ಕ್ವಿಂಟಲ್‌ಗೆ ₹30 ಸಾವಿರ ಇತ್ತು. 2023ರಲ್ಲಿ ₹18 ಸಾವಿರಕ್ಕೆ ಕುಸಿಯಿತು. 2024ರಲ್ಲಿ ಬೆಲೆ ಇನ್ನೂ ಕುಸಿಯಿತು. ಈ ವರ್ಷ 2025ರ ಜುಲೈವರೆಗೆ ಬೆಲೆ ₹6 ಸಾವಿರಕ್ಕೆ ಕುಸಿಯಿತು. ಈ ಎಲ್ಲಾ ಕಾರಣಗಳಿಂದ ಲಕ್ಷಾಂತರ ಮೆಣಸಿನಕಾಯಿ ಚೀಲಗಳನ್ನು ಶೀತಲಗೃಹದಲ್ಲಿ ಇಡಲಾಯಿತು.

‘2025ರ ವೇಳೆಗೆ ಬಳ್ಳಾರಿಯ ಶೀತಲಗೃಹಗಳಲ್ಲಿ ಒಣಮೆಣಸಿನ ಕಾಯಿಯ ಚೀಲಗಳೇ ಆವರಿಸಿಕೊಂಡವು. 25 ಕೆ.ಜಿ ತೂಕದ 28ರಿಂದ 30 ಲಕ್ಷ ಚೀಲಗಳಿದ್ದವು. 2025ರ ಆಗಸ್ಟ್‌ನಿಂದ ನಿಧಾನವಾಗಿ ಒಣಮೆಣಸಿನಕಾಯಿ ಬೆಲೆಯಲ್ಲಿ ಚೇತರಿಕೆ ಕಂಡಿತು. ರೈತರು ಎಲ್ಲಾ ಚೀಲಗಳನ್ನು ಮಾರುಕಟ್ಟೆಗೆ ಒಯ್ದು ಕ್ವಿಂಟಲ್‌ಗೆ ₹12 ಸಾವಿರದಿಂದ ₹14 ಸಾವಿರಕ್ಕೆ ಮಾರತೊಡಗಿದರು’ ಎಂದು ಶೀತಲಗೃಹದ ಮಾಲೀಕರೊಬ್ಬರು ಹೇಳಿದರು.

ಸದ್ಯ ಮಾರುಕಟ್ಟೆಯಲ್ಲಿ ಗುಂಟೂರು ಮೆಣಸಿನಕಾಯಿ ಕ್ವಿಂಟಲ್‌ಗೆ ₹14 ಸಾವಿರದಿಂದ ₹16 ಸಾವಿರ ಇದ್ದರೆ, ಬ್ಯಾಡಗಿ ಮೆಣಸಿನಕಾಯಿ ದರ ಕ್ವಿಂಟಲ್‌ಗೆ ₹25 ಸಾವಿರದಿಂದ ₹30 ಸಾವಿರದವರೆಗೆ ಇದೆ.

ಇಳುವರಿ ಕುಸಿತ-ಬೆಲೆ ಏರಿಕೆ: ಮೂರು ವರ್ಷಗಳಿಂದ ಒಣಮೆಣಸಿನಕಾಯಿ ಬೆಲೆ ಕುಸಿದಿದ್ದರಿಂದ 2025–26ನೇ ಸಾಲಿನಲ್ಲಿ ಬಿತ್ತನೆ ಪ್ರದೇಶ 40 ಸಾವಿರ ಹೆಕ್ಟೇರ್‌ನಿಂದ 29 ಸಾವಿರ ಹೆಕ್ಟೇರ್‌ಗೆ ಕುಸಿಯಿತು. ಆರಂಭದಲ್ಲಿ ಹೂ ಉದುರುವ ರೋಗ ಕಾಣಿಸಿಕೊಂಡಿತು. ಜತೆಗೆ, ಡಿಸೆಂಬರ್‌ನಲ್ಲಿ ವಿಪರೀತ ಚಳಿ, ಶೀತಗಾಳಿ ಬೀಸಿದ್ದರಿಂದ ಹಣ್ಣುಕೊಳೆ ರೋಗ ಬಾಧೆ ಆರಂಭವಾಯಿತು. ಇದರಿಂದ ಇಳುವರಿ ಕುಸಿತವಾಯಿತು.



ರೋಗ ತಗುಲಿ ಮೆಣಸಿನಕಾಯಿಯಲ್ಲಿ ಕಪ್ಪು ಕುಳಿ ಬಿದ್ದಿರುವುದು

> **ಬಳ್ಳಾರಿಯ ಎಲ್ಲ ಶೀತಲಗೃಹಗಳಲ್ಲಿ ಇದ್ದ ಶೇ 90ರಷ್ಟು ಒಣಮೆಣಸಿನಕಾಯಿ ಈಗಾಗಲೇ ಮಾರಾಟವಾಗಿದೆ. ಹೊಸ ಮಾಲನ್ನು ಶೀತಲಗೃಹಕ್ಕೆ ತಾರದೇ, ನೇರವಾಗಿ ಮಾರಲಾಗುತ್ತಿದೆ**
> **ಸತ್ಯಬಾಬು,** ಅಧ್ಯಕ್ಷ, ಶೀತಲಗೃಹಗಳ ಮಾಲೀಕರ ಸಂಘ

> **ಈ ವರ್ಷ ಬಿತ್ತನೆ ಪ್ರದೇಶ ಕಡಿಮೆಯಾಗಿತ್ತು. ಹವಾಮಾನ ವೈಪರೀತ್ಯದಿಂದ ಬೆಳೆಗೆ ರೋಗ ಬಾಧೆ ಕಾಣಿಸಿಕೊಂಡು ಇಳುವರಿ ಕುಸಿದಿದೆ. ಆದರೆ, ಉತ್ತಮ ಬೆಲೆ ಸಿಗುತ್ತಿದೆ**
> **ಶ್ರೀಕಾಂತ್ ಕೋಟೆಮನೆ,** ಜಂಟಿ ನಿರ್ದೇಶಕ, ತೋಟಗಾರಿಕೆ ಇಲಾಖೆ

‘ಬಿತ್ತನೆ ಕ್ಷೇತ್ರದ ಪ್ರಮಾಣ ಕಡಿಮೆಯಾಗಿದೆ. ರೋಗದ ಕಾರಣದಿಂದ ಈ ಬಾರಿ ಇಳುವರಿ ಮತ್ತು ಗುಣಮಟ್ಟ ಭಾರಿ ಪ್ರಮಾಣದಲ್ಲಿ ಕುಸಿದಿದೆ. ಎಕರೆಗೆ 18 ಕ್ವಿಂಟಲ್ ಸಿಗುತ್ತಿದ್ದ ಜಾಗದಲ್ಲಿ ಈ ಬಾರಿ 5ರಿಂದ 8 ಕ್ವಿಂಟಲ್‌ಗೆ ಸಿಗುತ್ತಿದೆ. ಹೀಗಾಗಿ ಈ ಸಲ ಮೆಣಸಿನಕಾಯಿಗೆ ಉತ್ತಮ ಬೆಲೆ ಬಂದಿದೆ’ ಎಂದು ತೋಟಗಾರಿಕೆ ಇಲಾಖೆ ಅಧಿಕಾರಿಗಳು ತಿಳಿಸಿದರು.

ವಿಮಾ ರಕ್ಷಣೆ ಕಲ್ಪಿಸಲು ₹100 ಕೋಟಿಗೂ ಹೆಚ್ಚು ವೆಚ್ಚ: ಗೋಯಲ್

‘ಗಿಗ್ ಮಾದರಿಯಲ್ಲಿ ಒತ್ತಡ ಇಲ್ಲ’

ನವದೆಹಲಿ (ಪಿಟಿಐ): ‘ಗಿಗ್ ಮಾದರಿಯ ಕೆಲಸವು ಡೆಲಿವರಿ ಪಾಲುದಾರರ ಮೇಲೆ ಯಾವುದೇ ಒತ್ತಡ ಹಾಕುತ್ತಿಲ್ಲ. ಡೆಲಿವರಿ ಪಾಲುದಾರರು ತಮಗೆ ಅನುಕೂಲವಾದ ವೇಳೆಯಲ್ಲಿ ಸರಕುಗಳನ್ನು ಗ್ರಾಹಕರಿಗೆ ತಲುಪಿಸುತ್ತಾರೆ, ಗಿಗ್ ಕೆಲಸವು ಅನೇಕರಿಗೆ ವಿಶ್ವಾಸಾರ್ಹ ಆದಾಯ ಮೂಲವಾಗಿದೆ’ ಎಂದು ಎಟರ್ನಲ್ ಕಂಪನಿಯ ಸ್ಥಾಪಕ ದೀಪಿಂದರ್ ಗೋಯಲ್ ಹೇಳಿದ್ದಾರೆ.

ಎಟರ್ನಲ್ ಮಾಲೀಕತ್ವದ ಜೊಮಾಟೊ ಮತ್ತು ಬ್ಲಿಂಕಿಟ್, ತಮ್ಮ ಡೆಲಿವರಿ ಪಾಲುದಾರರಿಗೆ 2025ರಲ್ಲಿ ವಿಮಾ ರಕ್ಷಣೆ ಕಲ್ಪಿಸಲು ₹100 ಕೋಟಿಗೂ ಹೆಚ್ಚು ಖರ್ಚು ಮಾಡಿವೆ.

ಕಳೆದ ವರ್ಷದಲ್ಲಿ ಜೊಮಾಟೊ ಡೆಲಿವರಿ ಪಾಲುದಾರರು ಟಿಪ್ಸ್ ಹೊರತುಪಡಿಸಿ ಸರಾಸರಿ ಪ್ರತಿ ಗಂಟೆಗೆ ತಲಾ ₹102 ಗಳಿಸಿದ್ದಾರೆ. ಇದು 2024ರಲ್ಲಿ ₹92ರಷ್ಟು ಇತ್ತು. ವರ್ಷದಿಂದ ವರ್ಷಕ್ಕೆ ಗಳಿಕೆಯು ಶೇ 10.9ರಷ್ಟು ಹೆಚ್ಚಳವಾಗಿದೆ ಎಂದು ಗೋಯಲ್ ಅವರು ‘ಎಕ್ಸ್’ನಲ್ಲಿ ತಿಳಿಸಿದ್ದಾರೆ.



‘ನಮ್ಮ ವೇದಿಕೆಯಲ್ಲಿ ಡೆಲಿವರಿ ಪಾಲುದಾರರು ಅತಿ ಎನ್ನಿಸುವ ಬಗೆಯಲ್ಲಿ ಕೆಲಸ ಮಾಡಿಲ್ಲ. ಜೊಮಾಟೊದಲ್ಲಿ ವರ್ಷವೊಂದಕ್ಕೆ ಸರಾಸರಿ 38 ದಿನ ಕೆಲಸ ಮಾಡಿದ್ದಾರೆ. ಶೇ 2.3ರಷ್ಟು ಪಾಲುದಾರರು ಮಾತ್ರ ವರ್ಷದಲ್ಲಿ 250ಕ್ಕೂ ಹೆಚ್ಚು ದಿನ ಕೆಲಸ ಮಾಡಿದ್ದಾರೆ’ ಎಂದು ಅವರು ವಿವರಿಸಿದ್ದಾರೆ.

ಹೆಚ್ಚಿನ ಪಾಲುದಾರರು ತಿಂಗಳಿನಲ್ಲಿ ಕೆಲವು ದಿನ ಮಾತ್ರ ಕೆಲಸ ಮಾಡುತ್ತಿದ್ದಾರೆ. ಯಾರಾದರೂ ಪ್ರತಿನಿತ್ಯ 10 ಗಂಟೆಯಂತೆ ತಿಂಗಳಿನಲ್ಲಿ 26 ದಿನ ಕೆಲಸ ಮಾಡಿದರೆ ₹26,500 ಗಳಿಸಬಹುದು. ವಾಹನದ ಪೆಟ್ರೋಲ್ ಮತ್ತು ನಿರ್ವಹಣೆಗೆ ಶೇ 20ರಷ್ಟು ಖರ್ಚು ಮಾಡಿದರೂ, ₹21 ಸಾವಿರ ಉಳಿಸಬಹುದು ಎಂದಿದ್ದಾರೆ.

10 ನಿಮಿಷಗಳಲ್ಲಿ ಗ್ರಾಹಕನ ಮನೆ ಬಾಗಿಲಿಗೆ ಸರಕುಗಳನ್ನು ತಲುಪಿಸಲಾಗುತ್ತದೆ ಎಂಬ ಭರವಸೆಯು ಡೆಲಿವರಿ ಪಾಲುದಾರರ ಮೇಲೆ ಒತ್ತಡ ಬೀರುವುದಿಲ್ಲ ಎಂದಿದ್ದಾರೆ.

ಆದರೆ, 10 ನಿಮಿಷಗಳಲ್ಲಿ ಸರಕು ಪೂರೈಸುವ ಧಾವಂತದಲ್ಲಿ ಹಲವು ಡೆಲಿವರಿ ಪಾಲುದಾರರು ಸಂಚಾರ ನಿಯಮಗಳನ್ನು ಉಲ್ಲಂಘಿಸುತ್ತಿದ್ದಾರೆ ಎಂದು ಹಲವರು ‘ಎಕ್ಸ್’ ಮೂಲಕ ಆರೋಪಿಸಿದ್ದಾರೆ.

ಗಿಗ್ ಕಾರ್ಮಿಕರ ಒಕ್ಕೂಟವು ಉತ್ತಮ ವೇತನ, ಕೆಲಸದ ಸ್ಥಿತಿಯಲ್ಲಿ ಸುಧಾರಣೆಗೆ ಒತ್ತಾಯಿಸಿ ಪ್ರತಿಭಟನೆ ನಡೆಸುತ್ತಿರುವ ಹೊತ್ತಿನಲ್ಲಿ ದೀಪಿಂದರ್ ಅವರ ಹೇಳಿಕೆ ಬಂದಿದೆ.

ಸುದ್ದಿ 2 ನಿಮಿಷ

ಇ.ವಿ. ಬ್ಯಾಟರಿಗಳಿಗೆ ವಿಶಿಷ್ಟ ಸಂಖ್ಯೆ

ನವದೆಹಲಿ (ಪಿಟಿಐ): ವಿದ್ಯುತ್ ಚಾಲಿತ ವಾಹನಗಳ (ಇ.ವಿ) ಬ್ಯಾಟರಿಗಳಿಗೆ ಆಧಾರ್ ಮಾದರಿಯಲ್ಲಿ ವಿಶಿಷ್ಟ ಗುರುತಿನ ಸಂಖ್ಯೆಯನ್ನು ನೀಡುವ ಪ್ರಸ್ತಾವನೆಯನ್ನು ಕೇಂದ್ರ ಸಾರಿಗೆ ಸಚಿವಾಲಯ ಸಿದ್ಧಪಡಿಸಿದೆ.

ಈ ಬಗೆಯಲ್ಲಿ ವಿಶಿಷ್ಟ ಸಂಖ್ಯೆಯನ್ನು ನೀಡಿದಾಗ, ಆ ಬ್ಯಾಟರಿಗಳ ಪುನರ್ಬಳಕೆಯು ಹೆಚ್ಚು ದಕ್ಷವಾಗಲು ಸಾಧ್ಯ ಎಂದು ಸಚಿವಾಲಯ ಹೇಳಿದೆ.

ಸಚಿವಾಲಯ ಹೊರಡಿಸಿರುವ ಕರಡು ನಿಯಮಗಳ ಪ್ರಕಾರ, ಬ್ಯಾಟರಿ ತಯಾರಕರು ಅಥವಾ ಆಮದು ಮಾಡಿಕೊಳ್ಳುವವರು ಪ್ರತಿ ಬ್ಯಾಟರಿಗಳಿಗೆ 21 ಅಂಕಿಗಳ ‘ಬ್ಯಾಟರಿ ಪ್ಯಾಕ್ ಆಧಾರ್ ಸಂಖ್ಯೆ’ (ಬಿಪಿಎಎನ್) ನೀಡುವುದು ಕಡ್ಡಾಯವಾಗಲಿದೆ.

ಬಿಪಿಎಎನ್ ಸಂಖ್ಯೆಯು ಬ್ಯಾಟರಿಯ ಮೇಲೆ ಸ್ಪಷ್ಟವಾಗಿ ಕಾಣಿಸುವಂತೆ ಇರಬೇಕು, ಸಂಖ್ಯೆಯನ್ನು ಅಳಿಸಿಹಾಕಲು ಆಗದಂತಹ ಜಾಗದಲ್ಲಿ ಅದನ್ನು ನಮೂದಿಸಬೇಕು ಎಂದು ಕರಡು ನಿಯಮದಲ್ಲಿ ಹೇಳಲಾಗಿದೆ.



ಬಿಪಿಎಎನ್ ಸಂಖ್ಯೆಯು ಬ್ಯಾಟರಿಯ ತಯಾರಿಕೆಯಿಂದ ಆರಂಭಿಸಿ, ಅದರ ಬಳಕೆ, ಪುನರ್ಬಳಕೆ, ಅದನ್ನು ಕೊನೆಯಲ್ಲಿ ವಿಲೇವಾರಿ ಮಾಡುವವರೆಗಿನ ಮಾಹಿತಿಯನ್ನು ಸಂಗ್ರಹಿಸಿ ಇಟ್ಟುಕೊಳ್ಳಲಿದೆ.

ಗಿಗ್ ಕಾರ್ಮಿಕರಿಗೆ ಸೌಲಭ್ಯ ಕರಡು ನಿಯಮ ಪ್ರಕಟ

ನವದೆಹಲಿ (ಪಿಟಿಐ): ಗಿಗ್ ಕಾರ್ಮಿಕರು ಸಾಮಾಜಿಕ ಭದ್ರತಾ ಸೌಲಭ್ಯಗಳನ್ನು ಪಡೆಯಲು ಅರ್ಹರಾಗಬೇಕು ಎಂದಾದರೆ ಅವರು ವರ್ಷವೊಂದರಲ್ಲಿ ಕನಿಷ್ಠ 90 ದಿನ ಕೆಲಸ ಮಾಡಿರಬೇಕು ಎಂದು ಕೇಂದ್ರ ಕಾರ್ಮಿಕ ಸಚಿವಾಲಯವು ಕರಡು ನಿಯಮದಲ್ಲಿ ಹೇಳಿದೆ.

ಸಾಮಾಜಿಕ ಭದ್ರತಾ ಸಂಹಿತೆ – 2020ರ ಕರಡು ನಿಯಮಗಳನ್ನು ಡಿಸೆಂಬರ್ 31ರಂದು ಪ್ರಕಟಿಸಲಾಗಿದೆ. ಇದಕ್ಕೆ ಸಾರ್ವಜನಿಕರಿಂದ ಸಲಹೆಗಳನ್ನು ಆಹ್ವಾನಿಸಲಾಗಿದೆ.

‘ಗಿಗ್ ಕಾರ್ಮಿಕರು ಅಥವಾ ಪ್ಲ್ಯಾಟ್‌ಫಾರ್ಮ್ ಕಾರ್ಮಿಕರಿಗೆ ಸಂಬಂಧಿಸಿದ ಸಂಹಿತೆಯ ಅಡಿಯಲ್ಲಿ ರೂಪಿಸಿದ ಯಾವುದೇ ಯೋಜನೆಯ ಪ್ರಯೋಜನಕ್ಕೆ ಅರ್ಹರಾಗಲು ಕಾರ್ಮಿಕರು ಒಂದು ಕಂಪನಿಯ ಜೊತೆ ಗುರುತಿಸಿಕೊಂಡಿದ್ದರೆ ವರ್ಷದಲ್ಲಿ 90 ದಿನ ಕೆಲಸ ಮಾಡಿರಬೇಕು, ಹೆಚ್ಚಿನ ಸಂಖ್ಯೆಯ ಕಂಪನಿಗಳ ಜೊತೆ ಗುರುತಿಸಿಕೊಂಡಿದ್ದರೆ 120 ದಿನ ಕೆಲಸ ಮಾಡಿರಬೇಕು’ ಎಂದು ನಿಯಮದಲ್ಲಿ ಹೇಳಲಾಗಿದೆ.

ಕಾರ್ಮಿಕನೊಬ್ಬ ಒಂದು ದಿನದಲ್ಲಿ ಮೂರು ಕಂಪನಿಗಳ ಜೊತೆ ಕೆಲಸ ಮಾಡಿದ್ದ ಎಂದಾದಲ್ಲಿ, ಆತ ಒಟ್ಟು ಮೂರು ದಿನ ಕೆಲಸ ಮಾಡಿದ್ದ ಎಂದು ಪರಿಗಣಿಸಲಾಗುತ್ತದೆ. ಕಂಪನಿಯು ತಾನು ನೇರವಾಗಿ ಕಾರ್ಮಿಕರನ್ನು ಕೆಲಸಕ್ಕೆ ತೆಗೆದುಕೊಂಡಿರಲಿ ಅಥವಾ ಇನ್ನೊಂದು ಸಂಸ್ಥೆಯ ಮೂಲಕ ಅವರನ್ನು ಕೆಲಸಕ್ಕೆ ತೆಗೆದುಕೊಂಡಿರಲಿ, ಅವರು ಸೌಲಭ್ಯಕ್ಕೆ ಅರ್ಹರಾಗಿರುತ್ತಾರೆ.

ಅಡಿಕೆ ಧಾರಣೆ

ಕುಮಟಾ	
ಚಾಲಿ	42000-45526
ಚಿತ್ರದುರ್ಗ	
ಆಪಿ	57219-57629
ಬೆಟ್ಟೆ	37659-38099
ಕೆಂಪುಗೋಟು	32000-32400
ರಾಶಿ	56739-57169

ಪುತ್ತೂರು	
ಕೋಕ	20000-35000
ಹೊಸತು	26000-43500
ಹಳತು	45000-53000

ಶಿರಸಿ	
ಬೆಟ್ಟೆ	40489-52899
ಬಿಳಿಗೋಟು	27799-39499
ಚಾಲಿ	46208-50199
ಕೆಂಪುಗೋಟು	16009-38989
ರಾಶಿ	51608-59629

ಅಮೆರಿಕ ‘ಸೆರೆ’ಯಲ್ಲಿ ವೆನಿಜುವೆಲಾ ಅಧ್ಯಕ್ಷ

ಒಂದನೇ ಪುಟದಿಂದ...

ಟ್ರಂಪ್ ಅವರು, ದಾಳಿ ನಡೆಸಿರುವುದನ್ನು ಶನಿವಾರ ಬೆಳಗಿನ ಜಾವ 4.30ಕ್ಕೆ ಖಚಿತಪಡಿಸಿದರು. ‘ಅಮೆರಿಕದ ಕಾನೂನು ಜಾರಿ ಸಂಸ್ಥೆಯ ಸಯೋಗದೊಂದಿಗೆ ಕಾರ್ಯಾ ಚರಣೆ ನಡೆಸಲಾಗಿದೆ’ ಎಂದೂ ಮಾಹಿತಿ ನೀಡಿದರು.

ದಾಳಿಯ ಬೆನ್ನಲ್ಲೇ, ಕರಾಕಸ್ ನಗರದಲ್ಲಿ ವಿದ್ಯುತ್ ಪೂರೈಕೆ ಸ್ಥಗಿತಗೊಂಡಿತು. ಜನರು ಭಯಭೀತರಾಗಿ ಮನೆಗಳಿಂದ ಹೊರಗೆ ಓಡಿ ಬರುತ್ತಿರುವ, ಬಾನೆತ್ತರಕ್ಕೆ ಹೊಗೆ ಆವರಿಸಿಕೊಂಡಿರುವ ದೃಶ್ಯಗಳು ಸಾಮಾಜಿಕ ಜಾಲತಾಣದಲ್ಲಿ ಹರಿದಾಡಿದವು. ‘ಶನಿವಾರ ಬೆಳಗಿನ ಜಾವದವರೆಗೆ ಯಾವುದೇ ಜೀವಹಾನಿ ವರದಿಯಾಗಿಲ್ಲ. ವಾಯುದಾಳಿ 30 ನಿಮಿಷ ಮುಂದುವರಿಯಿತು’ ಎಂದು ಮೂಲಗಳು ಹೇಳಿವೆ.

> **ಅಮೆರಿಕದ ಮಿಲಿಟರಿ ದಬ್ಬಾಳಿಕೆ ಮತ್ತು ಸರ್ವಾಧಿಕಾರ ಕೊನೆಗೊಳಿಸಲು ವೆನಿಜುವೆಲಾದ ಎಲ್ಲ ಸಾಮಾಜಿಕ ಮತ್ತು ರಾಜಕೀಯ ಶಕ್ತಿಗಳು ಒಂದಾಗಬೇಕು**
> **ಡಿಯೊಸ್ ಡಾಡೊ ಕಬೆಲ್ಲೊ,** ವೆನಿಜುವೆಲಾದ ಗೃಹ ಸಚಿವ

‘ಮಾದಕ ವಸ್ತು ಮತ್ತು ಭಯೋತ್ಪಾದನೆ ಪ್ರಕರಣದಲ್ಲಿ ಮಡೂರೊ ಹಾಗೂ ಅವರ ಪತ್ನಿ ಅಮೆರಿಕದ ನೆಲದಲ್ಲಿ, ಅಮೆರಿಕದ ಕೋರ್ಟ್‌ನಲ್ಲಿ ವಿಚಾರಣೆ ಎದುರಿಸಬೇಕಾಗುತ್ತದೆ’ ಎಂದು ಅಮೆರಿಕದ ಅಟಾರ್ನಿ ಜನರಲ್ ಪಮೇಲಾ ಬಾಂಡಿ ಹೇಳಿದ್ದಾರೆ.

ರಾಷ್ಟ್ರೀಯ ತುರ್ತು ಪರಿಸ್ಥಿತಿ: ಅಮೆರಿಕ ಸೇನೆಯು ವೆನಿಜುವೆಲಾದ ನಾಗರಿಕರು ಮತ್ತು ಮಿಲಿಟರಿ ನೆಲೆಗಳನ್ನು ಗುರಿಯಾಗಿಸಿ ದಾಳಿ ನಡೆಸಿದೆ. ಇದು ಸರ್ವಾಧಿಕಾರಿ ಧೋರಣೆ ಎಂದು ಆರೋಪಿಸಿರುವ ಮಡೂರೊ ಸರ್ಕಾರ, ರಾಷ್ಟ್ರೀಯ ತುರ್ತು ಪರಿಸ್ಥಿತಿ ಘೋಷಿಸಿದೆ.

‘ಅಮೆರಿಕದ ದಾಳಿಗೆ ಮೂರು ಕಾರಣ’

ಒಂದನೇ ಪುಟದಿಂದ...

ಅಮೆರಿಕದ ದಕ್ಷಿಣ ಗಡಿಯ ಮೂಲಕ 2013ರಿಂದ ಈಚೆಗೆ ವೆನಿಜುವೆಲಾದ ಸುಮಾರು 80 ಲಕ್ಷದಷ್ಟು ವಲಸಿಗರು ಅಕ್ರಮವಾಗಿ ಅಮೆರಿಕ ಪ್ರವೇಶಿಸಿದ್ದಾರೆ ಎನ್ನುವುದು ಟ್ರಂಪ್ ಆರೋಪ. ಮಡೂರೊ ತನ್ನ ದೇಶದ ಕೈದಿಗಳನ್ನು ಅಮೆರಿಕಕ್ಕೆ ವಲಸೆ ಹೋಗುವಂತೆ ಬಲವಂತಪಡಿಸುತ್ತಿದ್ದು, ಅಲ್ಲಿನ ಜೈಲುಗಳನ್ನು ಖಾಲಿ ಮಾಡಿಸುತ್ತಿದ್ದಾರೆ ಎಂದು ಟ್ರಂಪ್ ದೂರಿದ್ದಾರೆ.

ಅಮೆರಿಕಕ್ಕೆ ಫೆಂಟಾನಿಲ್, ಕೊಕೇನ್ ಸೇರಿದಂತೆ ಹಲವು ಮಾದಕದ್ರವ್ಯಗಳ ಕಳ್ಳಸಾಗಣೆಗೆ ವೆನಿಜುವೆಲಾ ಪ್ರಮುಖ ಮಾರ್ಗವಾಗಿದೆ. ಅಮೆರಿಕದ ದಾಳಿಗೆ ಇದು ಪ್ರಮುಖ ಕಾರಣ ಎನ್ನಲಾಗುತ್ತಿದೆ. ಮಡೂರೊ ವಿರುದ್ಧ ಮಾದಕ ವಸ್ತುಗಳ ಭಯೋತ್ಪಾದನೆ ಆರೋಪವನ್ನು ಅಮೆರಿಕ ಈಗಾಗಲೇ ಹೊರಿಸಿದೆ.

ಬಸ್ ಚಾಲಕರಾಗಿದ್ದ ಮಡೂರೊ: ಮಡೂರೊ ಅವರು ವೆನಿಜುವೆಲಾದ ಕಾರ್ಮಿಕ ಮುಖಂಡರೊಬ್ಬರ ಪುತ್ರ. 1992ರಲ್ಲಿ ಸೇನಾಧಿಕಾರಿ ಹ್ಯೂಗೊ ಚಾವೆಜ್ ವಿರುದ್ಧ ದಂಗೆ ಯತ್ನ ನಡೆದಾಗ ಅವರು ಬಸ್ ಚಾಲಕರಾಗಿ ಕೆಲಸ ಮಾಡುತ್ತಿದ್ದರು. ಚಾವೆಜ್ ಪರವಾಗಿ ಹೋರಾಟ ನಡೆಸುವ ಮೂಲಕ ಅಲ್ಲಿನ ರಾಜಕೀಯದಲ್ಲಿ ಮುಂಚೂಣಿಗೆ ಬಂದರು.

ವಿವಿಧ ದೇಶಗಳ ಪ್ರತಿಕ್ರಿಯೆ...

ವೆನಿಜುವೆಲಾದ ಜನರ ಮೇಲೆ ಅಮೆರಿಕ ನಡೆಸಿರುವ ದಾಳಿ ಕ್ರಿಮಿನಲ್ ಅಪರಾಧ. ಅಂತರರಾಷ್ಟ್ರೀಯ ಸಮುದಾಯ ಇದರ ವಿರುದ್ಧ ತುರ್ತಾಗಿ ಸ್ಪಂದಿಸಬೇಕು
ಕ್ಯೂಬಾ

ವೆನಿಜುವೆಲಾದಲ್ಲಿ ಸಂಯಮ ಪಾಲಿಸಬೇಕು. ವಿಶ್ವಸಂಸ್ಥೆ ಮತ್ತು ಅಂತರ ರಾಷ್ಟ್ರೀಯ ಕಾನೂನಿಗೆ ಅಮೆರಿಕ ಗೌರವ ಕೊಡಬೇಕು
ಐರೋಪ್ಯ ಒಕ್ಕೂಟ

ನಾವು ಶತ್ರುಗಳಿಗೆ ಮಣಿಯುವುದಿಲ್ಲ. ದೇವರು ಬಯಸಿದರೆ, ದೇವರ ಅನುಗ್ರಹವಿದ್ದರೆ, ನಾವು ಶತ್ರುವನ್ನು ನಮ್ಮ ಮುಂದೆ ಮಂಡಿಯೂರುವಂತೆ ಮಾಡುತ್ತೇವೆ
ಆಯತೊಲ್ಲಾ ಅಲಿ ಖಮೇನಿ, ಇರಾನ್‌ನ ಪರಮೋಚ್ಚ ನಾಯಕ

ವೆನಿಜುವೆಲಾದ ಅಧ್ಯಕ್ಷ ಮತ್ತು ಪತ್ನಿಯನ್ನು ಸೆರೆಹಿಡಿದು, ಬಲವಂತಾಗಿ ದೇಶದಿಂದ ಹೊರಗೆ ಹಾಕಿರುವುದು ರಾಷ್ಟ್ರದ ಸಾರ್ವಭೌಮತ್ವಕ್ಕೆ ವಿರುದ್ಧವಾದದ್ದು. ಅಮೆರಿಕ ತುರ್ತಾಗಿ ಸ್ಪಷ್ಟನೆ ನೀಡಬೇಕು
ರಷ್ಯಾದ ವಿದೇಶಾಂಗ ಸಚಿವಾಲಯ

ವೆನಿಜುವೆಲಾದಲ್ಲಿ ಅಮೆರಿಕ ನಡೆಸಿದ ಮಿಲಿಟರಿ ಕಾರ್ಯಾಚರಣೆಯನ್ನು ಖಂಡಿಸುತ್ತೇವೆ ಮತ್ತು ಕಳವಳ ವ್ಯಕ್ತಪಡಿಸುತ್ತೇವೆ. ಸಮಸ್ಯೆಗೆ ಶಾಂತಿಯುತ ಪರಿಹಾರ ಕಂಡುಕೊಳ್ಳಬೇಕು
ಗೇಬ್ರಿಯೆಲ್ ಬೊರಿಕ್, ಚಿಲಿ ಅಧ್ಯಕ್ಷ

ವೆನಿಜುವೆಲಾದ ಸಾರ್ವಭೌಮತ್ವ ಮತ್ತು ಪ್ರಾದೇಶಿಕ ಸಮಗ್ರತೆಯನ್ನು ಗೌರವಿಸಬೇಕು. ಅಮೆರಿಕ ನಡೆಸಿರುವ ಏಕಪಕ್ಷೀಯ ಮಿಲಿಟರಿ ಕ್ರಮವನ್ನು ವಿಶ್ವಸಂಸ್ಥೆ ಗಮನಿಸಬೇಕು
ಗುಸ್ತಾವೊ ಪೆಟ್ರೊ, ಕೊಲಂಬಿಯಾ ಅಧ್ಯಕ್ಷ

ವೆನಿಜುವೆಲಾ ಮುನ್ನಡೆಸಲಿದೆ ಅಮೆರಿಕ: ಡೊನಾಲ್ಡ್ ಟ್ರಂಪ್

ಫ್ಲಾರಿಡಾ (ಪಿಟಿಐ): ‘ವೆನಿಜುವೆಲಾದಲ್ಲಿ ಸರಿಯಾದ ಅಧಿಕಾರ ವರ್ಗಾವಣೆಯಾಗುವವರೆಗೂ ಆ ದೇಶವನ್ನು ಅಮೆರಿಕವೇ ಮುನ್ನಡೆಸಲಿದೆ’ ಎಂದು ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಘೋಷಿಸಿದ್ದಾರೆ.

ಅಧ್ಯಕ್ಷ ನಿಕೊಲಸ್ ಮಡೂರೊ ಬಂಧನದ ಬಳಿಕ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ‘ಸುರಕ್ಷಿತ, ಸರಿಯಾದ ಹಾಗೂ ವಿವೇಚನಾಯುಕ್ತ ಅಧಿಕಾರ ಹಸ್ತಾಂತರ ಆಗುವವರೆಗೂ ನಾವೇ ಮುನ್ನಡೆಸಲಿದ್ದೇವೆ. ಬೇರೆಯವರು ಒಳಗೆ ಬರುವುದನ್ನು ನಾವು ಬಯಸುವುದಿಲ್ಲ’ ಎಂದು ಹೇಳಿದ್ದಾರೆ.

ಆಡಳಿತ ನಡೆಸುವ ಕುರಿತಂತೆ ಯಾವುದೇ ಕಾಲಮಿತಿ, ಕಾನೂನಿನ ಚೌಕಟ್ಟಿನ ಕುರಿತು ಅವರು ವಿವರ ನೀಡಲಿಲ್ಲ. ಅಂತರರಾಷ್ಟ್ರೀಯ ಕಾನೂನಿನ ಅಡಿಯಲ್ಲಿ ಒಂದು ದೇಶವನ್ನು ಮತ್ತೊಂದು ದೇಶವು ಹೇಗೆ ನಿಯಂತ್ರಿಸುತ್ತದೆ ಎಂಬುದರ ಕುರಿತೂ ತಿಳಿಸಿಲ್ಲ.

ತೈಲ ಕಂಪನಿಗಳಿಂದ ಹೂಡಿಕೆ: ‘ಅಮೆರಿಕದ ದೊಡ್ಡ ಪ್ರಮಾಣದ ತೈಲ ಕಂಪನಿಗಳು ವೆನಿಜುವೆಲಾ ಪ್ರವೇಶಿಸಲಿದ್ದು, ಜಗತ್ತಿನಲ್ಲೇ ಅತೀ ದೊಡ್ಡ ಪ್ರಮಾಣದಲ್ಲಿ ಅಲ್ಲಿ ಹೂಡಿಕೆ ಮಾಡಲಿವೆ. ಅಲ್ಲಿನ ಮೂಲಸೌಕರ್ಯ, ತೈಲ ಮೂಲ ಸೌಕರ್ಯವನ್ನು ಸುಧಾರಿಸಿ, ದೇಶಕ್ಕಾಗಿ ಹಣ ಸಂಪಾದಿಸಲು ಪ್ರಾರಂಭಿಸಲಿದ್ದೇವೆ’ ಎಂದು ಟ್ರಂಪ್ ಇದೇ ವೇಳೆ ಪ್ರಕಟಿಸಿದ್ದಾರೆ.

ಪ್ರಯಾಣ ಬೇಡ– ಭಾರತ ಸಲಹೆ

ನವದೆಹಲಿ (ಪಿಟಿಐ): ನಿಕೊಲಸ್ ಮಡೂರೊ ಬಂಧನದ ಬೆನ್ನಲ್ಲೇ ಅನಗತ್ಯ ಪ್ರಯಾಣವನ್ನು ರದ್ದುಗೊಳಿಸಬೇಕು ಎಂದು ತನ್ನ ನಾಗರಿಕರಿಗೆ ಭಾರತವು ಸೂಚನೆ ನೀಡಿದೆ.

ವೆನಿಜುವೆಲಾದಲ್ಲಿ ನೆಲಸಿರುವ ಎಲ್ಲಾ ಭಾರತೀಯರು ಹೊರಗಡೆ ಓಡಾಡುವ ವೇಳೆ ಹೆಚ್ಚಿನ ಎಚ್ಚರಿಕೆ ವಹಿಸಬೇಕು ಎಂದು ಭಾರತದ ವಿದೇಶಾಂಗ ಸಚಿವಾಲಯ ಸೂಚನೆ ನೀಡಿದೆ.

‘ವೆನಿಜುವೆಲಾದಲ್ಲಿ ಇತ್ತೀಚೆಗೆ ನಡೆದ ಬೆಳವಣಿಗೆ ಹಿನ್ನೆಲೆಯಲ್ಲಿ ಭಾರತೀಯ ನಾಗರಿಕರು ಅನಗತ್ಯ ಪ್ರಯಾಣವನ್ನು ಮುಂದೂಡಬೇಕು ಎಂದು ಸಲಹೆ ನೀಡಲಾಗಿದೆ. ರಾಜಧಾನಿ ಕರಾಕಸ್‌ನಲ್ಲಿರುವ ಭಾರತದ ರಾಯಭಾರ ಕಚೇರಿಯೊಂದಿಗೆ ನಿರಂತರ ಸಂಪರ್ಕದಲ್ಲಿರಬೇಕು’ ಇಲಾಖೆಯು ಹೊರಡಿಸಿದ ಪ್ರಕಟಣೆಯಲ್ಲಿ ತಿಳಿಸಲಾಗಿದೆ.

ಯಾವುದೇ ನೆರವು ಬೇಕಿದ್ದರೆ ಭಾರತೀಯ ರಾಯಭಾರ ಕಚೇರಿಯ ದೂರವಾಣಿ ಸಂಖ್ಯೆ + 58-412-9584288 (ವಾಟ್ಸ್‌ಆ್ಯಪ್ ಕರೆ ಮಾಡಬಹುದು) ಇ-ಮೇಲ್: cons.caracas@mea.gov.in. ಸಂಪರ್ಕಿಸುವಂತೆ ತಿಳಿಸಲಾಗಿದೆ.

ನರೇಗಾ ಮರು ಜಾರಿಗೆ ‘ಕೈ’ ಸಂಗ್ರಾಮ

ಒಂದನೇ ಪುಟದಿಂದ...

ಹೊಸ ಕಾಯ್ದೆಯನ್ನು ಎಲ್ಲ ವಿಪಕ್ಷಗಳು ವಿರೋಧಿಸಿವೆ. ಕಾಂಗ್ರೆಸ್ ನಾಯಕತ್ವವು ಶೀಘ್ರದಲ್ಲೇ ಬಿಜೆಪಿಯೇತರ ಪಕ್ಷಗಳ ನೇತೃತ್ವದ ಸರ್ಕಾರಗಳಿರುವ ರಾಜ್ಯಗಳ ಮುಖ್ಯಮಂತ್ರಿಗಳು ಮತ್ತು ನಾಯಕರೊಂದಿಗೆ ಚರ್ಚಿಸಲಿದೆ ಎಂದು ಅವರು ಹೇಳಿದರು.

ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ (ಸಂವಹನ) ಜೈರಾಮ್ ರಮೇಶ್, ‘ಹೊಸ ಕಾನೂನಿನಲ್ಲಿ ಕೇಂದ್ರೀಕರಣ ಮಾತ್ರ ಖಾತರಿ. ಈ ಯೋಜನೆಯನ್ನು ಯಾವಾಗ, ಎಲ್ಲಿ ಮತ್ತು ಹೇಗೆ ಕಾರ್ಯಗತಗೊಳಿಸಬೇಕು ಎಂಬುದನ್ನು ಕೇಂದ್ರ ನಿರ್ಧರಿಸುತ್ತದೆ’ ಎಂದರು.

‘ಬಿಜೆಪಿಯ ನೀತಿ ವಿಕಸಿತ ಭಾರತ ಅಲ್ಲ, ವಿನಾಶ ಭಾರತ. ನಾವು ಹೊಸ ಕಾಯ್ದೆಗೆ ತಿದ್ದುಪಡಿ ತರಬೇಕೆಂದು ಒತ್ತಾಯಿಸುತ್ತಿಲ್ಲ. ಮನರೇಗಾ ಮರುಸ್ಥಾಪನೆಗೆ ನಾವು ಒತ್ತಾಯಿಸುತ್ತಿದ್ದೇವೆ’ ಎಂದು ಅವರು ಹೇಳಿದರು.

ಈಗ ರದ್ದುಗೊಂಡಿರುವ ಮೂರು ಕೃಷಿ ಕಾಯ್ದೆಗಳಿಗಾದ ಗತಿಯೇ ಹೊಸ ಕಾಯ್ದೆಗೂ ಆಗಲಿದೆ ಎಂದು ಎಚ್ಚರಿಸಿದ ಅವರು, ಮನರೇಗಾ ಪ್ರತಿಭಟನೆಗಳು ದೆಹಲಿ ಕೇಂದ್ರಿತವಾಗಿದ್ದ ರೈತರ ಪ್ರತಿಭಟನೆಗಿಂತ ಭಿನ್ನವಾಗಿ ವಿಕೇಂದ್ರೀಕೃತಗೊಳ್ಳಲಿವೆ. ಹೊಸ ಕಾನೂನನ್ನು ನ್ಯಾಯಾಲಯಗಳಲ್ಲಿಯೂ ಪ್ರಶ್ನಿಸಲಾಗುವುದು ಎಂದು ಅವರು ತಿಳಿಸಿದರು.


ಹೋರಾಟದ ಸ್ವರೂಪ

- ಜನವರಿ 10ರಂದು ಜಿಲ್ಲಾ ಮಟ್ಟದಲ್ಲಿ ಪತ್ರಿಕಾಗೋಷ್ಠಿಗಳೊಂದಿಗೆ ಆಂದೋಲನ ಆರಂಭವಾಗಲಿದ್ದು, ನಂತರ ಜಿಲ್ಲಾ ಕೇಂದ್ರಗಳಲ್ಲಿ ಅಥವಾ ಗಾಂಧಿ ಅಥವಾ ಅಂಬೇಡ್ಕರ್ ಪ್ರತಿಮೆಗಳ ಬಳಿ ಒಂದು ದಿನದ ಉಪವಾಸ ನಡೆಯಲಿದೆ
- ಜನವರಿ 12 ಮತ್ತು 30ರ ನಡುವೆ ಎರಡನೇ ಹಂತದ ಹೋರಾಟ ನಡೆಯಲಿದ್ದು, ಪಂಚಾಯಿತಿ ಮಟ್ಟದ ಸಭೆಗಳು, ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಮತ್ತು ವಿಪಕ್ಷ ನಾಯಕ ರಾಹುಲ್ ಗಾಂಧಿ ಅವರಿಂದ ಮನರೇಗಾ ಕಾರ್ಮಿಕರು ಮತ್ತು ಗ್ರಾಮ ಪ್ರಧಾನ್‌ಗಳಿಗೆ ಪತ್ರಗಳ ವಿತರಣೆ, ವಿಧಾನಸಭಾ ಮಟ್ಟದ ಸಭೆಗಳು ಜರುಗಲಿವೆ. ಮಹಾತ್ಮ ಗಾಂಧಿಯವರ ಪುಣ್ಯ ತಿಥಿಯ ದಿನವಾದ ಜನವರಿ 30ರಂದು ವಾರ್ಡ್ ಮಟ್ಟದಲ್ಲಿ ಶಾಂತಿಯುತ ಧರಣಿ ನಡೆಯಲಿದೆ
- ಮೂರನೇ ಹಂತದ ಹೋರಾಟ ಜನವರಿ 31ರಿಂದ ಫೆಬ್ರುವರಿ 25ರ ನಡುವೆ ಜರುಗಲಿದೆ. ಫೆಬ್ರುವರಿ 6 ರವರೆಗೆ ಜಿಲ್ಲಾ ಮಟ್ಟದಲ್ಲಿ ಧರಣಿ ಮತ್ತು ಫೆಬ್ರುವರಿ 7 ರಿಂದ 15 ರವರೆಗೆ ವಿಧಾನಸಭೆ ಅಥವಾ ರಾಜಭವನ ಅಥವಾ ಕೇಂದ್ರ ಸರ್ಕಾರಿ ಕಚೇರಿಗಳಿಗೆ ಮುತ್ತಿಗೆ ನಡೆಯಲಿದೆ. ಫೆಬ್ರುವರಿ 16 ರಿಂದ 25 ರ ನಡುವೆ ದೇಶದಾದ್ಯಂತ ನಾಲ್ಕು ರ‍್ಯಾಲಿಗಳನ್ನು ಕಾಂಗ್ರೆಸ್ ಆಯೋಜಿಸಲಿದೆ

ದುಡಿಯುವ ಹಕ್ಕು ಕಸಿಯಲು ಜಿ ರಾಮ್ ಜಿ ಜಾರಿ: ಖರ್ಗೆ

ನವದೆಹಲಿ (ಪಿಟಿಐ): ‘ಕಾರ್ಮಿಕರ ದುಡಿಮೆ ಹಕ್ಕನ್ನು ಕಸಿಯುವುದಕ್ಕಾಗಿಯೇ ಕೇಂದ್ರ ಸರ್ಕಾರ ವಿಬಿ–ಜಿ ರಾಮ್ ಜಿ’ ಕಾಯ್ದೆ ಜಾರಿಗೆ ತಂದಿದೆ’ ಎಂದು ಕಾಂಗ್ರೆಸ್ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಶನಿವಾರ ಟೀಕಿಸಿದ್ದಾರೆ.

‘ಹೊಸ ಕಾಯ್ದೆ ಜಾರಿಗೊಳಿಸಿರುವ ಕೇಂದ್ರದ ಈ ನಡೆ ನರೇಗಾ ಮೇಲಿನ ದಾಳಿ. ಇದು ಸಂವಿಧಾನವು ಕಾರ್ಮಿಕರಿಗೆ ನೀಡಿರುವ ದುಡಿಯುವ ಹಕ್ಕು ಹಾಗೂ ಕೋಟ್ಯಂತರ ಜನ ಕಾರ್ಮಿಕರ ಮೇಲಿನ ದಾಳಿಗೆ ಸಮ’ ಎಂದು ಅವರು ‘ಎಕ್ಸ್’ನಲ್ಲಿ ಪೋಸ್ಟ್ ಮಾಡಿದ್ದಾರೆ.



ಮಲ್ಲಿಕಾರ್ಜುನ ಖರ್ಗೆ

‘ಈ ವಿಚಾರವಾಗಿ ಪಕ್ಷವು ಮೂರು ಬೇಡಿಕೆಗಳನ್ನು ಮುಂದಿಡುತ್ತದೆ. ಜಿ ರಾಮ್ ಜಿ ಕಾಯ್ದೆಯನ್ನು ಹಿಂಪಡೆದು ನರೇಗಾ ಕಾಯ್ದೆಯನ್ನು ಪುನಃ ಜಾರಿಗೊಳಿಸಬೇಕು ಎಂಬುದು ಮೊದಲ ಬೇಡಿಕೆ. ದುಡಿಮೆಯ ಹಕ್ಕು ಹಾಗೂ ಪಂಚಾಯಿತಿಗಳಿಗೆ ಇರುವ ಅಧಿಕಾರವನ್ನು ಮರುಸ್ಥಾಪಿಸಬೇಕು ಎಂಬುದು ಇತರ ಬೇಡಿಕೆಗಳಾಗಿವೆ’ ಎಂದು ಖರ್ಗೆ ಹೇಳಿದ್ದಾರೆ.

ಮರುಸ್ಥಾಪನೆವರೆಗೂ ಹೋರಾಟ: ಸಿ.ಎಂ

ಒಂದನೇ ಪುಟದಿಂದ...

‘ನರೇಗಾ ಕಾಯ್ದೆಯನ್ನು ವಾಪಸ್ ಪಡೆಯುವ ಮೊದಲು ಮೋದಿ ಸರ್ಕಾರ ಯಾರ ಜೊತೆಗೂ ಚರ್ಚೆ ಮಾಡದೆ, ಸರ್ವಾಧಿಕಾರಿ ಧೋರಣೆ ಪ್ರದರ್ಶಿಸಿದೆ. ಜನರು ನೆಮ್ಮದಿಯಿಂದ ಜೀವಿಸುವ ವಾತಾವರಣಕ್ಕೆ ಪೂರಕವಾಗಿರುವ ಕಾನೂನುಗಳನ್ನು ನಾಶ ಮಾಡುವುದೇ ಬಿಜೆಪಿಯವರ ಕೆಲಸ. ಹಳೆ ಕಾಯ್ದೆಯನ್ನು ನಾಶ ಮಾಡಿ, ಕಾರ್ಪೊರೇಟ್ ಕಂಪನಿಗಳಿಗೆ ಲಾಭ ಮಾಡಲು ಕೇಂದ್ರ ಸರ್ಕಾರ ಹೊರಟಿದೆ’ ಎಂದು ಟೀಕಿಸಿದರು.

‘ಕಳೆದ 11 ವರ್ಷಗಳಲ್ಲಿ ಬಿಜೆಪಿಯವರು 30 ಯೋಜನೆಗಳ ಹೆಸರು ಬದಲಾಯಿಸಿದ್ದಾರೆ ಅಥವಾ ಕಾನೂನುಗಳನ್ನೇ ವಾಪಸ್ ಪಡೆದಿದ್ದಾರೆ. ನಿರ್ಮಲ ಭಾರತ್ – ಸ್ವಚ್ಛ ಭಾರತ್, ಇಂದಿರಾ ಆವಾಜ್ ಯೋಜನೆ– ಪ್ರಧಾನಮಂತ್ರಿ ಆವಾಸ್ ಯೋಜನೆ, ಪಂಚ ವಾರ್ಷಿಕ ಯೋಜನೆ– ನೀತಿ ಆಯೋಗ ಹೀಗೆ ಅನೇಕ ಯೋಜನೆಗಳನ್ನು ಬುಡಮೇಲು ಮಾಡಿದ್ದಾರೆ. ಕೇಂದ್ರ ಸರ್ಕಾರದ ಹೊಸ ನಡೆ ವಿಕೇಂದ್ರೀಕರಣಕ್ಕೆ, ಒಕ್ಕೂಟ ವ್ಯವಸ್ಥೆಗೆ, ಸಂವಿಧಾನಕ್ಕೆ ವಿರುದ್ಧವಾಗಿದೆ’ ಎಂದು ಆಕ್ರೋಶ ವ್ಯಕ್ತಪಡಿಸಿದರು.

‘ಸಂವಿಧಾನದ 73ನೇ ತಿದ್ದುಪಡಿ ಪ್ರಕಾರ, ಗ್ರಾಮ ಸಭೆಗೆ ಮತ್ತು ಗ್ರಾಮ ಪಂಚಾಯಿತಿಗೆ ಇದ್ದ ಅಧಿಕಾರವನ್ನು ಈಗ ಕೇಂದ್ರ ಸರ್ಕಾರ ಕಿತ್ತುಕೊಂಡಿದೆ. ಮನುಸ್ಮೃತಿ ಪ್ರಕಾರ, ‘ಮಹಿಳೆಯರು, ದಲಿತರು, ಶೂದ್ರರ ಬಳಿ ಹಣ ಇರಬಾರದು. ಸ್ವಾಭಿಮಾನದಿಂದ ಬದುಕಬಾರದು. ಅವರು ಸಂಪೂರ್ಣ ಸೇವಕರಾಗಿರಬೇಕು’ ಎಂದು ಹೇಳುತ್ತದೆ. ಅದರಿಂದ ಪ್ರೇರೇಪಣೆ ಪಡೆದವರು ಆರ್‌ಎಸ್‌ಎಸ್‌ನವರು. ಅವರು ಬಿಜೆಪಿ ಸರ್ಕಾರಕ್ಕೆ ಮಾರ್ಗದರ್ಶಕರು’ ಎಂದು ಟೀಕಿಸಿದರು.

ಸಚಿವರಾದ ಪ್ರಿಯಾಂಕ್ ಖರ್ಗೆ, ಕೆ.ಎಚ್. ಮುನಿಯಪ್ಪ, ಡಾ. ಶರಣ ಪ್ರಕಾಶ ಪಾಟೀಲ, ಎನ್. ಚಲುವರಾಯ ಸ್ವಾಮಿ, ಲಕ್ಷ್ಮೀ ಹೆಬ್ಬಾಳಕರ ಇದ್ದರು.

> **ಗಾಂಧೀಜಿಯವರನ್ನು ಗೋಡ್ಸೆ ಕೊಂದರು. ಹೊಸ ಯೋಜನೆಯ ಮೂಲಕ ಎರಡನೇ ಬಾರಿಗೆ ಗಾಂಧೀಜಿಯವರನ್ನು ಬಿಜೆಪಿಯವರು ಕೊಂದು ಹಾಕುತ್ತಿದ್ದಾರೆ**
> **ಸಿದ್ದರಾಮಯ್ಯ,** ಮುಖ್ಯಮಂತ್ರಿ

> **ಹೊಸ ಕಾಯ್ದೆ ಹಿಂಪಡೆಯುವಂತೆ ನರೇಗಾ ಕಾರ್ಮಿಕರು ಸೇರಿದಂತೆ ಎಲ್ಲರನ್ನೂ ಒಟ್ಟುಗೂಡಿಸಿ ತಾಲ್ಲೂಕು, ಜಿಲ್ಲೆ, ರಾಜ್ಯ ಮಟ್ಟದಲ್ಲಿ ಆಂದೋಲನ ರೂಪಿಸುತ್ತೇವೆ**
> **ಡಿ.ಕೆ. ಶಿವಕುಮಾರ್,** ಉಪ ಮುಖ್ಯಮಂತ್ರಿ

71.18 ಲಕ್ಷ ಕರ್ನಾಟಕದಲ್ಲಿರುವ ನರೇಗಾ ಕಾರ್ಮಿಕರು
36.75 ಲಕ್ಷ ಮಹಿಳಾ ಕಾರ್ಮಿಕರು

12.16 ಕೋಟಿ ದೇಶದಲ್ಲಿರುವ ನರೇಗಾ ಕೂಲಿ ಕಾರ್ಮಿಕರು
6.21 ಕೋಟಿ ಮಹಿಳಾ ಕಾರ್ಮಿಕರು
17 % ಪರಿಶಿಷ್ಟ ಜಾತಿಯವರು
11 % ಪರಿಶಿಷ್ಟ ಪಂಗಡವರು

‘ಹೊಸ ಕಾಯ್ದೆಯಿಂದ ನಿರುದ್ಯೋಗ ಹೆಚ್ಚಳ’

‘ಹೊಸ ಕಾಯ್ದೆಯಿಂದ ನಿರುದ್ಯೋಗ ಪ್ರಮಾಣ ಹೆಚ್ಚಳ ಆಗಲಿದೆ. ಕನಿಷ್ಠ ವೇತನದ ರಕ್ಷಣೆ ಇಲ್ಲದೆ ಕಾರ್ಮಿಕರು ಸಂಕಷ್ಟ ಅನುಭವಿಸಲಿದ್ದಾರೆ. ಕಾರ್ಮಿಕರು ಶೋಷಣೆ, ಒತ್ತಡಕ್ಕೆ ಒಳಗಾಗಲಿದ್ದಾರೆ. ಉದ್ಯೋಗದಲ್ಲಿ ಮಹಿಳೆಯರ ಪಾಲುದಾರಿಕೆ ಇಳಿಕೆ ಆಗಲಿದೆ. ದಲಿತರು, ಆದಿವಾಸಿಗಳ ಮೇಲೆ ಒತ್ತಡ ಸೃಷ್ಟಿ ಆಗಲಿದೆ. ಬಲವಂತದ ವಲಸೆಯ ಜೊತೆಗೆ, ಗ್ರಾಮೀಣ ಬದುಕಿನಲ್ಲಿ ಸಂಕಷ್ಟ ತೀವ್ರಗೊಳ್ಳಲಿದೆ’ ಎಂದು ವಿವರಿಸಿದ ಮುಖ್ಯಮಂತ್ರಿ ಸಿದ್ದರಾಮಯ್ಯ, ‘ಜಿ ರಾಮ್ ಜಿ’ ಕಾಯ್ದೆಯ ದುಷ್ಪರಿಣಾಮಗಳ ಪಟ್ಟಿ ನೀಡಿದರು.

‘ಬಿಹಾರ: ₹20 ಸಾವಿರಕ್ಕೆ ಹೆಣ್ಣುಮಕ್ಕಳು ಸಿಗುತ್ತಾರೆ’

ಪ್ರಜಾವಾಣಿ ವಾರ್ತೆ

ಲಖನೌ: ‘ಬಿಹಾರದಲ್ಲಿ ₹20 ಸಾವಿರದಿಂದ ₹25ಸಾವಿರಕ್ಕೆ ಹೆಣ್ಣುಮಕ್ಕಳನ್ನು ಖರೀದಿಸಬಹುದು’ ಎಂದು ಉತ್ತರಾಖಂಡದ ಮಹಿಳಾ ಮತ್ತು ಮಕ್ಕಳ ಇಲಾಖೆ ಸಚಿವೆ ರೇಖಾ ಆರ್ಯ ಅವರ ಪತಿ ಗಿರ್ಧಾರಿ ಲಾಲ್ ಸಾಹು ಅವರು ನೀಡಿದ್ದಾರೆ ಎನ್ನಲಾದ ವಿಡಿಯೊ ಸಾಮಾಜಿಕ ಜಾಲತಾಣಗಳಲ್ಲಿ ಹರಿದಾಡುತ್ತಿದೆ.

ಕೆಲವು ದಿನಗಳ ಹಿಂದಷ್ಟೇ ಅಲ್ಮೋರಾದಲ್ಲಿ ಪಕ್ಷದಿಂದ ಆಯೋಜಿಸಿದ್ದ ಕಾರ್ಯಕ್ರಮವೊಂದರಲ್ಲಿ ಸಾಹು ಈ ಹೇಳಿಕೆ ನೀಡಿದ್ದಾರೆ ಎನ್ನಲಾಗಿದೆ.

ಕಾರ್ಯಕ್ರಮದಲ್ಲಿ ಪಾಲ್ಗೊಂಡಿದ್ದ ಕೆಲವು ಯುವಕರ ಹೆಸರು ಉಲ್ಲೇಖಿಸಿದ ಸಾಹು, ‘ನೀವೇನು ವೃದ್ಧರಾದ ನಂತರ ಮದುವೆಯಾಗುತ್ತೀರಾ? ಇಷ್ಟರಲ್ಲಾಗಲೇ ನಿಮಗೆ 3-4 ಮಕ್ಕಳಿರಬೇಕಿತ್ತು. ನಿಮಗೆ ಬಿಹಾರದಿಂದ ಯುವತಿಯರನ್ನು ನಾನು ಹುಡುಕುತ್ತೇನೆ. ಬಿಹಾರದಲ್ಲಿ ₹20ಸಾವಿರದಿಂದ ₹25 ಸಾವಿರಕ್ಕೆ ಹೆಣ್ಣುಮಕ್ಕಳು ಸಿಗುತ್ತಾರೆ’ ಎಂದಿರುವುದು ವಿಡಿಯೊದಲ್ಲಿದೆ.

ಈ ಬಗ್ಗೆ ರಾಜ್ಯ ಮಹಿಳಾ ಆಯೋಗವು ಆಕ್ಷೇಪ ವ್ಯಕ್ತಪಡಿಸಿ, ಹೇಳಿಕೆ ಕುರಿತು ಸ್ಪಷ್ಟನೆ ನೀಡುವಂತೆ ಸಾಹು ಅವರನ್ನು ಕೇಳಿದೆ. ಪ್ರತಿಪಕ್ಷ ಕಾಂಗ್ರೆಸ್ ಕೂಡ ವಿಚಾರವನ್ನು ಖಂಡಿಸಿ, ಬಿಜೆಪಿಯ ಮಹಿಳಾ ವಿರೋಧಿ ಮನಸ್ಥಿತಿಯನ್ನು ಈ ಹೇಳಿಕೆ ಬಹಿರಂಗಪಡಿಸುತ್ತದೆ’ ಎಂದು ದೂರಿದೆ.

ರಾಷ್ಟ್ರೀಯ ಜನತಾ ದಳ (ಆರ್‌ಜೆಡಿ) ಸಾಮಾಜಿಕ ಜಾಲತಾಣದಲ್ಲಿ ಪೋಸ್ಟ್ ಮಾಡಿ, ಸಾಹು ವಿರುದ್ಧ ಕಿಡಿಕಾರಿದೆ. ಘಟನೆ ಬಗ್ಗೆ ಸ್ಪಷ್ಟನೆ ನೀಡುವಂತೆ ಪ್ರಧಾನಿ ನರೇಂದ್ರ ಮೋದಿ ಹಾಗೂ ಕೇಂದ್ರ ಸಚಿವ ಅಮಿತ್ ಶಾ ಅವರನ್ನು ಆಗ್ರಹಿಸಿದೆ.

ಕ್ಷಮೆಯಾಚನೆ: ಹೇಳಿಕೆ ವಿವಾದಕ್ಕೀಡಾಗುತ್ತಿದ್ದಂತೆಯೇ ಸಾಹು ಈ ಬಗ್ಗೆ ಕ್ಷಮೆ ಕೇಳಿದ್ದಾರೆ. ಜತೆಗೆ ಮತ್ತೊಂದು ವಿಡಿಯೊ ಬಿಡುಗಡೆಗೊಳಿಸಿ, ‘ರಾಜಕೀಯ ಲಾಭಕ್ಕಾಗಿ ವಿರೋಧಿಗಳು ನನ್ನ ಹೇಳಿಕೆಯನ್ನು ತಿರುಚಿದ್ದಾರೆ. ನನ್ನ ಸ್ನೇಹಿತನ ಮದುವೆಗೆ ಸಂಬಂಧಿಸಿದ ಕಥೆಯನ್ನು ನಾನು ಹೇಳುತ್ತಿದ್ದೆ ಅಷ್ಟೇ’ ಎಂದು ವಿಡಿಯೊದಲ್ಲಿ ಸ್ಪಷ್ಟನೆ ನೀಡಿದ್ದಾರೆ.

ಬಿಜೆಪಿ ನಾಯಕರಿಂದಲೂ ತರಾಟೆ: ಸಾಹು ಹೇಳಿಕೆ ಕುರಿತಂತೆ ಬಿಹಾರದ ಬಿಜೆಪಿ ನಾಯಕರೂ ಆಕ್ಷೇಪ ವ್ಯಕ್ತಪಡಿಸಿದ್ದಾರೆ. ಬಿಜೆಪಿ ರಾಜ್ಯ ಘಟಕ ಕೂಡ ಘಟನೆಯನ್ನು ಖಂಡಿಸಿದೆ. ಬಿಜೆಪಿ ನಾಯಕರಾದ ದಿಲೀಪ್ ಜೈಸ್ವಾಲ್ ಮಾತನಾಡಿ, ‘ಇಂಥ ಭಾಷೆ ಬಳಸುವ ವ್ಯಕ್ತಿ ಯಾರೊಬ್ಬರ ಪತಿ ಅಥವಾ ಮಗ ಆಗಲು ಯೋಗ್ಯರಲ್ಲ. ಇದು ತಪ್ಪಾದ ನಡೆ ಇದನ್ನು ಖಂಡಿಸಲೇಬೇಕು’ ಎಂದಿದ್ದಾರೆ.

ತಮಿಳುನಾಡು: ಹೊಸ ಪಿಂಚಣಿ ಯೋಜನೆ

ಸರ್ಕಾರಿ ನೌಕರರು ಮತ್ತು ಶಿಕ್ಷಕರ ಎರಡು ದಶಕಗಳ ಬೇಡಿಕೆ ಈಡೇರಿಕೆ

ಚೆನ್ನೈ (ಪಿಟಿಐ): ತಮಿಳುನಾಡು ಸರ್ಕಾರಿ ನೌಕರರು ಮತ್ತು ಶಿಕ್ಷಕರಿಗೆ ಹೊಸ ಪಿಂಚಣಿ ಯೋಜನೆಯನ್ನು ಮುಖ್ಯಮಂತ್ರಿ ಎಂ.ಕೆ. ಸ್ಟಾಲಿನ್ ಶನಿವಾರ ಘೋಷಿಸಿದ್ದಾರೆ.

‘ತಮಿಳುನಾಡು ಹೊಸ ಪಿಂಚಣಿ ಖಾತರಿ ಯೋಜನೆ’ಯನ್ನು ಘೋಷಿಸುವ ಮೂಲಕ ಎರಡು ದಶಕಗಳಷ್ಟು ಹಳೆಯ ಬೇಡಿಕೆಯನ್ನು ಅವರು ಈಡೇರಿಸಿದ್ದಾರೆ.

ಸರ್ಕಾರಿ ನೌಕರರ ಕೊನೆಯ ವೇತನದ ಶೇ 50ರಷ್ಟು ಪಿಂಚಣಿ ದೊರೆಯಲಿದೆ. ಈ ಹೊಸ ಪಿಂಚಣಿ ಯೋಜನೆಯಲ್ಲಿ ಹಳೆಯ ಪಿಂಚಣಿ ಯೋಜನೆಯ ಪ್ರಯೋಜನಗಳೂ ಸೇರಿವೆ ಎಂದು ಮುಖ್ಯಮಂತ್ರಿ ಸ್ಟಾಲಿನ್ ಅಧಿಕೃತ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಈ ಉದ್ದೇಶಕ್ಕಾಗಿ, ರಾಜ್ಯ ಸರ್ಕಾರವು ನೌಕರರ ಶೇ 10ರಷ್ಟು ಕೊಡುಗೆಯ ಜೊತೆಗೆ ಪಿಂಚಣಿ ನಿಧಿಗೆ ಅಗತ್ಯ ಇರುವ ಹೆಚ್ಚುವರಿ ಹಣವನ್ನು ಒದಗಿಸುತ್ತದೆ.


ಎಂ.ಕೆ. ಸ್ಟಾಲಿನ್

ಶೇ 50 ರಷ್ಟು ಪಿಂಚಣಿ ಪಡೆಯುವ ಪಿಂಚಣಿದಾರರಿಗೆ ಸರ್ಕಾರಿ ನೌಕರರಂತೆಯೇ ಪ್ರತಿ ಆರು ತಿಂಗಳಿಗೊಮ್ಮೆ ತುಟ್ಟಿ ಭತ್ಯೆ ಹೆಚ್ಚಳದ ಸೌಲಭ್ಯವೂ ಇರಲಿದೆ. ಪಿಂಚಣಿದಾರರು ಮೃತಪಟ್ಟರೆ, ಮೃತರ ನಾಮನಿರ್ದೇಶಿತರಿಗೆ ಪಿಂಚಣಿ ಮೊತ್ತದ ಶೇ 60ರಷ್ಟು ಹಣವನ್ನು ಕುಟುಂಬ ಪಿಂಚಣಿಯಾಗಿ ನೀಡಲಾಗುತ್ತದೆ.

ನೌಕರರೊಬ್ಬರು ಸೇವಾವಧಿಯಲ್ಲಿ ಮೃತಪಟ್ಟರೆ ಅಥವಾ ನಿವೃತ್ತಿಯ ಸಮಯದಲ್ಲಿ ಮರಣ ಹೊಂದಿದರೆ ಅವರ ಉಳಿದ ಸೇವಾವಧಿಗೆ ಅನುಗುಣವಾಗಿ ಗರಿಷ್ಠ ₹25 ಲಕ್ಷದವರೆಗೆ (ಡೆತ್ ಗ್ರಾಚ್ಯುಟಿ) ನೀಡಲಾಗುವುದು. ಹೊಸ ಪಿಂಚಣಿ ಯೋಜನೆ ಜಾರಿಯಾದ ನಂತರ, ಪಿಂಚಣಿ ಪಡೆಯಲು ಅರ್ಹತಾ ಸೇವಾ ಅವಧಿ ಪೂರ್ಣಗೊಳಿಸದೆ ನಿವೃತ್ತರಾಗುವ ಎಲ್ಲರಿಗೂ ಕನಿಷ್ಠ ಪಿಂಚಣಿ ನೀಡಲಾಗುವುದು ಎಂದು ತಿಳಿಸಿದ್ದಾರೆ.


ಮಧ್ಯಪ್ರದೇಶದ ಇಂದೋರ್‌ನಲ್ಲಿ ಕಲುಷಿತ ನೀರು ಸೇವಿಸಿ ಹಲವರು ಮೃತಪಟ್ಟ ಸ್ಥಳಕ್ಕೆ ಕಾಂಗ್ರೆಸ್ ಸತ್ಯಶೋಧನಾ ಸಮಿತಿ ಶನಿವಾರ ಭೇಟಿ ನೀಡಿದ ವೇಳೆ, ಸಂಘರ್ಷಕ್ಕಿಳಿದ ಬಿಜೆಪಿ– ಕಾಂಗ್ರೆಸ್ ಕಾರ್ಯಕರ್ತರನ್ನು ಪೊಲೀಸರು ನಿಯಂತ್ರಿಸಿದರು – ಪಿಟಿಐ ಚಿತ್ರ

ಬುಲೆಟ್ ರೈಲು ವೆಚ್ಚ ₹1.98 ಲಕ್ಷ ಕೋಟಿ

ನವದೆಹಲಿ: ಮಹತ್ವಾಕಾಂಕ್ಷೆಯ ಮುಂಬೈ– ಅಹಮದಾಬಾದ್ ನಡುವಿನ ಬುಲೆಟ್ ರೈಲಿನ ಯೋಜನಾ ವೆಚ್ಚವು ₹1.98 ಲಕ್ಷ ಕೋಟಿಗೆ ಏರಿಕೆಯಾಗಲಿದೆ. 2016ರಲ್ಲಿ ಈ ಮಾರ್ಗದ ವೆಚ್ಚ ₹1.08 ಲಕ್ಷ ಎಂದು ಅಂದಾಜಿಸಲಾಗಿತ್ತು.

ಈ ಕುರಿತು ಮಾಹಿತಿ ನೀಡಿದ ರೈಲ್ವೆ ಮಂಡಳಿ ಅಧ್ಯಕ್ಷ ಸತೀಶ್ ಕುಮಾರ್, ‘ಭೂಸ್ವಾಧೀನ ಸೇರಿದಂತೆ ಹಲವು ಕಾರಣದಿಂದ ಯೋಜನಾ ವೆಚ್ಚವು ಏರಿಕೆಯಾಗಿದೆ’ ಎಂದು ತಿಳಿಸಿದರು.

ಶೇಕಡ 56.6ರಷ್ಟು ಭೌತಿಕ ಕಾಮಗಾರಿ ಪೂರ್ಣಗೊಂಡಿದ್ದು, 2025ರ ನವೆಂಬರ್ ತಿಂಗಳವರೆಗೂ ₹85,801 ಕೋಟಿ ವೆಚ್ಚ ಮಾಡಲಾಗಿದೆ ಎಂದು ರೈಲ್ವೆ ಸಚಿವಾಲಯವು ತಿಳಿಸಿತ್ತು. ಭೂಸ್ವಾಧೀನದಲ್ಲಿ ವಿಳಂಬ, ಅರಣ್ಯ ಹಾಗೂ ಪರಿಸರ ಇಲಾಖೆಯಿಂದ ಅನುಮತಿ ಪಡೆಯುವ ಪ್ರಕ್ರಿಯೆಯೂ ನಿಧಾನವಾಗಿರುವ ಕಾರಣ ಯೋಜನಾ ವೆಚ್ಚ ಏರಲು ಕಾರಣವಾಗಿದೆ. 2023ರ ಒಳಗಾಗಿ ಇಡೀ ಯೋಜನೆ ಪೂರ್ಣಗೊಳಿಸುವ ಗುರಿ ಹೊಂದಲಾಗಿತ್ತು. ಸೂರತ್-ಬಿಲಿಮೊರಾ ನಡುವಿನ ಮೊದಲ ಹಂತಕ್ಕೆ 2027ರ ಆಗಸ್ಟ್ 15ರಂದು ಚಾಲನೆ ನೀಡಲಾಗುವುದು ಎಂದು ರೈಲ್ವೆ ಸಚಿವ ಅಶ್ವಿನಿ ವೈಷ್ಣವ್ ಕಳೆದ ವಾರ ಘೋಷಿಸಿದ್ದರು.

ರಾಜಗೋಪುರ ಏರಿ ರಂಪಾಟ

ಹೈದರಾಬಾದ್: ವ್ಯಕ್ತಿಯೊಬ್ಬ ಮದ್ಯದ ನಶೆಯಲ್ಲಿ ತಿರುಪತಿಯ ಗೋವಿಂದ ರಾಜಸ್ವಾಮಿ ದೇವಸ್ಥಾನದ ಮುಖ್ಯದ್ವಾರದ ರಾಜಗೋಪುರ ಏರಿ ಆತಂಕ ಸೃಷ್ಟಿಸಿದ್ದ ಘಟನೆ ಶುಕ್ರವಾರ ನಡೆದಿದೆ.

ಭದ್ರತಾ ಸಿಬ್ಬಂದಿಯ ಕಣ್ತಪ್ಪಿಸಿ ಗೋಪುರ ಏರಿದ್ದ ವ್ಯಕ್ತಿ, ಅಲ್ಲಿದ್ದ ಕಳಶ ಕೀಳಲು ಪ್ರಯತ್ನಿಸಿದ್ದ. ಮದ್ಯ ನೀಡಿದರೆ ಮಾತ್ರ ಕೆಳಗೆ ಇಳಿಯುವುದಾಗಿ ಹೇಳುತ್ತಾ ರಂಪಾಟ ಮಾಡಿದ್ದ.

ಬಳಿಕ ತಿರುಪತಿ ಪೂರ್ವ ಪೊಲೀಸ್ ಮತ್ತು ಅಗ್ನಿಶಾಮಕ ಸಿಬ್ಬಂದಿ ಜಂಟಿಯಾಗಿ ಸತತ ಮೂರು ತಾಸು ಕಾರ್ಯಾಚರಣೆ ನಡೆಸಿ ಸುರಕ್ಷಿತವಾಗಿ ಆತನನ್ನು ಕೆಳಕ್ಕೆ ಇಳಿಸಿ ಬಂಧಿಸಿದರು.

ಕುಡಿದು ದೇಗುಲದಲ್ಲಿ ರಂಪಾಟ ಮಾಡಿದ ವ್ಯಕ್ತಿಯನ್ನು ಕುತ್ತಾಡಿ ತಿರುಪತಿ (45) ಎಂದು ಗುರುತಿಸಲಾಗಿದೆ. ತೆಲಂಗಾಣದ ನಿಜಾಮಾಬಾದ್ ಜಿಲ್ಲೆಯ ಈತ ಕೂಲಿ ಕಾರ್ಮಿಕನಾಗಿ ತಿರುಪತಿಯಲ್ಲಿ ಕೆಲಸ ಮಾಡುತ್ತಿದ್ದ.

ಘಟನೆ ಬೆನ್ನಲ್ಲೇ, ವಿರೋಧ ಪಕ್ಷವಾದ ವೈಎಸ್‌ಆರ್‌ಸಿಪಿ ನಾಯಕರು ದೇಗುಲವನ್ನು ಅಪವಿತ್ರಗೊಳಿಸಲಾಗಿದೆ ಎಂದು ಖಂಡಿಸಿದ್ದಾರೆ.

ಕಾವಿ ಕಲೆ ಸೊಬಗು
ಗೋವಾದ ಗೋಕರ್ಣ ಪರ್ತಗಾಳಿ ಮಠದ ಗೋಡೆ ಗೋಪುರಗಳಲ್ಲಿನ ಕಾವಿ ಕಲೆ ನೋಡುಗರ ಗಮನಸೆಳೆಯುತ್ತವೆ. 13





ಕ್ರಿಕೆಟ್ ಕನಸುಗಳ ಕಾರ್ಖಾನೆ

ಬೆಂಗಳೂರಿನ ಕ್ರಿಕೆಟ್ ಪರಂಪರೆಯ ಕಿರೀಟಕ್ಕೆ ಭಾರತ ಕ್ರಿಕೆಟ್ ನಿಯಂತ್ರಣ ಮಂಡಳಿಯ ಶ್ರೇಷ್ಠತಾ ಕೇಂದ್ರದ ಗರಿ ಸೇರಿದೆ. ಆಟಗಾರರ ತರಬೇತಿಯ ಕನಸು ಈಡೇರಿಸುವ, ಗಾಯಗೊಂಡ ಆಟಗಾರರ ವೃತ್ತಿಜೀವನ ಮರಳಿ ಅರಳುವಂತೆ ಮಾಡುವ ತಾಣ ಇದು. ಸಿಂಗಹಳ್ಳಿಯ ಸಾಫ್ಟ್‌ವೇರ್, ಹಾರ್ಡ್‌ವೇರ್ ಮತ್ತಿತರ ಉದ್ಯಮ ಸಂಸ್ಥೆಗಳ ಮಧ್ಯದಲ್ಲಿ ಅರಳಿರುವ ಈ ಕೇಂದ್ರವು ಕ್ರಿಕೆಟಿಗರಲ್ಲಿ ಕನಸುಗಳನ್ನು ಹುಟ್ಟುಹಾಕುವ ಕಾರ್ಖಾನೆಯೇ ಸರಿ...

• ಗಿರೀಶ ದೊಡ್ಡಮನಿ

ದೇವನಹಳ್ಳಿ ವಿಮಾನ ನಿಲ್ದಾಣದಿಂದ ಸುಮಾರು ಹತ್ತು ಕಿಲೋಮೀಟರ್ ದೂರದಲ್ಲಿರುವ ಸಿಂಗಹಳ್ಳಿಯಲ್ಲಿ ದೊಡ್ಡ ದೊಡ್ಡ ಐಟಿ ಕಂಪನಿಗಳಿವೆ. ಹಾರ್ಡ್‌ವೇರ್, ವಿಮಾನಯಾನ ಸಂಸ್ಥೆಗಳ ದೊಡ್ಡ ಕಚೇರಿಗಳಿವೆ. ವೇರ್‌ಹೌಸ್‌ಗಳು ಮತ್ತು ಏರೋಸ್ಪೇಸ್ ಪಾರ್ಕ್‌ಗಳಿವೆ. ಇವೆಲ್ಲವುಗಳ ನಡುವೆ ಒಂದು 'ಕ್ರಿಕೆಟಿಗರಲ್ಲಿ ಕನಸುಗಳನ್ನು ಹುಟ್ಟುಹಾಕುವ ಕಾರ್ಖಾನೆ'ಯೂ ಇದೆ!

ಹೌದು; ಇಲ್ಲಿರುವ ಭಾರತ ಕ್ರಿಕೆಟ್ ನಿಯಂತ್ರಣ ಮಂಡಳಿ (ಬಿಸಿಸಿಐ) ಯ ಶ್ರೇಷ್ಠತಾ ಕೇಂದ್ರವೇ ಆ ಕಾರ್ಖಾನೆ. ಉದಯೋನ್ಮುಖ ಕ್ರಿಕೆಟಿಗರಿಗೆ ತಿದ್ದಿ ತೀಡಿ ತರಬೇತುಗೊಳಿಸುವ, ಗಾಯಗೊಂಡು ಬರುವ ತಾರಾವರ್ಚಸ್ಸಿನ ಆಟಗಾರರ ದೇಹ ಮತ್ತು ಮನಸ್ಸನ್ನು ಪುನಶ್ಚೇತನಗೊಳಿಸುವ ಹಾಗೂ ಕ್ರಿಕೆಟ್ ಬೆಳವಣಿಗೆಗೆ ಪೂರಕವಾದ ಹತ್ತು ಹಲವು ಚಟುವಟಿಕೆಗಳು ನಡೆಯುವ ಸ್ಥಳ ಇದಾಗಿದೆ. ಇದೀಗ ಚಿನ್ನಸ್ವಾಮಿ ಕ್ರೀಡಾಂಗಣದಲ್ಲಿ ನಡೆಸಲು ಸಾಧ್ಯವಾಗದ ಪಂದ್ಯಗಳಿಗೂ ಬಿಸಿಸಿಐ ಶ್ರೇಷ್ಠತಾ ಕೇಂದ್ರವೇ 'ಪರ್ಯಾಯ' ಸ್ಥಳವಾಗಿ ಮಾರ್ಪಟ್ಟಿದೆ.

ಅದಕ್ಕಾಗಿಯೇ ಹೋದ ತಿಂಗಳಷ್ಟೇ ಕ್ರಿಕೆಟ್ ದಿಗ್ಗಜ ವಿರಾಟ್ ಕೊಹ್ಲಿ ಅವರು ಇಲ್ಲಿ ಆಡಿದರು. ವಿಜಯ್ ಹಜಾರೆ ಟ್ರೋಫಿ ಏಕದಿನ ಕ್ರಿಕೆಟ್ ಟೂರ್ನಿಯ ಪಂದ್ಯದಲ್ಲಿ ಕೊಹ್ಲಿ ದೆಹಲಿ ತಂಡವನ್ನು ಪ್ರತಿನಿಧಿಸಿದ್ದರು. ಇಲ್ಲಿ ಎರಡು ಪಂದ್ಯಗಳನ್ನು ಆಡಿ ಒಂದರಲ್ಲಿ ಶತಕ, ಇನ್ನೊಂದರಲ್ಲಿ ಅರ್ಧ ಶತಕ ದಾಖಲಿಸಿದರು. ನವದೆಹಲಿಯಲ್ಲಿ ಹುಟ್ಟಿ ಬೆಳೆದ ಕೊಹ್ಲಿಗೆ ಬೆಂಗಳೂರು ಎಂದರೆ ಎರಡನೇ ತವರು. ರಾಯಲ್ ಚಾಲೆಂಜರ್ಸ್ ಬೆಂಗಳೂರು ತಂಡದ ಮೂಲಕ ಅವರು ಉದ್ಯಾನನಗರಿಯ ಕ್ರಿಕೆಟ್ ಪ್ರೇಮಿಗಳ ಕಣ್ಮಣಿಯಾಗಿದ್ದಾರೆ. ಚಿನ್ನಸ್ವಾಮಿ ಕ್ರೀಡಾಂಗಣದಲ್ಲಿ ಅವರ ಹಲವು ಅವಿಸ್ಮರಣೀಯ ಇನಿಂಗ್ಸ್ ಒಡಮೂಡಿವೆ. ಒಂದು ವರ್ಷದಿಂದ ಕಾರ್ಯನಿರ್ವಹಿಸುತ್ತಿರುವ ಬಿಸಿಸಿಐ ಶ್ರೇಷ್ಠತಾ ಕೇಂದ್ರದ ಅಂಗಣದಲ್ಲಿಯೂ ಕೊಹ್ಲಿ ತಮ್ಮ ಛಾಪು ಮೂಡಿಸಿದರು.



ಬಿಸಿಸಿಐ ಶ್ರೇಷ್ಠತಾ ಕೇಂದ್ರದಲ್ಲಿರುವ ಜಿಮ್ನಾಷಿಯಂ

ಅದಿರಲಿ; ಈ ಶ್ರೇಷ್ಠತಾ ಕೇಂದ್ರ ಆರಂಭವಾಗಿದ್ದು ಹೇಗೆ? ಇಲ್ಲಿ ಏನೇನು ಇದೆ ಎಂಬುದನ್ನು ಒಂದು ಸುತ್ತು ಹಾಕಿ ನೋಡೋಣ ಬನ್ನಿ.

ಚಿನ್ನಸ್ವಾಮಿ ಕ್ರೀಡಾಂಗಣದಲ್ಲಿ ಸುಮಾರು ಎರಡು ದಶಕಗಳು ರಾಷ್ಟ್ರೀಯ ಕ್ರಿಕೆಟ್ ಅಕಾಡೆಮಿ (ಎನ್‌ಸಿಎ) ಕಾರ್ಯನಿರ್ವಹಿಸಿತು. ಗಾಯಗೊಂಡ ಆಟಗಾರರ ಆರೈಕೆ, ತರಬೇತಿ ಮತ್ತು ಪುನಶ್ಚೇತನ ಈ ಕೇಂದ್ರದ ಪ್ರಾಥಮಿಕ ಕಾರ್ಯವಾಗಿತ್ತು. ಕ್ರಿಕೆಟ್ ಬೆಳೆದಂತೆ ಎನ್‌ಸಿಎ ಕಾರ್ಯವ್ಯಾಪ್ತಿಯೂ ವಿಸ್ತರಿಸಿತು. ಜೂನಿಯರ್, ಸೀನಿಯರ್ ಆಟಗಾರರ ತರಬೇತಿ, ಕೋಚ್‌ಗಳಿಗೆ ತರಬೇತಿ ಸೇರಿದಂತೆ ಕ್ರಿಕೆಟ್‌ನ ಪ್ರತಿಯೊಂದು ವಿಭಾಗಗಳಿಗೂ ತನ್ನ ನೆರವಿನ ಹಸ್ತ ಚಾಚಿತು. ಇದರಿಂದಾಗಿ ಕ್ರಿಕೆಟ್‌ನ ಸರ್ವಾಂಗೀಣ ಬೆಳವಣಿಗೆಗೆ ಬೇಕಾದ ಎಲ್ಲ ಸೌಲಭ್ಯಗಳೂ ಒಂದೇ ಸೂರಿನಡಿಯಲ್ಲಿ ಅಭಿವೃದ್ಧಿಗೊಳ್ಳತೊಡಗಿದವು. ಅದಕ್ಕಾಗಿ ದೊಡ್ಡ ಸ್ಥಳವೂ ಅಗತ್ಯವಾಗಿತ್ತು.



ಬಿಸಿಸಿಐ ಶ್ರೇಷ್ಠತಾ ಕೇಂದ್ರದಲ್ಲಿ ಅಭ್ಯಾಸ ನಿರತ ವಿರಾಟ್ ಕೊಹ್ಲಿ, ಇಶಾಂತ್ ಶರ್ಮಾ

ಇದರಿಂದಾಗಿ ಸಿಂಗಹಳ್ಳಿಯಲ್ಲಿ ನಲವತ್ತು ಎಕರೆಯಲ್ಲಿ ಎನ್‌ಸಿಎ ಹರಡಿಕೊಂಡಿದೆ. ಕೆಂಪೇಗೌಡ ಅಂತರರಾಷ್ಟ್ರೀಯ ವಿಮಾನ ನಿಲ್ದಾಣದ ಸಮೀಪದ ಕೈಗಾರಿಕಾ ಪ್ರದೇಶಕ್ಕೆ ಹೊಂದಿಕೊಂಡಂತಿರುವ ಭವ್ಯವಾದ ಶ್ರೇಷ್ಠತಾ ಕೇಂದ್ರ (ಎನ್‌ಸಿಎ ಹೆಸರು ಬದಲಿಸಲಾಯಿತು) ತಲೆ ಎತ್ತಿತು. 2024ರ ಸೆಪ್ಟೆಂಬರ್‌ನಲ್ಲಿ ಈ ಕೇಂದ್ರ ಕಾರ್ಯಾರಂಭ ಮಾಡಿತು.

'ಗಾಯಗೊಂಡ ಕ್ರಿಕೆಟಿಗರಿಗೆ ಆರೈಕೆ ನೀಡುವುದಷ್ಟೇ ಈ ಕೇಂದ್ರದ ಕಾರ್ಯ ಎಂಬ ಕಲ್ಪನೆ ಜನರಲ್ಲಿದೆ. ಆದರೆ ಭಾರತದ ಕ್ರಿಕೆಟ್ ತಂಡದ ಬೆಂಚ್ ಶಕ್ತಿಯನ್ನು (ಮುಂಚೂಣಿಗೆ ಬರಲು ಸಿದ್ಧವಾಗಿರುವ ಎರಡನೇ ಸಾಲಿನ ಪ್ರತಿಭಾನ್ವಿತ ಆಟಗಾರರು) ಬಲಿಷ್ಠಗೊಳಿಸುವುದು ಮತ್ತು ವಿಶ್ವದರ್ಜೆಯ ಪೈಪೋಟಿಗೆ ಆಟಗಾರರ ಸಾಮರ್ಥ್ಯವನ್ನು ವೃದ್ಧಿಸುವ ಕಾರ್ಯ ಕೂಡ ಇಲ್ಲಿ ನಡೆಯುತ್ತಿದೆ' ಎಂದು ಈ ಕೇಂದ್ರದ ಮುಖ್ಯಸ್ಥ ವಿವಿಎಸ್ ಲಕ್ಷ್ಮಣ್ ಉದ್ಘಾಟನೆ ದಿನ ಹೇಳಿದ್ದರು.

ಅದಕ್ಕೆ ತಕ್ಕಂತೆ ಇಲ್ಲಿ ಈಗ ಕ್ರಿಕೆಟ್‌ನ ವಿವಿಧ ಆಯಾಮಗಳ ಕುರಿತ ಚಟುವಟಿಕೆಗಳು ನಿರಂತರವಾಗಿ ನಡೆಯುತ್ತಿವೆ. ಅಷ್ಟೇ ಏಕೆ; ಕಳೆದ ಆರು ತಿಂಗಳಲ್ಲಿ ದುಲೀಪ್ ಟ್ರೋಫಿ, ಮಹಿಳೆಯರ ಏಕದಿನ ವಿಶ್ವಕಪ್ ಟೂರ್ನಿಯ ಅರ್ಹತಾ ಪಂದ್ಯಗಳು, ಭಾರತ ಎ ಮತ್ತು ದಕ್ಷಿಣ ಆಫ್ರಿಕಾ ಎ ತಂಡಗಳ ಪಂದ್ಯಗಳು ನಡೆದವು. ಸದ್ಯ ವಿಜಯ್ ಹಜಾರೆ ಟ್ರೋಫಿ ಪಂದ್ಯಗಳು ಕೂಡ ಇಲ್ಲಿ ನಡೆಯುತ್ತಿವೆ.

ಬೃಹತ್ ಪ್ರವೇಶ ದ್ವಾರವನ್ನು ದಾಟಿ ಮುಖ್ಯ ಕಟ್ಟಡ ಪ್ರವೇಶಿಸುತ್ತಿದ್ದಂತೆಯೇ ಹಾಲ್ ಆಫ್ ಫೇಮ್ ಇದೆ. ಅಂತಿಮ ಹಂತದ ಕಾಮಗಾರಿಗಳು ಪ್ರಗತಿಯಲ್ಲಿವೆ. ಹಾಗೆ ದಾಟಿ ಇನ್ನೊಂದು ದ್ವಾರದ ಹೊಸ್ತಿಲು ದಾಟಿದರೆ ಹಸಿರುಟ್ಟು ಕಂಗೊಳಿಸುತ್ತಿರುವ ಕ್ರಿಕೆಟ್ ಮೈದಾನ ಕಣ್ಮನ ಸೆಳೆಯುತ್ತದೆ. 85 ಯಾರ್ಡ್ ಬೌಂಡರಿ ಇರುವ ವಿಶ್ವದರ್ಜೆ ಕ್ರೀಡಾಂಗಣ ಇದು.

ಮುಂಬೈ ಕೆಂಪು ಮಣ್ಣಿನಿಂದ ಸಿದ್ಧಗೊಳಿಸಿರುವ 13 ಪಿಚ್‌ಗಳು ಇಲ್ಲಿವೆ. ಹೊನಲು ಬೆಳಕಿನ ಕಂಬಗಳು, ಸೌತ್ ಪೆವಿಲಿಯನ್ ಮತ್ತು ಪಂದ್ಯಗಳ ನೇರಪ್ರಸಾರ ಸೌಲಭ್ಯ ಕೇಂದ್ರ ಕೂಡ ಇಲ್ಲಿದೆ.

ಇಲ್ಲಿಂದ ಎಡಗಡೆಗೆ ಸಾಗಿದರೆ ಬಿ ಮೈದಾನ ಗಮನ ಸೆಳೆಯುತ್ತದೆ. 75 ಯಾರ್ಡ್ ಬೌಂಡರಿ ಇರುವ ಇದರಲ್ಲಿ ಮಂಡ್ಯದ ಕಪ್ಪು ಮಣ್ಣು ಬಳಸಿ ಮಾಡಲಾಗಿರುವ 11 ಪಿಚ್‌ಗಳಿವೆ. ಪಕ್ಕದಲ್ಲಿರುವ ಮೂರನೇ ಮೈದಾನ (ಸಿ)ದಲ್ಲಿ ಒಡಿಶಾದ ಕಾಳಹಂಡಿಯಿಂದ ತರಿಸಿರುವ ಕಪ್ಪು ಮಣ್ಣಿನಿಂದ ಸಿದ್ಧವಾದ 9 ಪಿಚ್‌ಗಳಿವೆ. ಈ ಮೂರು ಮೈದಾನಗಳಲ್ಲಿ ಮಳೆ ನೀರು ತ್ವರಿತವಾಗಿ ಹರಿದುಹೋಗಲು ಸಬ್‌ಸರ್ಫೇಸ್ ವ್ಯವಸ್ಥೆ ಮಾಡಲಾಗಿದೆ.

ಮೈದಾನಗಳಾಚೆ ನೆಟ್ಸ್ ಅಭ್ಯಾಸಕ್ಕಾಗಿ 45 ಪಿಚ್‌ಗಳು ಇವೆ. ಜೊತೆಗೆ ಹೊನಲು ಬೆಳಕಿನ ವ್ಯವಸ್ಥೆ ಇದೆ. ಓಟದ ಅಭ್ಯಾಸಕ್ಕಾಗಿ ಟ್ರ್ಯಾಕ್ ಮತ್ತು ಫೀಲ್ಡಿಂಗ್ ಅಭ್ಯಾಸದ ಸೌಕರ್ಯಗಳು ಇವೆ. ಕ್ಯಾಮೆರಾಗಳ ಮೂಲಕ ಆಟಗಾರರ ಸಾಮರ್ಥ್ಯವನ್ನು ವಿಶ್ಲೇಷಿಸುವ ತಂತ್ರಜ್ಞಾನ ಇಲ್ಲಿ ಅಳವಡಿಸಲಾಗಿದೆ.

16 ಸಾವಿರ ಚದರಡಿ ಜಾಗದಲ್ಲಿ ನಿರ್ಮಿಸಿರುವ ದೊಡ್ಡ ಕಟ್ಟಡದಲ್ಲಿ ಸ್ಲೀಪಿಂಗ್ ಪಾಡ್‌ಗಳಿರುವ ಜಿಮ್ನಾಷಿಯಂ, ಅಥ್ಲೆಟಿಕ್ಸ್ ಟ್ರ್ಯಾಕ್, ಫಿಸಿಯೊಥೆರಪಿ ಕೇಂದ್ರ, ಕ್ರೀಡಾ ವಿಜ್ಞಾನ ಮತ್ತು ಔಷಧಿ ಪ್ರಯೋಗಾಲಯ, ಝಕುಜಿ, ಸೌನಾ ಮತ್ತು ಸ್ಟೀಮ್ ಬಾತ್, ಐಸ್ ಬಾತ್, 25 ಮೀಟರ್ಸ್ ಈಜುಕೊಳಗಳು ಇವೆ.


12ನೇ ಪುಟಕ್ಕೆ...

ಪರಿಣತ ತರಬೇತುದಾರರು...

ಪುರುಷ ಮತ್ತು ಮಹಿಳಾ ಕ್ರಿಕೆಟಿಗರಿಗೆ ಇಲ್ಲಿ ಪುನಶ್ಚೇತನ, ತರಬೇತಿ ಮತ್ತು ಕೌಶಲಾವೃದ್ಧಿಯ ಚಟುವಟಿಕೆಗಳನ್ನು ನಡೆಸಲಾಗುತ್ತಿದೆ. ಜೂನಿಯರ್, ಸೀನಿಯರ್ ಮತ್ತು ಈಗಾಗಲೇ ಭಾರತ ತಂಡದಲ್ಲಿ ಆಡುತ್ತಿರುವ ಎಲ್ಲ ಆಟಗಾರರಿಗೂ ಇಲ್ಲಿ ವಿಭಿನ್ನ ಯೋಜನೆಗಳಿವೆ. ಅವುಗಳನ್ನು ನಿರ್ವಹಿಸಲು ವಿಷಯ ಪರಿಣತ ತರಬೇತುದಾರರು ಇದ್ದಾರೆ.

ಆಟಗಾರರಷ್ಟೇ ಅಲ್ಲ. ಕೋಚ್‌ಗಳನ್ನು ಸಿದ್ಧಗೊಳಿಸಲು ಕೂಡ ವಿಶೇಷ ತರಗತಿಗಳು ನಮ್ಮಲ್ಲಿವೆ. ಬೌಲಿಂಗ್, ಬ್ಯಾಟಿಂಗ್, ಫೀಲ್ಡಿಂಗ್, ಕ್ರೀಡಾ ವಿಜ್ಞಾನ, ಫಿಸಿಯೊಥೆರಪಿ, ಕ್ರೀಡಾ ಮನಃಶಾಸ್ತ್ರ ಮತ್ತಿತರ ವಿಭಾಗಗಳು ಉತ್ತಮವಾಗಿ ಕಾರ್ಯನಿರ್ವಹಿಸುತ್ತಿವೆ. ಇದರ ಫಲವಾಗಿ ಮುಂದಿನ ಒಂದು ದಶಕಕ್ಕಿಂತಲೂ ಹೆಚ್ಚು ಅವಧಿಯವರೆಗೆ ಭಾರತ ತಂಡದ ಬೆಂಚ್ ಶಕ್ತಿ ಬಲಿಷ್ಠವಾಗಿಯೇ ಇರಲಿದೆ. ನಮ್ಮಲ್ಲಿಗೆ ಬರುವ ಆಟಗಾರರು ಹೊರಗಿನ ಅಕಾಡೆಮಿಗಳಲ್ಲಿರುವ ಕೋಚ್‌ಗಳಿಂದ ಬಹಳಷ್ಟು ಕೌಶಲಗಳನ್ನು ಕಲಿತಿರುತ್ತಾರೆ. ನಮ್ಮಲ್ಲಿ ಬಂದಾಗ ಕಲಿಸುವ ಕೆಲವು ಕೌಶಲಗಳು ಅವರಿಗೆ ಗೊಂದಲ ಮೂಡಿಸಬಹುದು. ಅದಕ್ಕಾಗಿ ನಮ್ಮಲ್ಲಿ ಕಲಿತಿದ್ದೇ ಅಂತಿಮ ಎಂದು ನಾವು ಹೇಳುವುದಿಲ್ಲ. ಆಟಗಾರರು ತಮ್ಮ ಅನುಕೂಲಕ್ಕೆ ತಕ್ಕಂತೆ ಕೌಶಲಗಳನ್ನು ಆಯ್ಕೆ ಮಾಡಿಕೊಳ್ಳಬಹುದು.

–ವಿವಿಎಸ್ ಲಕ್ಷ್ಮಣ್, ಬಿಸಿಸಿಐ ಸಿಒಇ ಮುಖ್ಯಸ್ಥ



ಬೊಂಬೆಯಾಟಕ್ಕೆ ಸಜ್ಜಾಗಿರುವ ಬೊಂಬೆಗಳನ್ನು ತೋರಿಸುತ್ತಿರುವ ಅನುಪಮ. ಚಿತ್ರಗಳು: ಕಿಶೋರ್ ಕುಮಾರ್ ಬೋಳಾರ್

ಇದು ಬೊಂಬೆಯಾಟವಯ್ಯಾ...

• ಉಮೇಶ ಭಟ್ಟ ಪಿ.ಎಚ್.

ಬೆಂಗಳೂರಿನ ಕನಕಪುರ ರಸ್ತೆಯ ಸಿಲ್ಕ್ ಇನ್‌ಸ್ಟಿಟ್ಯೂಟ್ ಮೆಟ್ರೊ ನಿಲ್ದಾಣಕ್ಕೆ ಹೊಂದಿಕೊಂಡಂತೆ ಇರುವ 'ಮಂಡಲ ಸಾಂಸ್ಕೃತಿಕ ಕೇಂದ್ರ' ತನ್ನ ವಿಶಿಷ್ಟತೆಯಿಂದ ಗಮನ ಸೆಳೆಯುತ್ತದೆ. ಈ ಕೇಂದ್ರದ ಒಳಗೆ ಸುತ್ತು ಹಾಕಿದರೆ ಅಲ್ಲಿ ಕರ್ನಾಟಕ ಮಾತ್ರವಲ್ಲದೇ ದೇಶ, ವಿದೇಶದ ಬೊಂಬೆಗಳ ಜಗತ್ತು ತೆರೆದುಕೊಳ್ಳುತ್ತದೆ. 600 ಆಡಿಸುವ ಬೊಂಬೆಗಳು ಹಾಗೂ 400 ಪ್ರದರ್ಶಕ ಬೊಂಬೆಗಳ ಸಂಗ್ರಹವೇ ಇದೆ. ಜಾರ್ಖಂಡ್, ಉತ್ತರ ಪ್ರದೇಶ, ರಾಜಸ್ಥಾನ, ಕೇರಳ, ತಮಿಳುನಾಡು, ಪಶ್ಚಿಮ ಬಂಗಾಲ, ಮಹಾರಾಷ್ಟ್ರದ ಸಾಂಪ್ರದಾಯಿಕ ಬೊಂಬೆಗಳಿವೆ. ಇಂಡೊನೇಷ್ಯಾ, ಶ್ರೀಲಂಕಾದ ರಾಮಾಯಣದ ಕಥಾನಕದ ಬೊಂಬೆಗಳೂ ಉಂಟು. ಜರ್ಮನಿ, ಬಲ್ಗೇರಿಯಾ, ಸ್ಪೇನ್, ಫ್ರಾನ್ಸ್, ಅಮೆರಿಕ ಸಹಿತ ಹಲವು ದೇಶಗಳ ಬೊಂಬೆಗಳು ಜಾಗ ಪಡೆದಿವೆ.

ಬೊಂಬೆ ಪ್ರದರ್ಶನಕ್ಕಾಗಿಯೇ ಇಲ್ಲಿ ಗ್ಲಾಸ್ ಹೌಸ್, ರಥ ಬೀದಿ, ವಸಂತ ವನ, ಸಮರಸ ಹೆಸರಿನ ಅಂಗಳಗಳಿವೆ. ಇಲ್ಲಿ ನಿಯಮಿತವಾಗಿ ಪ್ರದರ್ಶನ, ಕಾರ್ಯಾಗಾರ, ಮಕ್ಕಳಿಗೆ ಬೊಂಬೆಗಳ ಅರಿವು ಮೂಡಿಸುವ ಚಟುವಟಿಕೆ ನಡೆಯುತ್ತವೆ. ಶಾಲೆಗಳಿಗೂ ಬೊಂಬೆಗಳನ್ನು ತೆಗೆದುಕೊಂಡು ಹೋಗಿ ಪ್ರದರ್ಶನ ನೀಡಲಾಗುತ್ತದೆ. ದಶಕದಿಂದ 'ಧಾತು ಅಂತರರಾಷ್ಟ್ರೀಯ ಬೊಂಬೆಯಾಟ ಉತ್ಸವ'ವು ದೇಶ–ವಿದೇಶದ ಕಲೆ ಮತ್ತು ಕಲಾವಿದರನ್ನು ಬೆಸೆದಿದೆ.

ಈ ಕೇಂದ್ರದ ರೂವಾರಿ ಅನುಪಮ ಹೊಸಕೆರೆ. ಅವರಿಗೆ ಪ್ರದರ್ಶನದ ಜತೆಗೆ ಬೊಂಬೆಗಳನ್ನು ಸಂಗ್ರಹಿಸುವ ಹವ್ಯಾಸ. ಆದ್ದರಿಂದಲೇ ಅವುಗಳಿಗೆ ನೆಲೆ ಒದಗಿಸಬೇಕು. ಬೊಂಬೆಗಳ ಪ್ರದರ್ಶಕ ಕಲೆಗಳ ಕೇಂದ್ರವನ್ನು ರೂಪಿಸಬೇಕು ಎನ್ನುವ ಅವರ ಕನಸಿಗೆ ಪತಿಯ ತಂದೆ ನೀರೆರೆದರು. ಬೆಂಗಳೂರಿನ ಕನಕಪುರ ರಸ್ತೆಯಲ್ಲಿ ಒಂದು ಎಕರೆ ಜಾಗ ನೀಡಿದರು. ಅಲ್ಲಿ ಒಂದೂವರೆ ದಶಕದ ಹಿಂದೆಯೇ 'ಧಾತು ಬೊಂಬೆಗಳ ಕೇಂದ್ರ' ಸಣ್ಣದಾಗಿ ಆರಂಭಿಸಿ ಈಗ 'ಮಂಡಲ ಸಾಂಸ್ಕೃತಿಕ ಕೇಂದ್ರ'ದ ರೂಪ ಪಡೆದುಕೊಂಡಿದೆ.

ಮೂರು ದಿನ ಪ್ರದರ್ಶನ

ಮಂಡಲ ಸಾಂಸ್ಕೃತಿಕ ಕೇಂದ್ರದಲ್ಲಿ ಧಾತು ಅಂತರರಾಷ್ಟ್ರೀಯ ಬೊಂಬೆಯಾಟ ಉತ್ಸವ ಜನವರಿ 9 ರಿಂದ ಮೂರು ದಿನ ನಡೆಯಲಿದೆ.

ಅಲ್ಲಿ ಕರ್ನಾಟಕದ ನಾನಾ ಭಾಗದ ಕಲಾವಿದರು ಪ್ರದರ್ಶನ ನೀಡುವರು. ಜೊತೆಗೆ ಇಟಲಿಯ ಆಂಡ್ರಿಯಾ ಫೇಡಿ ಅವರ ಕ್ರೇಜಿ ಅನಿಮಲ್ಸ್ ಬೊಂಬೆ ಪ್ರದರ್ಶನ ವಿಶೇಷ ಆಕರ್ಷಣೆ. ಮೊದಲ ದಿನ ಬೊಂಬೆಗಳೊಂದಿಗೆ ಪಥ ಸಂಚಲನ ಗಮನ ಸೆಳೆಯಲಿದೆ. ಪ್ರವೇಶ ಉಚಿತವಾಗಿದೆ.

ಅನುಪಮ ಅವರು ಮೂರು ದಶಕದಿಂದ ಬೊಂಬೆಗಳ ಕಲಾವಿದೆ, ತಜ್ಞೆಯಾಗಿ ಕೆಲಸ ಮಾಡುತ್ತಿದ್ದಾರೆ. ಅವರು ರೂಪಿಸಿರುವ ಧಾತು ಬೊಂಬೆಗಳ ಪ್ರದರ್ಶಕ ಕೇಂದ್ರವೂ ಹೊಸ ತಲೆಮಾರಿಗೆ ಬೊಂಬೆಗಳು, ಅದರ ಮಹತ್ವ ಸಾರುತ್ತಿದೆ. ಭಾರತ ಹಾಗೂ ವಿದೇಶದ ಬೊಂಬೆ ಸಂಸ್ಕೃತಿಯ ಸೇತುವೆಯಂತೆಯೇ ಅವರು ಕೆಲಸ ಮಾಡುತ್ತಿದ್ದಾರೆ.

ಅನುಪಮ ಅವರಿಗೆ ಸಂಸ್ಕೃತಿ ಅನ್ವೇಷಣೆ, ಹೊಸದನ್ನು ತಿಳಿಯುವುದೆಂದರೆ ಬಲುಪ್ರೀತಿ. ಎಳವೆಯಲ್ಲಿ ಅವರಿಗೆ ಪ್ರಭಾವ ಬೀರಿದ್ದು ಅಜ್ಜಿಯ ಕಥೆಗಳು. ನೃತ್ಯ ಪಟುವಾಗಿ ರೂಪುಗೊಂಡಿದ್ದ ಅವರು ಎಂಜಿನಿಯರಿಂಗ್ ಮುಗಿಸಿ ಉನ್ನತ ಶಿಕ್ಷಣಕ್ಕೆ ಅಮೆರಿಕದ ಕ್ಯಾಲಿಫೋರ್ನಿಯಾ ಸ್ಟೇಟ್ ವಿಶ್ವವಿದ್ಯಾಲಯಕ್ಕೆ ತೆರಳಿದರು. ಸ್ಟ್ರಕ್ಚರಲ್ ಎಂಜಿನಿಯರ್ ಆಗಿರುವ ಪತಿ ವಿದ್ಯಾಶಂಕರ ಹೊಸಕೆರೆ ಅವರೊಂದಿಗೆ ಒಂದೂವರೆ ದಶಕ ವಿದೇಶದಲ್ಲಿ ನೆಲೆಸಿದರೂ ಅವರ ಕಲಾಸಕ್ತಿಗಳು ಕಡಿಮೆಯಾಗಿರಲಿಲ್ಲ.

ವಿದೇಶದಲ್ಲಿ ಒಮ್ಮೆ ಬೊಂಬೆಗಳ ಪ್ರದರ್ಶನ ನೋಡಿ ಅವರಿಗೆ ಆ ಕಡೆ ಹೆಚ್ಚಿನ ಒಲವು ಬೆಳೆಯಿತು. ಭಾರತದಲ್ಲಿನ ಬೊಂಬೆಗಳ ಕುರಿತು ಅಧ್ಯಯನ ಮಾಡುತ್ತಲೇ ವಿಶೇಷ ಬೊಂಬೆಗಳ ಸಂಗ್ರಹಕ್ಕೂ ಒತ್ತು ನೀಡಿದರು. ಎಂಜಿನಿಯರ್ ಅನುಪಮ ಸಂಪೂರ್ಣ ಕಲಾವಿದೆಯಾಗಿಯೇ ಬದಲಾದರು. ಬೊಂಬೆಯಾಟದ ಹಿರಿಯ ಕಲಾವಿದ ಎಂ.ಆರ್. ರಂಗನಾಥರಾವ್ ಸಹಿತ ಹಲವರು ಜ್ಞಾನ ವಿಸ್ತರಣೆಗೆ ನೆರವಾದರು.

ಕರ್ನಾಟಕದ ನಾನಾ ಭಾಗಗಳಲ್ಲಿ ಪ್ರವಾಸ ಮಾಡಿ ಬೊಂಬೆಯಾಟದ ಹಿನ್ನೆಲೆ, ಕುಟುಂಬಗಳು, ಅಲ್ಲಿನ ಪರಂಪರೆಯ ಜ್ಞಾನ ಪಡೆದುಕೊಂಡರು.

13ನೇ ಪುಟಕ್ಕೆ...



ನನ್ನ ಹೀಗೆ ಕುಣಿಸುವವರ್‍ಯಾರು...

ಕಿಷ್ಕಿಂಧೆ ಸುಂದರ ಪ್ರಕೃತಿ ಮಡಿಲು



ಗಂಗಾವತಿ ತಾಲ್ಲೂಕಿನ ಸಾಣಾಪುರದ ಕೆರೆ ಪ್ರವಾಸಿಗರ ನೆಚ್ಚಿನ ತಾಣ ಚಿತ್ರಗಳು: ಭರತ್ ಕಂದಕೂರ

ಸುರಕ್ಷತೆಗೂ ಬೇಕು ಒತ್ತು

ಹಂಪಿ ಹಾಗೂ ಕಿಷ್ಕಿಂಧೆ ಪ್ರದೇಶಕ್ಕೆ ಬಂದು ತಿರುಗಾಡುವ ಪ್ರವಾಸಿಗರಿಗೆ ಸ್ಥಳೀಯ ಆಡಳಿತ ಸುರಕ್ಷತೆಗೆ ಒತ್ತು ಕೊಡಬೇಕಾಗಿದೆ.

ವಿದೇಶಿಗರು ಸೈಕಲ್ ಬಾಡಿಗೆ ಪಡೆದು ಕೊರಕಲು ಸ್ಥಳಗಳಿಗೆ ತೆರಳುತ್ತಾರೆ. ಎಲ್ಲೆಂದರಲ್ಲಿ ಓಡಾಡುತ್ತಾರೆ. ಬಹಳಷ್ಟು ಸಂದರ್ಭದಲ್ಲಿ ಇಬ್ಬರು, ಮೂವರು ಮಾತ್ರ ಇರುತ್ತಾರೆ. ಕಳೆದ ವರ್ಷ ಸಾಣಾಪುರದಲ್ಲಿ ಇಸ್ರೇಲಿ ಮಹಿಳೆಯೊಬ್ಬರ ಮೇಲೆ ಅತ್ಯಾಚಾರದ ಘಟನೆ ಬಳಿಕ ಪ್ರವಾಸೋದ್ಯಮದ ಬೆಳವಣಿಗೆಗೆ ಪೆಟ್ಟು ಬಿದ್ದಿದೆ. ಘಟನೆ ಬಳಿಕ ಪೊಲೀಸರು ಕಿಷ್ಕಿಂಧೆ ಪ್ರದೇಶದಾದ್ಯಂತ ಚೆಕ್‌ಪೋಸ್ಟ್‌ಗಳನ್ನು ಅಳವಡಿಸಿ, ಬ್ಯಾರಿಕೇಡ್‌ಗಳನ್ನು ಹಾಕಿ ನಿಯಮಿತ ತಪಾಸಣೆ ಮಾಡುತ್ತಿದ್ದಾರೆ. ಈಗಿರುವ ಬಿಗಿಭದ್ರತೆ ಇದೇ ರೀತಿ ಮುಂದುವರಿದರೆ ಪ್ರವಾಸಿಗರಿಗೆ ಸಾಣಾಪುರ ಹಾಗೂ ಕಿಷ್ಕಿಂಧೆ ಪ್ರದೇಶ ಮತ್ತಷ್ಟು ಮೋಹಕವಾಗಿ ಸೆಳೆಯುತ್ತಲೇ ಇರುತ್ತದೆ.

• ಪ್ರಮೋದ ಕುಲಕರ್ಣಿ

ಕಣ್ಣು ಹಾಯಿಸಿದಷ್ಟೂ ದೂರ ಬೆಟ್ಟಗಳ ಸಾಲು, ವಿಶಾಲವಾಗಿ ಹರಿಯುವ ತುಂಗಭದ್ರಾ ನದಿಯ ಸೊಬಗಿನ ನಡುವೆ ಸೆಲ್ಫಿ ಕ್ಲಿಕ್ಕಿಸಿಕೊಳ್ಳುವ ಸಡಗರ, ನದಿಯ ತಟದಲ್ಲಿ ಹಾಡಿಗೆ ನೃತ್ಯ ಮಾಡುವ, ಮೈ ಕೊರೆಯುವ ಚಳಿಯಿದ್ದರೂ ನದಿಯಲ್ಲಿ ಈಜಾಡುವ ಮಕ್ಕಳ ಉತ್ಸಾಹ, ನೀರಿನಲ್ಲಿ ಜಿಗಿಯುತ್ತ ತಾವು ಸಂಭ್ರಮಿಸುತ್ತ ಪ್ರವಾಸಿಗರನ್ನೂ ಖುಷಿ ಪಡಿಸುವ ಸ್ಥಳೀಯರು.

ಇದು ಕಿಷ್ಕಿಂಧೆ ಪ್ರದೇಶವೆಂದು ಖ್ಯಾತಿಯಾದ ಕೊಪ್ಪಳ ಜಿಲ್ಲೆಯ ಗಂಗಾವತಿ ತಾಲ್ಲೂಕಿನ ಆನೆಗೊಂದಿ ಭಾಗದಲ್ಲಿ ಪ್ರಕೃತಿ ಮಡಿಲಲ್ಲಿ ಕಂಡುಬರುವ ಚಟುವಟಿಕೆಗಳು. ಕೊಪ್ಪಳ ಜಿಲ್ಲೆ ಎಂದಾಕ್ಷಣ ಬಿಸಿಲು ಎನ್ನುವ ಪದವೂ ಜೊತೆಯಲ್ಲಿಯೇ ನೆನಪಾಗುತ್ತದೆ. ಆದರೆ ಕಿಷ್ಕಿಂಧೆ ಪ್ರದೇಶದಲ್ಲಿರುವ ಸುಂದರ ಪ್ರಕೃತಿ ಬಿಸಿಲೂರಿನಲ್ಲಿಯೂ ಮಲೆನಾಡಿನ ವಾತಾವರಣದ ನೆನಪು ಮಾಡುತ್ತದೆ.

ತುಂಗಭದ್ರಾ ನದಿಯ ಒಂದು ಭಾಗದಲ್ಲಿ ವಿಜಯನಗರ ಜಿಲ್ಲೆಯ ವಿಶ್ವವಿಖ್ಯಾತ ಹಂಪಿ, ಇನ್ನೊಂದು ಭಾಗದಲ್ಲಿ ಕೊಪ್ಪಳ ಜಿಲ್ಲೆಯ ಕಿಷ್ಕಿಂಧೆ ಪ್ರದೇಶವಿದ್ದು ಈ ಎರಡು ಐತಿಹಾಸಿಕ ಸ್ಥಳಗಳ ನಡುವೆ ನದಿ ಟಿಸಿಲೊಡೆದು ಹರಿಯುತ್ತದೆ. ಈ ಪ್ರದೇಶದಲ್ಲಿರುವ ಸಾಣಾಪುರ ಹಾಗೂ ಸುತ್ತಲಿನ ಪ್ರವಾಸಿ ತಾಣ ಪ್ರಾಕೃತಿಕವಾಗಿ ದೇಶ, ವಿದೇಶಗಳ ಪ್ರವಾಸಿಗರನ್ನು ಸೂಜಿಗಲ್ಲಿನಂತೆ ಸೆಳೆಯುತ್ತದೆ.

ಮುಂಬೈ, ದೆಹಲಿ, ಕೋಲ್ಕತ್ತ, ಪುಣೆ, ಹೈದರಾಬಾದ್ ಹೀಗೆ ದೇಶದ ಎಲ್ಲ ಭಾಗಗಳಿಂದಲೂ ಪ್ರವಾಸಿಗರು ಸಾಣಾಪುರಕ್ಕೆ ಬರುತ್ತಾರೆ. ಹಂಪಿಯಲ್ಲಿ ಐತಿಹಾಸಿಕ ಸ್ಮಾರಕಗಳ ವೀಕ್ಷಣೆ, ಸ್ಥಳಗಳ ಅಧ್ಯಯನಕ್ಕಾಗಿ ಬರುವ ವಿದೇಶಿಗರು ತಿಂಗಳಾನುಗಟ್ಟಲೆ ಕಿಷ್ಕಿಂಧೆ ಪ್ರದೇಶದ ಸಾಣಾಪುರದಲ್ಲಿ ಉಳಿದುಕೊಂಡು ಸುತ್ತಮುತ್ತಲಿನ ಆನೆಗೊಂದಿಯ ಗಗನ್ ಮಹಲ್, ಚಿಂತಾಮಣಿ, ನವವೃಂದಾವನ, ರಾಮಾಯಣದ ಐತಿಹ್ಯ ಹೊಂದಿರುವ ಪಂಪಾಸರೋವರ, ಅಂಜನಾದ್ರಿಬೆಟ್ಟ, ಋಷ್ಯಮುಖ ಪರ್ವತ ಹೀಗೆ ಅನೇಕ ಪ್ರವಾಸಿ ಹಾಗೂ ಧಾರ್ಮಿಕ ತಾಣಗಳನ್ನು ನೋಡುತ್ತಾರೆ. ತುಂಗಭದ್ರಾ ನದಿಗೆ ಅಂಟಿಕೊಂಡೇ ಸಾಣಾಪುರದಲ್ಲಿ ಸಾಕಷ್ಟು ರೆಸಾರ್ಟ್‌ಗಳು ಹಾಗೂ ಹೋಂಸ್ಟೇಗಳು ಇರುವುದರಿಂದ ಪ್ರವಾಸಿಗರು ಕಿಷ್ಕಿಂಧೆ ಪ್ರದೇಶದ ಪ್ರಾಕೃತಿಕ ಜಲಸೌಂದರ್ಯ ಸವಿಯಲು ಅಲ್ಲಿಯೇ ಉಳಿದುಕೊಳ್ಳುವುದು ಹೆಚ್ಚು. ಸಾಣಾಪುರದಲ್ಲಿ ಎತ್ತರದ ಪ್ರದೇಶದಲ್ಲಿರುವ ವಿಶಾಲವಾದ ಕೆರೆ, ನೀರಿನಲ್ಲಿ ಚಿನ್ನಾಟ, ಹರಿಗೋಲು ಹಾಕಿ ಸ್ಥಳೀಯ ಯುವಕರು ಸುತ್ತಾಡಿಸುತ್ತಲೇ ಪ್ರವಾಸಿಗರಿಗೆ ಮನರಂಜನೆ ನೀಡುತ್ತಾರೆ. ಈ ಯಾನ ಪ್ರವಾಸಿಗರಿಗೆ ಮುದ ನೀಡುತ್ತದೆ.

ಇಸ್ರೇಲ್, ಅಮೆರಿಕ, ರಷ್ಯಾ, ಜರ್ಮನಿ ದೇಶಗಳ ಪ್ರವಾಸಿಗರು ಹೆಚ್ಚಾಗಿ ಬರುವ ಈ ತಾಣದಲ್ಲಿ ಸುತ್ತಾಡುವ ಜೊತೆಗೆ ಈ ಪ್ರದೇಶದಲ್ಲಿ ಹೆಚ್ಚಾಗಿ ಬೆಳೆಯುವ ಭತ್ತದ ಕಣಿವೆಗಳಲ್ಲಿ ಓಡಾಡುತ್ತ ಫೋಟೊಗಳನ್ನು ಕ್ಲಿಕ್ಕಿಸಿಕೊಳ್ಳುತ್ತ ಸೌಂದರ್ಯವನ್ನು ಅನುಭವಿಸುತ್ತಾರೆ. ವರ್ಷದ ಹತ್ತು ತಿಂಗಳು ಕೆಲಸ ಮಾಡುವ ಇಸ್ರೇಲಿಗರು ಉಳಿದ ಎರಡು ತಿಂಗಳ ಬಿಡುವಿನ ಸಮಯವನ್ನು ವಿದೇಶಗಳ ಪ್ರವಾಸಕ್ಕಾಗಿ ಮೀಸಲಿಡುತ್ತಾರೆ. ಅದರಲ್ಲಿ ಬಹಳಷ್ಟು ಜನ ಮುಂಬೈ, ದೆಹಲಿ, ಗೋವಾ ಪ್ರವಾಸ ಮುಗಿಸಿಕೊಂಡು ಹಂಪಿ ಹಾಗೂ ಕಿಷ್ಕಿಂಧೆ ಪ್ರದೇಶದಲ್ಲಿ ಸುತ್ತಾಡುತ್ತಾರೆ. ಡಿಸೆಂಬರ್ ಅಂತ್ಯಕ್ಕೆ ಶುರುವಾಗುವ ಅವರ ಪ್ರವಾಸ ಮಾರ್ಚ್ ಮೊದಲ ವಾರದ ತನಕ ಜೋರಾಗಿರುತ್ತದೆ. ಹೀಗಾಗಿ ಭಾರತದ ಪಾಲಿನ ಹೊಸವರ್ಷದ ಆಚರಣೆ ಕಿಷ್ಕಿಂಧೆ ಹಾಗೂ ಹಂಪಿ ಪ್ರದೇಶದಲ್ಲಿ ಜೋರು. ಸಾಣಾಪುರ ಭಾಗದಲ್ಲಿ ಕತ್ತಲಾಗುತ್ತಿದ್ದಂತೆಯೇ ಮದ್ಯದ ಲೋಕ ರಂಗೇರುತ್ತದೆ ಎನ್ನುವುದು ಗುಟ್ಟಾಗಿ ಉಳಿದಿಲ್ಲ.

ತಮ್ಮ ದೇಶದ ನಾಲ್ಕೈದು ಜನರ ಸ್ನೇಹಿತರ ತಂಡ ಕಟ್ಟಿಕೊಂಡು ಬರುವವರ ಗುಂಪು ಒಂದೆಡೆಯಾದರೆ, ಬೇರೆ ಬೇರೆ ದೇಶಗಳಿಂದ ಬಂದು ಇಲ್ಲಿ ಸ್ನೇಹಿತರ ತಂಡ ಕಟ್ಟಿಕೊಳ್ಳುವ ವಿದೇಶಿ ಪ್ರವಾಸಿಗರ ತಂಡ ಇನ್ನೊಂದೆಡೆ. ದಿನಪೂರ್ತಿ ಮೋಹಕ ತಾಣಗಳಲ್ಲಿ ಸುತ್ತಾಡಿ ಪ್ರಕೃತಿ ಸೌಂದರ್ಯ ಅನುಭವಿಸಿ ಸಂಜೆಯಾಗುತ್ತಿದ್ದಂತೆಯೇ ರೆಸಾರ್ಟ್ ಅಥವಾ ಹೋಂ ಸ್ಟೇಗಳಲ್ಲಿ ಸೇರಿಕೊಳ್ಳುತ್ತಾರೆ. ಸೂರ್ಯೋದಯವಾಗುತ್ತಿದ್ದಂತೆಯೇ ಮತ್ತೆ ಅವರ ಅಲೆದಾಟ ಹಾಗೂ ಹೊಸತನದ ಹುಡುಕಾಟ ನಡೆಯುತ್ತಲೇ ಇರುತ್ತದೆ.

ಕಿಷ್ಕಿಂಧೆ ಪ್ರದೇಶ ಪ್ರವಾಸಿಗರ ಪಾಲಿಗೆ ಬಿಸಿಲುನಾಡಿನಲ್ಲಿಯೂ ಮಲೆನಾಡಿನ ಅನುಭವ ಒದಗಿಸಿದರೆ, 'ವಿದೇಶಿಗರ ಮಿನಿ ದೇಶ'ವೇ ಆಗಿರುವ ಸಾಣಾಪುರ ಎನ್ನುವ ಪುಟ್ಟ ಗ್ರಾಮ ದೇಶ ಹಾಗೂ ವಿದೇಶಿ ಪ್ರವಾಸಿಗರಿಂದಾಗಿ ತನ್ನೂರಿನ ಜನರಿಗೆ ಸ್ಥಳೀಯವಾಗಿ ಉದ್ಯೋಗಗಳನ್ನು ದೊರಕಿಸಿಕೊಟ್ಟಿದೆ.

ಸ್ಥಳೀಯ ಜನ ವಿದೇಶಿಗರಿಗೆ ಸೈಕಲ್, ಬೈಕ್‌ಗಳನ್ನು ಬಾಡಿಗೆ ಆಧಾರದಲ್ಲಿ ಒದಗಿಸುತ್ತಾರೆ. ಪ್ರವಾಸಿಗರು ಮೆಚ್ಚಿಕೊಳ್ಳುವ ಬಟ್ಟೆ ತಯಾರಿಕೆ, ಅಲಂಕಾರಿಕ ವಸ್ತುಗಳ ಉತ್ಪಾದನೆ, ಬಾಳೆನಾರು ಬಳಸಿಕೊಂಡು ಕರಕುಶಲ ವಸ್ತುಗಳ ತಯಾರಿಕೆ, ಹೋಟೆಲ್, ಹೋಂಸ್ಟೇ ಉದ್ಯಮಗಳನ್ನು ಆರಂಭಿಸಿದ್ದಾರೆ. ಇವುಗಳ ಭರ್ತಿ ವ್ಯಾಪಾರದಿಂದಲೂ ಸ್ಥಳೀಯರಿಗೆ ಆರ್ಥಿಕವಾಗಿ ಅನುಕೂಲವಾಗಿ ದೈನಂದಿನ ಬದುಕು ನಡೆಯುತ್ತಿದೆ. ಪ್ರವಾಸಿಗರ ಕಣ್ಣುಗಳು ಕೂಡ ಪ್ರಕೃತಿಯ ಮೋಹಕತೆಯಿಂದ ಸಂತಸ ಪಡುತ್ತಿವೆ.



ಕಿಷ್ಕಿಂಧೆ ಪ್ರದೇಶದ ಭತ್ತದ ಬದುವಿನ ನಡುವೆ ವಿದೇಶಿ ಪ್ರವಾಸಿಗರ ಓಡಾಟ



ಬೀದರ್ ನೆಲದಲ್ಲಿ ಸ್ಟ್ರಾಬೆರಿ ಘಮಲು


ಕಟಾವು ಮಾಡಿದ ಸ್ಟ್ರಾಬೆರಿ ಬುಟ್ಟಿಗೆ ತುಂಬುತ್ತಿರುವ ಕೂಲಿ ಕಾರ್ಮಿಕರು

ಮಹಾರಾಷ್ಟ್ರದ ಮಹಾಬಲೇಶ್ವರದಲ್ಲಿ ಬೆಳೆಯುವ ಸ್ಟ್ರಾಬೆರಿಯನ್ನು ನಮ್ಮೂರಿನಲ್ಲಿಯೂ ಏಕೆ ಬೆಳೆಯಲು ಸಾಧ್ಯವಿಲ್ಲ ಎಂದು ಪ್ರಯೋಗಕ್ಕೆ ಕೈ ಹಾಕಿದವರು ಬೀದರ್‌ನ ರೈತ ವೈಜಿನಾಥ ನಿಡೋದಾ. ಎರಡು ಎಕರೆ ಪ್ರದೇಶದಲ್ಲಿ ಅವರು ಸ್ಟ್ರಾಬೆರಿ ಸಸಿಗಳನ್ನು ನೆಟ್ಟಿದ್ದು ವಾರ್ಷಿಕ ₹20 ಲಕ್ಷಕ್ಕೂ ಅಧಿಕ ಆದಾಯದ ನಿರೀಕ್ಷೆಯಲ್ಲಿದ್ದಾರೆ...

ವಿಡಿಯೊ ನೋಡಲು ಕೋಡ್ ಸ್ಕ್ಯಾನ್ ಮಾಡಿ
ಪ್ರಜಾವಾಣಿ ನೋಡಿಯೊ

• ಶಶಿಕಾಂತ ಎಸ್. ಶೆಂಬೆಳ್ಳಿ

ಸೋಯಾ ಅವರೆ, ತೊಗರಿ, ಉದ್ದು, ಹೆಸರು, ಕಬ್ಬು ಸಾಂಪ್ರದಾಯಿಕ ಬೆಳೆಗಳನ್ನಷ್ಟೇ ಗಡಿ ಜಿಲ್ಲೆ ಬೀದರ್‌ನಲ್ಲಿ ಹೆಚ್ಚಾಗಿ ಬೆಳೆಸುತ್ತಾರೆ. ಆದರೆ ಇಲ್ಲಿ ರೈತರೊಬ್ಬರು ಸ್ಟ್ರಾಬೆರಿ ಬೆಳೆದು, ಮೊದಲ ಪ್ರಯೋಗದಲ್ಲೇ ಯಶಸ್ಸು ಕಂಡಿದ್ದಾರೆ.

ಬೀದರ್ ತಾಲ್ಲೂಕಿನ ಕಮಠಾಣದ ರೈತ ವೈಜಿನಾಥ ನಿಡೋದಾ ಅವರು ಸ್ಟ್ರಾಬೆರಿ ಬೆಳೆದು, ಉತ್ತಮ ಫಸಲು ತೆಗೆದು ಸೈ ಎನಿಸಿಕೊಂಡಿದ್ದಾರೆ. ಇಡೀ ದೇಶದಲ್ಲೇ ಮಹಾರಾಷ್ಟ್ರದ ಮಹಾಬಲೇಶ್ವರ ಹಾಗೂ ಸುತ್ತಮುತ್ತಲಿನ ಭಾಗಗಳಲ್ಲಿ ಸ್ಟ್ರಾಬೆರಿ ಹೆಚ್ಚಾಗಿ ಬೆಳೆಯಲಾಗುತ್ತದೆ. ಹೀಗಾಗಿಯೇ ಮಹಾಬಲೇಶ್ವರಕ್ಕೆ 'ಮದರ್ ಆಫ್ ಸ್ಟ್ರಾಬೆರಿ' ಎಂದು ಕರೆಯಲಾಗುತ್ತದೆ. ಅಲ್ಲಿ ವರ್ಷವಿಡೀ ತಂಪು ವಾತಾವರಣ ಇರುತ್ತದೆ. ಜೊತೆಗೆ ಅಲ್ಲಿನ ಕೆಂಪು ನೆಲ ಇದಕ್ಕೆ ಹೇಳಿ ಮಾಡಿಸಿದಂತಿದೆ.

ಅಂತಹುದೇ ಕೆಂಪು ಮಣ್ಣಿನ ನೆಲ ಬೀದರ್. ಅಕ್ಟೋಬರ್‌ನಿಂದ ಫೆಬ್ರುವರಿ ತನಕ ರಾಜ್ಯದಲ್ಲೆ ಹೆಚ್ಚು ತಂಪು ವಾತಾವರಣ ಇರುತ್ತದೆ. ಸ್ಟ್ರಾಬೆರಿ ಬೆಳೆಯಲು ಈ ಕಾಲ ಸೂಕ್ತ. ತಾನೇಕೆ ಪ್ರಯೋಗ ಮಾಡಬಾರದೆಂದು ಭಾವಿಸಿದ ವೈಜಿನಾಥ ಅವರು, ಮಹಾಬಲೇಶ್ವರದಿಂದಲೇ ಸಸಿಗಳನ್ನು ತರಿಸಿ ಹೋದ ವರ್ಷ ತಮ್ಮ ಅರ್ಧ ಎಕರೆ ಜಮೀನಿನಲ್ಲಿ ಸ್ಟ್ರಾಬೆರಿ ಬೆಳೆದರು. ಪ್ರಯೋಗಕ್ಕಾಗಿ ₹3 ಲಕ್ಷ ವೆಚ್ಚ ಮಾಡಿದ ಅವರಿಗೆ ₹6 ಲಕ್ಷ ಆದಾಯ ತಂದುಕೊಟ್ಟಿತು.

'ಇನ್ನೂ ಹೆಚ್ಚಿನ ಆದಾಯ ಗಳಿಸಬಹುದಿತ್ತು. ಆದರೆ, ಮೊದಲ ಸಲ ಪ್ರಾಯೋಗಿಕವಾಗಿ ಹಾಕಿದ್ದರಿಂದ ಹೆಚ್ಚಿನ ತಿಳಿವಳಿಕೆ ಇರಲಿಲ್ಲ. ಅದಕ್ಕೆ ಎಷ್ಟು ಖರ್ಚು ಮಾಡುತ್ತೇವೋ ಅದರ ದುಪ್ಪಟ್ಟು ಹಣ ಗಳಿಸಬಹುದು. ಮಾರುಕಟ್ಟೆಯಲ್ಲೂ ಉತ್ತಮ ಬೇಡಿಕೆ ಇದೆ. ಆದಕಾರಣ ಈ ವರ್ಷ ಎರಡು ಎಕರೆಯಲ್ಲಿ ಬೆಳೆದಿದ್ದೇನೆ. ಈ ಸಲವೂ ಉತ್ತಮ ಬೆಲೆ ಸಿಗುತ್ತಿದೆ' ಎಂದು ವೈಜಿನಾಥ ನಿಡೋದಾ ಖುಷಿ ಹಂಚಿಕೊಂಡರು.

'ಈ ವರ್ಷ ಎರಡು ಎಕರೆ ಪ್ರದೇಶದಲ್ಲಿ ಒಟ್ಟು 30 ಸಾವಿರ ಸಸಿಗಳನ್ನು ನೆಟ್ಟಿದ್ದೇನೆ. 'ವಿಂಟರ್ ಡೌನ್' ತಳಿಯ 23 ಸಾವಿರ, 'ಆರ್.ಎನ್' ತಳಿಯ 7 ಸಾವಿರ ಸಸಿಗಳು ಸೇರಿವೆ. ಮಲ್ಚಿಂಗ್, ಕಾರ್ಮಿಕರ ಕೂಲಿ, ಸಾವಯವ ಗೊಬ್ಬರ, ಸ್ಪ್ರೇ ಸೇರಿದಂತೆ ಒಟ್ಟು ₹6 ಲಕ್ಷ ಖರ್ಚಾಗಿದೆ. ಇದು 40ರಿಂದ 50 ದಿನಗಳ ಫಸಲಾಗಿದೆ. ಅಕ್ಟೋಬರ್ ಕೊನೆಯಲ್ಲಿ ಸಸಿಗಳನ್ನು ನೆಡಲಾಗಿತ್ತು. ಈಗ ಫಸಲು ಬರುತ್ತಿದ್ದು, ಕಟಾವು ಮಾಡಲಾಗುತ್ತಿದೆ. ಹಿಂದಿನ ವರ್ಷ ಸಸಿಗಳ ಸಾವಿನ ಪ್ರಮಾಣ ಶೇ 30ರಷ್ಟಿತ್ತು. ಈಗ ವೈಜ್ಞಾನಿಕವಾಗಿ ಬೆಳೆಸಿದ್ದರಿಂದ ಅದು ಶೇ 5ಕ್ಕೆ ತಗ್ಗಿದೆ. ಹಣ್ಣು ಕೂಡ ಉತ್ತಮ ಗುಣಮಟ್ಟದಿಂದ ಕೂಡಿದೆ. ಒಟ್ಟು ₹20 ಲಕ್ಷಕ್ಕೂ ಹೆಚ್ಚು ಆದಾಯ ಬರುವ ನಿರೀಕ್ಷೆ ಇದೆ' ಎಂದು ಹೇಳಿದರು.

ಇದಕ್ಕಿಲ್ಲ ಬೆಳೆ ವಿಮೆ

ಇವರ ಹೊಲದ ಸುತ್ತಲೂ ಅರಣ್ಯ ಇರುವುದರಿಂದ ಉಷ್ಣಾಂಶ 2ರಿಂದ 3 ಡಿಗ್ರಿ ಸೆಲ್ಸಿಯಸ್ ಕಡಿಮೆ ಇರುತ್ತದೆ. ಇದು ರಿಸ್ಕ್ ಬೆಳೆಯಾಗಿದೆ. ಆದಕಾರಣ ಸ್ಟ್ರಾಬೆರಿ ಬೆಳೆಸಬೇಕಾದವರು ರಿಸ್ಕ್ ತೆಗೆದುಕೊಳ್ಳಬೇಕಾಗುತ್ತದೆ. ಯಾರು ಆರ್ಥಿಕವಾಗಿ ಸದೃಢರಾಗಿದ್ದಾರೋ ಸಮಗ್ರ ಕೃಷಿ ಮಾಡುವವರು ಅಂತಹವರು ಅರ್ಧ ಎಕರೆಯಿಂದ ಒಂದು ಎಕರೆಯಲ್ಲಿ ಬೆಳೆಯಬಹುದು. ಈ ಬೆಳೆ, ಬೆಳೆ ವಿಮೆ ವ್ಯಾಪ್ತಿಗೆ ಬರುವುದಿಲ್ಲ ಎನ್ನುತ್ತಾರೆ ಬೀದರ್ ತೋಟಗಾರಿಕೆ ಕಾಲೇಜು ಡೀನ್ ಎಸ್.ವಿ. ಪಾಟೀಲ್.



ಸ್ಟ್ರಾಬೆರಿಗೆ ಉತ್ತಮ ಮಾರುಕಟ್ಟೆ ಇದೆ. ಹೈದರಾಬಾದ್, ಕಲಬುರಗಿ ಸೇರಿದಂತೆ ಇತರೆಡೆಗಳಿಂದಲೂ ಬೇಡಿಕೆ ಬಂದಿದೆ. ಆದರೆ, ಸ್ಥಳೀಯ ಮಾರುಕಟ್ಟೆಯಿಂದ ಸಾಕಷ್ಟು ಬೇಡಿಕೆ ಬಂದಿರುವುದರಿಂದ ಬೇರೆಡೆ ಕಡಿಮೆ ಪ್ರಮಾಣದಲ್ಲಿ ಕಳಿಸಿಕೊಡುತ್ತಿರುವೆ. ಪ್ರತಿ ಕೆಜಿ ಸ್ಟ್ರಾಬೆರಿ ₹200ಕ್ಕೆ ಮಾರಾಟ ಮಾಡುತ್ತಿರುವೆ. ಮಾರುಕಟ್ಟೆಯಲ್ಲಿ 200 ಗ್ರಾಂ ಸ್ಟ್ರಾಬೆರಿ ₹60ರಿಂದ ₹80ಕ್ಕೆ ಮಾರಾಟ ಮಾಡುತ್ತಾರೆ. ಸ್ಟ್ರಾಬೆರಿ ಕಟಾವು ಮಾಡಿದ ಎರಡ್ಮೂರು ದಿನಗಳೊಳಗೆ ಮಾರಾಟ ಮಾಡಬೇಕು. ಇಲ್ಲವಾದರೆ ಹಾಳಾಗುತ್ತದೆ. ಹಾಗಾಗಿ ವ್ಯಾಪಾರಿಗಳು ಸ್ವಲ್ಪ ಹೆಚ್ಚಿನ ದರಕ್ಕೆ ಮಾರಾಟ ಮಾಡುತ್ತಾರೆ ಎನ್ನುತ್ತಾರೆ ವೈಜಿನಾಥ.

ಹೊಲದಲ್ಲೇ ವೆದರ್ ರಿಪೋರ್ಟ್

ಸ್ಟ್ರಾಬೆರಿ ಬಹಳ ಸೂಕ್ಷ್ಮವಾದ ಬೆಳೆ. ವಾತಾವರಣದಲ್ಲಿ ಸ್ವಲ್ಪ ಏರುಪೇರಾದರೂ ಇಡೀ ಬೆಳೆ ಹಾಳಾಗುವ ಸಾಧ್ಯತೆ ಹೆಚ್ಚಿರುತ್ತದೆ. ನೀರು ಮತ್ತು ಗೊಬ್ಬರ ಸಮಪ್ರಮಾಣದಲ್ಲಿ ನೀಡಬೇಕಾಗುತ್ತದೆ. ಆದಕಾರಣ ತಮ್ಮ ತೋಟದಲ್ಲಿ 'ವೆದರ್ ರಿಪೋರ್ಟ್ ಮಶೀನ್' ಕೂರಿಸಿದ್ದಾರೆ. ₹40 ಸಾವಿರ ಮೌಲ್ಯದ ಸಾಧನವನ್ನು ತೋಟಗಾರಿಕೆ ಇಲಾಖೆಯು ₹20 ಸಾವಿರ ಸಬ್ಸಿಡಿಯಲ್ಲಿ ನೀಡಿದೆ. ಈ ಸಾಧನವು ಮಣ್ಣಿನ ಗುಣ, ಬೆಳೆಗಳಿಗೆ ಎಷ್ಟು ಪ್ರಮಾಣದಲ್ಲಿ ನೀರು ಹರಿಸಬೇಕು. ಎಷ್ಟು ಗೊಬ್ಬರ ಹಾಕಬೇಕು ಎಂಬ ಮಾಹಿತಿ ನೀಡುತ್ತದೆ. ನಿಖರವಾಗಿ ಮಳೆಯ ಮುನ್ಸೂಚನೆಯೂ ನೀಡುತ್ತದೆ.

ಜಿಲ್ಲಾ ಪಂಚಾಯಿತಿಯಲ್ಲಿ ಸಹಾಯಕ ಸಾಂಖ್ಯಿಕ ಅಧಿಕಾರಿಯಾಗಿ ಸೇವೆ ಸಲ್ಲಿಸಿ ನಿವೃತ್ತಿಯಾಗಿರುವ ವೈಜಿನಾಥ ಅವರು ಕಳೆದ 23 ವರ್ಷಗಳಿಂದ ಕೃಷಿ ಕಾಯಕ ಮಾಡುತ್ತಾರೆ. ಆದರೆ, ಕಳೆದ ಎರಡು ವರ್ಷಗಳ ಹಿಂದೆ ಸೇವೆಯಿಂದ ನಿವೃತ್ತರಾದ ನಂತರ ಸಂಪೂರ್ಣ ಸಮಯ ಇದಕ್ಕೆ ವಿನಿಯೋಗಿಸುತ್ತಿದ್ದಾರೆ. ಇವರಿಗೆ ಇವರ ಪತ್ನಿ, ಮಕ್ಕಳು ಸಾಥ್ ನೀಡುತ್ತಿದ್ದಾರೆ. ಬೆಳೆಗಳ ಮೇಲೆ ನಿಗಾ ಇರಿಸಲು ತೋಟದಲ್ಲಿ ಸಿಸಿಟಿವಿ ಕ್ಯಾಮೆರಾ ಅಳವಡಿಸಿದ್ದಾರೆ.

ಇವರಿಗೆ ಸೇರಿದ ಒಟ್ಟು ಆರು ಎಕರೆ ಜಮೀನು ಇದೆ. ಸಮೀಪದ ಆರು ಎಕರೆ ಜಮೀನು ಲೀಸ್ ಮೇಲೆ ಪಡೆದಿದ್ದಾರೆ. ಎರಡು ಎಕರೆ ಸ್ಟ್ರಾಬೆರಿ, ಒಂದು ಎಕರೆ ನುಗ್ಗೆ, ಮೂರು ಎಕರೆ ಟೊಮೆಟೊ, ಒಂದೂವರೆ ಎಕರೆ ಮಾವು, ಒಂದು ಎಕರೆ ಕಲ್ಲಂಗಡಿ, ಒಂದು ಎಕರೆ ಪಪ್ಪಾಯಿ ಬೆಳೆಸಿ ಸಮಗ್ರ ಕೃಷಿ ಮಾಡುತ್ತಿದ್ದಾರೆ. ಎಲ್ಲವೂ ಸಾವಯವ ಪದ್ಧತಿಯಲ್ಲಿ ಬೆಳೆಸುತ್ತಿದ್ದಾರೆ. ಈ ಸಲ ಜಾಸ್ತಿ ಮಳೆಯಾಗಿ ಟೊಮೆಟೊ ಬೆಲೆ ಗಗನಕ್ಕೇರಿದ್ದು, ವೈಜಿನಾಥ ಅವರಿಗೆ ದೊಡ್ಡ ಆದಾಯ ತಂದುಕೊಟ್ಟಿದೆ. ಇನ್ನೊಂದು ಪ್ರಮುಖ ವಾಣಿಜ್ಯ ಬೆಳೆ ಶುಂಠಿ ಕೂಡ ಬೆಳೆಸುತ್ತಾರೆ. ಮುಂದಿನ ದಿನಗಳಲ್ಲಿ ನಾಟಿ ಕೋಳಿ ಸಾಕಲು ಯೋಜಿಸಿದ್ದಾರೆ.

ಇವರ ತೋಟಗಾರಿಕೆ ಬೆಳೆಗಳ ಪ್ರೀತಿ ನೋಡಿ, ಬಾಗಲಕೋಟೆಯ ತೋಟಗಾರಿಕೆ ವಿಶ್ವವಿದ್ಯಾಲಯವು ಶ್ರೇಷ್ಠ ತೋಟಗಾರಿಕೆ ರೈತ ಪ್ರಶಸ್ತಿಗೆ ಆಯ್ಕೆ ಮಾಡಿದೆ. ಹಲವು ಸಂಘ ಸಂಸ್ಥೆಗಳು ಗೌರವಿಸಿವೆ.

ತೋಟಗಾರಿಕೆ ಇಲಾಖೆಯ ಅಧಿಕಾರಿಗಳು ಹೇಳುವ ಪ್ರಕಾರ, ಇಡೀ ಉತ್ತರ ಕರ್ನಾಟಕದಲ್ಲೇ ಮೊದಲ ಬಾರಿಗೆ ಸ್ಟ್ರಾಬೆರಿ ಬೆಳೆದು ಯಶಸ್ಸು ಕಂಡವರು ವೈಜಿನಾಥ ನಿಡೋದಾ ಅವರು. ಇದು ಸೂಕ್ಷ್ಮವಾದ ಬೆಳೆ ಆಗಿರುವುದರಿಂದ ಹೆಚ್ಚು ರಿಸ್ಕ್ ಇರುತ್ತದೆ. ಬೆಳೆಯುವವರು ಹತ್ತು ಸಲ ಯೋಚಿಸುತ್ತಾರೆ. ಆದರೆ, ವೈಜಿನಾಥ ಅವರು ಧೈರ್ಯ ತೋರಿ, ಬೆಳೆದು ಯಶಸ್ಸು ಕಂಡಿದ್ದಾರೆ. ಈಗ ಇವರ ತೋಟ ಒಂದು ಪ್ರಯೋಗ ಶಾಲೆಯಿದ್ದಂತೆ. ಇವರು ಅನೇಕ ರೈತರಿಗೆ ಸ್ಫೂರ್ತಿಯಾಗಿದ್ದಾರೆ. ಇವರ ತೋಟವನ್ನು ಆಯ್ಕೆ ಮಾಡಿಕೊಂಡು ಅನೇಕ ತರಬೇತಿ ಶಿಬಿರ, ಕಾರ್ಯಾಗಾರಗಳನ್ನು ನಡೆಸಲಾಗುತ್ತಿದೆ. ಇತರೆ ರೈತರು ಕೂಡ ಸಾಂಪ್ರದಾಯಿಕ ಬೆಳೆ ಬಿಟ್ಟು, ತೋಟಗಾರಿಕೆ ಬೆಳೆಗಳತ್ತ ಮುಖ ಮಾಡಿ, ಆದಾಯ ಗಳಿಸಲೆನ್ನುವುದು ಇದರ ಉದ್ದೇಶ.


ಸ್ಟ್ರಾಬೆರಿ ತೋಟದಲ್ಲಿ ಪತ್ನಿ ಸತ್ಯಶೀಲ ಅವರೊಂದಿಗೆ ಕಾಯಕ ನಿರತ ವೈಜಿನಾಥ ನಿಡೋದಾ

ಚಿತ್ರಗಳು: ಲೋಕೇಶ ವಿ. ಬಿರಾದಾರ


ವಿಜ್ಞಾನ ಕೇಂದ್ರದಲ್ಲಿ ವಿಜ್ಞಾನ ಮಾದರಿಗಳನ್ನು ವೀಕ್ಷಿಸುತ್ತಿರುವ ವಿದ್ಯಾರ್ಥಿಗಳು

ವೈಚಾರಿಕತೆ ಪಸರಿಸುವ ವಿಜ್ಞಾನ ಬೆಟ್ಟ!

• ಈರಣ್ಣ ಬೆಂಗಾಲಿ

ರಾಯಚೂರು ನಗರದ ಮಂತ್ರಾಲಯ ರಸ್ತೆಯ ನವೋದಯ ಆಸ್ಪತ್ರೆ ಪಕ್ಕದ ದಾರಿಯನ್ನು ಹಿಡಿದು ಹೋದರೆ ಬೆಟ್ಟದ ಮೇಲೆ ವಿಜ್ಞಾನ ಕೇಂದ್ರ ಸಿಗುತ್ತದೆ. ವಿಜಯಪುರದ ಜ್ಞಾನಯೋಗಾಶ್ರಮದ ಸಿದ್ದೇಶ್ವರ ಸ್ವಾಮಿ ಈ ವಿಜ್ಞಾನ ಕೇಂದ್ರಕ್ಕೆ ಒಮ್ಮೆ ಭೇಟಿ ನೀಡಿದ್ದರು. ಆ ಸಂದರ್ಭದಲ್ಲಿ ವಿಜ್ಞಾನ ಕೇಂದ್ರವಿರುವ ಎತ್ತರ ಪ್ರದೇಶವನ್ನು ಗಮನಿಸಿ ಇದಕ್ಕೆ 'ವಿಜ್ಞಾನ ಬೆಟ್ಟ' ಎಂದು ನಾಮಕರಣ ಮಾಡಿದರು. ಅಲ್ಲದೆ ಇಲ್ಲಿನ ಆವರಣಕ್ಕೆ 'ರಾಷ್ಟ್ರಕವಿ ಕುವೆಂಪು ವನ' ಎಂದೂ ಕರೆಯಲಾಗುತ್ತದೆ.

1999ರಲ್ಲಿ ಈ ಹೊಸ ಕಟ್ಟಡವು ವೈಜ್ಞಾನಿಕ ಮನೋಭಾವವನ್ನು ಜನರಲ್ಲಿ ಬಿತ್ತಲು ಶ್ರಮಿಸಿದ ಪ್ರೊ. ಎಚ್. ನರಸಿಂಹಯ್ಯ ಅವರಿಂದ ಉದ್ಘಾಟನೆಗೊಂಡಿತು. ಹತ್ತು ಎಕರೆಯ ವಿಶಾಲವಾದ ಸ್ಥಳದಲ್ಲಿರುವ ವಿಜ್ಞಾನ ಕೇಂದ್ರದಲ್ಲಿ ಫನ್ ಸೈನ್ಸ್ ಗ್ಯಾಲರಿ, ಅನಾಟಮಿ ಗ್ಯಾಲರಿ, ಬೇಸಿಕ್ ಫಿಸಿಕ್ಸ್ ಲ್ಯಾಬ್, ಕಂಪ್ಯೂಟರ್ ಕೊಠಡಿ, ವಿಜ್ಞಾನ ಗ್ರಂಥಾಲಯ, ಸಿ.ವಿ.ರಾಮನ್ ಸಭಾಂಗಣ, ಬಯಲು ಮಂಟಪ, ಗಣಿತ ಪ್ರಯೋಗಾಲಯ ಕಟ್ಟಡ, ಟೆರೆಸ್ ಗಾರ್ಡನ್ ಒಳಗೊಂಡು ವಿಜ್ಞಾನ ಆಸಕ್ತರನ್ನು, ವಿದ್ಯಾರ್ಥಿಗಳನ್ನು, ಅಲ್ಲದೆ ಸಾರ್ವಜನಿಕರನ್ನೂ ತನ್ನತ್ತ ಸೆಳೆಯುತ್ತಿದೆ.

ವಿದ್ಯಾರ್ಥಿಗಳಿಗೆ, ಜನಸಾಮಾನ್ಯರಿಗೆ ವಿಜ್ಞಾನ ಮತ್ತು ತಂತ್ರಜ್ಞಾನವನ್ನು ಪರಿಚಯಿಸಲು ಮತ್ತು ನೂತನ ಆವಿಷ್ಕಾರಗಳನ್ನು ತಲುಪಿಸಲು, ಮುಖ್ಯವಾಗಿ ವೈಚಾರಿಕ ಮನೋಭಾವ ಬೆಳೆಸಿ, ಮೌಢ್ಯತೆಯನ್ನು ತೊಲಗಿಸಲು ವಿಜ್ಞಾನ ಕೇಂದ್ರದ ಪಾತ್ರ ಮಹತ್ವವಾಗಿದೆ.

ರಾಯಚೂರು ವಿಜ್ಞಾನ ಕೇಂದ್ರವು ರಾಜ್ಯದ ಮೊದಲನೇ ವಿಜ್ಞಾನ ಕೇಂದ್ರವಾಗಿದೆ. 1997ರಲ್ಲಿ ಸ್ಥಾಪನೆಯಾದ ಈ ಕೇಂದ್ರ ಆರಂಭದಲ್ಲಿ ರಾಯಚೂರಿನ ವಿದ್ಯಾಭಾರತಿ ಪ್ರೌಢಶಾಲೆಯ ಪುಟ್ಟ ಕೊಠಡಿಯಲ್ಲಿ ಹೈದರಾಬಾದ್ ಕರ್ನಾಟಕ ಪ್ರದೇಶ ಅಭಿವೃದ್ಧಿ ಮಂಡಳಿಯ ಅಧ್ಯಕ್ಷ ಕೆ.ಶರಣಪ್ಪ ಅವರಿಂದ ಉದ್ಘಾಟನೆಯಾಯಿತು. ಈ ಕೇಂದ್ರ ಸ್ಥಾಪಿಸಲು ಅಂದಿನ ಜಿಲ್ಲಾಧಿಕಾರಿ ಅಶೋಕ ದಳವಾಯಿ ಮುತುವರ್ಜಿ ವಹಿಸಿದ್ದರು.

2015ರಲ್ಲಿ ಮೇಲ್ದರ್ಜೆಗೆ ಏರಿದ ಈ ವಿಜ್ಞಾನ ಕೇಂದ್ರವು ಉಪ ಪ್ರಾದೇಶಿಕ ವಿಜ್ಞಾನ ಕೇಂದ್ರವಾಗಿ ಪರಿವರ್ತನೆಯಾಗಿದೆ. ಪ್ರಮುಖವಾಗಿ ಕೇಂದ್ರ ಸರ್ಕಾರದ ಸ್ಪಾಕ್ಸ್ ಯೋಜನೆಯಡಿಯಲ್ಲಿ 22.25 ಕೋಟಿ ರೂಪಾಯಿ ಅನುದಾನದಲ್ಲಿ ಸುಸಜ್ಜಿತ ಕೇಂದ್ರದ ಸ್ಥಾಪನೆ ನಿರ್ಮಾಣದ ಹಂತದಲ್ಲಿದೆ.

ಈ ಕೇಂದ್ರವು ವಿದ್ಯಾರ್ಥಿ ವಿಜ್ಞಾನ ನೇರ ಸಂವಾದ ಕಾರ್ಯಕ್ರಮಗಳನ್ನು ಹಮ್ಮಿಕೊಂಡಿದೆ. ವಿಜ್ಞಾನ ಮತ್ತು ತಂತ್ರಜ್ಞಾನದ ಕುರಿತು ಸ್ಪರ್ಧೆಗಳನ್ನು, ವಿಶೇಷ ಉಪನ್ಯಾಸ, ಕಮ್ಮಟಗಳನ್ನು, ಕಾರ್ಯಕ್ರಮಗಳನ್ನು ಏರ್ಪಡಿಸಿದೆ. ಆಕಾಶ ವೀಕ್ಷಣೆಯ ಕಾರ್ಯಕ್ರಮ, ಖಗೋಳ ಶಾಸ್ತ್ರದ ರಸಪ್ರಶ್ನೆ ಕಾರ್ಯಕ್ರಮ ಆಯೋಜಿಸಿದೆ.

ವಿದ್ಯಾರ್ಥಿಗಳಿಗಾಗಿ ವಿಜ್ಞಾನದ ಕಾರ್ಯಾಗಾರಗಳನ್ನು ಸಂಘಟಿಸಿದೆ. ಅಲ್ಲದೆ ರಾಷ್ಟ್ರೀಯ ಬಾಹ್ಯಾಕಾಶ ದಿನ, ಶೂನ್ಯ ನೆರಳು ದಿನ, ಸಿ.ವಿ.ರಾಮನ್ ಜನ್ಮದಿನಾಚರಣೆ ಒಳಗೊಂಡಂತೆ ರಾಷ್ಟ್ರಮಟ್ಟದ, ಅಂತರರಾಷ್ಟ್ರೀಯ ಮಟ್ಟದಲ್ಲಿನ ವಿಜ್ಞಾನಕ್ಕೆ ಸಂಬಂಧಿಸಿದ ದಿನಗಳನ್ನು ಆಚರಿಸುತ್ತದೆ. ವಿಜ್ಞಾನದ ಕಾರ್ಯಕ್ರಮಗಳನ್ನು ಶಾಲಾ–ಕಾಲೇಜು ವಿದ್ಯಾರ್ಥಿಗಳಿಗಾಗಿ ಈ ಕೇಂದ್ರವು ನಿರಂತರವಾಗಿ ಮಾಡುತ್ತಾ ಬಂದಿದೆ.

ವಿದ್ಯಾರ್ಥಿ ಕೇಂದ್ರಿತ ವಿಜ್ಞಾನ ಚಟುವಟಿಕೆಗಳು

ನಿರಂತರವಾಗಿ ಜರುಗುತ್ತವೆ. ಶಿಕ್ಷಕರಿಗೆ ವಿವಿಧ ತರಬೇತಿಗಳು ಆಗಾಗ್ಗೆ ಹಮ್ಮಿಕೊಂಡು ತನ್ಮೂಲಕ ವೈಜ್ಞಾನಿಕ ವಿಚಾರಗಳನ್ನು, ವಿಷಯಗಳನ್ನು ಮಕ್ಕಳಿಗೆ, ಸಮುದಾಯಕ್ಕೆ ತಲುಪಿಸುತ್ತಿದ್ದಾರೆ. ಸೂರ್ಯಗ್ರಹಣ, ಚಂದ್ರಗ್ರಹಣ, ಪ್ರಕೃತಿಯಲ್ಲಿ ಸಂಭವಿಸುವ ಸಹಜ ಪ್ರಕ್ರಿಯೆಗಳ ಘಟಾನಾವಳಿಗಳಂತಹ ಸಂದರ್ಭದಲ್ಲಿ ಅವುಗಳ ಕುರಿತಾದ ಮೂಢನಂಬಿಕೆಗಳನ್ನು ಹೋಗಲಾಡಿಸಲು, ಸತ್ಯ ಸಂದೇಶ ಹರಡಲು ಸಾರ್ವಜನಿಕ ಸ್ಥಳಗಳಲ್ಲಿ ಕಾರ್ಯಕ್ರಮಗಳನ್ನು ಮಾಡುವುದರ ಮೂಲಕ ಜನ ಸಾಮಾನ್ಯರಿಗೂ ವಿಜ್ಞಾನ ಕೇಂದ್ರ ಹತ್ತಿರವಾಗಿದೆ. ವರ್ಷಕ್ಕೆ ಆರು ಸಾವಿರದಿಂದ ಏಳು ಸಾವಿರ ವಿದ್ಯಾರ್ಥಿಗಳು ಇಲ್ಲಿಗೆ ಭೇಟಿ ನೀಡುತ್ತಾರೆ. ಆಸಕ್ತರು ಕೂಡ ಇಲ್ಲಿಗೆ ಬರುತ್ತಾರೆ.

ರಾಯಚೂರು ವಿಜ್ಞಾನ ಕೇಂದ್ರದ ಸ್ಥಾಪನೆಗೆ ಇಲ್ಲಿನ ಜನರಲ್ಲಿ ವೈಜ್ಞಾನಿಕ ಮನೋಭಾವ ಪಸರಿಸುವ ನಿಟ್ಟಿನಲ್ಲಿ, ವಿದ್ಯಾರ್ಥಿಗಳಿಗೆ ವಿಜ್ಞಾನದ ಮಹತ್ವವನ್ನು ಮನವರಿಕೆ ಮಾಡಲು ಪ್ರೊ.ಸಿ.ಡಿ. ಪಾಟೀಲ ಅವರ ಪರಿಶ್ರಮವನ್ನು ಸ್ಮರಿಸಲೇಬೇಕು. ಅವರು ಸೈನ್ಸ್ ಎಜುಕೇಷನ್ ಟ್ರಸ್ಟ್ ಹುಟ್ಟು ಹಾಕಿ ಅದರ ಕಾರ್ಯದರ್ಶಿಯಾಗಿ ಅಪಾರವಾಗಿ ಸೇವೆ ಸಲ್ಲಿಸಿದ್ದಾರೆ. ಈ ಮೂಲಕ ರಾಯಚೂರು ವಿಜ್ಞಾನ ಕೇಂದ್ರದ ಸ್ಥಾಪನೆಗೆ ಕಾರಣರಾಗಿದ್ದಾರೆ. ಶಾಲಾ, ಕಾಲೇಜಿನ ವಿದ್ಯಾರ್ಥಿಗಳು ಒಳಗೊಂಡಂತೆ ಜನಸಾಮಾನ್ಯರೂ ಸಹ ಈ ವಿಜ್ಞಾನ ಕೇಂದ್ರಕ್ಕೆ ಭೇಟಿ ನೀಡಬೇಕು. ಇದರಿಂದ ವೈಜ್ಞಾನಿಕ ಸಂಗತಿಗಳ ಅರಿವು ಮೂಡುತ್ತದೆ. ಮತ್ತು ವಿಜ್ಞಾನದ ನೆರವಿನಿಂದ ಜ್ಞಾನದ ಪರಿಧಿಯನ್ನು ವಿಸ್ತರಿಸಿಕೊಳ್ಳಲು ಸಾಧ್ಯವಾಗುತ್ತದೆ.


ವಿಜ್ಞಾನ ಮಾದರಿಯೊಂದನ್ನು ಕುತೂಹಲದಿಂದ ವೀಕ್ಷಿಸುತ್ತಿರುವ ಮಕ್ಕಳು

ಮುನ್ನೋಟ 04-01-2026 ರಿಂದ 10-01-2026

ಎಂ.ಎನ್. ಲಕ್ಷ್ಮೀನರಸಿಂಹಸ್ವಾಮಿ, ಮಾದಾಪುರ
ಜ್ಯೋತಿಷ್ಯ ವಿಶಾರದ, ಸಂಪರ್ಕಕ್ಕೆ: 8197304680

ಈ ಭವಿಷ್ಯ ರಾಶಿಯನ್ನು ಅವಲಂಬಿಸಿದೆ

ಮೇಷ — ಅಶ್ವಿನಿ, ಭರಣಿ, ಕೃತ್ತಿಕಾ 1
ನಿರ್ಧಾರಗಳಲ್ಲಿ ಬಹಳ ದ್ವಂದ್ವವಿರುತ್ತದೆ. ಆದಾಯವು ಕಡಿಮೆ ಇದ್ದು, ಖರ್ಚು ಹೆಚ್ಚಾಗುವ ಸಾಧ್ಯತೆಗಳಿವೆ. ಆಸ್ತಿ ಖರೀದಿಗೆ ಹಣದ ಮೂಲ ಗೋಚರಿಸುತ್ತದೆ. ವಿದ್ಯಾರ್ಥಿಗಳು ಫಲಿತಾಂಶಕ್ಕಾಗಿ ಕಷ್ಟಪಡಬೇಕು. ಮೂತ್ರ ಸಂಬಂಧಿ ದೋಷಗಳು ಕೆಲವರನ್ನು ಕಾಡಬಹುದು. ಸೇನೆಯಲ್ಲಿರುವವರು ಎಚ್ಚರವಹಿಸಬೇಕಾದ ಅಗತ್ಯವಿದೆ.

ವೃಷಭ — ಕೃತ್ತಿಕಾ 2,3,4 ರೋಹಿಣಿ, ಮೃಗಶಿರಾ 1,2
ಆದಾಯವು ನಿರೀಕ್ಷೆಯಷ್ಟಿರುತ್ತದೆ. ಕೃಷಿಯಿಂದ ಹೆಚ್ಚು ಲಾಭವಿರುತ್ತದೆ. ಅಧ್ಯಾಪಕರಿಗೆ ಉತ್ತಮ ಬೇಡಿಕೆ ಬರುತ್ತದೆ. ಭೂಮಿ ವ್ಯವಹಾರವನ್ನು ಮಾಡುವವರಿಗೆ ಸ್ವಲ್ಪ ಆದಾಯ ಹೆಚ್ಚುತ್ತದೆ. ವಿದ್ಯಾರ್ಥಿಗಳು ಹೆಚ್ಚು ಶ್ರಮಪಡಲೇಬೇಕಾದ ಅನಿವಾರ್ಯತೆ ಇದೆ. ಸರ್ಕಾರಿ ಸವಲತ್ತುಗಳು ಸಿಗುವುದು ಸ್ವಲ್ಪ ನಿಧಾನವಾಗಬಹುದು. ವೃತ್ತಿಯಲ್ಲಿ ಯಶಸ್ಸನ್ನು ಕಾಣಬಹುದು. ಹಣಕಾಸಿನ ವ್ಯವಹಾರ ಮಾಡುವವರಿಗೆ ಲಾಭವಿರುತ್ತದೆ.

ಮಿಥುನ — ಮೃಗಶಿರಾ 3,4 ಆರಿದ್ರಾ, ಪುನರ್ವಸು 1,2,3
ಸಮಾಜದಿಂದ ಗೌರವ ಸಿಗುತ್ತದೆ. ನಿಮ್ಮ ಆದಾಯವು ಉತ್ತಮವಾಗಿರುತ್ತದೆ. ಕೃಷಿಭೂಮಿಯನ್ನು ಕೊಳ್ಳಬಹುದು. ವಿದ್ಯಾರ್ಥಿಗಳಿಗೆ ಸ್ವಲ್ಪ ಯಶಸ್ಸು ಇರುತ್ತದೆ. ಸಂಗಾತಿಯಿಂದ ನಿಮ್ಮ ವ್ಯವಹಾರಗಳಿಗೆ ಬಂಡವಾಳ ದೊರೆಯುವ ಸಾಧ್ಯತೆಗಳಿವೆ. ಆರೋಗ್ಯದ ಕಡೆಗೆ ಹೆಚ್ಚಿನ ಗಮನವಿರಲಿ. ವೃತ್ತಿಯಲ್ಲಿ ಇದ್ದ ತೊಂದರೆಗಳು ನಿವಾರಣೆಯಾಗಿ ಮನಸ್ಸು ಹಗುರವಾಗುತ್ತದೆ. ದೂರ ಪ್ರಯಾಣಗಳು ಅಷ್ಟು ಒಳಿತಲ್ಲ. ಕೃಷಿಗಾಗಿ ಹೆಚ್ಚಿನ ಹಣ ಖರ್ಚಾಗುತ್ತದೆ.

ಕಟಕ — ಪುನರ್ವಸು 4 ಪುಷ್ಯ, ಆಶ್ಲೇಷ
ಮನಸ್ಸಿನಲ್ಲಿ ಉತ್ಸಾಹವಿದ್ದರೂ ಕಾರ್ಯಗತ ಮಾಡುವ ಧೈರ್ಯವಿರುವುದಿಲ್ಲ. ಆದಾಯವು ಸಾಮಾನ್ಯ ಗತಿಯಲ್ಲಿರುತ್ತದೆ. ಆಸ್ತಿಗಾಗಿ ಹೆಚ್ಚು ಹಣ ಖರ್ಚಾಗುತ್ತದೆ. ವಿದ್ಯಾರ್ಥಿಗಳಿಗೆ ಈಗ ನಿರೀಕ್ಷಿತ ಫಲಿತಾಂಶವಿರುವುದಿಲ್ಲ. ಸಂಗಾತಿಯ ಕೋಪಕ್ಕೆ ತುತ್ತಾಗಬಹುದು. ವೃತ್ತಿಯಲ್ಲಿ ಹಿತಶತ್ರುಗಳ ಕಾಟ ಹೆಚ್ಚಾಗಬಹುದು. ಭೂಮಿ ವ್ಯವಹಾರಗಳನ್ನು ಮಾಡುವವರಿಗೆ ಅಂತಹ ಯಶಸ್ಸು ಇರುವುದಿಲ್ಲ. ಕೃಷಿ ಉಪ ಬೆಳೆಗಳಿಂದ ಲಾಭವಿರುತ್ತದೆ.

ಸಿಂಹ — ಮಖಾ, ಪೂರ್ವ ಫಲ್ಗುಣಿ, ಉತ್ತರ ಫಲ್ಗುಣಿ 1
ಧಾರ್ಮಿಕ ಕಾರ್ಯಗಳಲ್ಲಿ ಪಾಲ್ಗೊಳ್ಳಲು ಬಹಳ ಉತ್ಸಾಹ ತೋರುವಿರಿ. ಆದಾಯವು ಸಾಮಾನ್ಯಗತಿಯಲ್ಲಿರುತ್ತದೆ. ಬಂಧುಗಳ ಜೊತೆಗಿನ ಸಂಬಂಧಗಳನ್ನು ಸುಧಾರಿಸಿಕೊಳ್ಳುವುದು ಒಳ್ಳೆಯದು. ವಿದ್ಯಾರ್ಥಿಗಳಿಗೆ ಸ್ವಲ್ಪ ಉತ್ತಮ ಫಲಿತಾಂಶ ಪಡೆಯುವ ಯೋಗವಿದೆ. ಆಸ್ತಿ ಸಂಬಂಧಿತ ವಿಚಾರಗಳಲ್ಲಿ ಮೇಲುಗೈ ಸಾಧಿಸುವಿರಿ. ಮೂಳೆ ಸಂಬಂಧಿತ ನೋವುಗಳು ಕಾಡಬಹುದು. ಕ್ರೀಡಾಪಟುಗಳಿಗೆ ಉದ್ಯೋಗ ದೊರೆಯುವ ಸಾಧ್ಯತೆಗಳಿವೆ.

ಕನ್ಯಾ — ಉತ್ತರಫಲ್ಗುಣಿ 2,3,4 ಹಸ್ತ, ಚಿತ್ತಾ 1,2
ಬುದ್ಧಿವಂತಿಕೆಯನ್ನು ಬಳಸಿ ಜನರನ್ನು ಸೆಳೆಯಲು ಯತ್ನಿಸುವಿರಿ. ಆದಾಯವು ಸಾಮಾನ್ಯಗತಿಯಲ್ಲಿರುತ್ತದೆ. ಬಂಧುಗಳ ಸಹಕಾರವನ್ನು ಸ್ವಲ್ಪ ಮಟ್ಟಿಗೆ ನಿರೀಕ್ಷೆ ಮಾಡಬಹುದು. ಸಂಸಾರದಲ್ಲಿ ಕಸಿವಿಸಿ ಇದ್ದರೂ, ಸಂಬಂಧಗಳು ಮುಂದುವರೆಯುತ್ತವೆ. ವಿದ್ಯಾರ್ಥಿಗಳಿಗೆ ಕಷ್ಟಪಡಲೇ ಬೇಕಾದ ಸಂದರ್ಭವಿದೆ.

ತುಲಾ — ಚಿತ್ತಾ 3,4 ಸ್ವಾತಿ, ವಿಶಾಖಾ 1,2,3
ದೊಡ್ಡ ಮನುಷ್ಯರಂತೆ ತೋರಿಸಿಕೊಳ್ಳಲು ಪ್ರಯತ್ನಪಡುವಿರಿ. ಆದಾಯವು ತಕ್ಕಮಟ್ಟಿಗೆ ಇರುತ್ತದೆ. ಕೃಷಿ ಭೂಮಿ ವ್ಯವಹಾರದಲ್ಲಿ ಅಭಿವೃದ್ಧಿ ಇರುತ್ತದೆ. ವಿದೇಶಕ್ಕೆ ಹೋಗಬೇಕೆನ್ನುವವರಿಗೆ ಅವಕಾಶಗಳು ಲಭಿಸುತ್ತವೆ. ಆಸ್ತಿ ಖರೀದಿ ವಿಚಾರದಲ್ಲಿ ಅಂತಹ ಪ್ರಗತಿ ಇರುವುದಿಲ್ಲ. ವಿದೇಶಿ ಭಾಷಾ ಕಲಿಕೆ ಮಾಡುವವರಿಗೆ ಅಭಿವೃದ್ಧಿ ಇರುತ್ತದೆ. ಹಣದ ವ್ಯವಹಾರಗಳಲ್ಲಿ ಹಿನ್ನಡೆಯನ್ನು ಅನುಭವಿಸಬೇಕಾಗಬಹುದು.

ವೃಶ್ಚಿಕ — ವಿಶಾಖಾ 4 ಅನೂರಾಧ, ಜ್ಯೇಷ್ಠ
ವಾರದ ಆರಂಭದಲ್ಲಿ ದ್ವಂದ್ವ ನಿರ್ಧಾರಗಳಿದ್ದರೂ, ನಂತರ ಸರಿಯಾಗುತ್ತವೆ. ಆದಾಯವು ಮಧ್ಯಮಗತಿಯಲ್ಲಿರುತ್ತದೆ. ವಿದೇಶದಲ್ಲಿ ಆಸ್ತಿ ಮಾಡುವವರಿಗೆ ಹೆಚ್ಚಿನ ಅನುಕೂಲವಿರುತ್ತದೆ. ಆಸ್ತಿ ವಿಚಾರದಲ್ಲಿ ಸ್ವಲ್ಪ ಗೊಂದಲಗಳು ಉಂಟಾಗಬಹುದು. ವಿದ್ಯಾರ್ಥಿಗಳಿಗೆ ನಿರೀಕ್ಷಿತ ಯಶಸ್ಸು ಇರುವುದಿಲ್ಲ. ಶೀತ ಬಾಧೆ ಇರುವವರು ಹೆಚ್ಚು ಎಚ್ಚರ ವಹಿಸಿ. ಲೋಹದ ವ್ಯಾಪಾರ ಮಾಡುವವರಿಗೆ ಲಾಭವಿರುತ್ತದೆ.

ಧನುಸ್ಸು — ಮೂಲಾ, ಪೂರ್ವಾಷಾಢ, ಉತ್ತರಾಷಾಢ 1
ನಿಮ್ಮನ್ನು ತಪ್ಪಾಗಿ ಅರ್ಥೈಸಿಕೊಂಡವರಿಗೆ ಈಗ ವಾಸ್ತವ ತಿಳಿಯುತ್ತದೆ. ಆದಾಯವು ಸಾಮಾನ್ಯ ಗತಿಯಲ್ಲಿರುತ್ತದೆ. ಸ್ಥಿರಾಸ್ತಿಯನ್ನು ಮಾಡುವ ವಿಚಾರದಲ್ಲಿ ಆತುರಬೇಡ. ಸ್ತ್ರೀರೋಗ ತಜ್ಞರಿಗೆ ಬೇಡಿಕೆ ಬರುತ್ತದೆ. ಸಂಗಾತಿಯ ಆದಾಯ ಏರಿಕೆಯಾಗುವ ಸಂದರ್ಭವಿದೆ. ತಾಂತ್ರಿಕ ಕ್ಷೇತ್ರದಲ್ಲಿ ಪರಿಣತಿ ಹೊಂದಿರುವವರಿಗೆ ಉತ್ತಮ ಅವಕಾಶಗಳು ದೊರೆಯುತ್ತವೆ. ಸರ್ಕಾರಿ ಕಚೇರಿ ಕೆಲಸಗಳಲ್ಲಿ ಸ್ವಲ್ಪಮಟ್ಟಿನ ಹಿನ್ನಡೆ ಇರುತ್ತದೆ.

ಮಕರ — ಉತ್ತರಾಷಾಢ 2,3,4 ಶ್ರವಣ, ಧನಿಷ್ಠ 1,2
ಸತ್ಯವನ್ನು ತಿಳಿಸಲು ನೇರವಾಗಿ ಮಾತನಾಡುವುದು ಒಳ್ಳೆಯದು. ವಿದೇಶದಲ್ಲಿ ದುಡಿಯುತ್ತಿರುವವರ ಆದಾಯ ಹೆಚ್ಚುತ್ತದೆ. ಶತ್ರುಗಳು ನಿಮ್ಮ ಸಹವಾಸಕ್ಕೆ ಬರುವುದನ್ನು ನಿಲ್ಲಿಸುವರು. ಕೃಷಿಯಿಂದ ನಿರೀಕ್ಷಿತ ಲಾಭವಿರುವುದಿಲ್ಲ. ವಿದ್ಯಾರ್ಥಿಗಳಿಗೆ ಮಧ್ಯಮ ಫಲಿತಾಂಶವಿರುತ್ತದೆ. ಒಡಹುಟ್ಟಿದವರ ಕೆಲವು ಕೆಲಸಗಳನ್ನು ಮಾಡಿಕೊಡುವಿರಿ. ವೈವಾಹಿಕ ಜೀವನದಲ್ಲಿ ಕಾವೇರಿದ ವಾತಾವರಣವಿರುತ್ತದೆ.

ಕುಂಭ — ಧನಿಷ್ಠ 3,4 ಶತಭಿಷಾ, ಪೂರ್ವಾಭಾದ್ರ 1,2,3
ಯುವಕರ ಮನಸ್ಸು ಬಹಳ ಉಗ್ರತೆಯಿಂದ ಕೂಡಿರುತ್ತದೆ. ಆದಾಯವು ಕಡಿಮೆ ಇರುತ್ತದೆ. ನಾಟಿ ವೈದ್ಯರುಗಳಿಗೆ ಬಹಳ ಬೇಡಿಕೆ ಇರುತ್ತದೆ. ಆಸ್ತಿ ವಿಚಾರದಲ್ಲಿ ಉತ್ತಮ ಫಲಿತಾಂಶವನ್ನು ಕಾಣಬಹುದು. ಕಣ್ಣಿನ ತೊಂದರೆ, ಉಸಿರಾಟದ ತೊಂದರೆ ಇರುವವರು ಎಚ್ಚರ ವಹಿಸಿ. ವ್ಯಾಪಾರ- ವ್ಯವಹಾರಗಳಲ್ಲಿ ನಿಮ್ಮ ಪಾತ್ರ ಹೆಚ್ಚುತ್ತದೆ. ಕಾರ್ಮಿಕರ ಕೊರತೆಯಿಂದ ಬಳಲುತ್ತಿದ್ದ ಉದ್ದಿಮೆಗಳಿಗೆ ಕೊರತೆ ನೀಗುತ್ತದೆ.

ಮೀನ — ಪೂರ್ವಾಭಾದ್ರ 4 ಉತ್ತರಭಾದ್ರ, ರೇವತಿ
ವಾರದ ಆರಂಭದಲ್ಲಿ ಬಹಳಷ್ಟು ಅಸಹನೆ ಇರುತ್ತದೆ. ಆದಾಯವು ತಕ್ಕಮಟ್ಟಿಗೆ ಇರುತ್ತದೆ. ಬಂಧುಗಳ ವಿರೋಧವನ್ನು ನೀವೇ ಕಟ್ಟಿಕೊಳ್ಳುವಿರಿ. ವಿದೇಶದಲ್ಲಿ ಹೋಟೆಲ್ ಉದ್ಯಮ ನಡೆಸುವವರಿಗೆ ಲಾಭ ಹೆಚ್ಚುತ್ತದೆ. ಸಂಗಾತಿ ನಡೆಸುವ ವ್ಯವಹಾರದಲ್ಲಿ ಲಾಭ ಬರುತ್ತದೆ. ದೈವಭಯ ನಿಮ್ಮನ್ನು ಕಾಡಬಹುದು.


ಪದಬಂಧ 2925

ಮೇಲಿನಿಂದ ಕೆಳಕ್ಕೆ

1. ನಾರಾಯಣ ಪುಣ್ಯ ಕಥೆಯ ಮಧು 6
2. ಅದರಲ್ಲೆ ಲೀನವಾಗುವಿಕೆ 3
3. ಕರಾವಳಿ ಪ್ರದೇಶದಲ್ಲಿ ಸಂಭೋದಿತ ಮಹಾರಾಜ 4
4. ಅವುಗಳಿಂದ ಒಂದಷ್ಟು ಇವುಗಳಿಂದ ಒಂದಿಷ್ಟು 4
5. ಹುಟ್ಟು ಮಂದಿಯಿಂದ ಶುರು 3
6. ಗಂಧರ್ವರ ಜೊತೆಗೂಡುವ ಇನ್ನೆರಡು ವರ್ಗ 5
7. ಹಾಸಿಗೆ ಅಥವಾ ಕಂಬಳಿಯನ್ನು ಹರಡು 2
10. ಮಾಡದ ತಪ್ಪಲ್ಲಿ ಕೃಷ್ಣ ಪ್ರೇಯಸಿ ಸೇರಿದ್ದಾಳೆ 5
12. ವಿಶ್ವವನ್ನೇ ಮೇಲೆತ್ತಲು ಬಂದರುವ ಮಹಾ ಪುರುಷ 6
14. ದೇವರ ನೈವೇದ್ಯದ ನಂತರ ಹಂಚಿದ್ದು 3
15. ಬೆಂಕಿಯಿಂದ ಬಂದ ಕೆಂಡದಂತಹ ಗ್ರಹ 4
16. ಕರುಳಿನ ಚಿಗುರು 2
19. ಹೊಸತು ಸಂಸ್ಕೃತದ ಒಂಭತ್ತು 3
20. ಉಚ್ಛ್ರಾಯ ಸ್ಥಿತಿಗೇರಿ ಕೆಳಕ್ಕುರುಳಿದ್ದು 3

ಎಡದಿಂದ ಬಲಕ್ಕೆ

1. ನಾಶಪಡಿಸುವ ಶಿವನಿಂದ ಹುಟ್ಟಿದವ 4
3. ಸುದ್ದಿ ಮತ್ತು ಮನರಂಜನೆ ಜನಕ್ಕೆ ತಲುಪಿಸುವ ಸಂವಹನಾ ಸಾಧನಗಳ ಒಟ್ಟಿಲು 6
5. ಗೆಲುವನ್ನೇ ಹೆಸರಲ್ಲಿ ಪಡೆದ ಮಹಾವಿಷ್ಣುವಿನ ದ್ವಾರಪಾಲಕರು 5
7. ನೇರ ಉತ್ತರ ಕೊಡದೆ ಎಗರಿಸುವ ಕಲೆ 3
8. ಮಾಡಿದ ತಪ್ಪನ್ನು ಒಪ್ಪಿ ಮನ್ನಿಸು 3
9. ಜಿಂಕೆಯ ಕಣ್ಣಿನ ಹುಡುಗಿ ಇತಿಹಾಸದಲ್ಲಿ ರಾಜಾ ಮಾನ್ಸಿಂಹನ ರಾಣಿ 5
11. ಮಧುರ ದ್ರವದಲ್ಲಿ ಕಲಿಸಿದ ಓಗರ 3
13. ಮಹಾಭಾರತದಲ್ಲಿ ಕರ್ಣಾವಸಾನಕ್ಕೆ ಕಾರಣವಾದ ಘಟನೆಯನ್ನು ಹೀಗೆನ್ನಬಹುದೆ? 5
16. ಸಿರಿ ಸಂಪತ್ತಿನ ದೇವ 3
17. ಮಾಯ ಮಾಟದ ವಿದ್ಯೆ 3
18. ಹಣ ಐಶ್ವರ್ಯದಿಂದ ದೊರೆತ ಸಂಪೂರ್ಣ ಪದ ಹೀಗಿರುತ್ತೆ 5
21. ಬಾಗಿಲು ಮುಚ್ಚಿ ಯುದ್ದಕ್ಕೆ ನೀಡುವ ಬ್ರೇಕು 6
22. ದಮಯಂತಿಗಾಗಿ ಆಕೆಯ ಪತಿ ತಯಾರಿಸಿದ ರುಚಿಕರ ಅಡುಗೆ 4



ಪದಬಂಧ ಉತ್ತರ -2924

ಮೇಲಿಂದ ಕೆಳಕ್ಕೆ

1. ಅಹಂಕಾರ 2.ತರಂಗಾಂತರಂಗ 3.ನೆನಪು 4.ಸಲಗ 5.ರಾಮನವತಾರ 7.ರಾಜಧನ 9.ಸಮಾಜ 10.ಮಹಾನುಭಾವರು 11.ಜನಾವೇಷ 13.ವನಜಸಂಭವ 16.ಕಾರವಾರ 18.ನಿಧಾನ 19.ದಿವಾನ

ಎಡದಿಂದ ಬಲಕ್ಕೆ

1. ಅನಂತವಂದನೆ 4.ಸಮೀರಾ 6.ಪುನರಾಗಮನ 8.ರಜತ 9.ಸಮಿಧ 10.ಮದಗಜ 12. ನವತಾರ 14.ನಾಡೋಜ 15.ಜಟಕಾ 17.ಭಾಮಿನಿಷಟ್ಪದಿ 20.ರುಜಿನ 21.ನವಸಂವತ್ಸರ



ಬಹುರೂಪಿಗೆ ಬೆಳ್ಳಿ ಸಂಭ್ರಮ

'ಬಹುರೂಪಿ' ಎಂದಾಕ್ಷಣ ರಂಗಾಸಕ್ತರ ಮನದಲ್ಲಿ 'ಮೈಸೂರು ಮತ್ತು ರಾಷ್ಟ್ರೀಯ ನಾಟಕೋತ್ಸವ' ಎಂಬ ಭಾವನೆ ಮೂಡುತ್ತದೆ. ರಂಗಭೂಮಿ ಕ್ಷೇತ್ರದಲ್ಲಿ ಅಷ್ಟರ ಮಟ್ಟಿಗೆ ತನ್ನದೇ ಛಾಪು ಮೂಡಿಸಿರುವ ಈ ಉತ್ಸವಕ್ಕೀಗ 25ರ ಹರೆಯ. 2001ರಲ್ಲಿ ನಡೆದ ಮೊದಲ ಉತ್ಸವ 'ಮಹಿಳಾ ನಾಟಕೋತ್ಸವ'ವಾಗಿತ್ತು. ಅಲ್ಲಿಂದ ನಿರಂತರವಾಗಿ ವಿವಿಧ ಸಂಸ್ಕೃತಿಗಳು ಹಾಗೂ ಆಯಾ ವರ್ಷದ ಪ್ರಮುಖ ಬೆಳವಣಿಗೆಗಳನ್ನು ರಂಗಭೂಮಿಯೊಂದಿಗೆ ಬೆಸೆಯುತ್ತ ಬಂದಿದೆ. ಈ ಬಾರಿಯ ಬಹುರೂಪಿ ಉತ್ಸವವು ಜನವರಿ 12ರಿಂದ ಏಳು ದಿನ ನಡೆಯಲಿದೆ.



ಮೈಸೂರಿನ ರಂಗಾಯಣದ 2025ರ 'ಬಹುರೂಪಿ' ರಾಷ್ಟ್ರೀಯ ರಂಗೋತ್ಸವದ ಹೊರನೋಟ

ಚಿತ್ರಗಳು: ಅನೂಪ್ ರಾಘ.ಟಿ.

• ಕೆ.ನರಸಿಂಹಮೂರ್ತಿ

ಬಹುರೂಪಕ್ಕೆ ಅನ್ವರ್ಥನಾಮವೇ ಬಹುರೂಪಿ. ಅದು ದೇಶದ ಪುರಾತನ ಜನಪದ ಕಲೆ. ದೇಶದಾದ್ಯಂತ ಹಬ್ಬಿಕೊಂಡಿರುವ ಈ ಕಲೆ ಜನಪದೀಯರ ಜೀವನವೇ ಆಗಿದೆ. ಅದು ಜೀವನೋಪಾಯದ ಕಲೆಯೂ ಹೌದು. ನಮ್ಮದು ಯಾವತ್ತಿಗೂ ಬಹುರೂಪಿ ಸಂಸ್ಕೃತಿಯೇ. ತಲೆಮಾರುಗಳಿಂದ ಹಲವು ಭಾಷೆ, ಧರ್ಮ, ಕಲೆ, ಪರಂಪರೆಗಳ ಜನ ಒಂದಾಗಿ ಬಾಳುತ್ತಿರುವ ಈ ನಾಡಲ್ಲಿ ಏಕ ಸಂಸ್ಕೃತಿ ಎಂಬುದು ಮಿಥ್ಯೆ.

ಬಹುರೂಪಿ ಎಂಬುದು ನಮ್ಮ ದೇಸಿ ಪರಂಪರೆಯಲ್ಲಿರುವ ಜನಾಂಗವೊಂದರ ಹೆಸರು ಕೂಡ. ಅವರು ಶಿವನ ಆರಾಧಕರು. ಊರೂರು ಅಲೆಯುತ್ತಾ ವೇಷ ಹಾಕಿ, ಭಿಕ್ಷೆ ಬೇಡುವವರು. ನಾವೆಲ್ಲರೂ ಒಂದು ರೀತಿಯಲ್ಲಿ ಬಹುರೂಪಿಗಳೇ. ನಟರೆಲ್ಲರೂ ಬಹುರೂಪಿಗಳೇ. ನಾಟ್ಯಶಾಸ್ತ್ರ ಪರಂಪರೆಯ ಅರಿವಿಲ್ಲದ ಜನಪದರು ಬಹುರೂಪವನ್ನೇ ತಮ್ಮ ಸ್ವರೂಪವಾಗಿಸಿಕೊಂಡಿದ್ದಾರೆ. ಹಗಲುವೇಷ ಕಲಾವಿದರು ಇದಕ್ಕೆ ತಾಜಾ ಉದಾಹರಣೆ.

ನಾಗಚಂದ್ರನ 'ಪಂಪ ರಾಮಾಯಣ' ಕಾವ್ಯದಲ್ಲಿ, ಸೀತೆಯನ್ನು ಅಪಹರಿಸಿ ಪ್ರಮದವನದಲ್ಲಿಟ್ಟ ರಾವಣನು ಆಕೆಯನ್ನು ಒಲಿಸಿಕೊಳ್ಳಲು ಬಳಸುವ 'ಬಹುರೂಪಿಣಿ ವಿದ್ಯೆ'ಗೆ ಸೋಲುಂಟಾಗುತ್ತದೆ. ಕದಡಿದ ಕೊಳ ತಿಳಿಯಾದಂತೆ, ಸೀತೆಯ ಮೇಲಿನ ಮೋಹವೂ ಕರಗುತ್ತದೆ. ಹಲವು ರೂಪಗಳನ್ನು ಧರಿಸಲು ಸಾಧ್ಯವಾಗುವ ಆ ವಿಶೇಷ ವಿದ್ಯೆಯು ಅವನಲ್ಲಿ ವೈರಾಗ್ಯವನ್ನು ಮೂಡಿಸುತ್ತದೆ. ಇದೊಂದು ನೈತಿಕ ಸಂದೇಶವೂ ಹೌದು.

ಬಹುರೂಪಿ ಎಂಬುದರ ಅರ್ಥಸಾಧ್ಯತೆಗಳನ್ನು ಹೀಗೆ ಹುಡುಕುತ್ತಾ ಹೊರಡುವುದು ಏಕಕಾಲಕ್ಕೆ ಹಲವು ದಿಕ್ಕುಗಳೆಡೆಗೆ ನಡೆಯುವ ಪಯಣ. ರೂಪರೂಪಗಳನ್ನು ದಾಟುತ್ತಲೇ ಇರಬೇಕಾದ ಈ ಪಯಣದಲ್ಲಿ ಮೈಸೂರಿನ ರಂಗಾಯಣವು ಇಪ್ಪತ್ತೈದು ವರ್ಷಗಳನ್ನು ಪೂರೈಸಿದೆ ಎಂಬುದೇ ವಿಶೇಷ. ಪ್ರತಿ ಬಾರಿಯೂ ಕಲಾವಿದರು ವಿಭಿನ್ನ ರೀತಿಯ ವೇಷಭೂಷಣಗಳನ್ನು ತೊಟ್ಟು ಉತ್ಸವವನ್ನು ರಂಗಮಂಚದಲ್ಲಿ ಕಳೆಗಟ್ಟಿಸಿದ್ದಾರೆ.

'ಬಹುರೂಪಿ' ಎಂದ ಕೂಡಲೇ, ಎಲ್ಲೇ ಇದ್ದರೂ ರಂಗಾಸಕ್ತರ ಮನದಲ್ಲಿ 'ಮೈಸೂರು ಮತ್ತು ರಾಷ್ಟ್ರೀಯ ನಾಟಕೋತ್ಸವ' ಎಂಬ ಪದಗಳೂ ತಂತಾನೆ ಜೋಡಣೆಗೊಳ್ಳುವ ಹಾಗೆ ಕರ್ನಾಟಕದ ರಂಗಭೂಮಿ ಕ್ಷೇತ್ರದಲ್ಲಿ ಹೊಸ ಪರಂಪರೆಯನ್ನು ಹುಟ್ಟು ಹಾಕಿ, ಮುಂದುವರಿಸಿದ ಶ್ರೇಯವೂ ಮೈಸೂರಿಗೆ ಸಲ್ಲುತ್ತದೆ.

ದೇಶದಾದ್ಯಂತ ಇರುವ ಹಲವು ಭಾಷೆ–ರಂಗ ಸಂಸ್ಕೃತಿಗಳ ನಟರನ್ನು, ಕಲಾವಿದರನ್ನು, ರಂಗತಂಡಗಳನ್ನು ಒಟ್ಟುಗೂಡಿಸಿ, ದೇಶದ ಬಹುರೂಪಿ ಗುಣದ ಅನನ್ಯತೆಯನ್ನು ಹಲವು ಸಮಕಾಲೀನ ಆಶಯಗಳಲ್ಲಿ ಹಿಡಿದಿಡುವ ಪ್ರಯತ್ನ ಇದು.

ಇದು ಪ್ರತಿ ವರ್ಷದ ಡಿಸೆಂಬರ್ ಅಥವಾ ಜನವರಿಯಲ್ಲಿ ರಂಗಾಯಣದಲ್ಲಿ ಏರ್ಪಡುವ ಭಾವೈಕ್ಯತೆಯ ಜಾತ್ರೆ. ಸಂಕ್ರಾಂತಿಗೂ ಮುನ್ನವೇ ಇಲ್ಲಿ ನಾಟಕಗಳ ಸುಗ್ಗಿ ಸಂಭ್ರಮ ಮೈದಾಳುತ್ತದೆ. ರಂಗ ಸಂಸ್ಕೃತಿಯ ಜೊತೆಗೆ ಭಾಷಾ ಸಂಸ್ಕೃತಿ, ಸಿನಿಮಾ ಸಂಸ್ಕೃತಿ, ಜನಸಂಸ್ಕೃತಿ, ಮನರಂಜನಾ ಸಂಸ್ಕೃತಿಗಳು ಒಟ್ಟಾಗುತ್ತವೆ.



ಬಹುರೂಪಿ ರಾಷ್ಟ್ರೀಯ ರಂಗೋತ್ಸವದಲ್ಲಿ ಪ್ರದರ್ಶನ ಕಂಡ ಛಾಯಚಿತ್ರಂ ಮಾಯಾಚಿತ್ರಂ (ಮಲಯಾಳ) ನಾಟಕದ ದೃಶ್ಯ

ರಂಗಾಯಣದ ಭೂಮಿಗೀತ, ವನರಂಗ, ಕಿರುರಂಗಮಂದಿರ, ಕಲಾಮಂದಿರದ ವೇದಿಕೆಗಳಲ್ಲಿ ನಾಟಕ, ಸಾಕ್ಷ್ಯಚಿತ್ರ ಪ್ರದರ್ಶನಗಳು, ವಿಚಾರ ಸಂಕಿರಣ, ಜನಪದ ಉತ್ಸವಗಳು ಕಿಕ್ಕಿರಿದ ಜನರ ನಡುವೆ ನಡೆಯುತ್ತಿರುವಾಗಲೇ, ಹೊರ ಆವರಣದಲ್ಲಿ ವಸ್ತುಪ್ರದರ್ಶನ, ಕರಕುಶಲ, ಆಹಾರ ಮಳಿಗೆಗಳಲ್ಲೂ ಜನಸಂದಣಿ ಏರ್ಪಡುವುದು ವಿಶೇಷ. ಬಗೆಬಗೆಯ ದೇಸಿ ಖಾದ್ಯಗಳು, ಬಣ್ಣಬಣ್ಣದ ಉಡುಗೆ–ತೊಡುಗೆಗಳು, ಪುಸ್ತಕ ಪ್ರದರ್ಶನಗಳಿಂದ ಉತ್ಸವವು ದಣಿದ ಮನಸುಗಳಿಗೆ ಮುದ ನೀಡುತ್ತದೆ. ಈ ಉತ್ಸವಕ್ಕಾಗಿ ಕಾತರದಿಂದ ಕಾಯುವವರೂ ಉಂಟು.

ನಾಟಕೋತ್ಸವವೆಂದರೆ ನಾಟಕಗಳ ಪ್ರದರ್ಶನವಷ್ಟೇ ಆಗಿರುವುದಿಲ್ಲ. ಅದೊಂದು ಆಶಯದ ಪ್ರತಿಪಾದನೆ. ಆಶಯಕ್ಕೆ ತಕ್ಕ ಬೀದಿನಾಟಕ, ಸಿನಿಮಾ, ವಿಚಾರ ಸಂಕಿರಣಗಳೂ ಅದಕ್ಕೆ ಜೊತೆಯಾಗುತ್ತಿವೆ. ದೇಶದ ಪ್ರಖ್ಯಾತ ಚಿಂತಕರು, ಬರಹಗಾರರ ನಡುವೆ ಚಿಂತನ–ಮಂಥನಕ್ಕೂ ಪ್ರೇಕ್ಷಕರು ಸಾಕ್ಷಿಯಾಗುತ್ತಾರೆ.

ಪ್ರೇರಣೆಯಾದ 'ಅಕ್ಕ' ಉತ್ಸವ

'ಬಹುರೂಪಿ' ಎಂಬ ಹೆಸರಿನ ಉತ್ಸವ ಶುರುವಾಗುವ ಮುನ್ನ ರಂಗಾಯಣದಲ್ಲಿ ಮೊದಲಿಗೆ ನಡೆದ 'ಅಕ್ಕ' ಉತ್ಸವವೇ ಅದಕ್ಕೆ ಪ್ರೇರಣೆಯಾಗಿತ್ತು ಎಂಬುದು ವಿಶೇಷ. ತನಗೆ ತಾನೇ ಪ್ರೇರಣೆಯಾದ ಬಗೆ ಇದು.

ರಂಗಾಯಣದ ಅಂದಿನ ನಿರ್ದೇಶಕ ಪ್ರಸನ್ನ ಅವರಲ್ಲಿ ಇಂಥ ಉತ್ಸವವೊಂದನ್ನು ರೂಪಿಸುವ ಆಲೋಚನೆ ಮೂಡಿದ ವೇಳೆ ಕೇಂದ್ರ ಸರ್ಕಾರವು 2000ನೇ ವರ್ಷವನ್ನು 'ಮಹಿಳಾ ಸಬಲೀಕರಣದ ವರ್ಷ' ಎಂದು ಘೋಷಿಸಿತ್ತು. ಹೀಗಾಗಿ 2001ರಲ್ಲಿ ನಡೆದ ಮೊದಲ ಉತ್ಸವ 'ಮಹಿಳಾ ನಾಟಕೋತ್ಸವ'ವಾಗಿತ್ತು. ನಂತರ, ದೇಶದ ಬಹುರೂಪಿ ಸಂಸ್ಕೃತಿಯನ್ನು ಎತ್ತಿಹಿಡಿಯುವ ಸಲುವಾಗಿಯೇ ಅದೇ ಹೆಸರಿನಲ್ಲಿ ರಾಷ್ಟ್ರೀಯ ನಾಟಕೋತ್ಸವವನ್ನು ರೂಪಿಸಿದ್ದು ಈಗ ಇತಿಹಾಸ. ಆಗಲೂ ಈಗಲೂ ಉತ್ಸವವೆಂದರೆ ಏಳು ದಿನದ ಭರಪೂರ ರಂಗ ಸಂಭ್ರಮ.

ಎಡ–ಬಲ ಸಮನ್ವಯ

ಉತ್ಸವವು ಬಹುಜನರಿಂದ ಪ್ರಶಂಸೆಗೆ ಒಳಗಾಗುತ್ತಲೇ, ಪ್ರತಿಭಟನೆ, ಎಡ ಮತ್ತು ಬಲಪಂಥೀಯ ಚಿಂತನೆಧಾರೆಗಳ ಸಂಘರ್ಷ–ಸಮನ್ವಯತೆಗೂ ಸಾಕ್ಷಿಯಾಗಿದೆ. ಪ್ರಸನ್ನ ಅವರ ಅವಧಿಯಿಂದ ಅಡ್ಡಂಡ ಕಾರ್ಯಪ್ಪ ಅವರ ಅವಧಿಯವರೆಗೂ ಇದು ಆಗಾಗ ಸಂಚಲನೆಯನ್ನು ಮೂಡಿಸಿದ್ದೂ ಉಂಟು.

ಕಾರ್ಯಪ್ಪ ಅವರು ನಿರ್ದೇಶಕರಾಗಿದ್ದ ಅವಧಿಯಲ್ಲಿ ಸಂಘರ್ಷ ತಾರಕಕ್ಕೆ ಏರಿತ್ತು. ಆಗ ಅವರು ಉತ್ಸವದ ಕಾರ್ಯಕ್ರಮವೊಂದರಲ್ಲಿ 'ಎಡಗಾಲು ಎಷ್ಟು ಮುಖ್ಯವೋ, ಬಲಗಾಲು ಕೂಡ ಅಷ್ಟೇ ಮುಖ್ಯ' ಎಂದು ಪ್ರತಿಪಾದಿಸಿದ್ದರು.

ಟೀಕೆ ಟಿಪ್ಪಣಿಗಳ ನಡುವೆ, ಬಹುಭಾಷೆ, ಬಹುಸಂಸ್ಕೃತಿ, ಬಹುಜನ ಕೇಂದ್ರಿತವಾಗಿಯೇ ಉತ್ಸವ ಬೆಳ್ಳಿ ಹಬ್ಬದ ಸಂಭ್ರಮದಲ್ಲಿದೆ. ಆದರೆ ಈಗಲೂ ಉತ್ಸವಕ್ಕಾಗಿ ಸರ್ಕಾರದ ಅನುದಾನವನ್ನೇ ಕಾಯುವ ಪರಿಸ್ಥಿತಿ ಇದೆ. ರಂಗ ಚಟುವಟಿಕೆಗಳ ಮೂಲಕ ರಂಗಾಯಣ ಸ್ವಾವಲಂಬನೆಯತ್ತ ನಡೆಯಲು ಉತ್ಸವವನ್ನು ಬಳಸಿಕೊಳ್ಳುವ ಪ್ರಯತ್ನವೂ ಅಗತ್ಯ ಎಂಬ ಪ್ರತಿಪಾದನೆಯೂ ನಡೆದಿದೆ. ❖



ಸಾಕ್ಷ್ಯಚಿತ್ರಗಳ ಸಾಥ್..

ಬಹುರೂಪಿ ನಾಟಕೋತ್ಸವವಾದರೂ ಮೊದಲ ಆವೃತ್ತಿಯಿಂದ ಇಲ್ಲಿವರೆಗೆ ಸಾಕ್ಷ್ಯಚಿತ್ರ, ಸಿನಿಮಾಗಳ ಪ್ರದರ್ಶನವೂ ಸಾಗಿ ಬಂದಿರುವುದು ವಿಶೇಷ. ಉತ್ಸವದುದ್ದಕ್ಕೂ ಮೈಸೂರು ಅಮೆಚೂರ್ ನ್ಯಾಚುರಲಿಸ್ಟ್ ಸಂಸ್ಥೆಯ (ಮ್ಯಾನ್) ಕೆ.ಮನು ಅವರೇ ಇದರ ನೇತೃತ್ವ ವಹಿಸಿರುವುದು ಇನ್ನೊಂದು ವಿಶೇಷ.

ಪ್ರಾದೇಶಿಕ–ಜಾಗತಿಕವಾಗಿ ಗಮನ ಸೆಳೆದ ಸಾಕ್ಷ್ಯಚಿತ್ರಗಳು ಮತ್ತು ಸಿನಿಮಾ ವೀಕ್ಷಣೆಯ ಅಭಿರುಚಿ ನಿರ್ಮಾಣಕ್ಕೂ ಉತ್ಸವ ಮಹತ್ವದ ಕೊಡುಗೆ ನೀಡಿದೆ.

ಆಶಯಗಳ ಬಹುರೂಪ

ಉತ್ಸವವು ಆಶಯಗಳ ಬಹುರೂಪಕ್ಕೂ ಸಾಕ್ಷಿಯಂತಿದೆ. ವಿವಿಧ ಸಂಸ್ಕೃತಿಗಳು ಹಾಗೂ ಆಯಾ ವರ್ಷದ ಪ್ರಮುಖ ಬೆಳವಣಿಗೆಗಳನ್ನು ರಂಗಭೂಮಿಯೊಂದಿಗೆ ಬೆಸೆದು ಆಶಯವನ್ನು ನಿರ್ವಚಿಸಿಕೊಳ್ಳುವ ಪರಂಪರೆಯೂ ಇದೆ. ಅದು, ಉತ್ಸವವನ್ನು ಸಮಕಾಲೀನಗೊಳಿಸುವ, ಜನಸಮುದಾಯದೊಂದಿಗೆ ರಂಗಭೂಮಿಯನ್ನು ಬೆಸೆಯುವ ಪ್ರಯತ್ನವೂ ಹೌದು.

'ದೇಸಿ ಸಂಸ್ಕೃತಿ', 'ಕೃಷಿ ಸಂಸ್ಕೃತಿ', 'ಬುಡಕಟ್ಟು ಸಂಸ್ಕೃತಿ–ರಂಗಭೂಮಿ, 'ಜೀವ–ಜಲ–ಜೀವನ', 'ಸೂಫಿ–ಸಂತ–ಸಾಮರಸ್ಯ', 'ವಲಸೆ', 'ಭಾರತೀಯತೆ', 'ತಾಯಿ', 'ಬಿಡುಗಡೆ', 'ಇವ ನಮ್ಮವ, ಇವ ನಮ್ಮವ' –ಇವು ಕೆಲವು ವರ್ಷಗಳ ಆಶಯದ ಶೀರ್ಷಿಕೆಗಳು. ಸ್ವಾತಂತ್ರ್ಯ, ಸಾಮರಸ್ಯ, ಲಿಂಗ ಸಮಾನತೆ ಆಶಯದ ಪ್ರತಿಪಾದನೆಯೊಂದಿಗೂ ಉತ್ಸವಗಳು ನಡೆದಿವೆ.

ಪ್ರಮುಖ ಲೇಖಕರ ಸ್ಮರಣೆಗೂ ಉತ್ಸವವನ್ನು ಮೀಸಲಿಟ್ಟ ಉದಾಹರಣೆಗಳೂ ಇವೆ. ಗಾಂಧೀಜಿ ನೆನಪಿನಲ್ಲಿ 'ಗಾಂಧೀಪಥ', ರವೀಂದ್ರನಾಥ ಠಾಗೂರರ ನೆನಪಿನಲ್ಲಿ 'ಗುರುದೇವ', ಬಸವಣ್ಣನ ನೆನಪಿನಲ್ಲಿ 'ಆನು ಒಲಿದಂತೆ ಹಾಡುವೆ', ಶೇಕ್ಸ್‌ಪಿಯರ್ ನೆನಪಿನಲ್ಲಿ 'ಬಹುಮುಖಿ ಶೇಕ್ಸ್‌ಪಿಯರ್' ಶೀರ್ಷಿಕೆಯಲ್ಲೂ ಉತ್ಸವ ನಡೆದಿದೆ. ಜ್ಞಾನಪೀಠ ಪುರಸ್ಕೃತ ಕನ್ನಡ ಲೇಖಕರು ಕೂಡ ಉತ್ಸವವನ್ನು ಮುನ್ನಡೆಸಿದ್ದಾರೆ.

ಪ್ರಸನ್ನರ ನಂತರ ರಂಗಾಯಣ ನಿರ್ದೇಶಕರಾಗಿದ್ದ ಚಿದಂಬರರಾವ್ ಜಂಬೆ, ಲಿಂಗದೇವರು ಹಳೆಮನೆ, ಬಿ.ವಿ.ರಾಜಾರಾಂ, ಜನಾರ್ದನ (ಜನ್ನಿ), ಭಾಗೀರಥಿ ಬಾಯಿ ಕದಂ, ಅಡ್ಡಂಡ ಕಾರ್ಯಪ್ಪ ಉತ್ಸವವನ್ನು ಮುನ್ನಡೆಸಿದ್ದರು. ಕಳೆದೆರಡು ವರ್ಷದಿಂದ ನಿರ್ದೇಶಕ ಸತೀಶ್ ತಿಪಟೂರು ನೇತೃತ್ವದಲ್ಲಿ ಉತ್ಸವಗಳು ನಡೆದಿವೆ. ಈ ಬಾರಿ ಅಂಬೇಡ್ಕರ್ ಅವರ ಜೀವನ–ಹೋರಾಟ ಪ್ರತಿಪಾದಿಸುವ 'ಬಹುರೂಪಿ ಬಾಬಾಸಾಹೇಬ್' ಆಶಯವಿದೆ.



ಬಿಸಿಸಿಐ ಶ್ರೇಷ್ಠತಾ ಕೇಂದ್ರದಲ್ಲಿರುವ ಈಜುಕೊಳ

ಕ್ರಿಕೆಟ್ ಕನಸುಗಳ ಕಾರ್ಖಾನೆ

10ನೇ ಪುಟದಿಂದ...

ಇದಲ್ಲದೇ ಭವ್ಯವಾದ ಭೋಜನ ಶಾಲೆ, ಆಡಳಿತ ಕಚೇರಿಗಳು, ಸಭಾಭವನ, ವಸತಿ ಕೋಣೆಗಳು ಕೂಡ ಇವೆ.


ಈ ಕೇಂದ್ರದ ಕಟ್ಟಡದ ಬಾಲ್ಕನಿಯಲ್ಲಿ ನಿಂತು ನೋಡಿದರೆ ಸಮೀಪದ ಅಂತರರಾಷ್ಟ್ರೀಯ ವಿಮಾನ ನಿಲ್ದಾಣದಿಂದ ಟೇಕಾಫ್ ಆಗುವ ಲೋಹದ ಹಕ್ಕಿಗಳು ಗಮನ ಸೆಳೆಯುತ್ತವೆ. ಆ ನೋಟದ ಜೊತೆಗೆ, ಮೈದಾನದಲ್ಲಿ ಬ್ಯಾಟರ್ ಸಿಡಿಸುವ ಸಿಕ್ಸರ್‌ಗಳ ಸವಿಯನ್ನೂ ಉಣ್ಣಬಹುದು. ಸುತ್ತಲೂ ಆಳೆತ್ತರದ ಕಾಂಪೌಂಡ್ ಇರುವ ಕೇಂದ್ರದ ಒಳಗಿರುವ ಮೈದಾನಗಳಲ್ಲಿ ಕ್ರಿಕೆಟ್ ಪಂದ್ಯಗಳು ನಡೆಯುತ್ತವೆ. ಆದರೆ ಆ ತಡೆಯನ್ನೂ ಮೀರಿದ ಅಭಿಮಾನಿಗಳ ಕ್ರಿಕೆಟ್ ಪ್ರೀತಿಯ ಕೂಗು ಇಲ್ಲಿ ಪ್ರತಿಧ್ವನಿಸುತ್ತದೆ. ಇತ್ತೀಚೆಗೆ ವಿರಾಟ್ ಕೊಹ್ಲಿ, ರಿಷಭ್ ಪಂತ್, ರಜತ್ ಪಾಟೀದಾರ್ ಅವರು ಆಡುವ ಸಂದರ್ಭದಲ್ಲಿ ಕಾಂಪೌಂಡ್ ಹೊರಗಡೆಯಿಂದ ಇಣುಕಿ ಹಾಕುತ್ತಿದ್ದ ನೂರಕ್ಕೂ ಹೆಚ್ಚು ಅಭಿಮಾನಿಗಳ ಘೋಷಣೆಗಳು ತೇಲಿಬಂದಿದ್ದವು. ಅಕ್ಕಪಕ್ಕದ ಮರ, ಕಟ್ಟಡಗಳ ಮೇಲೆ ಹತ್ತಿ ವಿರಾಟ್..ವಿರಾಟ್.. ಎಂದು ಕೂಗಿದವರಿಗೂ ಕಮ್ಮಿಯಿಲ್ಲ. ಇತ್ತೀಚೆಗೆ ರೋಹಿತ್ ಶರ್ಮಾ ಅವರು ಬಿಸಿಸಿಐ ಸಿಒಇ ಆರಂಭಿಸಿರುವ 'ಬ್ರಾಂಕೊ ಟೆಸ್ಟ್' ನಲ್ಲಿ ಅಗ್ರಶ್ರೇಯಾಂಕ ಪಡೆದು ಉತ್ತೀರ್ಣರಾಗಿದ್ದರು. ಆಸ್ಟ್ರೇಲಿಯಾ ಮತ್ತು ದಕ್ಷಿಣ ಆಫ್ರಿಕಾ ಎದುರು ಏಕದಿನ ಸರಣಿಯಲ್ಲಿ ಮಿಂಚಿದ್ದರು. ಒಟ್ಟಿನಲ್ಲಿ ಬಿಸಿಸಿಐ ಸಿಒಇ ಎಲ್ಲ ರೀತಿಯಿಂದಲೂ ಭಾರತದ ಕ್ರಿಕೆಟ್ ಶಕ್ತಿಕೇಂದ್ರವಾಗಿ ವಿಸ್ತರಿಸುತ್ತಿದೆ. ❖

ಕಥೆ
ಸುರಹೊನ್ನೆ ಅರವಿಂದ ಅವರ **ಎನ್ನೊಳಗೆ ಅವಳು**
prajavani.net/short-story

ಕವನ
ಪ್ರಕಾಶ್ ಪುಟ್ಟಪ್ಪ ಅವರ **ವಿಶ್ವರೂಪಿ**
www.prajavani.net/poetry

ಸಾದರ ಸ್ವೀಕಾರ
ಹೊಸ ಪುಸ್ತಕಗಳ ಮಾಹಿತಿಗೆ ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ
ಪ್ರತಿಕ್ರಿಯೆಗಳನ್ನು ಕಳಿಸಲು bhanuvara@prajavani.co.in

ಮೊದಲ ಓದು




ಕಳೆದು ಹೋಗಿರುವ ನಮ್ಮನ್ನು ನೆನಪಿಸುತ್ತ...

ಮಾಯೆಯೆಂಬುದು ಮಾಯೆಯಲ್ಲ
ಲೇ: ಹಳೆಮನೆ ರಾಜಶೇಖರ
ಪ್ರ: ಅಂಕಿತ ಪ್ರಕಾಶನ
ಸಂ: 9019190502

ನಮ್ಮ ನಿಮ್ಮ ಸುತ್ತ ಇರುವ ಚಿತ್ರಗಳನ್ನು ನೋಡಿ ಸುಮ್ಮನಾಗುತ್ತೇವೆ. ಹಾಗೆ ಸುಮ್ಮನಾಗದೇ ತಮ್ಮ ಸುತ್ತಲಿನ ಕಥೆಗಳನ್ನು ಈ ಕಥೆಗಾರ ಅನುಭವಿಸುತ್ತಲೇ ಹೋಗುತ್ತಾರೆ. ಇಲ್ಲಿಯ ಪ್ರತಿಪಾತ್ರಗಳೂ ತಮ್ಮ ಹಿಂದೆ ಹೊಸ ಕಥೆ ಬಚ್ಚಿಟ್ಟುಕೊಂಡಿರುವಂತಿವೆ. ರಾಯಚೂರಿನ ನೆಲದ ಭಾಷೆ, ಬಿಸಿಲಿನ ಬೇಗೆ, ಸಾಲ ಶೂಲವಾಗಿ ಬಲಿ ತೆಗೆದುಕೊಂಡ ಜೀವಗಳು ಎಲ್ಲವೂ ಇಲ್ಲಿ ಕಣ್ಮುಂದೆ ದೃಶ್ಯ ಕಟ್ಟುತ್ತ ಹೋಗುತ್ತವೆ. ಅಂಥ ಚಿತ್ರಕ ಶಕ್ತಿಯ ಕಥೆಗಳು ಈ ಸಂಕಲನದಲ್ಲಿವೆ. ಪ್ರತಿ ಮನುಷ್ಯನಿಗೂ ತುಸು ಪ್ರೀತಿ, ತುಸು ಗುರುತಿಸಿಕೊಳ್ಳುವಿಕೆ ಮತ್ತಿನಿತು ವ್ಯಾಲಿಡೇಷನ್, ಈ ಮೂರು ಗುಣಗಳು ನವಿರಾಗಿ ಕಥೆಗಳಲ್ಲಿ ಹರಡಿಕೊಳ್ಳುತ್ತವೆ. ಅಧಿಕಾರ, ವಂಚನೆ, ದುರಾಸೆ, ಮೋಸ, ದುರಾಡಳಿತ ಇವು ಢಾಳಾಗಿ ಕಾಣಿಸಿಕೊಳ್ಳುತ್ತವೆ. ನಮ್ಮ ಜೊತೆಗಿನವರ ಜೀವನ ಚಿತ್ರಗಳನ್ನು ನೋಡದಷ್ಟು ನಾವೆಲ್ಲ ಕಳೆದುಹೋಗಿದ್ದೇವೆಯೇ ಎಂಬ ಪ್ರಶ್ನೆಯನ್ನು ಈ ಕಥೆಗಳು ನಮ್ಮಲ್ಲಿ ಮೂಡಿಸುತ್ತವೆ. ಅಹುದಹುದು, ಇಂಥ ಪಾತ್ರಗಳು ನಮ್ಮ ಸುತ್ತಲೂ ಇವೆ, ಇಂಥ ಕಥೆಗಳನ್ನು ನಾವೂ ಕೇಳಿದ್ದೇವೆ ಎಂದಷ್ಟೇ ಅನಿಸಿದ್ದರೆ ಸಾಮಾನ್ಯ ಕಥೆಗಳಾಗಿರುತ್ತಿದ್ದವು. ಆದರೆ ಜಗತ್ತು ಇಷ್ಟೆಲ್ಲ ಚೂರಾಗಿದ್ದಾಗಲೂ, ಚೂರಾದಾಗಲೂ ನಾವು ಗಮನಿಸಲಿಲ್ಲವಲ್ಲ, ಸರಿಪಡಿಸಲು ಯತ್ನಿಸಲಿಲ್ಲವಲ್ಲ ಎಂಬ ಹಳಹಳಿಕೆಯನ್ನು ಈ ಕಥೆಗಳು ಉಳಿಸುತ್ತವೆ. ಇಲ್ಲಿ ಕಥೆಗಾರನೂ, ಕಥೆಯ ಪಾತ್ರಗಳೂ ನಮ್ಮ ಮೇಲೆ ಪಾರಮ್ಯ ಸಾಧಿಸುತ್ತ ಹೋಗುತ್ತವೆ. ರಾಯಚೂರು, ಕೊಪ್ಪಳ ಸುತ್ತಲಿನ ಭಾಷಾ ಸೊಗಡು, ಅಲ್ಲಿಯ ವಸ್ತ್ರವೈವಿಧ್ಯ, ಆಹಾರ ಎಲ್ಲವೂ ಕಥೆಯಲ್ಲಿ ಮೂಡಿ ಬಂದಾಗಲೆಲ್ಲ ಅದನ್ನು ಅನುಭವಿಸುವಂತೆಯೇ ದಟ್ಟವಾಗಿ ಕಥೆಗಳನ್ನು ನಿರೂಪಿಸಲಾಗಿದೆ.

ಪುಟ: 136 ₹170



ವಿಭಿನ್ನ ಪಾತ್ರಗಳ ಮೂಲಕ ಮುಟ್ಟುವ ಕಥೆಗಳು

ಟಚ್ ಮೀ ನಾಟ್
ಲೇ: ಮುನವ್ವರ್ ಜೋಗಿಬೆಟ್ಟು
ಪ್ರ: ಸಸಿ ಪ್ರಕಾಶನ
ಸಂ: 9513018456

ಮುನವ್ವರ್ ಜೋಗಿಬೆಟ್ಟು ಅವರ ಎರಡನೇ ಕಥಾಸಂಕಲನ 'ಟಚ್ ಮೀ ನಾಟ್'ನಲ್ಲಿ ಒಂಬತ್ತು ಕಥೆಗಳಿವೆ.
ಈ ಕಥೆಗಳು ಪಾತ್ರಗಳ ಮೂಲಕವೇ ಸಮಾಜದ ಸಂಕೀರ್ಣತೆಯನ್ನು ಹೇಳುತ್ತಾ, ಆಧುನಿಕತೆಯ ತಾಕಲಾಟಗಳನ್ನು ಕೂಡ ಅಭಿವ್ಯಕ್ತಪಡಿಸುತ್ತವೆ.
'ಟಚ್ ಮೀ ನಾಟ್' ಕಥೆಯಲ್ಲಿ ತಾನು ಮಾಡದ ತಪ್ಪೊಂದಕ್ಕೆ ಬಲಿಯಾಗುವ ಪಾತ್ರವಿದ್ದರೆ, 'ಬಾಜಿ' ಕಥೆಯಲ್ಲಿ ಇಂದಿನ ಯುವ ಸಮುದಾಯ ಆಧುನಿಕತೆಯಿಂದಲೇ ದಾರಿ ತಪ್ಪುತ್ತಿರುವುದನ್ನು ಕಾಣಬಹುದು. ಇಫ್ತಾರ್ ಹಾಗೂ ಕಂತ್ರಿ ನಾಯಿ, ಗೆರೆಗೆ ಸಿಗದ ನದಿ ಕಥೆಗಳು ಬಡತನದ ವಸ್ತುವನ್ನು ಹೊಂದಿದ್ದರೂ, ಸಮಾಜದ ವಿಭಿನ್ನ ದೃಷ್ಟಿಕೋನಕ್ಕೆ ಕನ್ನಡಿ ಹಿಡಿಯುತ್ತವೆ.

'ಮುತ್ತಿಗೆ' ಕಥೆಯು ವಿಭಿನ್ನ ಶೈಲಿಯ ನಿರೂಪಣೆಯಿಂದ ಗಮನ ಸೆಳೆಯುತ್ತದೆ. ಕಥೆಯಲ್ಲಿನ ಚಿನ್ನದ ಅಂಗಡಿಯ ಮ್ಯಾನೇಜರ್ ಪಾತ್ರವೊಂದು, ಚಿನ್ನದ ವ್ಯಾಪಾರವನ್ನು ಸಾಮ್ರಾಜ್ಯಕ್ಕೆ ಹೋಲಿಸಿ ಪೂರ್ತಿ ಕಥೆಯನ್ನು ನಿರೂಪಣೆ ಮಾಡುತ್ತದೆ.


ನಮ್ಮ ಜೀವನದಲ್ಲಿ ಪ್ರತಿನಿತ್ಯ ನೋಡುವ ವ್ಯಕ್ತಿಗಳೇ ಇಲ್ಲಿನ ಕಥೆಗಳಲ್ಲಿ ಮುಖ್ಯ ಪಾತ್ರಗಳಾಗಿ ಕಾಣಿಸಿಕೊಂಡಿದ್ದಾರೆ. ಅದರಲ್ಲೂ ಈ ಸಂಕಲನದ ಪ್ರತಿ ಕಥೆಗಳ ಪಾತ್ರಗಳು ಕೂಡ ವಿಭಿನ್ನ ವ್ಯಕ್ತಿತ್ವ ಹಾಗೂ ವಿಶಿಷ್ಟತೆಯಿಂದ ಕೂಡಿವೆ.

ಪಾತ್ರಗಳಲ್ಲಿನ ವೈವಿಧ್ಯವು ಈ ಸಂಕಲನದ ವಿಶೇಷವಾಗಿದೆ. ನೌಕರನಿಗೆ ಕಾಟ ಕೊಡುವ ಚಿನ್ನದ ಅಂಗಡಿಯ ಮ್ಯಾನೇಜರ್, ಯಾವುದೊ ಘಟನೆಯಿಂದ ಕಳ್ಳನಾಗುವ ಪಾತ್ರ, ಒಂದೊತ್ತಿನ ಊಟಕ್ಕಾಗೂ ಕಷ್ಟ ಪಡುವವರು, ಪಬ್ಜಿ-ಗಾಂಜಾದ ಅಮಲಿನಲ್ಲಿರುವ ಯುವಕರು, ಊರಲ್ಲಿರುವ ಏಕೈಕ ವ್ಲಾಗರ್, ಹಲವು ವರ್ಷಗಳ ಬಳಿಕ ತಾನು ಓದಿದ ಶಾಲೆಯ ಟೀಚರ್ ಭೇಟಿ ಮಾಡಲು ಹೊರಟವನು–ಹೀಗೆ ವಿಭಿನ್ನ ಪಾತ್ರಗಳು ಈ ಸಂಕಲನದ ಕಥೆಯಲ್ಲಿವೆ.

ಇದರಲ್ಲಿನ ಕಥೆಗಳಲ್ಲಿ ಮಂಗಳೂರು ಕನ್ನಡ, ಬ್ಯಾರಿ ಕನ್ನಡವನ್ನು ಕೂಡ ಸಮರ್ಪಕವಾಗಿ ಬಳಸಿಕೊಳ್ಳುವ ಮೂಲಕ ಕಥೆಗಾರರು ಕಥಾ ಪಾತ್ರಗಳನ್ನು ಓದುಗರಿಗೆ ಸುಲಭವಾಗಿ ದಾಟಿಸಿದ್ದಾರೆ.

ಸಂಕಲನದಲ್ಲಿರುವ ಕಥೆಗಳಿಗೆ ಹಲವು ಪ್ರಮುಖ ಪ್ರಶಸ್ತಿಗಳು ದೊರಕಿವೆ.

ಪುಟ: 106 ₹126



ಸ್ತ್ರೀವಾದ ವ್ಯಾಖ್ಯಾನಿಸುವ ಅಪರೂಪದ ಆತ್ಮಕತೆ

ಜೀವದನಿ
ಅನು: ಎಂ.ಆರ್.ಕಮಲ
ಪ್ರ: ಅಮೂಲ್ಯ ಪ್ರಕಾಶನ
ಸಂ: 9448676770

ಸ್ತ್ರೀವಾದವೆಂಬುದು ದ್ವೀಪವಲ್ಲ. ಅದರ ಸೂಕ್ಷ್ಮಗಳು ಎಲ್ಲಾ ಬಗೆಯ ಎಲ್ಲೆಗಳನ್ನು ಮೀರಿವೆ. ಪ್ರತಿ ಮನುಷ್ಯನ ಅಂತರಂಗವು ಸ್ವಾತಂತ್ರ್ಯದ ದೀಪದಲ್ಲಿ ಬೆಳಗುತ್ತದೆ. ಲಿಂಗದ ಕಾರಣಕ್ಕಾಗಿ ಹೇರುವ ಆಲೋಚನೆಗಳಿಂದ ಮುಕ್ತಗೊಳ್ಳುವುದೇ ಸ್ತ್ರೀವಾದ. ಇದರ ಇನಿಯನ್ನು ಇಸಬೆಲ್ ಅಯೆಂದೆ ಅವರ ಜೀವದನಿ ಕೃತಿಯಲ್ಲಿ ಕಟ್ಟಿಕೊಡಲಾಗಿದೆ. ಇದನ್ನು ಎಂ.ಆರ್.ಕಮಲ ಅವರು ಬಹಳ ಸೊಗಸಾಗಿ ಕನ್ನಡಕ್ಕೆ ತಂದಿದ್ದಾರೆ.

ಗಂಡಸರಿಗೆ ಇರುವ ಅನುಕೂಲಗಳು ಎಲ್ಲ ಕಾಲಕ್ಕೂ ಹೆಂಗಸರಿಗೆ ಮುಗಿಲ ಮಲ್ಲಿಗೆಯೇ. ಕಾಲಚಕ್ರ ಉರುಳುತ್ತಲಿದ್ದರೂ, ನದಿಯ ನೀರು ಬದಲಾಗುತ್ತಿದ್ದರೂ ಈ ಅನುಕೂಲಗಳ ವ್ಯಾಪ್ತಿ ತೃಪ್ತಿಕರ ರೀತಿಯಲ್ಲಿ ಹಿಗ್ಗಿಲ್ಲ ಎಂಬುದನ್ನು ಗಮನಿಸಬೇಕು.

ತಾಯಿಯ ಅಸಹಾಯಕತೆ, ಅಜ್ಜನ ನಿಷ್ಠುರ ನಡವಳಿಕೆಯನ್ನು ಕಂಡು ಬೆಳೆದ ಇಸಬೆಲ್ ಅಯೆಂದೆ ಪುರುಷಾಧಿಕಾರ ವಿರುದ್ಧ ಬಂಡಾಯ ಏಳುವ, ಅದನ್ನು ಅರಗಿಸಿಕೊಳ್ಳುತ್ತಲೇ ತನ್ನ ಬದುಕನ್ನು ಮಟ್ಟಸವಾಗಿ ರೂಪಿಸಿಕೊಳ್ಳುವ ಕಥೆಯನ್ನು ಬಹಳ ಸರಳವಾಗಿ ಹೇಳುತ್ತಾ ಹೋಗಿದ್ದಾರೆ. ಇದು ಆತ್ಮಕತೆಯಾಗಿದ್ದರೂ ಪ್ರತಿ ಪುಟವು ಹಲವು ಹೊಳಹುಗಳಿಂದ, ಸ್ತ್ರೀಪರ ಚಿಂತನೆಗಳಿಂದ ಓದುಗರನ್ನು ಹಿಡಿದಿಡುತ್ತದೆ.

ಸ್ತ್ರೀವಾದವೆಂಬುದು ಗಂಡಸರನ್ನು ದ್ವೇಷಿಸುವ ವಿಷಯದಂತೆ ವ್ಯಾಖ್ಯಾನಿಸಿರುವ ಬಗ್ಗೆ ಇಸಬೆಲ್ ಅವರು ಆಕ್ಷೇಪ ವ್ಯಕ್ತಪಡಿಸುತ್ತಲೇ, ಸ್ತ್ರೀವಾದ ಸಾಗರದಂತೆ ದ್ರವರೂಪ ಹಾಗೂ ಅಷ್ಟೆ ಶಕ್ತಿಯುತ ಹಾಗೂ ಆಳವಾದದ್ದು. ಬದುಕಿನ ಅನಂತ ಸಂಕೀರ್ಣತೆಯನ್ನು ಅವರಿಸಿಕೊಳ್ಳುವಂಥದ್ದು. ಮೌನವಾಗಿ ನಾವೆಂದೂ ಉಳಿಯದಂತೆ ಮಾಡುವುದೇ ಸ್ತ್ರೀವಾದ ಎನ್ನುವ ಖಚಿತ ಅಭಿಪ್ರಾಯವನ್ನು ಇಸಬೆಲ್ ಹೇಳುವ ಮೂಲಕ ಓದುಗರನ್ನು ಚಿಂತನೆಗೆ ಒಳಪಡಿಸುತ್ತಾರೆ. ಕನ್ನಡದ ಮಟ್ಟಿಗೆ ಇದು ಅಪರೂಪದ ಆತ್ಮಕತೆಯ ನಿರೂಪಣೆಯಾಗಿದೆ.

ಪುಟ: 116 ₹150

ಭಿತ್ತಿಯಲ್ಲಿ ಜೀವತಳೆವ ಕಾವಿ ಕಲೆ

ಆಧುನಿಕ ಜಗತ್ತಿನಲ್ಲಿ ಗೋಡೆಗಳನ್ನು ಸಿಮೆಂಟ್, ಟೈಲ್ಸ್, ಕೃತಕ ಬಣ್ಣಗಳು ಅಪ್ಪಿಕೊಂಡಿವೆ. ಆದರೂ ಪುರಾತನ ಕಾವಿ ಕಲೆಯು ಇನ್ನೂ ಜೀವಂತವಾಗಿದೆ. ಇದಕ್ಕೆ ಸಾಕ್ಷಿಯಂತೆ ಅಲ್ಲಲ್ಲಿ ಧಾರ್ಮಿಕ ಸ್ಥಳಗಳು, ಕಟ್ಟಡಗಳ ಗೋಡೆಗಳ ಮೇಲೆ ಕಾಣಿಸಿಕೊಳ್ಳುತ್ತಿದೆ.

• ಸುರೇಂದ್ರ ಪೈ







ಇತ್ತೀಚೆಗೆ 550 ವರ್ಷಗಳ ಇತಿಹಾಸವಿರುವ ಜೀರ್ಣೋದ್ಧಾರಗೊಂಡ ಗೋವಾದ ಗೋಕರ್ಣ ಪರ್ತಗಾಳಿ ಮಠಕ್ಕೆ ಭೇಟಿ ಕೊಟ್ಟಿದ್ದೆ. ಅಲ್ಲಿನ ಒಳ ಗೋಡೆ, ಸುತ್ತು ಪೌಳಿ, ಗೋಪುರಗಳ ಮೇಲೆ ಚಿತ್ರಿತವಾದ ರಾಮನ ಪಟ್ಟಾಭಿಷೇಕ, ದಶಾವತಾರ, ವಿಶ್ವಂಭರ ಗಣಪತಿ, ಮಧ್ವಾಚಾರ್ಯರು, ವಟವೃಕ್ಷ ಹಾಗೂ ಕಾಮಧೇನು ಸೇರಿದಂತೆ 24 ಕ್ಕೂ ಹೆಚ್ಚು ಕಾವಿ ಕಲೆಯ ಭಿತ್ತಿಚಿತ್ರಗಳು ಗಮನ ಸೆಳೆದವು.

12-13ನೇ ಶತಮಾನದಲ್ಲಿ ಚಾಲ್ತಿಗೆ ಬಂದ ಈ ಕಲೆ ಜನಪದ ಹಾಗೂ ಸಾಂಪ್ರದಾಯಿಕ ಕಲಾ ತಂತ್ರಗಾರಿಕೆಯನ್ನು ಒಳಗೊಂಡಿದೆ.

ಕೊಂಕಣಿಯಲ್ಲಿ, 'ಕಾವ್' ಎಂದರೆ 'ಕೆಂಪು' ಬಣ್ಣ, 'ಕಾವಿ' ಎಂದರೆ 'ಮಣ್ಣು' ಎಂದರ್ಥ. ಇಂತಹ ಕೆಮ್ಮಣ್ಣು ಕಾವಿ ಕಲೆಯಂತಹ ಕಲಾಶೋಧನೆಗೆ ಇಂಬು ನೀಡುತ್ತಾ ದೇವಸ್ಥಾನದ ಗೋಡೆಯ ಮೇಲೆ ಹೂವಾಗಿ, ಪೌರಾಣಿಕ ಪಾತ್ರಗಳಾಗಿ, ದೇವ ದೇವತೆಗಳಾಗಿ, ಮಂಡಲಗಳಾಗಿ ಸಾಂಸ್ಕೃತಿಕ ಕಲಾವಂತಿಕೆಯನ್ನು ಜೀವಂತವನ್ನಾಗಿಸುತ್ತಾ ಕರಾವಳಿ ಭಾಗದಲ್ಲಿ ಶತಮಾನಗಳಿಂದಲೂ ಛಾಪನ್ನು ಮೂಡಿಸಿದೆ.

ಏನಿದು ಕಾವಿ ಕಲೆ?

ಸುಣ್ಣದ ಗಾರೆ ಮೇಲೆ ಕೆಮ್ಮಣ್ಣನ್ನು ಹಚ್ಚಿ, ಅದು ತೇವ ಇರುವಾಗಲೇ ಗೀರಿ ಅನವಶ್ಯವಾದದ್ದನ್ನು ತೆಗೆಯುತ್ತ, ತಮ್ಮಿಷ್ಟದ ರಚನೆಗೆ ರೂಪ ಕೊಡುವುದೇ ಕಾವಿ ಕಲೆ. ಪೇಂಟಿಂಗ್ ಮಾಡಿದರೆ ಅದು ಕಾವಿ ಭಿತ್ತಿ ಕಲೆ ಆಗುವುದಿಲ್ಲ. ಕಾವಿ ಕಲೆಯ ಮೂಲ ಲಕ್ಷಣವೇ ಗೀರಿ ಮಾಡುವುದು. ಕೇವಲ ಮಣ್ಣು ಬಳಸಿದರೆ ಅದು ವರ್ಲಿಯೂ ಆಗಬಹುದು, ಹಸೆ ಚಿತ್ತಾರವೂ ಆಗಬಹುದು. 'ಕಾವಿ' ಎಂಬ ಪದವು ಭಾರತೀಯ ಕೆಂಪು (ಹುರಾಮುಂಜಿ) ಗೆ ಸ್ಥಳೀಯ ಹೆಸರಾಗಿದ್ದು, ಇದು ಭಿತ್ತಿಚಿತ್ರಗಳಿಗೆ ಬಳಸಲಾಗುವ ಏಕೈಕ ಬಣ್ಣವಾಗಿದೆ.

ಕರಾವಳಿ ಭಾಗದ ಜಿಲ್ಲೆಗಳಲ್ಲಿ ಮಳೆಗಾಲದಲ್ಲಿ ಅತ್ಯಧಿಕ ಮಳೆ ಹಾಗೂ ಬೇಸಿಗೆಯಲ್ಲಿ ತದ್ವಿರುದ್ಧವಾಗಿ ತೇವ ಮತ್ತು ಆರ್ದ್ರ ಹವಾಮಾನ ಕಂಡುಬರುತ್ತದೆ. ಈ ಕಾರಣದಿಂದ ಬಹುಬಣ್ಣದ ಭಿತ್ತಿಚಿತ್ರಗಳು ದೀರ್ಘಕಾಲದವರೆಗೆ ತೇವಾಂಶವನ್ನು ತಡೆದುಕೊಳ್ಳಲು ಸಾಧ್ಯವಿಲ್ಲ. ಭಿತ್ತಿಚಿತ್ರಗಳು ಒಂದೆರಡು ವರ್ಷಗಳಲ್ಲೇ ಬಣ್ಣ ಮಾಸಿ ಅಂದ ಕಳೆದುಕೊಳ್ಳುತ್ತವೆ. ಹಾಗಾಗಿ ಶತಮಾನಗಳ ಹಿಂದೆ ಕರಾವಳಿ ಕಲಾಪ್ರೇಮಿಗಳು ತಮ್ಮ ಭಿತ್ತಿಚಿತ್ರಗಳಿಗೆ ಕಾವಿ ಕಲೆಯನ್ನು ಅಳವಡಿಸಿಕೊಳ್ಳುವ ಮೂಲಕ ಈ ತೊಂದರೆಯನ್ನು ಹೋಗಲಾಡಿಸಿದರು.



ಕರಾವಳಿ ಭಾಗದಲ್ಲಿ ಕಟ್ಟಡಗಳನ್ನು ಕತ್ತರಿಸಿದ ಲ್ಯಾಟರೈಟ್ (ಕೆಂಪು) ಇಟ್ಟಿಗೆಗಳಿಂದ ನಿರ್ಮಿಸಲಾಗುತ್ತದೆ. ಗೋಡೆಗಳ ಒಳ ಹೊರ ಭಾಗದ ಮೇಲೆ ಸುಣ್ಣದ ಲೇಪ ಹಚ್ಚಲಾಗುತ್ತದೆ. ಒಣಗಿದ ಸುಣ್ಣದ ಗೋಡೆಯ ಮೇಲ್ಭಾಗಕ್ಕೆ ತೆಳುವಾದ ಕೆಮ್ಮಣ್ಣಿನ ಲೇಪನ ಮಾಡಲಾಗುತ್ತದೆ. ಇವು ಫ್ರೆಸ್ಕೊ ವರ್ಣಚಿತ್ರಗಳಂತೆ ಗೋಡೆಗಳು ಇನ್ನೂ ಒದ್ದೆಯಾಗಿರುವಾಗಲೇ ಕಾವಿಚಿತ್ರಗಳನ್ನು ಗೀರಲಾಗುತ್ತದೆ. ಹೀಗೆ ಕಲಾತ್ಮಕವಾಗಿ ಚಿತ್ರಿಸಲಾದ ಚಿತ್ರಗಳು ಕೆಂಪು ಓಚರ್ ಭಿತ್ತಿಚಿತ್ರ, ಮರಳು-ಬ್ಲಾಸ್ಟೆಡ್ ಬಿಳಿ ಬಣ್ಣದಲ್ಲಿ, ಬಹು ಬಣ್ಣದ ಚಿತ್ರಕಲೆಯಂತೆ ಆಕರ್ಷಕ.

ಕಾವಿ ಕಲೆಯಿಂದ ಸೃಷ್ಟಿಯಾದ ಚಿತ್ರಗಳನ್ನು ಎಲ್ಲಿ ಇರಿಸಬಹುದು ಎಂಬುದಕ್ಕೆ ಯಾವುದೇ ನಿಯಮವಿಲ್ಲ. ಅವುಗಳನ್ನು ವಿಶೇಷವಾಗಿ ದೇವಾಲಯಗಳ ಮುಖಮಂಟಪಗಳ ಹೊರ-ಒಳ ಗೋಡೆ, ಮಹಾದ್ವಾರ, ನವರಂಗ, ಸುಕನಾಸ, ಗರ್ಭಗುಡಿ ಮತ್ತು ಇತರ ಸ್ಥಳಗಳಲ್ಲಿ ರಾಮಾಯಣ, ಮಹಾಭಾರತ ಮತ್ತು ಭಾಗವತ ಪುರಾಣಗಳಿಂದ ಕಥಾವಸ್ತುಗಳನ್ನು ಆಯ್ದುಕೊಂಡು ಕಾವಿ ಕಲೆಯನ್ನು ರಚಿಸಿರುವುದನ್ನು ಕಾಣಬಹುದು. ಜೊತೆಗೆ ಇತ್ತೀಚಿನ ಕಲಾವಿದರು ಆಧುನಿಕತೆಗೆ ತಕ್ಕಂತೆ ಯಕ್ಷಗಾನ ಶೈಲಿ, ಜನಪದ ಕಥೆಗಳನ್ನು, ಪ್ರಾಣಿ, ಪಕ್ಷಿಗಳು ಸುತ್ತಲಿನ ಪ್ರಕೃತಿಯ ಸೊಬಗನ್ನು ಸಹ ಕಾವಿ ಕಲೆಯ ಮೂಲಕ ಗೋಡೆಗಳ ಮೇಲೆ ಚಿತ್ರಿಸುವುದನ್ನು ಕಾಣಬಹುದು.

ಕಾವಿ ಕಲೆಯು ಅವುಗಳ ಸ್ವರೂಪ, ಬಳಸುವ ಸಾಮಗ್ರಿಗಳು, ವಿನ್ಯಾಸಗಳು ಪ್ರದೇಶದಿಂದ ಪ್ರದೇಶ ವ್ಯತ್ಯಾಸವನ್ನು ಹೊಂದಿರುತ್ತವೆ. ಜೊತೆಗೆ ಪೌರಾಣಿಕ ಕಥಾ ಸನ್ನಿವೇಶವನ್ನು ಚಿತ್ರಿಸುವಾಗ ಕಲಾವಿದವರು ಉತ್ತಮ ತರಬೇತಿ ಹಾಗೂ ಕಲಾ ಶೈಲಿಯ ಬಗ್ಗೆ ಸಾಕಷ್ಟು ಅರಿತಿರಬೇಕು. ಉದಾಹರಣೆಗೆ ಕೇಶವಿನ್ಯಾಸ ಅಲಂಕಾರಗಳು, ಆಭರಣಗಳು, ಕುಪ್ಪಸ ಮತ್ತು ಸೀರೆ ವಿನ್ಯಾಸಗಳು ಇತ್ಯಾದಿ.

ಮೊದಲು ಕಾವಿ ಕಲೆಯನ್ನು ಅಧ್ಯಯನ ಮಾಡಿ ಅದನ್ನು ಮುನ್ನಲೆಗೆ ತಂದ ಕೀರ್ತಿ ಕೃಷ್ಣಾನಂದ್ ಕಾಮತ್ ಅವರಿಗೆ ಸಲ್ಲುತ್ತದೆ. ಕೆಲವು ಸಂದರ್ಭಗಳಲ್ಲಿ ಹಿಂದೂ ದೇವಾಲಯ ಮತ್ತು ಅದರ ಕಾವಿ ಕಲಾಕೃತಿ ಪೂರ್ಣಗೊಂಡ ವರ್ಷವನ್ನು ಸೂಚಿಸುವ ದಾಖಲೆಗಳನ್ನು ತಮ್ಮ ಸಂಶೋಧನೆಗಳ ಮೂಲಕ ಕಂಡುಕೊಂಡಿದ್ದಾರೆ. ಕರಾವಳಿ ಭಾಗದ ಹಿಂದೂ ದೇವಾಲಯ ಹೊರತುಪಡಿಸಿ 400 ವರ್ಷಗಳಷ್ಟು ಹಳೆಯದಾದ ಸೇಂಟ್ ಆಗಸ್ಟೀನ್ ಚರ್ಚ್‌ನ ಗೋಡೆಗಳು, ಹಾಗೆಯೇ ಹಳೆಯ ಗೋವಾದ ಸೆ ಕ್ಯಾಥೆಡ್ರಲ್, ಅವರ್ ಲೇಡಿ ಆಫ್ ದಿ ಮೌಂಟ್ ಚಾಪೆಲ್, 1562 ಮತ್ತು 1619ರ ನಡುವೆ ನಿರ್ಮಿಸಲಾದ ಗೋವಾದ ಆರ್ಚ್‌ಬಿಷಪ್ ಅರಮನೆಯ ಗೋಡೆಗಳ ಮೇಲಿನ ಕಾವಿ ಕಲೆಯು ಗಂಡಭೇರುಂಡದ ವಿಶಿಷ್ಟ ಲಕ್ಷಣವನ್ನು ಹೊಂದಿದೆ ಎಂಬುದು ಕುತೂಹಲಕಾರಿಯಾಗಿದೆ. ಗೋವಾದ ಮೇಲೆ ಪೋರ್ಚುಗೀಸರ ಆಕ್ರಮಣಕ್ಕೂ ಮುಂಚೆಯೇ ಈ ಕಲೆ ಅಸ್ತಿತ್ವದಲ್ಲಿತ್ತು ಎಂಬುದಕ್ಕೆ ಸಾಕ್ಷಿ.

'ಕಾವಿ ಕಲಾವಿದರು ಮಾತ್ರ ತಮ್ಮ ಗುರುತನ್ನು ಎಲ್ಲಿಯೂ ಬಿಟ್ಟಿಲ್ಲ. ಆದಾಗ್ಯೂ, ಕೆಲವು ಭಿತ್ತಿಚಿತ್ರಗಳ ವಿಷಯಗಳನ್ನು ಫಲಕದ ಒಳಗೆ ದೇವನಾಗರಿ ಲಿಪಿಯ ಜೊತೆಗೆ ಕನ್ನಡ ಮತ್ತು ತಿಗಳಾರಿ ವರ್ಣಮಾಲೆಗಳನ್ನು ಬಳಸಲಾಗಿದೆ. ಈ ಕನ್ನಡ ಅಕ್ಷರಗಳ ಆಧಾರದ ಮೇಲೆ ಈ ಫಲಕಗಳು 400 ರಿಂದ 450 ವರ್ಷಗಳಷ್ಟು ಹಳೆಯವು ಎಂದು ಗುರುತಿಸಬಹುದು' ಎಂದು ಕಾವಿ ಕಲೆಯನ್ನು ನಿರಂತರವಾಗಿ ಅಧ್ಯಯನ ಮಾಡುತ್ತಾ, ಕಲೆಯನ್ನು ಉಳಿಸುವಲ್ಲಿ ಶ್ರಮಿಸುತ್ತಿರುವ ಉಡುಪಿಯ ಕಾವಿ ಕಲಾವಿದ ಜನಾರ್ದನ್ ರಾವ್ ಹಾವಂಜೆ ಹೇಳುತ್ತಾರೆ.

ಇಂದು ಕಾವಿ ಕಲೆ ಕೇವಲ ದೇವಾಲಯಗಳು, ಮಠಗಳಿಗಷ್ಟೆ ಸೀಮಿತವಾಗಿಲ್ಲ. ಬಸದಿಗಳು, ಚರ್ಚುಗಳು, ಮಸೀದಿಗಳು ಜನಪದ ನಂಬಿಕೆಯನ್ನು ಬಿಂಬಿಸುವ ಕಟ್ಟಡಗಳು, ವಾಣಿಜ್ಯ ಕಟ್ಟಡಗಳು, ಮನೆಗಳು, ಅಶ್ವತ್ಥ ಮರದ ಕಟ್ಟೆಗಳು, ತುಳಸಿಕಟ್ಟೆಗಳು ಕೊನೆಗೆ ಸಮಾಧಿಗಳ ಮೇಲೆಯೂ ಅರಳಿ, ನಳನಳಿಸುತ್ತಿದೆ.

ಆಧುನೀಕರಣಕ್ಕೆ ಒಗ್ಗಿಕೊಂಡಂತೆ ಸಿಮೆಂಟು, ಹೊಸ ತಂತ್ರಜ್ಞಾನ, ಕೃತಕ ಬಣ್ಣಗಳು ಗೋಡೆಗಳನ್ನೆಲ್ಲ ಆಕ್ರಮಿಸಿಕೊಂಡಿವೆ. ಹಾಗಾಗಿ ಸುಣ್ಣದ ಗೋಡೆಗಳ ಮೇಲೆ ರಾರಾಜಿಸುತ್ತಿದ್ದ ಶತಮಾನಗಳಷ್ಟು ಪ್ರಾಚೀನ ಕಾವಿ ಕಲೆಯೂ ನಿಧಾನಕ್ಕೆ ತೆರೆಮರೆಗೆ ಸರಿಯುತ್ತಿದೆ. ಆದರೂ ಅಲ್ಲೊಂದು ಇಲ್ಲೊಂದು ಪುರಾತನ ದೇವಾಲಯಗಳು ಜೀರ್ಣೋದ್ಧಾರ ಮಾಡುವಾಗ ಕಾವಿ ಕಲಾಕೃತಿಗಳು ಸುಣ್ಣದ ಗೋಡೆಗಳ ಮೇಲೆ ಮರುಸ್ಥಾಪನೆಯಾಗಿರುವುದನ್ನು ನೋಡಿ ಆನಂದಿಸಬಹುದು. ❖

ಇದು ಬೊಂಬೆಯಾಟವಯ್ಯಾ...

10ನೇ ಪುಟದಿಂದ...

ಭಾರತದ ಹಲವು ರಾಜ್ಯಗಳಲ್ಲಿ ಇರುವ ಬೊಂಬೆಯಾಟ ಸಂಸ್ಕೃತಿಯ ಅಧ್ಯಯನ ಮಾಡಿದರು. ಹೊರ ದೇಶಗಳಲ್ಲಿನ ಬೊಂಬೆಗಳು, ಅಲ್ಲಿನ ರೀತಿ ರಿವಾಜು, ಬೊಂಬೆಗಳನ್ನು ಬಳಸುವ ಕ್ರಮದ ಅಧ್ಯಯನ ಮಾಡುತ್ತಾ ಹೋದರು. ಇದರಿಂದ ಸ್ಥಳೀಯ ಮಾತ್ರವಲ್ಲದೇ ಜಾಗತಿಕ ಮಟ್ಟದಲ್ಲೂ ಬೊಂಬೆಗಳ ಕುರಿತಾದ ಜ್ಞಾನ ಅವರನ್ನು ಇನ್ನಷ್ಟು ಕೆಲಸ ಮಾಡುವಂತೆ ಪ್ರೇರೇಪಿಸಿತು.

ಭಾರತದ ಪುರಾತನ ಗ್ರಂಥಗಳು, ಕಥಾನಕಗಳು, ಪಾತ್ರಗಳ ಅರಿವನ್ನು ವಿಸ್ತರಿಸಿಕೊಂಡು ಅನುಪಮ ಅವರಿಗೆ ಬೊಂಬೆಗಳನ್ನು ಬಳಸಿ ಪ್ರದರ್ಶನಗಳನ್ನು ನೀಡಲು ಸಾಧ್ಯವಾಯಿತು. ಕರ್ನಾಟಕ ಮಾತ್ರವಲ್ಲದೇ ಭಾರತದ ನಾನಾ ಭಾಗ, ಹಲವು ದೇಶಗಳಲ್ಲೂ ಬೊಂಬೆಗಳ ಕುರಿತು ಪ್ರದರ್ಶನ, ಉಪನ್ಯಾಸಗಳು, ವಿಚಾರ ವಿನಿಮಯವನ್ನೂ ನಿರಂತರವಾಗಿ ನಡೆಸಿಕೊಂಡು ಬರುತ್ತಿದ್ದಾರೆ. ಕೇಂದ್ರ, ರಾಜ್ಯ ಸರ್ಕಾರದ ಅಕಾಡೆಮಿಗಳಲ್ಲಿಯೂ ಸಕ್ರಿಯರು.

ಬೊಂಬೆ ಕುಟುಂಬ

ಇದು ಬೊಂಬೆಗಳ ವಿಶೇಷ ನಂಟಿನ ಕುಟುಂಬ. ಅನುಪಮ ಅವರ ಆಸಕ್ತಿಗೆ ನೀರೆರೆದವರು ಪತಿ ವಿದ್ಯಾಶಂಕರ ಹೊಸಕೆರೆ. ಪುತ್ರಿಯರಾದ ದಿವ್ಯ ಹೊಸಕೆರೆ ಹಾಗೂ ಪ್ರಕೃತಿ ಹೊಸಕೆರೆ, ಪುತ್ರ ವೇಧಸ್ ಹೊಸಕೆರೆ. ಇವರೆಲ್ಲಾ ಭಿನ್ನ ವೃತ್ತಿಯಲ್ಲಿದ್ದರೂ ಕಲೆಯನ್ನು ಪ್ರವೃತ್ತಿಯಾಗಿ ರೂಢಿಸಿಕೊಂಡು ಬೊಂಬೆಯ ಪರಂಪರೆಯನ್ನು ಮುಂದಿನ ಪೀಳಿಗೆಗೂ ತಲುಪಿಸುವ ಮಹಾದಾಸೆ ಹೊಂದಿದ್ದಾರೆ. ಕರ್ನಾಟಕ ಮಾತ್ರವಲ್ಲದೇ ಹೊರ ರಾಜ್ಯಗಳ ಬೊಂಬೆ ಕಲಾವಿದರು, ತಂಡಗಳೊಂದಿಗೆ ಸಂಪರ್ಕ ಇಟ್ಟುಕೊಂಡು ಅವರ ಪ್ರದರ್ಶನವನ್ನೂ ಆಯೋಜಿಸುತ್ತಾರೆ.



ಹಿರಿಯ ಕಲಾವಿದರಾದ ದತ್ತಾತ್ರೇಯ ಅರಳಿಕಟ್ಟಿ, ಗಾಯತ್ರಿ ರಾವ್ ಸಹಿತ ಹಲವರ ಬೆಂಬಲವೂ ಇದೆ. ಕರ್ನಾಟಕ ಹಲವು ಭಾಗಗಳಲ್ಲಿ ನೆಲೆಸಿರುವ ಬೊಂಬೆ ಕಲಾವಿದರು ಬಂದು ಪ್ರದರ್ಶನ ನೀಡುತ್ತಾರೆ.

'ಎಂಜಿನಿಯರ್ ಆಗಿ ಏನು ಗಳಿಸುತ್ತಿದ್ದೆ ಎನ್ನುವುದಕ್ಕಿಂತ ನನ್ನ ಅಭಿರುಚಿ, ಅದನ್ನು ಪೋಷಿಸುವ ಕುಟುಂಬ, ಆಪ್ತೇಷ್ಟರ ಬೆಂಬಲದಿಂದ ಕರ್ನಾಟಕದಲ್ಲಿ ಬೊಂಬೆ ಕೇಂದ್ರ ಸ್ಥಾಪಿಸಿದೆ. ಈಗ ಪ್ರತಿ ವರ್ಷ ಅಂತರರಾಷ್ಟ್ರೀಯ ಬೊಂಬೆಯಾಟದ ಪ್ರದರ್ಶನ ನೀಡುತ್ತಿರುವುದು, ಜಗತ್ತಿನ ಹಲವು ಭಾಗವನ್ನು ಬೊಂಬೆಗಳೊಂದಿಗೆ ನೋಡುವ ಅವಕಾಶ ಸಿಕ್ಕಿರುವುದು ಖುಷಿ ನೀಡುತ್ತದೆ' ಎನ್ನುತ್ತಾರೆ ಅನುಪಮ.

ಸಾಂಪ್ರದಾಯಿಕವಾಗಿ ಮಾಡಿದ ಮರದಬೊಂಬೆಗಳಿಗೆ ವೇಷಭೂಷಣ, ಅಲಂಕಾರದ ಮೂಲಕ ವಿವಿಧ ರೂಪಗಳನ್ನು ನೀಡಲಾಗುತ್ತದೆ. ತಲೆ, ತೋಳು, ಅಂಗೈ, ಮುಂಗೈಗಳನ್ನು ಹೊಂದಿರುವ ಬೊಂಬೆಗಳನ್ನು ಕಲಾವಿದರು ತಮ್ಮ ಧ್ವನಿಗೆ ಅನುಗುಣವಾಗಿ ಆಡಿಸಿ ಚಾಕಚಕ್ಯತೆ ಮೆರೆಯುತ್ತಾರೆ. ಅರ್ಧ ಗಂಟೆಯಿಂದ ಒಂದೂವರೆ ಗಂಟೆವರೆಗೂ ಇರುವ ಪ್ರದರ್ಶನಗಳು ಬೊಂಬೆಗಳ ಮಹತ್ವವನ್ನು ತಿಳಿಸಿಕೊಡುತ್ತವೆ. ❖

ಎಂಟು ಬಗೆಯ ಬೊಂಬೆಗಳು...

ಮರದ ಬೊಂಬೆ, ಸಲಾಕಿ ಬೊಂಬೆ, ಸೂತ್ರದ ಸಲಾಕಿ ಬೊಂಬೆ, ಕೀಲು ಬೊಂಬೆ, ದೊಡ್ಡಾಟ, ಈಚನೂರು ಶೈಲಿ, ಮೂಡಲಪಾಯ ಬೊಂಬೆ, ಆಧುನಿಕ ಬೊಂಬೆಗಳನ್ನು ಗುರುತಿಸಲಾಗುತ್ತದೆ. ಇವುಗಳನ್ನು ಕೇಂದ್ರೀಕರಿಸಿಯೇ ತಂಡಗಳು ಬೊಂಬೆಯಾಟದ ಪ್ರದರ್ಶನ ನೀಡುತ್ತವೆ.

ಸೂತ್ರ ಸಲಾಕಿ ಬೊಂಬೆಯಾಟಕ್ಕೆ ಭಾರತದಲ್ಲಿ ಸುದೀರ್ಘ ಪರಂಪರೆಯಿದೆ. ವಿಜ್ಞಾನ, ತತ್ವ, ಸಿದ್ಧಾಂತ, ನಾಟ್ಯ, ಸಂಗೀತದೊಂದಿಗೂ ಸಂಬಂಧವನ್ನು ಇದು ಹೊಂದಿದೆ. ಸಾಹಿತ್ಯ, ಸಂಗೀತವನ್ನು ಬಳಸಿ ಸಹಜ ಅಭಿಯನದ ಮೂಲಕವೇ ಬೊಂಬೆಯ ಪ್ರದರ್ಶನಕ್ಕೆ ಒತ್ತು ನೀಡಲಾಗುತ್ತದೆ.

ಬೊಂಬೆಗಳಿಗೆ ಸಲಾಕಿಗಳೇ ಆಸರೆ. ಬೊಂಬೆಗಳು ಹೆಚ್ಚು ತೂಕ ಹೊಂದಿರುವುದರಿಂದ ಅವುಗಳನ್ನು ನಿಯಂತ್ರಿಸಲು ಸಲಾಕಿಗಳನ್ನು ಬಳಸಲಾಗುತ್ತದೆ. ಆ ಚಾಕಚಕ್ಯತೆಯೂ ಕಲಾವಿದರಿಗೆ ಬೇಕಾಗುತ್ತದೆ.



ಮಜ ಮಜ ಮಜಕೂರ

ಎಂ.ಎಸ್.ಪೂಜಾರ

majakoora@prajavani.co.in

ಪದ ಪರಿಚಯ ಪರೀಕ್ಷೆ

ನಗರದಲ್ಲಿ ಜನವಸತಿ

ಇಲ್ಲಿ ಕೊಟ್ಟಿರುವ ವಾಕ್ಯದಿಂದ ಕೆಳಗೆ ಕೊಟ್ಟಿರುವ ಹತ್ತು ಸುಳಿವು ಆಧರಿಸಿ ಸಮಾನಾರ್ಥಕ ಪದ ಹುಡುಕಿ ತುಂಬಿ.

1		(ಸಾಧ್ವಿ)
2		(ಮನುಷ್ಯ)
3		(ಪಶು)
4		(ಬೆಲೆ)
5		(ನಳ)
6		(ಸಣ್ಣ ಕಲ್ಲಿನಚೂರು)
7		(ಬಿಡುವು)
8		(ಮದುವೆ ಗಂಡು)

ಇದು ನಿಮಗೆ ಗೊತ್ತೇ?

1.2026ರ ಯಾವುದೇ ದಿನಾಂಕ, ತಿಂಗಳು, ಇಸ್ವಿಯನ್ನು ಬರೆದುಕೊಂಡು 2ರಿಂದ ಭಾಗಿಸಿದರೆ ಪೂರ್ಣಭಾಗವಾಗುತ್ತದೆ. ಪ್ರಯತ್ನಿಸಿ ನೋಡಿ.

ಮಜ ಮಜ ಮಜಕೂರದ ಕಳೆದ ಸಂಚಿಕೆಯ ಪ್ರಶ್ನೆಗಳಿಗೆ ಸರಿ ಉತ್ತರ ನೀಡಿದ ಮಕ್ಕಳ ಹೆಸರುಗಳನ್ನು ನೋಡಲು ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ

ಮೋಜಿನ ಇಂಗ್ಲಿಷ್

ಇಲ್ಲಿ ಕೊಟ್ಟಿರುವ 'NG' ಅಕ್ಷರಗಳ ಹಿಂದೆ ಎರಡಕ್ಷರ ತುಂಬಿ ನಾಲ್ಕು ಅಕ್ಷರಗಳ ಪದ ಮಾಡಿ.


1			N	G	
2			N	G	
3			N	G	
4			N	G	
5			N	G	
6			N	G	
7			N	G	
8			N	G	

ದಸ್ಸ ಚಿಕ್ಕು ಕ್ಷೌರ ಕಥೆಯ

ಕಲೆ–ಪರಿಕಲ್ಪನೆ: ಸಂತೋಷ್ ಸಸಿಹಿತ್ಲು

ಒಂದು ಮೊಟ್ಟೆಯ ಕಥೆ!

ಗುಂಡ ತಲೆ ತುಂಬಾ ಇದ್ದ ಕೂದಲನ್ನು ಕ್ಷೌರ ಮಾಡಿಸಲು ಕ್ಷೌರದಂಗಡಿಗೆ ಹೋಗಿದ್ದ. ಕ್ಷೌರ ಮಾಡುವವನಿಗೆ ಕೂದಲೇ ಇರಲಿಲ್ಲ. ಕತ್ತರಿ, ಬಾಚಣಿಗೆ ಕೈಗೆತ್ತಿಕೊಂಡ ಕ್ಷೌರಿಕ ಚಕಚಕನೆ ಕೂದಲು ಕತ್ತರಿಸಿದ. ಆ ರಭಸ ಎಷ್ಟು ಜೋರಾಗಿತ್ತೆಂದರೆ ಕೂದಲೆಲ್ಲವೂ ಹಾರಿ ಕ್ಷೌರಿಕನ ತಲೆಯ ಮೇಲೆ ಕುಳಿತು ವಿಗ್ ರೂಪ ಪಡೆದಿತ್ತು. ತನ್ನೆಲ್ಲಾ ಕೂದಲು ಖಾಲಿಯಾಗಿರುವುದನ್ನು ನೋಡಿದ ಗುಂಡ ಗಾಬರಿಗೊಂಡ.



ಶಬ್ದಾಟ

ಇಲ್ಲಿರುವ ಪದಕ್ಕೆ ಇನ್ನೆರಡು ಅಕ್ಷರ ಸೇರಿಸಿ ಬೇರೊಂದು ಪದ ಮಾಡಿ.

ವಾನರ + ಪಗಿ = ____________

ವರ್ಡ್‌ಗೇಮ್

ಇಲ್ಲಿರುವ ಎರಡು ಪದಗಳ ಅಕ್ಷರಗಳನ್ನು ಒಟ್ಟುಗೂಡಿಸಿ ಒಂದೇ ಪದ ಮಾಡಿ.

HE + LOST = ____________

ಪದ ಸಂಕಲನ

ಇಲ್ಲಿ ಕೊಟ್ಟಿರುವ ಎರಡು ಪದ ಹಾಗೂ ಒಂದು ಅಕ್ಷರವನ್ನು ಕೂಡಿಸಿ ಅರ್ಥಬದ್ಧ ಒಂದೇ ಪದ ಮಾಡಿರಿ.

1	ದಾರ	+	ಕಳಿ	+	ಭೀ	=	
2	ವಾಲಿ	+	ಮಾನ್ಯ	+	ಯು	=	
3	ಹಳಿ	+	ಗಣ	+	ಕೆ	=	
4	ದಡಿ	+	ಮಾಯ	+	ಸು	=	
5	ನಗ	+	ಮಠ	+	ಹ	=	

ಕೊಂಚತಂತ್ರ

ಸೂರ್ಯ ಚಂದ್ರ ಭೂಮಿ ಒಂದೇ ರೇಖೆಯಲ್ಲಿ ಬಂದಾಗ ಸೂರ್ಯಗ್ರಹಣವಾಗುತ್ತದೆ. ಇದನ್ನು ನೆನಪಿಡಲು SMELL ಪದ ನೆನಪಿಡಿ.

S=SUN, M=MOON, E=EARTH

ಬ್ರೇನ್‌ವ್ಹೀಟಾ ಆಟ

ಇಲ್ಲಿ ಕೊಟ್ಟಿರುವ ಕೆಲವು ಕ್ರಮಾನುಗತ ಪದಗಳ ಮೊದಲಾಕ್ಷರ ಮಾತ್ರ ಕೊಟ್ಟಿದೆ. ನೀವು ಊಹಿಸಿ ಮುಂದಿನ ಪದಾಕ್ಷರ ಕಂಡುಹಿಡಿಯಿರಿ.

1	S,M,T,W..?	
2	J,F,M,A,..?	
3	O,T,T,F..?	
4	T,F,S,E..?	

ಜಾಣಪದ ಆಟ

1.ಇಲ್ಲಿ ಕೊಟ್ಟಿರುವ 'ಸಹ' ಎಂಬ ಪದಕ್ಕೆ ಅಕ್ಷರ ಪಟ್ಟಿಯಿಂದ ಇನ್ನೆರಡಕ್ಷರ ಸೇರಿಸಿ ನಾಲ್ಕಕ್ಷರದ ಅರ್ಥಬದ್ಧ ಪದ ರಚಿಸಿ.

1	ಸ	ಹ			
2	ಸ	ಹ			
3	ಸ	ಹ			
4	ಸ	ಹ			
5	ಸ	ಹ			

ಅಕ್ಷರ ಪಟ್ಟಿ					
	ಪಾ	ರ	ಚ	ಸ	ಭಾ
	ಠಿ	ವಾ	ರ	ಕಾ	ಗಿ

ಸರಿ ಉತ್ತರ ಮುಂದಿನ ವಾರ..

ಸರಿ ಉತ್ತರ ನೀಡಿದ ಮಕ್ಕಳ ವಿವರವನ್ನು ಪ್ರಜಾವಾಣಿ ವೆಬ್‌ಸೈಟ್‌ನಲ್ಲಿ ಹಾಗೂ ಆಯ್ದ ಆರು ಮಕ್ಕಳ ಚಿತ್ರಗಳನ್ನು ಮುಂದಿನ ಸಂಚಿಕೆಯಲ್ಲಿ ಪ್ರಕಟಿಸಲಾಗುವುದು. ಸರಿ ಉತ್ತರಗಳ ಜತೆಗೆ ಮಗುವಿನ ಹೆಸರು, ತರಗತಿ, ಶಾಲೆಯ ಹೆಸರು, ಊರು ಹಾಗೂ ವಿಳಾಸವನ್ನು ಕಳುಹಿಸಬೇಕು. ಉತ್ತರವನ್ನು ಮೇಲಿರುವ ಇಮೇಲ್‌ಗೆ ಕಳುಹಿಸಿ...

ಕಳೆದ ಸಂಚಿಕೆಯ ಸರಿ ಉತ್ತರಗಳು

ಪದಸಂಕಲನ
1.ಅರಸೀಕೆರೆ
2.ದಯಾಮರಣ
3.ಉದಯಕಾಲ
4.ಬಾಗಿಲುಮುಚ್ಚು
5.ಹುರಳಿಕಾಳು

ಶಬ್ದಾಟ
ವಿಮಾನರದ್ದು


ಜಾಣಪದ ಆಟ 1
1.ಗುರುನಾಥ
2.ಗುರುಗ್ರಹ
3.ಗುರುವಾರ
4.ಗುರುತರ
5.ಗುರುಬ್ರಹ್ಮ
6.ಗುರುದಯೆ
7.ಗುರುಪಾದ
8.ಗುರುಬಲ

ಜಾಣಪದ ಆಟ 2
1.ಅನುಸ್ವಾರ
2.ಅನುಷ್ಠಾನ
3.ಅನುವಾದ
4.ಅನುರಾಗ
5.ಅನುರಕ್ತ

ಗಾದೆ ಉತ್ತರಗಳು
1.ಹುಗ್ಗಿ
2.ಅಕ್ಕ
3.ಗೂಳಿ
4.ಅಡಕೆ
5.ಹೂಣಗ

ಮೋಜಿನ ಇಂಗ್ಲಿಷ್
1.I
2.IV
3.VI
4.IX
5.X
6.XI
7.C
8.L

ಸರಿ ಉತ್ತರ ನೀಡಿದ ಆಯ್ದ ಆರು ಪುಟಾಣಿಗಳು



ಗಿರೀಶ ನಡಮನಿ
ಬಾದಾಮಿ



ಅನ್ವಿತಾ ಎ.ಆರ್.
ಬೆಂಗಳೂರು



ಶಾಲಿನಿ ವತ್ತಿ
ಕೊಪ್ಪಳ



ಶ್ರಾವಣಿ ಪಿಡ್ಡಿ
ಧಾರವಾಡ



ನವಮಿ ವಿ.ತೋಟಿಗರ್
ಕಾರಿಗನೂರು



ಯಶಿತಾ ರೆಡ್ಡಿ
ಕೊಪ್ಪಳ

ಕೆಕೆಆರ್‌ನಿಂದ ಮುಸ್ತಫಿಝುರ್ ಔಟ್

ಎಂಟು ಆವೃತ್ತಿಗಳಲ್ಲಿ ಆಡಿದ್ದ ಬಾಂಗ್ಲಾ ಎಡಗೈ ವೇಗಿ • ಬಿಸಿಸಿಐ ಸೂಚನೆ ಪಾಲನೆ

ಮುಖ್ಯಾಂಶಗಳು

- ₹9.20 ಕೋಟಿಗೆ ಕೆಕೆಆರ್ ಪಾಲಾಗಿದ್ದ ಮುಸ್ತಫಿಝುರ್
- ಬದಲಿ ಆಟಗಾರನ ಖರೀದಿಸಲು ಕೆಕೆಆರ್‌ಗೆ ಬಿಸಿಸಿಐ ಅವಕಾಶ

ಗುವಾಹಟಿ (ಪಿಟಿಐ): ಭಾರತ ಕ್ರಿಕೆಟ್ ನಿಯಂತ್ರಣ ಮಂಡಳಿ ಸೂಚನೆ ನೀಡಿದ ಬೆನ್ನಲ್ಲೇ ಕೊಲ್ಕತ್ತ ನೈಟ್ ರೈಡರ್ಸ್ ತಂಡವು ಬಾಂಗ್ಲಾದೇಶದ ಎಡಗೈ ವೇಗದ ಬೌಲರ್ ಮುಸ್ತಫಿಝುರ್ ರೆಹಮಾನ್ ಅವರನ್ನು ಐಪಿಎಲ್ ತಂಡದಿಂದ ಶನಿವಾರ ಕೈಬಿಟ್ಟಿದೆ.

ಡಿಸೆಂಬರ್ ತಿಂಗಳಲ್ಲಿ ನಡೆದ ಮಿನಿ ಹರಾಜಿನಲ್ಲಿ ಕೆಕೆಆರ್ ತಂಡವು, ಸಿಎಸ್‌ಕೆ ಮತ್ತು ಡೆಲ್ಲಿ ಕ್ಯಾಪಿಟಲ್ಸ್ ಪೈಪೋಟಿಯ ನಡುವೆ ₹9.20 ಕೋಟಿ ಮೊತ್ತಕ್ಕೆ (ಮೂಲಬೆಲೆ ₹2 ಕೋಟಿ) ಮುಸ್ತಫಿಝುರ್ ಅವರನ್ನು ತನ್ನ ಪಾಲು ಮಾಡಿಕೊಂಡಿತ್ತು.

ಬಿಸಿಸಿಐ ಸೂಚನೆಯನ್ನು ಪಾಲಿಸಿರುವುದಾಗಿ ಫ್ರಾಂಚೈಸಿಯು ಹೇಳಿಕೊಂಡಿದೆ. 'ಬಿಸಿಸಿಐ ಸೂಚನೆಯ ಮೇರೆಗೆ ಅಗತ್ಯ ಪ್ರಕ್ರಿಯೆ ಮತ್ತು ಸಮಾಲೋಚನೆಯ ನಂತರ ಆಟಗಾರನನ್ನು ತಂಡದಿಂದ ಕೈಬಿಡಲಾಗಿದೆ' ಎಂದು ಕೆಕೆಆರ್ ತಿಳಿಸಿದೆ.

ಬಾಂಗ್ಲಾದೇಶದಲ್ಲಿ ಹಿಂದೂ ವ್ಯಕ್ತಿಯನ್ನು ಹತ್ಯೆಗೈದ ನಂತರ ಮತ್ತು ಆ ದೇಶದಲ್ಲಿ ಅಲ್ಪಸಂಖ್ಯಾತರ ಸುರಕ್ಷತೆಯ ಬಗ್ಗೆ ಕಳವಳ ತೀವ್ರಗೊಳ್ಳುತ್ತಿರುವಾಗ ಮುಸ್ತಫಿಝುರ್ ಅವರನ್ನು ಐಪಿಎಲ್‌ನಲ್ಲಿ ಉಳಿಸಿಕೊಳ್ಳಬಾರದೆಂದು ಬಿಸಿಸಿಐ ಮೇಲೆ ಒತ್ತಡ ಹೆಚ್ಚತೊಡಗಿತ್ತು. ಕೆಕೆಆರ್ ತಂಡದ ಸಹ ಮಾಲೀಕ ಹಾಗೂ ಬಾಲಿವುಡ್ ತಾರೆ ಶಾರೂಕ್ ಖಾನ್ ಅವರ ವಿರುದ್ಧವೂ ಆಕ್ರೋಶ ವ್ಯಕ್ತವಾಗಿತ್ತು.

'ಮುಸ್ತಫಿಝುರ್ ಅವರನ್ನು ತಂಡದಿಂದ ಕೈಬಿಡಲು ಕೆಕೆಆರ್‌ಗೆ ಬಿಸಿಸಿಐ ಸೂಚಿಸಿದೆ. ಅಗತ್ಯವೆನಿಸಿದರೆ ಫ್ರಾಂಚೈಸಿಯು ಅವರಿಗೆ ಬದಲಿಯಾಗಿ ಆಟಗಾರರನ್ನು ಕೇಳಬಹುದು. ಬಿಸಿಸಿಐ ಇದಕ್ಕೆ ಅವಕಾಶ ನೀಡಲಿದೆ' ಎಂದು ಬಿಸಿಸಿಐ ಕಾರ್ಯದರ್ಶಿ ದೇವಜಿತ್ ಸೈಕಿಯಾ ಶನಿವಾರ ಬೆಳಿಗ್ಗೆ ತಿಳಿಸಿದ್ದರು.

2016ರಿಂದ ಈಚೆಗೆ ಐಪಿಎಲ್‌ನ ಎಂಟು ಆವೃತ್ತಿಗಳಲ್ಲಿ ಮುಸ್ತಫಿಝುರ್ ಆಡಿದ್ದಾರೆ. 2019 ಮತ್ತು 2020ರಲ್ಲಿ ಆಡಿರಲಿಲ್ಲ. 30 ವರ್ಷ ವಯಸ್ಸಿನ ಬೌಲರ್ ಈ ಮೊದಲು ಸನ್‌ರೈಸರ್ಸ್ ಹೈದರಾಬಾದ್, ಮುಂಬೈ ಇಂಡಿಯನ್ಸ್, ಡೆಲ್ಲಿ ಕ್ಯಾಪಿಟಲ್ಸ್, ಚೆನ್ನೈ ಸೂಪರ್ ಕಿಂಗ್ಸ್ ಮತ್ತು ರಾಜಸ್ಥಾನ ರಾಯಲ್ಸ್ ಪರವೂ ಆಡಿದ್ದಾರೆ. ಇದೇ ಮೊದಲ ಬಾರಿ ಕೆಕೆಆರ್ ತಂಡದ ಪಾಲಾಗಿದ್ದರು.

ದ್ವಿಪಕ್ಷೀಯ ಸರಣಿ ಮೇಲೆ ಕಾರ್ಮೋಡ: ಸೀಮಿತ ಓವರುಗಳ ಸರಣಿಯನ್ನು ಆಡಲು ಭಾರತ ತಂಡವು, ಬಾಂಗ್ಲಾದೇಶ ಪ್ರವಾಸ ಕೈಗೊಳ್ಳಬೇಕಿತ್ತು. ಅದನ್ನು ಕಳೆದ ತಿಂಗಳು ಮುಂದೂಡಲಾಗಿತ್ತು. ಭಾರತ ತಂಡವು ಸೆಪ್ಟೆಂಬರ್‌ನಲ್ಲಿ ಪ್ರವಾಸ ಕೈಗೊಳ್ಳಲಿದೆ ಎಂದು ಬಾಂಗ್ಲಾದೇಶ ಕ್ರಿಕೆಟ್ ಮಂಡಳಿ ಶುಕ್ರವಾರವಷ್ಟೇ ಪ್ರಕಟಿಸಿತ್ತು.

ಆದರೆ ಬಿಸಿಸಿಐ ಈ ವೇಳಾಪಟ್ಟಿಯನ್ನು ಇನ್ನೂ ಖಚಿತಪಡಿಸಿಲ್ಲ. ಬಾಂಗ್ಲಾದೇಶದಲ್ಲಿನ ದ್ವೇಷಮಯ ಪರಿಸ್ಥಿತಿಯನ್ನು ಅವಲೋಕಿಸಿದರೆ, ಈ ಪ್ರವಾಸಕ್ಕೆ ಒಪ್ಪುವ ಸಾಧ್ಯತೆಯೂ ಇಲ್ಲ.

ಬಾಂಗ್ಲಾದೇಶ ತಂಡವು ಮುಂದಿನ ತಿಂಗಳು ಭಾರತದಲ್ಲಿ ಟಿ20 ವಿಶ್ವಕಪ್ ಪಂದ್ಯಗಳನ್ನು ಆಡಬೇಕಿದೆ. ಭಾರತ–ಶ್ರೀಲಂಕಾ ಜಂಟಿ ಆತಿಥ್ಯದಲ್ಲಿ ವಿಶ್ವಕಪ್ ನಿಗದಿಯಾಗಿದೆ.

ಆಗಸ್ಟ್‌ನಲ್ಲಿ, ಬಾಂಗ್ಲಾದೇಶದಲ್ಲಿ ಸರ್ಕಾರ ವಿರೋಧಿ ದಂಗೆಯ ನಂತರ ಅಲ್ಲಿನ ಪ್ರಧಾನಿ ಶೇಖ್ ಹಸೀನಾ ದೇಶ ತೊರೆದು ಭಾರತಕ್ಕೆ ಬಂದಿದ್ದರು.


ಬಾಂಗ್ಲಾದೇಶದ ಎಡಗೈ ವೇಗದ ಬೌಲರ್ ಮುಸ್ತಫಿಝುರ್ ರೆಹಮಾನ್

ಅಂದಿನಿಂದಲೂ ಎರಡೂ ದೇಶಗಳ ನಡುವೆ ಸಂಬಂಧ ಹಳಸುತ್ತ ಬಂದಿದೆ. ವಿದ್ಯಾರ್ಥಿಗಳೇ ಮುಂಚೂಣಿಯಲ್ಲಿದ್ದ ಚಳವಳಿ ಹತ್ತಿಕ್ಕಲು ಮುಂದಾದ ಹಸೀನಾ ಅವರಿಗೆ ಅಲ್ಲಿನ ಸರ್ಕಾರ ಮರಣದಂಡನೆ ಶಿಕ್ಷೆ ವಿಧಿಸಿದೆ.

ಮೊಹಮ್ಮದ್ ಯೂನುಸ್ ನೇತೃತ್ವದ ಹಂಗಾಮಿ ಸರ್ಕಾರ ಆಡಳಿತ ವಹಿಸಿಕೊಂಡ ಬಳಿಕ ರಾಜಕೀಯ ಸಂಬಂಧ ಬೇಗನೆ ಹದಗೆಡತೊಡಗಿದೆ.

ನ್ಯೂಜಿಲೆಂಡ್ ಎದುರಿನ ಏಕದಿನ ಸರಣಿ: ಗಿಲ್ ನಾಯಕ

ಭಾರತ ತಂಡಕ್ಕೆ ಮರಳಿದ ಸಿರಾಜ್

ನವದೆಹಲಿ (ಪಿಟಿಐ): ಅನುಭವಿ ವೇಗದ ಬೌಲರ್ ಮೊಹಮ್ಮದ್ ಸಿರಾಜ್ ಅವರು ಭಾರತ ಏಕದಿನ ಕ್ರಿಕೆಟ್ ತಂಡಕ್ಕೆ ಮರಳಿದ್ದಾರೆ.

ಇದೇ ತಿಂಗಳು ನ್ಯೂಜಿಲೆಂಡ್ ಎದುರು ನಡೆಯಲಿರುವ ಮೂರು ಏಕದಿನ ಪಂದ್ಯಗಳ ಸರಣಿಗಾಗಿ ಶನಿವಾರ ಭಾರತ ಕ್ರಿಕೆಟ್ ನಿಯಂತ್ರಣ ಮಂಡಳಿ (ಬಿಸಿಸಿಐ) ರಾಷ್ಟ್ರೀಯ ತಂಡದ ಆಯ್ಕೆ ಸಮಿತಿಯು ಪ್ರಕಟಿಸಿರುವ ತಂಡದಲ್ಲಿ ಅವರು ಸ್ಥಾನ ಗಳಿಸಿದ್ದಾರೆ. ವಿಕೆಟ್‌ಕೀಪರ್ ರಿಷಭ್ ಪಂತ್ ಅವರಿಗೂ ಮತ್ತೊಂದು ಅವಕಾಶ ದೊರೆತಿದೆ. ಆದರೆ ಕನ್ನಡಿಗ ಕೆ.ಎಲ್.ರಾಹುಲ್ ಮೊದಲ ಆದ್ಯತೆ ವಿಕೆಟ್‌ಕೀಪರ್ ಆಗಿದ್ದಾರೆ.

ಬ್ಯಾಟರ್ ಶ್ರೇಯಸ್ ಅಯ್ಯರ್ ಅವರನ್ನೂ ತಂಡಕ್ಕೆ ಆಯ್ಕೆ ಮಾಡಲಾಗಿದೆ. ಆದರೆ ಅವರ ಫಿಟ್‌ನೆಸ್ ಕುರಿತು ಬಿಸಿಸಿಐ ಸಿಒಇಯಿಂದ ಹಸಿರು ನಿಶಾನೆ ದೊರೆಯಬೇಕಿದೆ. ಅವರು ವಿಜಯ್ ಹಜಾರೆ ಟ್ರೋಫಿ ಟೂರ್ನಿಯಲ್ಲಿ ಜನವರಿ 6ರಂದು ನಡೆಯಲಿರುವ ಪಂದ್ಯದಲ್ಲಿ ಮುಂಬೈ ತಂಡದಲ್ಲಿ ಆಡಲಿದ್ದಾರೆ. ಆ ಪಂದ್ಯವು ಅವರ ಫಿಟ್‌ನೆಸ್ ಪರೀಕ್ಷೆಗೆ ವೇದಿಕೆಯಾಗಲಿದೆ.

ಹೈದರಾಬಾದಿನ ಸಿರಾಜ್ ಅವರನ್ನೂ ಈಚೆಗೆ ನಡೆದ ದಕ್ಷಿಣ ಆಫ್ರಿಕಾ ಎದುರಿನ ಏಕದಿನ ಸರಣಿಯಲ್ಲಿ ಆಯ್ಕೆ ಮಾಡಿರಲಿಲ್ಲ. ನಿರೀಕ್ಷೆಯಂತೆ ನ್ಯೂಜಿಲೆಂಡ್ ಎದುರಿನ ಸರಣಿಗೆ ವೇಗಿ ಜಸ್‌ಪ್ರೀತ್ ಬೂಮ್ರಾ ಅವರಿಗೆ ವಿಶ್ರಾಂತಿ ನೀಡಲಾಗಿದೆ. ಹಾರ್ದಿಕ್ ಪಾಂಡ್ಯ ಅವರ ಫಿಟ್‌ನೆಸ್ ಕುರಿತು ಬಿಸಿಸಿಐ–ಸಿಒಇ ಇನ್ನೂ ಸ್ಪಷ್ಟತೆ ನೀಡಿಲ್ಲ. ಅವರು ಪಂದ್ಯದಲ್ಲಿ 10 ಓವರ್ ಬೌಲಿಂಗ್ ಮಾಡಲು ಸಮರ್ಥರೆಂಬುದರ ಕುರಿತು ಹಸಿರು ನಿಶಾನೆ ದೊರೆತಿಲ್ಲ. ಆದ್ದರಿಂದ ಅವರನ್ನು ಆಯ್ಕೆಗೆ ಪರಿಗಣಿಸಿಲ್ಲ.


ಭಾರತ ತಂಡದಲ್ಲಿ ಸ್ಥಾನ ಪಡೆದಿರುವ ಪ್ರಸಿದ್ಧಕೃಷ್ಣ, ಮೊಹಮ್ಮದ್ ಸಿರಾಜ್, ಅರ್ಷದೀಪ್ ಸಿಂಗ್ ಮತ್ತು ರವೀಂದ್ರ ಜಡೇಜ

ಮುಖ್ಯಾಂಶಗಳು

- ತಂಡದಲ್ಲಿ ಕರ್ನಾಟಕದ ರಾಹುಲ್, ಪ್ರಸಿದ್ಧಕೃಷ್ಣ
- ಕಣಕ್ಕಿಳಿಯಲಿರುವ ತಾರಾ ಆಟಗಾರರಾದ ರೋಹಿತ್ ಶರ್ಮಾ, ವಿರಾಟ್ ಕೊಹ್ಲಿ
- ಸರಣಿಯಲ್ಲಿ ಮೂರು ಏಕದಿನ ಪಂದ್ಯಗಳು ನಡೆಯಲಿವೆ

ದಕ್ಷಿಣ ಆಫ್ರಿಕಾ ಎದುರಿನ ಸರಣಿಯಲ್ಲಿ ಶತಕ ಗಳಿಸಿದ್ದ ಋತುರಾಜ್ ಗಾಯಕವಾಡ್ ಅವರನ್ನೂ ಆಯ್ಕೆಗೆ ಪರಿಗಣಿಸಿಲ್ಲ. ರಾಯಪುರದ ಪಂದ್ಯದಲ್ಲಿ ಅವರು ನಾಲ್ಕನೇ ಕ್ರಮಾಂಕದಲ್ಲಿ ಆಡಿ 83 ಎಸೆತಗಳಲ್ಲಿ 105 ರನ್ ಗಳಿಸಿದ್ದರು. ಆ ಸರಣಿಯಲ್ಲಿ ರಾಹುಲ್ ತಂಡದ ನಾಯಕತ್ವ ವಹಿಸಿದ್ದರು.

ತಿಲಕ್ ವರ್ಮಾ ಮತ್ತು ಧ್ರುವ ಜುರೇಲ್ ಅವರಿಗೂ ಸ್ಥಾನ ಲಭಿಸಿಲ್ಲ. ಅನುಭವಿ ಆಟಗಾರರಾದ ರೋಹಿತ್ ಶರ್ಮಾ ಮತ್ತು ವಿರಾಟ್ ಕೊಹ್ಲಿ ಅವರೂ ಆಡಲಿದ್ದಾರೆ ಎಂದು ಬಿಸಿಸಿಐ ಪ್ರಕಟಣೆಯಲ್ಲಿ ತಿಳಿಸಲಾಗಿದೆ.

ಜನವರಿ 11 (ವಡೋದರಾ), ಜನವರಿ 14 (ರಾಜ್‌ಕೋಟ್) ಮತ್ತು ಜನವರಿ 18 (ಇಂದೋರ್) ರಂದು ಪಂದ್ಯಗಳು ನಡೆಯಲಿವೆ.

ತಂಡ: ಶುಭಮನ್ ಗಿಲ್ (ನಾಯಕ), ರೋಹಿತ್ ಶರ್ಮಾ, ವಿರಾಟ್ ಕೊಹ್ಲಿ, ಕೆ.ಎಲ್. ರಾಹುಲ್ (ವಿಕೆಟ್‌ಕೀಪರ್), ಶ್ರೇಯಸ್ ಅಯ್ಯರ್ (ಉಪನಾಯಕ–ಫಿಟ್‌ನೆಸ್ ಟೆಸ್ಟ್ ಬಾಕಿ), ವಾಷಿಂಗ್ಟನ್ ಸುಂದರ್, ರವೀಂದ್ರ ಜಡೇಜ, ಮೊಹಮ್ಮದ್ ಸಿರಾಜ್, ಹರ್ಷಿತ್ ರಾಣಾ, ಪ್ರಸಿದ್ಧಕೃಷ್ಣ, ಕುಲದೀಪ್ ಯಾದವ್, ರಿಷಭ್ ಪಂತ್ (ವಿಕೆಟ್‌ಕೀಪರ್), ನಿತೀಶ್ ಕುಮಾರ್ ರೆಡ್ಡಿ, ಅರ್ಷದೀಪ್ ಸಿಂಗ್, ಯಶಸ್ವಿ ಜೈಸ್ವಾಲ್.

ಹಿಡಿತ ಸಾಧಿಸಿದ ಗುಜರಾತ್ ತಂಡ

ಬೆಂಗಳೂರು: ಸರ್ವಾಂಗೀಣ ಆಟದ ಪ್ರದರ್ಶನ ನೀಡಿದ ಗುಜರಾತ್ ತಂಡವು, ಕೂಚ್ ಬಿಹಾರ್ ಟ್ರೋಫಿ ಕ್ವಾರ್ಟರ್ ಫೈನಲ್ ಪಂದ್ಯದ ಮೂರನೇ ದಿನವಾದ ಶನಿವಾರ ಕರ್ನಾಟಕ ವಿರುದ್ಧ ಸ್ಪಷ್ಟ ಮೇಲುಗೈ ಸಾಧಿಸಿತು.

ವಲ್ಸಾಡ್‌ನ ಸರ್ದಾರ್ ಪಟೇಲ್ ಕ್ರೀಡಾಂಗಣದಲ್ಲಿ ಗುಜರಾತ್ ತಂಡದ 451 ರನ್‌ಗಳಿಗೆ ಉತ್ತರವಾಗಿ ಶುಕ್ರವಾರ 60 ಓವರುಗಳಲ್ಲಿ 3 ವಿಕೆಟ್‌ಗೆ 160 ರನ್ ಗಳಿಸಿದ್ದ ಕರ್ನಾಟಕ ತಂಡವು ಮೂರನೇ ದಿನ 46.2 ಓವರುಗಳಲ್ಲಿ 280 ರನ್‌ಗಳಿಗೆ ಆಲೌಟ್ ಆಯಿತು.

ಕರ್ನಾಟಕ ಪರ ವರುಣ್ ಪಟೇಲ್ (52, 107ಎ, 4x8) ಅರ್ಧ ಶತಕ ಬಾರಿಸಿದರು.

ಎರಡನೇ ಇನಿಂಗ್ಸ್‌ನಲ್ಲಿ ಗುಜರಾತ್ ತಂಡ 41 ಓವರುಗಳಲ್ಲಿ 2 ವಿಕೆಟ್‌ಗೆ 178 ರನ್ ಗಳಿಸಿದ್ದು ಒಟ್ಟಾರೆ 349 ರನ್ ಮುನ್ನಡೆ ಗಿಟ್ಟಿಸಿದೆ.

ಸಂಕ್ಷಿಪ್ತ ಸ್ಕೋರು: ಮೊದಲ ಇನಿಂಗ್ಸ್: ಗುಜರಾತ್: 451 ಮತ್ತು 41 ಓವರುಗಳಲ್ಲಿ 2 ವಿಕೆಟ್‌ಗೆ 178 (ಮಲಯ್ ವಿ ಶಾ ಔಟಾಗದೇ 82, ಪೂರವ್ ಎಂ.ಪೂಜಾರ ಔಟಾಗದೇ 59); ಕರ್ನಾಟಕ: 106.2 ಓವರುಗಳಲ್ಲಿ 280 (ಧ್ರುವ್ ಕೃಷ್ಣನ್ 82, ವರುಣ್ ಪಟೇಲ್ 52; ರುದ್ರ ಪಿ.ಪಟೇಲ್ 92ಕ್ಕೆ3, ನಿಹಾಲ್ ಎಸ್. ಪಟೇಲ್ 20ಕ್ಕೆ3).

ವಿಜಯ್ ಹಜಾರೆ ಟ್ರೋಫಿ: ಮಯಂಕ್ ಪಡೆಗೆ ಸತತ ಐದನೇ ಜಯ

ದೇವದತ್ತ 4ನೇ ಶತಕ; ಅಗ್ರಸ್ಥಾನಕ್ಕೆ ಕರ್ನಾಟಕ

ಪ್ರಜಾವಾಣಿ ವಾರ್ತೆ

ಅಹಮದಾಬಾದ್: ಎಡಗೈ ಬ್ಯಾಟರ್ ದೇವದತ್ತ ಪಡಿಕ್ಕಲ್ ಅವರು ವಿಜಯ್ ಹಜಾರೆ ಟ್ರೋಫಿ ಏಕದಿನ ಕ್ರಿಕೆಟ್ ಟೂರ್ನಿಯಲ್ಲಿ ನಾಲ್ಕನೇ ಶತಕ ದಾಖಲಿಸಿದರು. ಅದರೊಂದಿಗೆ ಕರ್ನಾಟಕ ತಂಡವು ತ್ರಿಪುರ ಎದುರು ಜಯಿಸಿ, ಎ ಗುಂಪಿನ ಪಾಯಿಂಟ್ ಪಟ್ಟಿಯಲ್ಲಿ ಅಗ್ರಸ್ಥಾನಕ್ಕೇರಿತು.

ಶನಿವಾರ ಇಲ್ಲಿ ನಡೆದ ಟೂರ್ನಿಯ ತನ್ನ ಐದನೇ ಪಂದ್ಯದಲ್ಲಿ ಕರ್ನಾಟಕ ತಂಡವು 80 ರನ್‌ಗಳಿಂದ ತ್ರಿಪುರ ತಂಡವನ್ನು ಹಣಿಯಿತು. ಅದರೊಂದಿಗೆ ಅಜೇಯ ಓಟವನ್ನು ಮುಂದುವರಿಸಿತು. ಒಟ್ಟು 20 ಅಂಕಗಳೊಂದಿಗೆ ಪಟ್ಟಿಯಲ್ಲಿ ಮೊದಲ ಸ್ಥಾನಕ್ಕೇರಿತು. ಇಲ್ಲಿಯವರೆಗೆ ಅಗ್ರಸ್ಥಾನದಲ್ಲಿದ್ದ ಮಧ್ಯಪ್ರದೇಶ ತಂಡವು ಪುದುಚೇರಿ ಎದುರು 4 ವಿಕೆಟ್‌ಗಳಿಂದ ಸೋತು ಎರಡನೇ ಸ್ಥಾನಕ್ಕಿಳಿಯಿತು.

ನರೇಂದ್ರ ಮೋದಿ ಕ್ರೀಡಾಂಗಣದಲ್ಲಿ ಟಾಸ್ ಗೆದ್ದ ತ್ರಿಪುರ ತಂಡವು ಫೀಲ್ಡಿಂಗ್ ಆಯ್ಕೆ ಮಾಡಿಕೊಂಡಿತು. ಇನಿಂಗ್ಸ್‌ನ ಮೂರನೇ ಓವರ್‌ನಲ್ಲಿಯೇ ಅಭಿಜಿತ್ ಸರ್ಕಾರ್ ಅವರು ಮಯಂಕ್ ಅಗರವಾಲ್ (5 ರನ್) ಮತ್ತು ಕರುಣ್ ನಾಯರ್ ಅವರ ವಿಕೆಟ್‌ಗಳನ್ನು ಕಬಳಿಸಿದರು. ನಾಯರ್ ಖಾತೆ ತೆರೆಯದೇ ಮರಳಿದರು. ಆಗ ತಂಡದ ಖಾತೆಯಲ್ಲಿ ಕೇವಲ ಆರು ರನ್‌ಗಳು ಮಾತ್ರ ಇದ್ದವು. ಆದರೆ ಅಮೋಘ ಲಯದಲ್ಲಿರುವ ದೇವದತ್ತ ಅವರನ್ನು ಕಟ್ಟಿಹಾಕಲು ತ್ರಿಪುರ ಬೌಲರ್‌ಗಳಿಗೆ ಸಾಧ್ಯವಾಗಲಿಲ್ಲ.


ಶತಕ ದಾಖಲಿಸಿದ ದೇವದತ್ತ ಪಡಿಕ್ಕಲ್

ದೇವದತ್ತ (108; 120ಎ, 4X8, 6X3) ಮತ್ತು ಸ್ಮರಣ್ ರವಿಚಂದ್ರನ್ (60; 82ಎ, 4X8) 3ನೇ ವಿಕೆಟ್ ಜೊತೆಯಾಟದಲ್ಲಿ 136 ರನ್ ಸೇರಿಸಿದರು. ತಂಡವು 50 ಓವರ್‌ಗಳಲ್ಲಿ 7 ವಿಕೆಟ್‌ಗಳಿಗೆ 332 ರನ್‌ಗಳ ದೊಡ್ಡ ಮೊತ್ತ ಗಳಿಸಲು ಈ ಜೊತೆಯಾಟವು ಬುನಾದಿಯಾಯಿತು. ಅದಕ್ಕುತ್ತರವಾಗಿ ತ್ರಿಪುರ ತಂಡವು 49 ಓವರ್‌ಗಳಲ್ಲಿ 252 ರನ್ ಗಳಿಸಿತು.

ಸ್ಮರಣ್ ಅವರು ವಿಕಿ ಸಹಾ ಅವರ ಬೌಲಿಂಗ್‌ನಲ್ಲಿ ಔಟಾಗುವುದರೊಂದಿಗೆ ಜೊತೆಯಾಟ ಮುರಿಯಿತು. ಆದರೆ ಭಾರತ ತಂಡದ ಅನುಭವಿ ಕೆ.ಎಲ್. ರಾಹುಲ್ (35; 28ಎ, 4X4, 6X1) ಇನಿಂಗ್ಸ್‌ಗೆ ಬಲ ತುಂಬಿದರು. ದೇಶಿ ಕ್ರಿಕೆಟ್‌ನಲ್ಲಿ ಆಡುವ ಕಡ್ಡಾಯ ನಿಯಮದಡಿಯಲ್ಲಿ ರಾಹುಲ್ ಅವರು ಈ ಟೂರ್ನಿಯಲ್ಲಿ ಮೊದಲ ಪಂದ್ಯವಾಡಿದರು. ಇಬ್ಬರೂ ನಾಲ್ಕನೇ ವಿಕೆಟ್ ಜೊತೆಯಾಟದಲ್ಲಿ 65 ರನ್ ಸೇರಿಸಿದರು.

ಅಭಿನವ್ ಅಬ್ಬರ: ರಾಹುಲ್ ಔಟಾದಾಗ ಇನಿಂಗ್ಸ್‌ನಲ್ಲಿ ಇನ್ನೂ 12 ಓವರ್‌ಗಳು ಬಾಕಿ ಇದ್ದವು. ಕರ್ನಾಟಕದ ಖಾತೆಯಲ್ಲಿ 207 ರನ್‌ಗಳಿದ್ದವು. ಆದರೆ ಕ್ರೀಸ್‌ಗೆ ಬಂದ ಅಭಿನವ್ ಮನೋಹರ್ ಬೌಲರ್‌ಗಳಿಗೆ ಬಿಸಿ ಮುಟ್ಟಿಸಿದರು. 43 ಎಸೆತಗಳಲ್ಲಿ ಔಟಾಗದೇ 79 ರನ್ ಗಳಿಸಿದರು. ಅದರಲ್ಲಿ 6 ಬೌಂಡರಿ ಮತ್ತು 4 ಸಿಕ್ಸರ್ ಇದ್ದವು. ಅಭಿನವ್ ಮತ್ತು ದೇವದತ್ತ ಜೊತೆಗೂಡಿ 40 ಎಸೆತಗಳಲ್ಲಿ 58 ರನ್ ಹೊಡೆದರು.

ಅಭಿನವ್ ಮತ್ತು ಶ್ರೇಯಸ್ ಗೋಪಾಲ್ ಕೂಡ 29 ಎಸೆತಗಳಲ್ಲಿ 58 ರನ್ ಹೊಡೆದರು. ಇದರಿಂದಾಗಿ ತಂಡದ ಮೊತ್ತ ಬೆಳೆಯಿತು.

ಗುರಿ ಬೆನ್ನಟ್ಟಿದ ತ್ರಿಪುರ ತಂಡದ ಆರಂಭ ಚೆನ್ನಾಗಿರಲಿಲ್ಲ. ವೇಗಿ ವೈಶಾಖ ವಿಜಯಕುಮಾರ್, ವಿದ್ಯಾಧರ್ ಪಾಟೀಲ ಹಾಗೂ ಪ್ರಸಿದ್ಧಕೃಷ್ಣ ಅವರ ಅಮೋಘ ಬೌಲಿಂಗ್ ರಂಗೇರಿತು. ಇದರಿಂದಾಗಿ ತಂಡವು ತಂಡವು 59 ರನ್‌ಗಳಿಗೆ 5 ವಿಕೆಟ್ ಕಳೆದುಕೊಂಡಿತು.

ಈ ಹಂತದಲ್ಲಿ ರಜತ್ ಡೇ (66; 102ಎ) ಮತ್ತು ಶತಕ ಬಾರಿಸಿದ ಸ್ವಪ್ನಿಲ್ ಸಿಂಗ್ (100; 93ಎ, 4X7, 6X2) ಮಿಂಚಿದರು. ಆದರೆ ತಂಡವನ್ನು ಗೆಲುವಿನ ದಡ ಸೇರಿಸಲು ಅವರಿಗೆ ಸಾಧ್ಯವಾಗಲಿಲ್ಲ.

ಸಂಕ್ಷಿಪ್ತ ಸ್ಕೋರು: ಕರ್ನಾಟಕ ರಾಜ್ಯ ಕ್ರಿಕೆಟ್ ಸಂಸ್ಥೆ: 50 ಓವರ್‌ಗಳಲ್ಲಿ 7ಕ್ಕೆ332 (ದೇವದತ್ತ ಪಡಿಕ್ಕಲ್ 108, ಆರ್. ಸ್ಮರಣ್ 60, ಕೆ.ಎಲ್. ರಾಹುಲ್ 35, ಅಭಿನವ್ ಮನೋಹರ್ ಔಟಾಗದೇ 79, ಶ್ರೇಯಸ್ ಗೋಪಾಲ್ 29, ಅಭಿಜಿತ್ ಸರ್ಕಾರ್ 50ಕ್ಕೆ4) ತ್ರಿಪುರ ಕ್ರಿಕೆಟ್ ಸಂಸ್ಥೆ: 49 ಓವರ್‌ಗಳಲ್ಲಿ 252 (ತೇಜಸ್ವಿ ಜೈಸ್ವಾಲ್ 25, ರಜತ್ ಡೇ 66, ಸ್ವಪ್ನಿಲ್ ಸಿಂಗ್ 100, ಸೆಂತು ಸರ್ಕಾರ್ ಔಟಾಗದೇ 26, ವಿ. ವೈಶಾಖ 54ಕ್ಕೆ3, ಶ್ರೇಯಸ್ ಗೋಪಾಲ್ 33ಕ್ಕೆ3) ಕರ್ನಾಟಕ ತಂಡಕ್ಕೆ 80 ರನ್‌ಗಳ ಜಯ. ಪಂದ್ಯದ ಆಟಗಾರ: ದೇವದತ್ತ ಪಡಿಕ್ಕಲ್.

ಪಂಗಾಲಿಯಾ ಮಿಂಚು ಯುವ ತಂಡಕ್ಕೆ ಗೆಲುವು

ಬೆನೋನಿ (ದಕ್ಷಿಣ ಆಫ್ರಿಕಾ), (ಪಿಟಿಐ): ಮಳೆಯಿಂದ ಅಡಚಣೆಯಾದ ಮೊದಲ ಏಕದಿನ ಪಂದ್ಯವನ್ನು ಭಾರತ ಯುವ (19 ವರ್ಷದೊಳಗಿನವರ) ತಂಡವು ಶನಿವಾರ ಡಕ್ವರ್ಥ್ ಲೂಯಿಸ್ ನಿಯಮದ (ಡಿಎಲ್‌ಎಸ್) ಆಧಾರದಲ್ಲಿ ದಕ್ಷಿಣ ಆಫ್ರಿಕಾವನ್ನು 25 ರನ್‌ಗಳಿಂದ ಮಣಿಸಿತು.

ಮೊದಲು ಬ್ಯಾಟಿಂಗ್ ಮಾಡಿದ ಭಾರತ ತಂಡವು ಹರವಂಶ್ ಪಂಗಾಲಿಯಾ (93;95ಎ) ಮತ್ತು ಅಂಬರೀಶ್ ಆರ್.ಎಸ್. (65;79ಎ) ಅವರ ಆಟದ ಬಲದಿಂದ 50 ಓವರ್‌ಗಳಲ್ಲಿ 301 ರನ್ ಗಳಿಸಿತು. ನಾಯಕ ವೈಭವ್ ಸೂರ್ಯವಂಶಿ (11) ನಿರಾಸೆ ಮೂಡಿಸಿದರು. ಗುರಿ ಬೆನ್ನಟ್ಟಿದ ಆತಿಥೇಯ ತಂಡವು 27.4 ಓವರ್‌ಗಳಲ್ಲಿ 4 ವಿಕೆಟ್‌ಗೆ 148 ರನ್ ಗಳಿಸಿದ್ದಾಗ ಧಾರಾಕಾರ ಮಳೆ ಸುರಿಯಿತು. ಮಳೆ ಬಿಡುವು ನೀಡದ ಕಾರಣ ಡಿಎಲ್‌ಎಸ್ ಅನ್ವಯ ಫಲಿತಾಂಶ ನಿರ್ಧರಿಸಲಾಯಿತು. ಮೂರು ಪಂದ್ಯಗಳ ಸರಣಿಯಲ್ಲಿ ಭಾರತ 1–0 ಮುನ್ನಡೆ ಪಡೆಯಿತು.

ಸಂಕ್ಷಿಪ್ತ ಸ್ಕೋರ್: ಭಾರತ: 50 ಓವರ್‌ಗಳಲ್ಲಿ 301 (ಹರವಂಶ್ ಸಿಂಗ್ ಪಂಗಾಲಿಯಾ 93, ಅಂಬರೀಶ್ ಆರ್. ಎಸ್. 65; ಜೆಜೆ ಬಾಸನ್ 54ಕ್ಕೆ 4). ದಕ್ಷಿಣ ಆಫ್ರಿಕಾ: 27.4 ಓವರ್‌ಗಳಲ್ಲಿ 4ಕ್ಕೆ 148 (ಜೋರಿಚ್ ವ್ಯಾನ್ ಶಾಲ್ಕ್‌ವಿಕ್ ಔಟಾಗದೇ 60, ಅರ್ಮಾನ್ ಮನಾಕ್ 46; ದೀಪೇಶ್ ದೇವೇಂದ್ರನ್ 33ಕ್ಕೆ 2).

ಶೂಟಿಂಗ್: ಜೊನಾಥನ್‌ಗೆ ಮೂರು ಚಿನ್ನ

ನವದೆಹಲಿ (ಪಿಟಿಐ): ಕರ್ನಾಟಕದ ಉದಯೋನ್ಮುಖ ಶೂಟರ್ ಜೊನಾಥನ್ ಗ್ಯಾವಿನ್ ಆಂಥೋನಿ ಅವರು ಇಲ್ಲಿ ನಡೆಯುತ್ತಿರುವ ರಾಷ್ಟ್ರೀಯ ಶೂಟಿಂಗ್ ಚಾಂಪಿಯನ್‌ಷಿಪ್‌ನಲ್ಲಿ ಮೂರು ಚಿನ್ನದ ಪದಕಗಳನ್ನು ಗೆದ್ದರು.


ಜೊನಾಥನ್ ಗ್ಯಾವಿನ್

16 ವರ್ಷದ ಜೊನಾಥನ್ ಅವರು ಶನಿವಾರ ನಡೆದ 10 ಮೀಟರ್ ಏರ್ ಪಿಸ್ತೂಲ್ ಸ್ಪರ್ಧೆಯ ಸಬ್ ಯೂತ್, ಯೂತ್ ಮತ್ತು ಜೂನಿಯರ್ ವಿಭಾಗಗಳಲ್ಲಿ ಅಗ್ರಸ್ಥಾನದೊಂದಿಗೆ ಪಾರಮ್ಯ ಸಾಧಿಸಿದರು.

ಯೂತ್ ಫೈನಲ್‌ನಲ್ಲಿ ಜೊನಾಥನ್ 240.0 ಅಂಕ ಗಳಿಸಿದರು. ಪಂಜಾಬ್‌ನ ಗುಂತಜ್‌ಪ್ರೀತ್ ಸಿಂಗ್ (236.0) ಮತ್ತು ಉತ್ತರಪ್ರದೇಶದ ಸವೇಜ್ ಖಾನ್ (214.3) ಕ್ರಮವಾಗಿ ಬೆಳ್ಳಿ ಮತ್ತು ಕಂಚಿನ ಪದಕಗಳಿಗೆ ಕೊರಳೊಡ್ಡಿದರು.

ಜೂನಿಯರ್ ಫೈನಲ್‌ನಲ್ಲಿ ಜೊನಾಥನ್ 240.5 ಅಂಕಗಳೊಂದಿಗೆ ಚಿನ್ನ ಗೆದ್ದರು. ಹರಿಯಾಣದ ಶಿವ ನರ್ವಾಲ್ (240.3) ಬೆಳ್ಳಿ ಮತ್ತು ರಾಜಸ್ಥಾನ ಯೋಗೇಶ್ ಕುಮಾರ್ (218.2) ಕಂಚು ತಮ್ಮದಾಗಿಸಿಕೊಂಡರು.

ತಿಲೋತ್ತಮಾಗೆ 11 ಪದಕ

ಭೋಪಾಲ್ ವರದಿ: ಕರ್ನಾಟಕದ ಹದಿಹರೆಯದ ಶೂಟರ್ ತಿಲೋತ್ತಮಾ ಸೇನ್ ಅವರು ರಾಷ್ಟ್ರೀಯ ಶೂಟಿಂಗ್ (ರೈಫಲ್) ಚಾಂಪಿಯನ್‌ಷಿಪ್‌ನಲ್ಲಿ ಶುಕ್ರವಾರ ಮೂರು ಚಿನ್ನ ಸೇರಿದಂತೆ ಒಟ್ಟು 11 ಪದಕಗಳಿಗೆ ಕೊರಳೊಡ್ಡಿದರು.



ಜೂನಿಯರ್ ಮಹಿಳೆಯರ 10 ಮೀಟರ್ ಏರ್ ರೈಫಲ್‌ನಲ್ಲಿ ತಿಲೋತ್ತಮಾ ಅವರು ಫೈನಲ್‌ನಲ್ಲಿ 253.1 ಅಂಕಗಳೊಂದಿಗೆ ಚಿನ್ನ ಗೆದ್ದರು. ಯೂತ್ ವಿಭಾಗದಲ್ಲೂ ಅವರು ಚಿನ್ನದ ಸಾಧನೆ ಮೆರೆದರು.

ತಿಲೋತ್ತಮಾ, ಅನುಷ್ಕಾ ತೋಕೂರು ಮತ್ತು ಹೃದಯಶ್ರೀ ಅವರನ್ನು ಒಳಗೊಂಡ ಕರ್ನಾಟಕದ ಮಹಿಳಾ ಯೂತ್ ತಂಡವು ಚಿನ್ನ ಗೆದ್ದುಕೊಂಡಿತು. ಇದೇ ಶೂಟರ್‌ಗಳು ಜೂನಿಯರ್ ತಂಡ ವಿಭಾಗದಲ್ಲಿ ಬೆಳ್ಳಿ ಪದಕ ಜಯಿಸಿದರು. 17 ವರ್ಷದ ತಿಲೋತ್ತಮಾ ಕೂಟದಲ್ಲಿ ಆರು ಚಿನ್ನ, ಎರಡು ಬೆಳ್ಳಿ ಮತ್ತು ಮೂರು ಕಂಚು ಗೆದ್ದರು.

ಒಂದೇ ಓವರ್‌ನಲ್ಲಿ ಐದು ಸಿಕ್ಸರ್ ಹೊಡೆದ ಹಾರ್ದಿಕ್

ರಾಜ್‌ಕೋಟ್ (ಪಿಟಿಐ): ಹಾರ್ದಿಕ್ ಪಾಂಡ್ಯ ಅವರು ಒಂದೇ ಓವರ್‌ನಲ್ಲಿ ಐದು ಸಿಕ್ಸರ್ ಸಿಡಿಸಿದರು. ಕೇವಲ 92 ಎಸೆತಗಳಲ್ಲಿ 133 ರನ್‌ಗಳನ್ನು ಗಳಿಸಿದರು. ಆದರೂ ಬರೋಡಾ ತಂಡವು ವಿಜಯ್ ಹಜಾರೆ ಟ್ರೋಫಿ ಏಕದಿನ ಕ್ರಿಕೆಟ್ ಟೂರ್ನಿಯ ಪಂದ್ಯದಲ್ಲಿ ವಿದರ್ಭ ಎದುರು ಒಂಬತ್ತು ವಿಕೆಟ್‌ಗಳಿಂದ ಸೋತಿತು.



ಏಳನೇ ಕ್ರಮಾಂಕದಲ್ಲಿ ಕ್ರೀಸ್‌ಗೆ ಬಂದ ಹಾರ್ದಿಕ್ ಅವರು ಒಟ್ಟು ಎಂಟು ಸಿಕ್ಸರ್ ಮತ್ತು 11 ಬೌಂಡರಿಗಳನ್ನು ಗಳಿಸಿದರು. 119ನೇ ಲಿಸ್ಟ್ ಎ ಪಂದ್ಯ ಆಡಿದ ಅವರಿಗೆ ಇದು ಚೊಚ್ಚಲ ಶತಕ. ವಿದರ್ಭ ಸ್ಪಿನ್ನರ್ ಪಾರ್ಥ್ ರೇಖಡೆ ಅವರು ಹಾಕಿದ ಇನಿಂಗ್ಸ್‌ನ 39ನೇ ಓವರ್‌ನಲ್ಲಿ ಹಾರ್ದಿಕ್ ಸತತ ಐದು ಸಿಕ್ಸರ್ ಮತ್ತು ಕೊನೆಯ ಎಸೆತದಲ್ಲಿ ಬೌಂಡರಿ ಹೊಡೆದರು. ಒಟ್ಟು 34 ರನ್ ನೀಡಿದ ರೇಖಡೆ ದುಬಾರಿಯಾದರು.

ಹಾರ್ದಿಕ್ ಅಬ್ಬರದ ಆಟದ ಬಲದಿಂದ ಬರೋಡಾ ತಂಡವು 50 ಓವರ್‌ಗಳಲ್ಲಿ 9 ವಿಕೆಟ್‌ಗಳಿಗೆ 293 ರನ್ ಗಳಿಸಿತು. ಒಂದು ಹಂತದಲ್ಲಿ ಬರೋಡಾ ತಂಡವು 71 ರನ್‌ಗಳಿಗೆ 5 ವಿಕೆಟ್ ಕಳೆದುಕೊಂಡಿತ್ತು.

ಗುರಿ ಬೆನ್ನಟ್ಟಿದ ವಿದರ್ಭ ತಂಡವು ಅಮನ್ ಮೊಖಾಡೆ (ಅಜೇಯ 150; 121 ಎಸೆತ) ಶತಕದ ಬಲದಿಂದ 41.4 ಓವರ್‌ಗಳಲ್ಲಿ 1 ವಿಕೆಟ್‌ಗೆ 294 ರನ್ ಗಳಿಸಿ ಗೆದ್ದಿತು. ಧ್ರುವ ಶೋರೆ 76 ಎಸೆತಗಳಲ್ಲಿ 65 ರನ್ ಗಳಿಸಿದರು. ಐದು ಪಂದ್ಯಗಳ ಪೈಕಿ ವಿದರ್ಭ ಒಟ್ಟು ನಾಲ್ಕರಲ್ಲಿ ಜಯಿಸಿದೆ. ಬರೋಡಾ ತಂಡಕ್ಕೆ ಇದು ಎರಡನೇ ಸೋಲು.

ಎಚ್‌ಐಎಲ್: ಡ್ರ್ಯಾಗನ್ಸ್‌ಗೆ ಜಯ

ಚೆನ್ನೈ (ಪಿಟಿಐ): ಆತಿಥೇಯ ತಮಿಳುನಾಡು ಡ್ರ್ಯಾಗನ್ಸ್ ತಂಡವು ಶನಿವಾರ ಎರಡನೇ ಆವೃತ್ತಿಯ ಪುರುಷರ ಹಾಕಿ ಇಂಡಿಯಾ ಲೀಗ್‌ನ (ಎಚ್‌ಐಎಲ್) ಉದ್ಘಾಟನಾ ಪಂದ್ಯದಲ್ಲಿ ಹೈದರಾಬಾದ್ ತೂಫಾನ್ಸ್ ತಂಡವನ್ನು ಪೆನಾಲ್ಟಿ ಶೂಟೌಟ್‌ನಲ್ಲಿ ಮಣಿಸಿ ಶುಭಾರಂಭ ಮಾಡಿತು.

ನಿಗದಿತ ಅವಧಿಯ ಪಂದ್ಯವು 3–3 ಗೋಲುಗಳಿಂದ ಸಮಬಲಗೊಂಡಿತ್ತು. ಶೂಟೌಟ್‌ನಲ್ಲಿ ಡ್ರ್ಯಾಗನ್ಸ್ ತಂಡವು 4–2ರಿಂದ ತೂಫಾನ್ಸ್ ತಂಡವನ್ನು ಸೋಲಿಸಿತು.

ಭಾನುವಾರ ಜೆಎಸ್‌ಡಬ್ಲ್ಯು ಸೂರ್ಮಾ ಹಾಕಿ ಕ್ಲಬ್ ತಂಡವು ಶ್ರಾಚಿ ಬೆಂಗಾಲ್ ವಾರಿಯರ್ಸ್ ತಂಡವನ್ನು ಎದುರಿಸಲಿದೆ.

ಪ್ರೊ ಕುಸ್ತಿ: ಅರ್ಧ ಕೋಟಿಗೂ ಹೆಚ್ಚು ಮೌಲ್ಯ ಪಡೆದ ಸುಜೀತ್, ಅಂತಿಮ್, ಅಮನ್

ದಾಖಲೆ ₹60 ಲಕ್ಷ ಮೌಲ್ಯ ಪಡೆದ ಸುಸಾಕಿ

ನವದೆಹಲಿ (ಪಿಟಿಐ): ಮಹಿಳಾ ಕುಸ್ತಿಪಟುಗಳು, ಶನಿವಾರ ಇಲ್ಲಿ ನಡೆದ ಪ್ರೊ ಕುಸ್ತಿ ಲೀಗ್ (ಪಿಡಬ್ಲ್ಯುಎಲ್) ಬಿಡ್‌ನಲ್ಲಿ ಹೆಚ್ಚಿನ ಮೌಲ್ಯ ಪಡೆದರು. ಟೋಕಿಯೊ ಒಲಿಂಪಿಕ್ಸ್ ಸ್ವರ್ಣ ವಿಜೇತೆ ಜಪಾನ್‌ನ ಯುಯಿ ಸುಸಾಕಿ ಅವರು ₹60 ಲಕ್ಷ ದಾಖಲೆ ಮೊತ್ತಕ್ಕೆ ಹರಿಯಾಣ ಥಂಡರ್ಸ್ ಪಾಲಾದರು.

ವಿಶ್ವ ಚಾಂಪಿಯನ್‌ಷಿಪ್ ಪದಕ ವಿಜೇತೆ, ಭಾರತದ ಅಂತಿಮ್ ಪಂಘಲ್ ಅವರು 53 ಕೆ.ಜಿ. ವಿಭಾಗದಲ್ಲಿ ₹52 ಲಕ್ಷ ಮೊತ್ತಕ್ಕೆ ಯುಪಿ ಡಾಮಿನೇಟರ್ಸ್‌ಗೆ ಸೇರ್ಪಡೆಯಾದರು. 23 ವರ್ಷದೊಳಗಿನ ಪುರುಷರ ವಿಶ್ವ ಚಾಂಪಿಯನ್, ಭಾರತದ ಸುಜೀತ್ ಕಲ್ಕಲ್ ಅವರನ್ನು ಡೆಲ್ಲಿ ದಂಗಲ್ ವಾರಿಯರ್ಸ್ ₹52 ಲಕ್ಷ ಮೊತ್ತಕ್ಕೆ ಖರೀದಿಸಿತು.

ಪೋರ್ಟೊರಿಕೊದ ಅನಾ ಗೊಡಿನೆಝ್ ಅವರನ್ನು ಪಂಜಾಬ್ ರಾಯಲ್ಸ್ ತಂಡ ₹46 ಲಕ್ಷಕ್ಕೆ ಸೆಳೆದುಕೊಂಡಿತು. 76 ಕೆ.ಜಿ. ವಿಭಾಗದಲ್ಲಿ ಅಜರ್‌ಬೈಜಾನ್‌ನ ಅನಸ್ತೇಸಿಯಾ ಅಲ್ಪಯೆವಾ ಅವರನ್ನು ಡೆಲ್ಲಿ ದಂಗಲ್ ₹27 ಲಕ್ಷಕ್ಕೆ ತನ್ನ ಪಾಲು ಮಾಡಿಕೊಂಡಿತು.


ಸುಜೀತ್ ಕಲ್ಕಲ್ ಅಂತಿಮ್ ಪಂಘಲ್ ಯುಯಿ ಸುಸಾಕಿ

ಎ + ಕೆಟಗರಿ ಕುಸ್ತಿಪಟುಗಳ ಮೂಲಬೆಲೆ ₹18 ಲಕ್ಷಕ್ಕೆ ನಿಗದಿಯಾಗಿತ್ತು. ಆದರೆ ಹೆಚ್ಚಿನವರು ಇದಕ್ಕಿಂತ ಹೆಚ್ಚಿನ ಮೌಲ್ಯ ಪಡೆದರು.

ಪುರುಷರ ವಿಭಾಗದಲ್ಲಿ ಪೋಲೆಂಡ್‌ನ ರಾಬರ್ಟ್ ಬರಾನ್ ₹55 ಲಕ್ಷಕ್ಕೆ ಮಹಾರಾಷ್ಟ್ರ ಕೇಸರಿ ತಂಡದ ಪಾಲಾದರು. ಪ್ಯಾರಿಸ್ ಒಲಿಂಪಿಕ್ಸ್‌ನಲ್ಲಿ ಕಂಚಿನ ಪದಕ ಗೆದ್ದಿದ್ದ ಅಮನ್ ಸೆಹ್ರಾವತ್ ಅವರನ್ನು ₹51 ಲಕ್ಷಕ್ಕೆ ಟೈಗರ್ಸ್ ಆಫ್ ಮುಂಬೈ ದಂಗಲ್ಸ್ ತನ್ನ ಪಾಲು ಮಾಡಿಕೊಂಡಿತು.

ಕುಸ್ತಿಪಟುಗಳನ್ನು ನಾಲ್ಕು ವಿಭಾಗಗಳಲ್ಲಿ ಎ + (ಪ್ರಮುಖ), ಎ, ಬಿ ಮತ್ತು ಸಿ ವಿಭಾಗಗಳಲ್ಲಿ ವಿಂಗಡಿಸಲಾಗಿತ್ತು. ಈ ವಿಭಾಗದ ಪೈಲ್ವಾನರ ಮೂಲಬೆಲೆಯನ್ನು ಕ್ರಮವಾಗಿ ₹18 ಲಕ್ಷ, ₹12 ಲಕ್ಷ, ₹8 ಲಕ್ಷ ಮತ್ತು ₹3 ಲಕ್ಷಕ್ಕೆ ನಿಗದಿಪಡಿಸಲಾಗಿತ್ತು. ಆಟಗಾರರನ್ನು ಪಡೆಯಲು ಫ್ರಾಂಚೈಸಿಗಳಿಗೆ ₹2 ಕೋಟಿ ಥೈಲಿ ಹೊಂದಲು ಅವಕಾಶ ನೀಡಲಾಗಿತ್ತು.

ಆರು ತಂಡಗಳು ಲೀಗ್‌ನಲ್ಲಿ ಪಾಲ್ಗೊಳ್ಳುತ್ತಿವೆ. ಪ್ರತಿ ತಂಡ 9 ರಿಂದ 12 ಮಂದಿ ಸ್ಪರ್ಧಿಗಳನ್ನು ಹೊಂದಲು ಅವಕಾಶ ಮಾಡಲಾಗಿದೆ. ಪ್ರತಿಯೊಂದು ತಂಡ ನಾಲ್ಕು ಮಂದಿ ವಿದೇಶಿ ಕುಸ್ತಿಪಟುಗಳನ್ನು (ಇಬ್ಬರು ಪುರುಷರು, ಇಬ್ಬರು ಮಹಿಳೆಯರು) ಹೊಂದಬಹುದಾಗಿದೆ. ಕಡೇಪಕ್ಷ ಸಿ ಕೆಟಗರಿಯ ಒಬ್ಬರಾದರೂ ತಂಡದಲ್ಲಿರುವುದು ಕಡ್ಡಾಯ.